ಇಸ್ಲಾಮ್ ದರ್ಶನ

ಲೇಖಕರು

ಮೌ| ಅಬ್ದುಲ್ ಹೈ

ಅನುವಾದಕರು

ಸಮೀನಾ ಅಫ್ಶಾನ್

ಪರಮ ದಯಾಮಯನೂ ಕರುಣಾ ನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಇಸ್ಲಾಮಿನ ಮೂಲಭೂತ ಶಿಕ್ಷಣವನ್ನು ಕಲಿಯಬೇಕಾದುದು ಪ್ರತಿಯೊಬ್ಬ ಮುಸ್ಲಿಮ್ ಸ್ತ್ರೀ- ಪುರುಷರ ಕರ್ತವ್ಯವಾಗಿದೆ. ಅದಕ್ಕಾಗಿ ಮುಸ್ಲಿಮ್ ಬಾಲಕ-ಬಾಲಕಿಯರ ಧಾರ್ಮಿಕ ವಿದ್ಯಾಭ್ಯಾಸಕ್ಕಾಗಿ ವಿಶೇಷ ಗಮನ ಹರಿಸಲಾಗುತ್ತದೆ. ದೇಶದಾದ್ಯಂತ ಹಳ್ಳಿ ಪಟ್ಟಣಗಳಲ್ಲಿ ನಡೆಯುವ ಮದ್ರಸಗಳು ಈ ಉದ್ದೇಶವನ್ನು ಈಡೇರಿಸುವಲ್ಲಿ ಸ್ವಲ್ಪ ಮಟ್ಟಿಗೆ ಸಹಕಾರಿಯಾಗಿವೆ.

ಆದರೆ ಮದ್ರಸಗಳಲ್ಲಿ ವಿದ್ಯಾಭ್ಯಾಸಗಳಿಸಲು ಸಾಧ್ಯವಾಗದ ಅನೇಕ ಸ್ತ್ರೀ-ಪುರುಷರು ಸಮಾಜದಲ್ಲಿ ಹರಡಿಕೊಂಡಿದ್ದಾರೆ. ಧಾರ್ಮಿಕ ವಿದ್ಯೆಯ ಕೊರತೆಯಿಂದಾಗಿ ಅವರ ಜೀವನದಲ್ಲಿ ಧರ್ಮ ನಿಷ್ಠೆ, ಶಿಸ್ತು, ಪ್ರವಾದಿಯವರ(ಸ) ಪ್ರೇಮ ಮತ್ತು ಅನುಸರಣೆಯ ಸ್ಫೂರ್ತಿಯೂ ಇಲ್ಲವಾಗಿದೆ. ಅಲ್ಲದೆ ಮದ್ರಸಾ ವಿದ್ಯಾಭ್ಯಾಸದಲ್ಲಿ ಹೆಚ್ಚಿನಂಶ ಆರಾಧನಾ ಕರ್ಮಗಳಿಗೆ ಸಂಬಂಧಿಸಿದ ಕರ್ಮಶಾಸ್ತ್ರ ವಿಧಿಗಳನ್ನಷ್ಟೆ ಕಲಿಸಲಾಗುತ್ತದೆ. ಇಸ್ಲಾಮಿನ ಸಮಗ್ರವಾದ ಜೀವನ ಕಲ್ಪನೆಯನ್ನು ಮೂಡಿಸುವಂತಹ ವಿದ್ಯಾಭ್ಯಾಸವನ್ನು ಹೆಚ್ಚಿನ ಮದ್ರಸಗಳಲ್ಲಿ ಬೋಧಿಸಲಾಗುತ್ತಿಲ್ಲ.

ಈ ಕೊರತೆಯನ್ನು ನೀಗಿಸುವ ಸಲುವಾಗಿ 'ಅಲ್ ಹಸನಾತ್' ಉರ್ದು ಮಾಸಿಕದ ಸ್ಥಾಪಕರಾಗಿದ್ದ ಮೌ| ಅಬೂ ಸಲೀಮ್ ಮುಹಮ್ಮದ್ ಅಬ್ದುಲ್ ಹಯ್ಯ್ ರಾಂಪುರ ಅವರು ಸರಳ ಉರ್ದು ಭಾಷೆಯಲ್ಲಿ 'ದೀನ್ ಕೀ ಬಾತೇಂ' (ಧರ್ಮದ ವಿಷಯಗಳು) ಎಂಬ ಒಂದು ಗ್ರಂಥವನ್ನು ರಚಿಸಿದ್ದರು. ಅದರ ಕನ್ನಡಾನುವಾದವೇ ನಿಮ್ಮ ಕೈಯಲ್ಲಿರುವ 'ಇಸ್ಲಾಮ್ ದರ್ಶನ'ವೆಂಬ ಈ ಕೃತಿ. ಅನೇಕ ವರ್ಷಗಳ ಹಿಂದೆ ಈ ಪುಸ್ತಕವು 'ಇಸ್ಲಾಮ್ ತತ್ವಸಾರ' ಎಂಬ ಹೆಸರಿನಲ್ಲಿ ಬೆಂಗಳೂರಿನ 'ಇಸ್ಲಾಮಿ ಸಾಹಿತ್ಯ ಪ್ರಕಾಶನ'ದ ವತಿಯಂದ ಪ್ರಕಟವಾಗಿತ್ತು.

ಇದೀಗ ಹೊಸ ಭಾಷಾಂತರ ಮತ್ತು ಹೊಸ ಹೆಸರಿನೊಂದಿಗೆ ಪ್ರಕಟವಾಗುತ್ತಿದೆ. ಮಿನಾ ಅಫ್ಶಾನ್ ಇದನ್ನು ಸರಳ ಸುಂದರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇಸ್ಲಾಮಿನ ಮೂಲಭೂತ ವಿಶ್ವಾಸಗಳು, ಆರಾಧನಾ ಕರ್ಮಗಳು ಹಾಗೂ ಇನ್ನಿತರ ವಿಷಯಗಳನ್ನು ಸುಲಭದಲ್ಲಿ ಗ್ರಹಿಸಲು ಈ ಕೃತಿ ಸಹಾಯಕವಾಗಿದೆ.

- ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಇಸ್ಲಾಮ್ ---

ಸತ್ಯ ವಿಶ್ವಾಸ ---

- ಅಲ್ಲಾಹನ ಮೇಲೆ ವಿಶ್ವಾಸ ---
- ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸ ---
- ಪರಲೋಕ ವಿಶ್ವಾಸ ---

ಸತ್ಕರ್ಮ ---

ಇಸ್ಲಾಮಿನ ಸ್ತಂಭಗಳು ---

- ನಮಾಝ್ ---
- ಝಕಾತ್ ---
- ಉಪವಾಸ ವ್ರತ ---
- ಹಜ್ಜ್ ---

ಸಚ್ಚಾರಿತ್ರ್ಯ ---

ಹಕ್ಕು ಬಾಧ್ಯತೆಗಳು ---

ರಾಜಕೀಯ ---

ಧರ್ಮದ ಸೇವೆ ---

ಧರ್ಮದ ಸೇವೆ ಮಾಡುವುದು ಹೇಗೆ? ---

- ಸಂಘಟನೆ ---
- ಸಹನೆ ಮತ್ತು ದೃಢ ಚಿತ್ತತೆ ---
- ಅಲ್ಲಾಹನ ಸ್ಮರಣೆ ---
- ಪ್ರಾರ್ಥನೆ ---

ಇಸ್ಲಾಮ್

ಈ ಜಗತ್ತು ತನ್ನಷ್ಟಕ್ಕೆ ಸೃಷ್ಟಿಯಾಗಿಲ್ಲ. ಇದರ ಸೃಷ್ಟಿಕರ್ತನೊಬ್ಬನಿದ್ದಾನೆ. ಆತನೇ ಲ್ಲಾಹನು. ಆತನು ಏಕೈಕನು. ಆತನೇ ಸಕಲ ವಸ್ತುಗಳ ಸೃಷ್ಟಿಕರ್ತ.

ಈ ಪ್ರಕಾಶಮಾನವಾದ ಧಗಧಗಿಸುವ ಸೂರ್ಯ, ಬೆಳದಿಂಗಳು ಸೂಸುವ ಚಂದ್ರ, ನುಗುವ ನಕ್ಷತ್ರಗಳು, ಕೆಲವೊಮ್ಮೆ ಬೆಚ್ಚನೆ ಬೀಸುವ ಮತ್ತೆ ಕೆಲವೊಮ್ಮೆ ತಣ್ಣನೆ ಸೂಸುವ ಳಿ, ನೀಲಾಕಾಶದಲ್ಲಿ ತೇಲುವ ಮೋಡಗಳು, ಆ ಮೋಡಗಳ ಘರ್ಷಣೆಯಿಂದಾಗಿ ಂಟಾಗುವ ಗುಡುಗು-ಮಿಂಚು, ಜಗತ್ತಿಗೆ ಸಂಜೀವಿನಿಯಾಗಿ ಬರುವ ಮಳೆ, ಭೂಮಿಯಿಂದ ಳೆಯುವ ದವಸ ಧಾನ್ಯಗಳು ಮತ್ತು ತರಕಾರಿಗಳು, ಗಾಳಿಯಲ್ಲಿ ಹಾರಾಡುವ ಪಕ್ಷಿಗಳು, ನಚುಂಬಿ ಪರ್ವತಗಳು, ಆಳವಾದ ಸಮುದ್ರ, ಪ್ರವಹಿಸುವ ನದಿ, ಒಟ್ಟಿನಲ್ಲಿ ಲ್ಲಿರುವುದನ್ನೆಲ್ಲ ಅಲ್ಲಾಹನೇ ಸೃಷ್ಟಿಸಿದ್ದಾನೆ. ಆತನೇ ಎಲ್ಲರ ಪ್ರಭು, ಎಲ್ಲರ ಪರಿಪಾಲಕ, ತನ ಆಜ್ಞೆಯ ಪ್ರಕಾರವೇ ಇಲ್ಲಿ ಎಲ್ಲವೂ ಸಂಭವಿಸುತ್ತದೆ.

ಎಲ್ಲವೂ ಆತನ ಆಜ್ಞಾನುಸಾರವಾಗಿ ಕಾರ್ಯವೆಸಗುತ್ತದೆ. ಸೂರ್ಯನ ಉದಯ-ಸ್ತಮಾನಕ್ಕೊಂದು ನಿಯಮ ಮತ್ತು ಸಮಯವಿದೆ. ಅದಕ್ಕೆ ಅದು ಬದ್ಧವಾಗಿದೆ. ಗಾಳಿಯ ನೆಗೂ ನಿರ್ದಿಷ್ಟ ನಿಯಮವಿದೆ. ಆ ನಿಯಮವನ್ನು ಮೀರಲು ಅದಕ್ಕೆ ಸಾಧ್ಯವಿಲ್ಲ. ಮಳೆ ಯಲಿಕ್ಕೂ ನಿಯಮವಿದೆ. ಯಾರಿಗೂ ಅದನ್ನು ಮುರಿಯಲು ಸಾಧ್ಯವಿಲ್ಲ. ಹಾಗೆಯೇ ೀಕದ ಎಲ್ಲ ಸೃಷ್ಟಿಗಳಿಗೂ ನಿರ್ದಿಷ್ಟ ನಿಯಮವನ್ನು ಅನುಸರಿಸಬೇಕಾಗಿದೆ. ಆ ಯಮಕ್ಕನುಗುಣವಾಗಿಯೇ ಅವುಗಳು ಹುಟ್ಟುತ್ತವೆ ಮತ್ತು ಬೆಳೆದು ಬಾಳುತ್ತವೆ. ಯಾವ ಷ್ಟಿಕರ್ತನು ಅವುಗಳನ್ನುಂಟುಮಾಡಿದ್ದಾನೋ ಅವನ ನಿಯಮಗಳನ್ನು ಮುರಿಯಲು ಧ್ಯವಿಲ್ಲವೆಂದು ನಮಗೆ ವ್ಯಕ್ತವಾಗುತ್ತದೆ. ಸಕಲ ನಿಸರ್ಗ ಒಬ್ಬನೇ ಸೃಷ್ಟಿಕರ್ತನ ಯಮಗಳಿಗೆ ಬದ್ಧವಾಗಿದೆ ಎಂದೂ ನಮಗೆ ವೇದ್ಯವಾಗುತ್ತದೆ.

ಸ್ಲಾಮ್ ಎಂದರೇನು?

ಅರಬಿ ಭಾಷೆಯಲ್ಲಿ 'ಇಸ್ಲಾಮ್' ಎಂಬ ಪದದ ಅರ್ಥವು ಆಜ್ಞಾಪಾಲನೆ ಮತ್ತು

ಅನುಸರಣೆಯಾಗಿದೆ. ಮುಸ್ಲಿಮ್ ಅಂದರೆ ಆಜ್ಞಾಪಾಲಕ ಮತ್ತು ಅನುಸರಣೆ ಮಾಡುವವನ ಹಾಗೆ ನೋಡುವುದಾದರೆ ಈ ಲೋಕದ ಸಮಸ್ತ ಸೃಷ್ಟಿಯು 'ಮುಸ್ಲಿಮ್' ಅಥ ಆಜ್ಞಾನುಸಾರಿಯಾಗಿದೆ. ಏಕೆಂದರೆ ಅದು ತನ್ನ ಸೃಷ್ಟಿಕರ್ತನ ಕಾನೂನುಗಳಿಗೆ ಬದ್ಧವಾಗಿ ಅಲ್ಲಾಹನು ಹೇಳುತ್ತಾನೆ,

"ಇವರೇನು ಅಲ್ಲಾಹನ ಅನುಸರಣಾ ರೀತಿಯನ್ನು (ಧರ್ಮ) ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನು ಅನುಸರಿಸಲು ಇಷ್ಟ ಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕಗಳಾಗಿ (ಮುಸ್ಲಿಮ್‌ಗಳಾಗಿ)ಯೇ ಇವೆ. ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ." (ಆಲಿ ಇಮ್ರಾನ್: 83)

غَيْرَ دِيْنِ اللّٰهِ يَبْغُوْنَ وَلَهٗ
سْلَمَ مَنْ فِي السَّمٰوٰتِ
لْاَرْضِ طَوْعًا وَّكَرْهًا
اِلَيْهِ يُرْجَعُوْنَ ٥
(آل عمران آیت ۸۳)

ಮಾನವನೂ ಈ ಜಗತ್ತಿನ ಒಂದು ಅಂಗವಾಗಿದ್ದಾನೆ. ಆತನನ್ನು ಅಲ್ಲಾಹ ಸೃಷ್ಟಿಸಿದ್ದಾನೆ. ಆತನ ಜನನ-ಮರಣ ಮತ್ತು ಜೀವನಕ್ಕೆ ನಿರ್ದಿಷ್ಟ ನಿಯಮವಿದೆ. ನಿಯಮಕ್ಕನುಸಾರವಾಗಿಯೇ ಆತನು ಜನ್ಮ ತಾಳುತ್ತಾನೆ, ಉಸಿರಾಡುತ್ತಾನೆ, ತಿಂದುಂ ನಡೆದಾಡುತ್ತಾನೆ. ಜಗತ್ತಿನೆಲ್ಲಾ ಸೃಷ್ಟಿಗಳಂತೆಯೇ ಆತನೂ ಅಲ್ಲಾಹನ ನಿಯಮ ಪಾಲಕನಾಗಿರುತ್ತಾನೆ. ಅಲ್ಲಾಹನು ಕಣ್ಣಿಗೆ ದೃಷ್ಟಿ ಬೀರುವ ಕೆಲಸವನ್ನು ನೀಡಿರುವಾಗ ಕೆಲಸವನ್ನು ಮೂಗಿನಿಂದ ಮಾಡುವುದು ಮನುಷ್ಯನಿಂದ ಸಾಧ್ಯವಿಲ್ಲ. ಅದೇ ರೀತಿ ಜಠ ಮೂಲಕ ಚಿಂತಿಸಲು ಅಥವಾ ಉಸಿರಾಡದೆ ಜೀವಿಸಲು ಅವನಿಗೆ ಸಾಧ್ಯವಿಲ್ಲ. ಮಾನವ ತ ಜೀವನದ ಬಹುಭಾಗದಲ್ಲಿ ಅಲ್ಲಾಹನ ನಿಯಮಗಳಿಗೆ ಬದ್ಧನಾಗಿದ್ದಾನೆ. ಈ ಲೋ ಇತರೆಲ್ಲ ವಸ್ತುಗಳಂತೆ ಅವನೂ 'ಮುಸ್ಲಿಮ್' ಅಥವಾ ಆಜ್ಞಾನುಸಾರಿಯೇ ಆಗಿದ್ದಾನೆ.

ಆದರೆ ಮಾನವನ ಮತ್ತು ಲೋಕದ ಇತರೆಲ್ಲ ಸೃಷ್ಟಿಗಳ ಮಧ್ಯೆ ಬಹುದೊ ಅಂತರವೊಂದಿದೆ. ಮಾನವನಿಗೆ ಅಲ್ಲಾಹನು ಬುದ್ಧಿಯನ್ನು ನೀಡಿದ್ದಾನೆ. ತನಗಿಷ್ಟವಾದುದ ಸ್ವೀಕರಿಸುವ ಮತ್ತು ತೊರೆಯುವ ಸ್ವಾತಂತ್ರ್ಯವನ್ನು ಆತನಿಗೆ ನೀಡಿದ್ದಾನೆ. ಆತನು ಒಳಿತನ ಸ್ವೀಕರಿಸಬಹುದು- ಕೆಡುಕನ್ನೂ ಸ್ವೀಕರಿಸಬಹುದು. ಸನ್ಮಾರ್ಗವನ್ನು ಅನುಸರಿಸಬಹು ಅಥವಾ ದುರ್ಮಾರ್ಗದಲ್ಲಿ ನಡೆಯಬಹುದು. ಆತನು ಬಯಸಿದರೆ ಬುದ್ಧಿಯನ್ನು ಸೂಕ್ತವ ಉಪಯೋಗಿಸಿ ತನ್ನ ನೈಜ ಒಡೆಯನನ್ನು ಗುರುತಿಸಬಹುದು. ಆದರೆ ತನ್ನ ಬುದ್ಧಿಯ ಪ್ರಯೋಗಿಸದೆ, ಸ್ವೇಚ್ಛೆಯನ್ನು ಪಾಲಿಸಿ ತನ್ನ ಒಡೆಯನನ್ನು ನಿರಾಕರಿಸಲೂ ಬಹು ಆತನಿಚ್ಛಿಸಿದರೆ ತನ್ನ ಒಡೆಯನ ಹಕ್ಕನ್ನು ಸರಿಯಾಗಿ ಗುರುತಿಸಿ ಈಡೇರಿಸಬಹುದು. ಅನ್ಯ ಯಾರೂ ಅವನನ್ನು ಈ ನಿಟ್ಟಿನಲ್ಲಿ ಬಲವಂತಪಡಿಸುವಂತಿಲ್ಲ.

ಅಲ್ಲಾಹನು ಮಾನವನಿಗೆ ನೀಡುವಂತಹ ಬುದ್ಧಿಶಕ್ತಿಯಿಂದ ಆತನು ಸರ್ವಜ್ಞನಾಗಲು ಸಾಧ್ಯವಿಲ್ಲ. ಮಾನವನ ಬುದ್ಧಿಗೆ ನಿಲುಕದ ಅನೇಕ ವಿಷಯಗಳಿವೆ. ಅವು ಕೇವಲ ಅವನ ಬುದ್ಧಿಗೆ ನಿಲುಕಲಾರದು. ಆದರೆ ಅವುಗಳನ್ನರಿಯುವುದು ಅತ್ಯಂತ ಅವಶ್ಯಕವಾಗಿದೆ. ಉದಾಹರಣೆಗೆ ಮಾನವನು ಮರಣಾನಂತರ ಎಲ್ಲಿಗೆ ಹೋಗುತ್ತಾನೆ? ಈ ಜಗದೊಡೆಯನು ಮಾನವನ ಯಾವ ಕರ್ಮಗಳಿಂದ ಸಂತುಷ್ಟನಾಗುತ್ತಾನೆ ಮತ್ತು ಯಾವ ಕರ್ಮಗಳನ್ನು ಇಷ್ಟಪಡುವುದಿಲ್ಲವೆಂಬುದೇ ಮುಂತಾದ ಅನೇಕ ವಿಷಯಗಳನ್ನು ತಿಳಿಯುವುದು ಅವಶ್ಯಕವಾಗಿದೆ. ಆದರೆ ಮಾನವನ ಬಳಿ ಸ್ವತಃ ಇದನ್ನೆಲ್ಲ ಕರಾರುವಕ್ಕಾಗಿ ತಿಳಿಯುವ ಮೂಲಗಳಿಲ್ಲ.

ಅಲ್ಲಾಹನು ಪರಮ ದಯಾಮಯನು. ಆತನು ತನ್ನ ಸೃಷ್ಟಿಗಳನ್ನು ಅಮಿತವಾಗಿ ಪ್ರೀತಿಸುತ್ತಾನೆ. ಆತನ ವಾತ್ಸಲ್ಯದಿಂದಾಗಿಯೇ ಆತನು ಪ್ರತಿಯೊಂದು ಸೃಷ್ಟಿಯ ಜೀವನಕ್ಕೆ ಅತ್ಯುತ್ತಮ ವ್ಯವಸ್ಥೆಯನ್ನು ಏರ್ಪಡಿಸಿದ್ದಾನೆ. ಆತನ ಪ್ರೀತಿ ಮತ್ತು ವಾತ್ಸಲ್ಯವಿಲ್ಲದಿದ್ದರೆ ಯಾವ ಜೀವಿಯೂ ಒಂದು ಕ್ಷಣವೂ ಜೀವಿಸಿರಲಾರದು. ಸ್ವತಃ ಮಾನವನ ಮೇಲೆ ಆತನಿಗಿರುವ ಕಾರುಣ್ಯಕ್ಕೆ ಪಾರವೇ ಇಲ್ಲ. ಈ ಸಮಸ್ತ ಜಗತ್ತೇ ಮಾನವನ ಸೇವೆಯಲ್ಲಿ ನಿರತವಾಗಿದೆ ಎಂದು ಸ್ವಲ್ಪ ಆಲೋಚಿಸಿ ನೋಡಿದರೆ ನಮಗೆ ತಿಳಿದು ಬರುತ್ತದೆ.

ಸೂರ್ಯ ಬೆಳಗುತ್ತದೆ. ಅದರ ತಾಪ ಮತ್ತು ಬೆಳಕಿನಿಂದಾಗಿ ಧಾನ್ಯ, ಫಲ, ತರಕಾರಿಗಳೆಲ್ಲ ಬೆಳೆಯುತ್ತದೆ. ಅದರ ತಾಪದಿಂದಲೇ ಸಮುದ್ರದ ನೀರು ಆವಿಯಾಗುತ್ತದೆ ಮತ್ತು ಅದೇ ಆವಿಯಿಂದುಂಟಾಗುವ ಮೋಡಗಳನ್ನು ಹವೆಯು ನೀರಿಲ್ಲದ ಪ್ರದೇಶದೆಡೆಗೆ ಕೊಂಡೊಯ್ದು ಮಳೆ ಸುರಿಸುವಂತೆ ಮಾಡುತ್ತದೆ. ನಂತರ ಹೊಲಗದ್ದೆಗಳು ಬೆಳೆಯುತ್ತವೆ. ಎಲ್ಲ ಜೀವಿಗಳಲ್ಲಿ ಜೀವನೋಪಾಯದ ವ್ಯವಸ್ಥೆಯಾಗುತ್ತದೆ. ಗಾಳಿಯನ್ನೊಮ್ಮೆ ಗಮನಿಸಿ. ಅದು ಜೀವನಕ್ಕೆ ಆಹಾರಕ್ಕಿಂತ ಹೆಚ್ಚಾಗಿ ಬೇಕಾಗುವಂತಹ ವಸ್ತು, ಒಂದು ನಿಮಿಷ ಅದು ಲಭ್ಯವಾಗದಿದ್ದರೆ ಜೀವನವೇ ಕೊನೆಗೊಳ್ಳುತ್ತದೆ. ಹಾಗೆಯೇ ನೀರನ್ನು ನೋಡಿ- ಅದು ಜೀವನದ ಪ್ರಮುಖ ಆಕರ. ಒಟ್ಟಿನಲ್ಲಿ ನಾವು ಜೀವಿಸಲಿಕ್ಕೆ ಅನಿವಾರ್ಯವಾದ ಅಗಣ್ಯ ಅನುಗ್ರಹಗಳು ಇಲ್ಲಿ ನಮಗೆ ಲಭ್ಯವಿದೆ.

ಸ್ವಲ್ಪ ಆಲೋಚಿಸಿ ನೋಡಿ. ನಾವು ಬದುಕುತ್ತಿದ್ದೇವೆ ಆದರೆ ಜೀವನವು ದುಷ್ಕರ್ಮಗಳನ್ನೆಸಗುವುದರಲ್ಲಿ ವ್ಯಯವಾಗುತ್ತಿದೆ. ನಮಗೆ ವಿವೇಕವಿದೆ, ಆದರೆ ಸನ್ಮಾರ್ಗ ಲಭ್ಯವಾಗದ ಕಾರಣ ಅದು ಮಾನವನನ್ನು ವಿನಾಶದೆಡೆಗೆ ಕೊಂಡೊಯ್ಯುತ್ತಿದೆ. ಮಾನವನಿಗೆ ಸ್ವಕ್ಷ ಜೀವನದ ಉದ್ದೇಶವೇ ತಿಳಿಯದಾಗಿದೆ. ಆತನಿಗೆ ತಾನು ಯಾವ ಕೆಲಸವನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂಬ ವಿವೇಚನೆಯಿಲ್ಲ. ಹಾಗಾದರೆ ಆತನ ಪಾಲಿಗೆ ಅದಕ್ಕಿಂತ ದೊಡ್ಡ ದೌರ್ಭಾಗ್ಯ ಬೇರಾವುದಿದೆ? ಎಲ್ಲ ದಯಾಳುಗಳನ್ನೂ ಮೀರಿಸುವ ದಯಾಮಯ ಮತ್ತು ಮಹಾ ವಾತ್ಸಲ್ಯಮಯನಾಗಿರುವ ಅಲ್ಲಾಹನು ಮಾನವನನ್ನು ದೌರ್ಭಾಗ್ಯಕ್ಕೆ ತುತ್ತಾಗಲು ಹೇಗೆ ತಾನೇ ಬಿಡುವನು? ಇದು ಅಲ್ಲಾಹನ ಕರುಣೆಗೆ ಯೋಗ್ಯದಲ್ಲ. ದೇವ ಪ್ರೇಮ ಇದನ್ನೆಂದೂ ಸಹಿಸದು.

ಪ್ರಥಮ ಮಾನವ 'ಮುಸ್ಲಿಮ್' ಅಥವಾ ಆಜ್ಞಾನುಸಾರಿಯಾಗಿದ್ದರು

ಈ ಪ್ರೀತಿ ಮತ್ತು ವಾತ್ಸಲ್ಯದ ಸಹಜ ಬೇಡಿಕೆಗೆ ತಕ್ಕಂತೆ ಮಾನವನನ ಸೃಷ್ಟಿಸುವುದರೊಂದಿಗೆ ಅಲ್ಲಾಹನು ಆತನ ಮಾರ್ಗದರ್ಶನದ ವ್ಯವಸ್ಥೆಯನ್ನೂ ಮಾಡಿದ್ದಾ ಜೀವನವನ್ನು ನೀಡಿರುವಾಗ ಜೀವಿಸುವ ರೀತಿಯನ್ನೂ ತಿಳಿಸಿದ್ದಾನೆ. ಬುದ್ಧಿಯನ್ನು ನೀಡಿರುವಾ ಅದನ್ನು ಸರಿಯಾಗಿ ಉಪಯೋಗಿಸುವ ಮಾರ್ಗವನ್ನೂ ತಿಳಿಯಪಡಿಸಿದ್ದಾನೆ. ಅಲ್ಲಾಹ ಪ್ರಥಮವಾಗಿ ಹ. ಆದಮ್‌ರನ್ನು(ಅ) ಸೃಷ್ಟಿಸಿದ್ದನು ಎಂದು ನೀವು ಕೇಳಿರಬಹುದ ಹ.ಆದಮ್(ಅ) ಅಲ್ಲಾಹನ ಪ್ರವಾದಿಯಾಗಿದ್ದರು. ತಮಗೆ ನೀಡಲಾದ ಅಧಿಕಾರವನ್ನು ಹೇ ಪ್ರಯೋಗಿಸಬೇಕು, ಯಾವ ಕೆಲಸಗಳನ್ನು ಮಾಡಬೇಕು ಮತ್ತು ಯಾವುದರಿಂದ ದೂರವಿರಬೇಕ ಅಲ್ಲಾಹನು ನೀಡಿರುವ ಬುದ್ಧಿಶಕ್ತಿಯನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಅಲ್ಲಾಹ ಅವರಿಗೆ ತಿಳಿಯಪಡಿಸಿದ್ದನು. ಅಲ್ಲಾಹನು ಅವರಿಗೆ ಮಾನವನ ಬುದ್ಧಿಗೆ ನಿಲುಕ ಕಾರ್ಯಗಳನ್ನೂ ತಿಳಿಸಿದನು. ಮಾನವನಿಗೆ ಇಹಲೋಕದ ಜೀವನವೇ ಕೊನೆಯಲ್ಲ. ಬದಲಾ ಮರಣಾನಂತರ ಪುನಃ ಜೀವಿಸಲಿಕ್ಕಿದೆ ಎಂಬುದು ಅವರಿಗೆ ತಿಳಿದಿತ್ತು. ಸತ್ಕರ್ಮ ಮತ ದುಷ್ಕರ್ಮಗಳ ಅರಿವೂ ಅವರಿಗಿತ್ತು. ಸತ್ಕರ್ಮಗಳ ಪ್ರತಿಫಲ ಮತ್ತು ದುಷ್ಕರ್ಮಗಳ ಶಿಕ್ಷೆ ಬಗ್ಗೆಯೂ ಅವರಿಗೆ ಜ್ಞಾನವಿತ್ತು. ಒಟ್ಟಿನಲ್ಲಿ ಮಾನವನು ಹೇಗೆ ಸಂಪೂರ್ಣವಾಗಿ ಅಲ್ಲಾಹ ಅನುಸರಣೆ ಮಾಡಬಹುದೆಂಬುದನ್ನು ಅವರು ಸರಿಯಾಗಿ ತಿಳಿದಿದ್ದರು. ಅಲ್ಲಾಹನ ಮೆಚ್ಚು ಮತ್ತು ಕ್ರೋಧವನ್ನು ಅವರು ಸರಿಯಾಗಿ ಗುರುತಿಸಿದ್ದರು. ಅವರು ಅಲ್ಲಾಹನ 'ಮುಸ್ಲಿಮ ಅಥವಾ ಆಜ್ಞಾನುಸಾರಿ ಆಗಿದ್ದರು ಮತ್ತು 'ಇಸ್ಲಾಮ್'ಅಥವಾ ಆಜ್ಞಾನುಸರಣೆಯೇ ಅವ ಧರ್ಮವಾಗಿತ್ತು.

ಹ. ಆದಮ್‌ರವರು(ಅ) ತಮ್ಮ ಮಕ್ಕಳಿಗೆ ಈ ಇಸ್ಲಾಮನ್ನೇ ಬೋಧಿಸಿದ್ದರು ಮತ ಈ ಇಸ್ಲಾಮಿನ ಮಾರ್ಗದಲ್ಲೇ ಅವರನ್ನು ನಡೆಸಿದರು. ಹ. ಆದಮ್‌ರ(ಅ) ಮಕ್ಕಳು ತವ ಮಕ್ಕಳಿಗೂ ಈ ಧರ್ಮವನ್ನೇ ಬೋಧಿಸಿದರು. ಆದರೆ ಸಂತಾನ ಬೆಳೆಯುತ್ತಾ ಹೋದಾ ಧರ್ಮದ ಜ್ಞಾನವೂ ಕುಂಠಿತವಾಗುತ್ತಾ ಹೋಯಿತು. ನಂತರ ಮನುಷ್ಯರು ಅಲ್ಲಾಹ ಧರ್ಮದ ಅನೇಕ ಕಾರ್ಯಗಳನ್ನು ಮರೆತು, ಅದರ ಸ್ಥಾನದಲ್ಲಿ ಹೊಸ ವಿಚಾರಗಳ ಅನುಸರಿಸ ತೊಡಗಿದಂತಹ ಕಾಲ ಬಂದೊದಗಿತು.

ಅಲ್ಲಾಹನ ಧರ್ಮ ಸದಾ ಒಂದೇ ಆಗಿತ್ತು

ಅಲ್ಲಾಹನು ತನ್ನ ದಾಸರ ಮೇಲೆ ಅತಿ ಹೆಚ್ಚು ಕರುಣೆಯುಳ್ಳವನಾಗಿರುತ್ತಾನೆ. ಆತ ತನ್ನ ಕೃಪೆಯಿಂದ ಮಾನವನು ಮರೆತ ಪಾಠವನ್ನು ಮತ್ತೆ ನೆನಪಿಸುವ ವ್ಯವಸ್ಥೆಯ ಮಾಡಲು ತನ್ನ ಬೇರೊಬ್ಬ ದಾಸನನ್ನು ಪ್ರವಾದಿಯಾಗಿ ನೇಮಕಗೊಳಿಸಿದನು. ಕ್ರಮೇ ಹ. ಆದಮ್‌ರ(ಅ) ಸಂತತಿಯು ಜಗತ್ತಿನೆಲ್ಲೆಡೆ ಹಬ್ಬಿತು ಮತ್ತು ಅನೇಕ ಸಮುದಾಯ ಮ ಸಂತತಿಗಳು ರೂಪು ತಾಳಿದವು. ಆದುದರಿಂದಲೇ ಅಲ್ಲಾಹನು ಪ್ರತಿಯೊಂದು ಸಮುದಾ

ುತ್ತು ರಾಷ್ಟ್ರಕ್ಕೆ ಬೇರೆ ಬೇರೆ ಪ್ರವಾದಿಗಳನ್ನು ಕಳುಹಿಸಿದನು. ಅಲ್ಲಾಹನ ಈ ಪ್ರವಾದಿಗಳು ರಾನ್, ಅರೇಬಿಯಾ, ಇರಾಕ್, ಭಾರತ, ಚೀನಾ ಮುಂತಾದ ಜನವಾಸವಿರುವ ಎಲ್ಲ ದೇಶಗಳಲ್ಲಿ ಆಗತರಾದರು. ಆ ಜನರಿಂದಲೇ ಅಲ್ಲಾಹನು ಪ್ರವಾದಿಗಳನ್ನು ಆಯ್ದುಕೊಂಡನು ುತ್ತು ಆ ಪ್ರವಾದಿಗಳೆಲ್ಲರೂ ಅಲ್ಲಾಹನ ಧರ್ಮವನ್ನು ಅಲ್ಲಾಹನ ದಾಸರಿಗೆ ತಲುಪಿಸಿದರು. ಲ್ಲ ಪ್ರವಾದಿಗಳು ತಂದ ಧರ್ಮವು ಇಸ್ಲಾಮ್ ಧರ್ಮವೇ ಆಗಿತ್ತು. ಅಲ್ಲಾಹನ ಎಲ್ಲ ವಾದಿಗಳೂ ಅಲ್ಲಾಹನ ದಾಸರಿಗೆ ಕೇವಲ ಆತನ ಅನುಸರಣೆ ಮತ್ತು ಆರಾಧನೆಯ ಆದೇಶ ಡುತ್ತಿದ್ದರು. ಪರಲೋಕ ಜೀವನವನ್ನು ನೆನಪಿಸುತ್ತಿದ್ದರು ಮತ್ತು ಜೀವನ-ಮರಣಗಳೆರಡೂ ಲ್ಲಾಹನ ಸಂಪ್ರೀತಿಗಾಗಿಯೇ ಇರಬೇಕೆಂದು ಕಲಿಸುತ್ತಿದ್ದರು. ಆ ಪ್ರವಾದಿಗಳೆಲ್ಲರ ಮೇಲೆ ಶ್ವಾಸವಿರಿಸಿ, ಅವರು ತೋರಿಸಿದ ಸನ್ಮಾರ್ಗದಲ್ಲಿ ನಡೆದವರೆಲ್ಲರೂ ಮುಸ್ಲಿಮರೇ ಗಿದ್ದರು. ಹ.ನೂಹ್, ಹ. ಇಬ್ರಾಹೀಮ್, ಹ. ಹೂದ್, ಹ. ಸಾಲಿಹ್, ಹ. ಇಸ್ಮಾಈಲ್, . ಇಸ್ಹಾಕ್, ಹ. ಯೂಸುಫ್, ಹ. ಮೂಸಾ, ಹ. ಈಸಾ(ಅ) ಇವರೆಲ್ಲರೂ ಅಲ್ಲಾಹನ ಮುಖ ಪ್ರವಾದಿಗಳಾಗಿದ್ದರು. ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಇವರೆಲ್ಲರ ಕುರಿತು ಸ್ತಾಪಿಸಿದ್ದಾನೆ. ಈ ಪ್ರವಾದಿಗಳ ಹೊರತು ಇತರ ಅನೇಕ ಪ್ರವಾದಿಗಳೂ ಆಗತರಾಗಿದ್ದರು. ವರೆಲ್ಲರ ಪ್ರಸ್ತಾಪವು ಪವಿತ್ರ ಕುರ್‌ಆನಿನಲ್ಲಿಲ್ಲ. ಪ್ರವಾದಿಗಳೆಲ್ಲರೂ ಸತ್ಯಸಂಧರೆಂದು ುಸ್ಲಿಮರು ವಿಶ್ವಾಸವಿರಿಸುತ್ತಾರೆ. ಆ ಪ್ರವಾದಿಗಳು ತಂದಂತಹ ಧರ್ಮವನ್ನು ಅಲ್ಲಾಹನ ರ್ಮವೆಂದೂ ಅವರ ನೈಜ ಅನುಯಾಯಿಗಳನ್ನು ಮುಸ್ಲಿಮರೆಂದೂ ನಂಬುತ್ತಾರೆ. ಲ್ಲಾಹನ ಎಲ್ಲ ಪ್ರವಾದಿಗಳ ಮೇಲೆ ಮತ್ತು ಅವರ ನೈಜ ಅನುಯಾಯಿಗಳ ಮೇಲೆಯೂ ಲ್ಲಾಹನ ಅನುಗ್ರಹವು ಸದಾ ವರ್ಷಿಸಲಿ.

ರ್ಮದ ಸಮಾಪ್ತಿ

ಕೊನೆಯದಾಗಿ ಪ್ರವಾದಿಗಳ ಸರದಾರರೂ, ಅಲ್ಲಾಹನ ಅತ್ಯಂತ ಪ್ರೀತಿಪಾತ್ರರಾದ ಸರೂ, ಮಾನವರಲ್ಲಿ ಅತ್ಯುತ್ತಮರೂ ಆದ ಅಂತಿಮ ಪ್ರವಾದಿ ಹ. ಮುಹಮ್ಮದ್(ಸ) ಗಮಿಸಿದರು. ಪ್ರವಾದಿವರ್ಯರು(ಸ) ಜನಿಸಿದಾಗ ಜಗತ್ತು ಬಹಳಷ್ಟು ಪ್ರಗತಿ ಸಾಧಿಸಿತ್ತು. ತ್ಯಂತ ಯಶಸ್ವೀ ಜೀವನವನ್ನು ಸಾಗಿಸಲು ಸಾಧ್ಯವಿರುವಂತಹ ಶಾಸನವೊಂದನ್ನು ಮಾನವರಿಗೆ ಡಲು ಆಗ ಕಾಲ ಪಕ್ವಗೊಂಡಿತ್ತು. ಅಲ್ಲಾಹನು ತನ್ನ ಈ ಅನುಗ್ರಹವನ್ನು ಪರಿಪೂರ್ಣವಾದ ಪದಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ತನ್ನ ದಾಸರಿಗೆ ತಲುಪಿಸಿದನು. ಅಲ್ಲಾಹನ ಅನುಗ್ರಹವು ಅವನು ಒದಗಿಸಿರುವ ಸಮಗ್ರ ಧರ್ಮವಾಗಿದೆ. ಅದು ಅಲ್ಲಾಹನ ಂಥವಾದ ಪವಿತ್ರ ಕುರ್‌ಆನ್, ಆತನ ಪ್ರವಾದಿಯ(ಸ) ಮಾರ್ಗದರ್ಶನ ಮತ್ತು ಅವರ ವನ ಚರ್ಯೆಯ ರೂಪದಲ್ಲಿ ಇಂದು ಮುಸ್ಲಿಮರ ಬಳಿಯಲ್ಲಿದೆ. ಅನಾದಿ ಕಾಲದಿಂದಲೇ ುವ ಮತ್ತು ಅಲ್ಲಾಹನ ಎಲ್ಲ ಪ್ರವಾದಿಗಳೂ ಆತನ ದಾಸರಿಗೆ ತಲುಪಿಸಿದ ಧರ್ಮ ಸ್ಲಾಮ್ ಧರ್ಮವೇ ಆಗಿದೆ.

ಎಲ್ಲ ಧರ್ಮಗಳೂ ಸತ್ಯ ಧರ್ಮವಾಗಿವೆಯೇ?

ಅಲ್ಲಾಹನು ಕಳುಹಿಸಿದಂತಹ ಧರ್ಮವು ಎಲ್ಲಾ ಕಾಲಗಳಲ್ಲಿಯೂ ಒಂದೇ ಆಗಿತ್ತು ಅದುವೇ 'ಇಸ್ಲಾಮ್'. ಈ ಸತ್ಯ ಮತ್ತು ನೇರ ಮಾತನ್ನು ಅಜ್ಞಾನಿಗಳು ಮತ ಚತುರರೆನಿಸಿಕೊಂಡವರು ತಪ್ಪಾಗಿ ಉಪಯೋಗಿಸಿಕೊಂಡರು. ನಿಮಗೆ ತಿಳಿದಿರುವಂತೆ ಇಂದ ಜಗತ್ತಿನಲ್ಲಿ ನೂರಾರು ಧರ್ಮಗಳಿವೆ. ಆಯಾ ಧರ್ಮದವರು ತಮ್ಮ ಧರ್ಮವ ಅತ್ಯುತ್ತಮವಾದುದು ಮತ್ತು ದೈವಿಕವಾದುದು ಎಂದು ವಾದಿಸುತ್ತಾರೆ. ಈ ವಾದ ಆಧಾರದಲ್ಲಿ ವಿವಿಧ ಧರ್ಮಾವಲಂಬಿಗಳು ಪರಸ್ಪರ ಕಚ್ಚಾಡಲು ಪ್ರಾರಂಭಿಸುತ್ತಾ ಪ್ರತಿಯೊಬ್ಬನು ತನ್ನ ಧರ್ಮವೇ ಸತ್ಯ, ಇತರ ಧರ್ಮಗಳು ಮಿಥ್ಯವೆಂದು ವಾದಿಸುತ್ತಾ ಈ ರೀತಿಯಿಂದ ಜಗಳ ಆರಂಭವಾಗುತ್ತದೆ. ಈ ಜಗಳವನ್ನು ಮುಗಿಸುವುದು ಹೇಗ ಮಾನವರೆಲ್ಲರೂ ಒಟ್ಟಾಗಿ ಒಂದೇ ಧರ್ಮವನ್ನು ಅವಲಂಬಿಸುವುದು ಮತ್ತು ಅದರಂ ನಡೆಯುವುದು ಪರಿಹಾರಕ್ಕೆ ಇರುವ ಉಪಾಯಗಳಲ್ಲೊಂದು. ಆದರೆ ಇದು ದುಃಸ್ಸಾಧ್ಯ. ಜನ ಚಿಂತಿಸುವ ರೀತಿ ವಿಭಿನ್ನವಾಗಿರುತ್ತದೆ. ಅವರ ಪ್ರಕೃತಿ ಮತ್ತು ಸ್ವಭಾವಗಳು ಬೇ ಬೇರೆಯಾಗಿರುತ್ತವೆ. ಆದುದರಿಂದ ಮಾನವರೆಲ್ಲರೂ ಒಂದೇ ಮಾರ್ಗವನ್ನು ಸತ್ಯವೆಂ ಅಂಗೀಕರಿಸಲು ಸಾಧ್ಯವಿಲ್ಲ. ಅದೆಷ್ಟು ಸತ್ಯ ಮತ್ತು ನೇರ ಮಾರ್ಗವಾಗಿದ್ದರೂ ಸರಿಯೆ ಈ ನಿಟ್ಟಿನಲ್ಲಿ ಮಾಡಲಾದ ಪ್ರಯತ್ನಗಳೆಲ್ಲವೂ ಸದಾ ವಿಫಲವಾಗಿವೆ. ಈ ಕೆಲಸವ ಮಾಡಹೊರಟವರು ಅದೆಷ್ಟೋ ಜನರ ರಕ್ತ ಹರಿಸಬೇಕಾಯಿತು. ಆದರೆ ಕೊನೆಗೂ ಕಾಯ ಕೈಗೂಡಲಿಲ್ಲ. ಇದು ಸಾಧ್ಯವಾಗುವುದು ಮಾನವನ ಪ್ರಕೃತಿಗೆ ವಿರುದ್ಧವಾದ ಮಾತಾಗಿ

ಹಾಗಾದರೆ ಏನು ಮಾಡಬೇಕು? ಈ ಕ್ಷೋಭೆಯನ್ನು ನಿಲ್ಲಿಸುವುದು ಹೇಗೆ? ವಿವಿ ಧರ್ಮಾವಲಂಬಿಗಳ ಪರಸ್ಪರ ಜಗಳವನ್ನು ನಿಲ್ಲಿಸುವುದು ಹೇಗೆ? ಇದಕ್ಕಾಗಿ ಕೆಲವರು ಎ ಧರ್ಮಗಳೂ ಸತ್ಯವಾಗಿವೆ, ತಮಗಿಷ್ಟವಿರುವ ಯಾವ ಧರ್ಮವನ್ನು ಅವಲಂಬಿಸಿದರ ಯಶಸ್ವಿಯಾಗಬಹುದು ಎಂಬ ಘೋಷಣೆ ಹೊರಡಿಸಿದರು. ಅವರ ಪ್ರಕಾರ ವಿಭಿ ಧರ್ಮಗಳು ಅಲ್ಲಾಹನೆಡೆಗೆ ತಲುಪುವ ವಿಭಿನ್ನ ಮಾರ್ಗಗಳಾಗಿವೆ. ಯಾರು ಯಾ ಮಾರ್ಗವನ್ನು ಅನುಸರಿಸಿದರೂ ಆತನೆಡೆಗೆ ತಲುಪಬಹುದು. ಮತ್ತೆ ಕೆಲವರ ಪ್ರಕಾ ದೇವರೆಂದರೆ ಒಂದು ಕೇಂದ್ರವಿದ್ದಂತೆ. ಮಾನವರೆಲ್ಲರೂ ಅದರ ಪರಿಧಿಯ ಹರಡಿಕೊಂಡಿದ್ದಾರೆ. ಪ್ರತಿಯೊಬ್ಬರೂ ಆ ಕೇಂದ್ರ (ಅಲ್ಲಾಹ್)ವನ್ನು ತಲುಪಬೇಕಾಗಿ ಆದ್ದರಿಂದ ತಮ್ಮ ಸ್ಥಾನದಿಂದ ಕೇಂದ್ರವನ್ನು ತಲುಪಲು ಮಾನವರಿಗೆ ಕೇವಲ ಒಂ ಮಾರ್ಗವನ್ನು ಅನುಸರಿಸಬೇಕಾಗಿಲ್ಲ. ಕೇಂದ್ರಾಭಿಮುಖವಾಗಿ ಯಾವ ಮಾರ್ಗದಲ್ಲಿ ನಡೆದರ ಕೇಂದ್ರವನ್ನು ತಲುಪಬಹುದು. ಇಂತಹ ಅನೇಕ ವಾದಗಳನ್ನು ಈ ಹಿಂದೆಯೂ ಮಂಡಿಸಲಾಗಿ ಈಗಲೂ ಹೇಳಲಾಗುತ್ತಿದೆ. ಇವರೆಲ್ಲರ ವಾದವು ಎಲ್ಲ ಧರ್ಮಗಳೂ ಸಮಾನ ಮ ಸತ್ಯವಾದುದಾಗಿವೆ, ಯಾವ ಮಾರ್ಗದಲ್ಲಿ ನಡೆದರೂ ಗುರಿ ತಲುಪಬಹುದು ಎಂಬುದಾಗಿ ತನ್ನ ಮಾರ್ಗವೇ ನೈಜ ಮಾರ್ಗ, ಅದರ ಹೊರತು ಇತರೆಲ್ಲ ಮಾರ್ಗಗಳು ಮಿಥ್ಯ ಎಂ ಹೇಳುವ ಹಕ್ಕು ಯಾರಿಗೂ ಇಲ್ಲ ಎಂಬುದು ಅವರ ವಾದ.

ರ್ಮಗಳೆಲ್ಲವೂ ಸತ್ಯವಾಗಲು ಸಾಧ್ಯವಿಲ್ಲ

ಇತರ ಧರ್ಮಾವಲಂಬಿಗಳಿಗೆ ಈ ಮಾತು ಸರಿ ಎನಿಸಬಹುದು. ತಮ್ಮ ಧರ್ಮವೂ ತ್ಯವಾದುದು ಮತ್ತು ಇತರರ ಧರ್ಮವೂ ಸತ್ಯವೆಂಬ ನಂಬಿಕೆಗೆ ಅವರ ಧರ್ಮಗಳಲ್ಲಿ ಸ್ಪದವಿರಬಹುದು. ಆದರೆ ಇಸ್ಲಾಮಿನ ಪ್ರಕಾರ ಈ ಮಾತು ತಪ್ಪು. ಇಂತಹ ತಪ್ಪು ಮಾತನ್ನು ೇಳುವ ಮತ್ತು ಅದನ್ನು ಸತ್ಯವೆಂದು ನಂಬುವ ಯಾವ ಆಸ್ಪದವೂ ಇಸ್ಲಾಮಿೂ ೋಧನೆಗಳಲ್ಲಿ ಇಲ್ಲ. ಇದು ಬಹಳ ಸ್ಪಷ್ಟವಾದ ಮಾತು. ಆಲೋಚಿಸಿ ನೋಡಿ. ಜನರು ಾಮಾನ್ಯವಾಗಿ 'ಧರ್ಮ'ವನ್ನು ಅರ್ಥೈಸುವ ರೀತಿಯಲ್ಲಿ 'ಇಸ್ಲಾಮ್ ಧರ್ಮ'ವನ್ನು ಅರ್ಥೈಸುವುದಿಲ್ಲ. ಾನವರು ದೇವನಲ್ಲಿ ವಿಲೀನರಾಗುವ ಕಲ್ಪನೆಯು ಇಸ್ಲಾಮಿನಲ್ಲಿಲ್ಲ. ಈ ಕಲ್ಪನೆ ತಪ್ಪು ಂದು ಇಸ್ಲಾಮ್ ಸಾರುತ್ತದೆ. ಮಾನವ ಮಾನವನಾಗಿದ್ದಾನೆ ಮತ್ತು ದೇವನು ದೇವನಾಗಿದ್ದಾನೆ. ಸ್ಲಾಮಿನ ಪ್ರಕಾರ ದೇವನನ್ನು ಕಂಡುಕೊಳ್ಳುವುದೆಂದರೆ ಆತನ ಮೆಚ್ಚುಗೆಯನ್ನು ಗಳಿಸುವುದಾಗಿದೆ. ಾನವನು ಯಶಸ್ಸು ಗಳಿಸಬೇಕಾದರೆ ಆತನು ದೇವನಲ್ಲಿ ವಿಲೀನವಾಗಬೇಕೆಂದು ಇಸ್ಲಾಮ್ ಲಿಸುವುದಿಲ್ಲ. ಇಸ್ಲಾಮಿನ ಪ್ರಕಾರ ಅಂತಹ ಕಲ್ಪನೆ ಸತ್ಯನಿಷೇಧಕ್ಕೆ ಸಮವಾಗಿದೆ. ಾನವನೆಂದೂ ದೇವನಲ್ಲಿ ವಿಲೀನನಾಗಲಾರ. ಇಸ್ಲಾಮಿನ ಪ್ರಕಾರ ಮಾನವರ ಯಶಸ್ಸು ಲ್ಲಾಹನ ಸಂಪ್ರೀತಿಯಲ್ಲಿಯೇ ಅಡಕವಾಗಿದೆ. ಮಾನವನು ತನ್ನ ಒಡೆಯನನ್ನು ಂತೋಷಪಡಿಸಬೇಕು, ಆತ ಇಷ್ಟ ಪಡುವ ಕೆಲಸಗಳನ್ನು ಮಾಡಬೇಕು, ಆತನ ಆಜ್ಞೆಯನ್ನು ನುಸರಿಸಬೇಕು, ಆತನಿಗೆ ಇಷ್ಟವಲ್ಲದ ಕೆಲಸಗಳಿಂದ ದೂರವಿರಬೇಕು. 'ಇಸ್ಲಾಮ್' ಪದದ ರ್ಥ 'ಸಂಪೂರ್ಣವಾದ ಆಜ್ಞಾನುಸರಣೆ' ಎಂದು ತಾವು ಕಲಿತಿದ್ದೀರಿ.

ಆಲೋಚಿಸಿ ನೋಡಿ, ಒಬ್ಬನನ್ನು ಸಂತೋಷಪಡಿಸಲಿಕ್ಕಾಗಿ ಪರಸ್ಪರ ವಿರುದ್ಧವಾಗಿರುವ ಲ್ಲ ಕೆಲಸಗಳನ್ನು ಸರಿಯೆಂದು ನಂಬಲು ಹೇಗೆ ಸಾಧ್ಯ? ಉದಾಹರಣೆಗೆ ಒಬ್ಬನು ಅವನನ್ನು ಕನೆಂದು ನಂಬಬೇಕೆಂಬುದು ಅವನ ಆಜ್ಞೆಯಾಗಿದೆ ಎನ್ನುತ್ತಾನೆ. ದೇವತ್ವದಲ್ಲಿ ಬೇರೆ ಾರನ್ನೂ ಅವನಿಗೆ ಸಹಭಾಗಿಯೆಂದು ಭಾವಿಸಬಾರದೆಂದು ಅವನು ಹೇಳುತ್ತಾನೆ. ುತ್ತೊಬ್ಬನು ಆತ ಒಬ್ಬನಲ್ಲ ಇಬ್ಬರು ದೇವರಿದ್ದಾರೆಂದು ಹೇಳುತ್ತಾನೆ. ಮೂರನೆಯವನು ವನು ಮೂವರಲ್ಲಿ ಒಬ್ಬನೆಂದು ವಾದಿಸುತ್ತಾನೆ. ನಾಲ್ಕನೆಯವನು ನೂರಾರು ದೇವರಿದ್ದಾರೆ, ಲ್ಲರೂ ಸೇರಿ ಈ ಲೋಕದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ ಎನ್ನುತ್ತಾನೆ. ದನೆಯವನು ದೇವನೆಲ್ಲಿದ್ದಾನೆ? ಅಂತಹ ಕಲ್ಪನೆಯೇ ಮೋಸ ಎಂದು ಹೇಳುತ್ತಾನೆ. ಆದೇ ತಿ ನಿರ್ದಿಷ್ಟ ವ್ಯಕ್ತಿ ಮಾನವನಲ್ಲ, ದೇವಾಂಶ ಸಂಭೂತನೆಂದು ಒಬ್ಬನು ಹೇಳುತ್ತಾನೆ. ನ್ನು ಕೆಲವರು ದೇವನು ಭೂಮಿಯಲ್ಲಿ ಅವತರಿಸಿದ್ದಾನೆ ಮತ್ತು ಕೆಲವರು ಅವನ ವತಾರವಾಗಿದ್ದಾರೆ ಎಂದು ಹೇಳುತ್ತಾರೆ. ಮಗದೊಬ್ಬನು ಮಾನವ ಎಂದೂ ದೇವನಾಗಲಾರ, ತ ದೇವನ ದಾಸನಾಗಿದ್ದಾನೆ, ದೇವನು ನಮ್ಮ ಪ್ರಭು ಮತ್ತು ಒಡೆಯನಾಗಿದ್ದಾನೆಂದು ೇಳುತ್ತಾನೆ. ಸ್ವಲ್ಪ ಆಲೋಚಿಸಿ ನೋಡಿ, ಇಂತಹ ವಿಭಿನ್ನ ನಂಬಿಕೆ ಮತ್ತು ವಿಶ್ವಾಸಗಳೆಲ್ಲವನ್ನೂ ವು ಸತ್ಯವೆಂದು ಭಾವಿಸಿದರೆ, ಅದೆಷ್ಟು ತಿಳಿಗೇಡಿತನದ ಮಾತಾದೀತು. ಎರಡು ಮತ್ತು

ಎರಡನ್ನು ಕೂಡಿಸಿದರೆ ಅದು ನಾಲ್ಕಾಗುವುದೆಂದು ಒಬ್ಬರು ಹೇಳಿದರೆ ಮತ್ತೊಬ್ಬರು ಅ ಐದಾಗುವುದೆಂದು ಹೇಳಬಹುದು, ಇನ್ನೊಬ್ಬರು ಅದು ಹತ್ತಾಗುವುದೆಂದೂ ಹೇಳುವರ ಇದರಲ್ಲಿ ಒಂದುತ್ತರ ಮಾತ್ರ ಸರಿಯಾಗಿರುವಾಗ ಎಲ್ಲವೂ ಸರಿಯೆಂದು ಹೇಳುವುದು ಎಂತ ಬುದ್ಧಿವಂತಿಕೆ? ಇವುಗಳಲ್ಲಿ ಯಾವುದು ಸರಿ ಎಂದು ಪರಿಶೋಧಿಸಿ ತೀರ್ಮಾನಿಸುವುದು ನಮ ಕೆಲಸವಾಗಿದೆ. ಇಂತಹ ವಿಭಿನ್ನ ಮಾತುಗಳಲ್ಲಿ ಯಾವುದಾದರೊಂದು ಮಾತ್ರ ಸರಿಯಾಗಿರ ಸಾಧ್ಯ. ಎಲ್ಲವೂ ಸರಿಯಾಗಿರಲು ಎಂದೂ ಸಾಧ್ಯವಿಲ್ಲ.

ಇಸ್ಲಾಮಿನ ಸಹಿಷ್ಣುತೆ

ಹಾಗಾದರೆ ಮುಂದೇನು ಎಂದು ನೀವು ಆಲೋಚಿಸಿರಿ. ಎಲ್ಲ ಧರ್ಮದವರು ಹೀಗೆಯೆ ಪರಸ್ಪರ ಜಗಳ ಮಾಡುತ್ತಾ, ಇತರರ ಮಾರ್ಗವು ತಪ್ಪೆಂದು ವಾದಿಸುತ್ತಾ, ಪರಸ್ಪರ ಶತ್ರು ಕಟ್ಟಿಕೊಂಡು ಕ್ಷೋಭೆಯನ್ನುಂಟುಮಾಡುತ್ತಲಿರಬೇಕೇ? ಇಲ್ಲ, ಇಸ್ಲಾಮ್ ಈ ಕೇಡನ ದೂರೀಕರಿಸಲು ಇನ್ನೊಂದು ಮಾರ್ಗವನ್ನು ಅವಲಂಬಿಸುತ್ತದೆ. ಅದು ತನ್ನ ಅನುಯಾಯಿಗಳ ಸಂಕುಚಿತ ಮತಿ ಮತ್ತು ಪಕ್ಷಪಾತಿಗಳನ್ನಾಗಿ ಮಾಡುವುದಿಲ್ಲ ಬದಲಾಗಿ ಅವರಿಗೆ ಸಹಿಷ್ಣುತೆ ಪಾಠ ಕಲಿಸುತ್ತದೆ. ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ, "(ಓ ಮುಸಲ್ಮಾನರೇ ಅವರು ಅಲ್ಲಾಹನ ಹೊರತು ಯಾರನ್ನು ಪ್ರಾರ್ಥಿಸುತ್ತಿರುವರೋ ಅವರನ್ನು ತೆಗಳಬೇಡಿ ಇದರಿಂದ ಅವರು 'ಶಿರ್ಕ್'ಗಿಂತಲೂ ಮುಂದುವರಿದು ಅಜ್ಞಾನದಿಂದ ಅಲ್ಲಾಹನನ್ನು ತೆ ತೊಡಗುವರು. ನಾವು ಇದೇ ರೀತಿಯಲ್ಲಿ ಪ್ರತಿಯೊಂದು ಸಮುದಾಯಕ್ಕೆ ಅದರ ಕರ್ಮವ ಮನೋಹರವಾಗಿಸಿದ್ದೇವೆ. ಅನಂತರ ಅವರಿಗೆ ತಮ್ಮ ಪ್ರಭುವಿನ ಕಡೆಗೇ ಮರಳಿ ಸಾಗಲಿಕ್ಕಿ ಆಗ ಅವನು ಅವರೇನು ಮಾಡುತ್ತಿರುವರೆಂಬುದನ್ನು ಅವರಿಗೆ ತೋರಿಸಿಕೊಡುವನು". (ಸೂ ಅಲ್ ಅನ್‌ಆಮ್: 108) ಇತರ ಧರ್ಮದವರನ್ನೂ ಅವರ ಆರಾಧ್ಯರನ್ನೂ ತೆಗಳುವು ಮುಸ್ಲಿಮರ ಕೆಲಸವಲ್ಲ. ಒಬ್ಬ ಮುಸ್ಲಿಮನು ಅಲ್ಲಾಹನಲ್ಲಿ ದೃಷ್ಟಿ ನೆಟ್ಟಿರಬೇಕು. ತಪ್ಪಿ ಪ್ರತಿಫಲವನ್ನು ನೀಡಲು ಆತನೇ ಸಾಕು. ಇಲ್ಲಿ ಯಾರು ಎಂತಹ ಕರ್ಮವೆಸಗುವರೋ ಅಂತ ಪ್ರತಿಫಲವನ್ನು ಪಡೆಯುವರು. ಅಲ್ಲಾಹನನ್ನು ಬಿಟ್ಟು ಇತರರ ಆರಾಧನೆಯನ್ನು ಮಾಡುವವ ಪ್ರೀತಿಯಿಂದ ಸನ್ಮಾರ್ಗವನ್ನು ತೋರಿಸುವುದು, ಅಲ್ಲಾಹನ ಸಂಪ್ರೀತಿ ಮತ್ತು ಕ್ರೋಧ ತಾತ್ಪರ್ಯವನ್ನು ಅವರಿಗೆ ತಿಳಿಯಪಡಿಸುವುದು, ಪರಲೋಕದ ಯಶಸ್ಸಿಗಾಗಿ ಅಲ್ಲಾಹ ಸಂಪ್ರೀತಿಗಳಿಸುವ ಮಾರ್ಗದೆಡೆಗೆ ಅವರನ್ನು ಆಹ್ವಾನಿಸುವುದೇ ಮುಸಲ್ಮಾನರ ಕರ್ತವ್ಯವಾಗಿ ಆದರೆ ಅವರ ಮಾತುಗಳನ್ನು ಯಾರೂ ಕೇಳದಿದ್ದರೆ, ಸಮ್ಮತಿಸದಿದ್ದರೆ ಇತರರನ್ನು ದೂ ಜಗಳ ಮಾಡುವ ಅಧಿಕಾರ ಅವರಿಗಿಲ್ಲ. ಇತರರನ್ನು ಬಲವಂತದಿಂದ ಮಾತನ್ನು ಕೇಳುವ ಮಾಡುವುದು ಅವರ ಕೆಲಸವಲ್ಲ. ಸತ್ಯನಿಷೇಧಿಗಳು ತಮ್ಮ ಬಲ ಪ್ರಯೋಗಿಸಿ ಇಸ್ಲಾವಿ ಮಾರ್ಗದಲ್ಲಿ ಆತಂಕವನ್ನುಂಟುಮಾಡಿದರೆ, ಮುಸ್ಲಿಮರು ಅಲ್ಲಾಹನ ಸಂದೇಶವನ್ನು ಅ ದಾಸರಿಗೆ ತಲುಪಿಸುವ ಸಲುವಾಗಿ ತಮ್ಮ ಬಲವನ್ನು ಪ್ರಯೋಗಿಸಲೇ ಬೇಕಾದ ಸಂದರ್ಭದ ಮಾತ್ರ ಇಸ್ಲಾಮ್ ಯುದ್ಧದ ಅನುಮತಿಯನ್ನು ನೀಡುತ್ತದೆ, ಅನ್ಯಥಾ ಇಸ್ಲಾಮಿನಲ್ಲಿ ಯು

ದು. ಒಂದೆಡೆ ಅಲ್ಲಾಹನು ಹೇಳುತ್ತಾನೆ, "(ಓ ಮುಹಮ್ಮದರೇ) ಹೇಳಿಬಿಡಿರಿ, ...ಷೇಧಿಗಳೇ, ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ ಮತ್ತು ನಾನು ...ಧಿಸುವವನನ್ನು ನೀವು ಆರಾಧಿಸುವವರಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ...ಾ ಮಾಡುವವನಲ್ಲ. ನಾನು ಆರಾಧಿಸುವವನನ್ನು ನೀವೂ ಆರಾಧಿಸುವವರಲ್ಲ. ನಿಮಗೆ ... ಧರ್ಮ ಮತ್ತು ನನಗೆ ನನ್ನ ಧರ್ಮ". (ಸೂರಃ ಕಾಫಿರೂನ್)

ಇಂತಹ ನಿರ್ದೇಶಗಳು ಪವಿತ್ರ ಕುರ್‌ಆನಿನ ಅನೇಕ ಕಡೆಗಳಲ್ಲಿವೆ. ಇಸ್ಲಾಮ್ ತನ್ನ ...ಯಾಯಿಗಳಿಗೆ ಇತರ ಧರ್ಮದವರೊಂದಿಗೆ ವಿವಾದದಲ್ಲಿ ತೊಡಗುವ ಅನುಮತಿ ...ವುದಿಲ್ಲ. ಪ್ರೀತಿ ವಾತ್ಸಲ್ಯದೊಂದಿಗೆ ಅಲ್ಲಾಹನ ದಾಸರಿಗೆ ಅಲ್ಲಾಹನ ಧರ್ಮವನ್ನು ...ಪಿಸಬೇಕೆಂದು ಅದು ಬಯಸುತ್ತದೆ. ಆದರೆ ಈ ನಿಟ್ಟಿನಲ್ಲಿ ಇತರರೊಂದಿಗೆ ...ಳವಾಡಬಾರದು ಅಥವಾ ಅವರನ್ನು ಬಲವಂತಪಡಿಸಬಾರದು. ಇಸ್ಲಾಮಿನ ಬಳಿ ಸರಕಾರ ...ತ್ತು ಅಧಿಕಾರದ ಬಲವಿದ್ದಾಗಲೂ ಮುಸ್ಲಿಮರು ಯಾರನ್ನೂ ಇಸ್ಲಾಮ್ ಸ್ವೀಕರಿಸಲು ...ವಂತ ಪಡಿಸುವಂತಿಲ್ಲ. ಬದಲಾಗಿ ಸರಕಾರವು ಮುಸ್ಲಿಮೇತರರಿಗೆ ಪೂರ್ಣ ಧಾರ್ಮಿಕ ...ತಂತ್ರವನ್ನು ನೀಡಿ ಅವರ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ.

ಶಾಂತಿ ನೆಲೆಗೊಳಿಸಲು ಮತ್ತು ಜನರ ಹೃದಯಗಳಲ್ಲಿ ಪರಸ್ಪರ ಗೌರವ ಮೂಡಿಸಲು ...ತಹ ಬೋಧನೆಗಳು ತುಂಬಾ ಅವಶ್ಯಕವಾಗಿವೆ. ಈ ರೀತಿ ಒಬ್ಬ ವ್ಯಕ್ತಿ ಧರ್ಮವನ್ನು ...ಟ್ಟ ಕಟ್ಟುನಿಟ್ಟಾಗಿ ಪಾಲಿಸುತ್ತಾನೋ ಅಷ್ಟೇ ಅವನು ಅದರ ಆದೇಶಗಳ ಬಗ್ಗೆ ಗಮನ ...ಸುತ್ತಾನೆ ಮತ್ತು ತನ್ನಿಂದಾಗಿ ಆತನು ಯಾವ ಕ್ಷೋಭೆಗೂ ದಾರಿ ಮಾಡಿ ಕೊಡಲಾರ. ...ಕ್ಕೆ ಪ್ರತಿಯಾಗಿ ಯಾವ ಧರ್ಮವು ಇತರರ ಹಕ್ಕುಗಳನ್ನೂ, ಸ್ವಾತಂತ್ರವನ್ನೂ ...ಸುವುದಿಲ್ಲವೋ ಅಂತಹ ಧರ್ಮವನ್ನು ಯಾರು ಹೆಚ್ಚು ಪಾಲಿಸುತ್ತಾರೋ, ಅಷ್ಟೇ ಅವರು ...ರರ ಬಗ್ಗೆ ದ್ವೇಷ ಬೆಳೆಸಿಕೊಳ್ಳುತ್ತಾರೆ ಮತ್ತು ಅವರು ಎಲ್ಲೆಡೆ ಕ್ಷೋಭೆಯನ್ನುಂಟು ...ಸುತ್ತಾರೆ.

... ಧರ್ಮವು ಇಸ್ಲಾಮ್ ಮಾತ್ರವಾಗಿದೆ

ವಾಸ್ತವವಾಗಿ 'ಇಸ್ಲಾಮ್' ಹಲವಾರು ಧರ್ಮಗಳಲ್ಲೊಂದು ಧರ್ಮವಲ್ಲ. ಬದಲಾಗಿ ... ಎಲ್ಲ ಸಜ್ಜನರ ಅತ್ಯಂತ ಪ್ರಾಚೀನ ಧರ್ಮವಾಗಿದೆ. ಇತರೆಲ್ಲ ಧರ್ಮಗಳು, ಇದೇ ...ದ ವಿಕೃತ ರೂಪಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಸತ್ಯಧರ್ಮವು ಒಂದು ...ತ್ರವಿರಲು ಸಾಧ್ಯ. ಇದು ಇಸ್ಲಾಮ್ ಧರ್ಮವಾಗಿದೆ. ಅಲ್ಲಾಹನು ರೂಪಿಸಿದ ಜೀವನ ...ರ್ಗವಾಗಿದೆ. ಎಲ್ಲ ಕಾಲಗಳಲ್ಲಿಯೂ ಈ ಧರ್ಮವೇ ಸತ್ಯವಾಗಿತ್ತು. ಇಂದು ಕಾಣಸಿಗುವ ...ಕ ಧರ್ಮಗಳಲ್ಲಿ ಕೆಲವು ಅಲ್ಲಾಹನಿಂದಲೇ ಬಂದಂತಹ ಧರ್ಮವಾಗಿದ್ದು ಒಂದೊಮ್ಮೆ ...ಧರ್ಮವಾಗಿತ್ತು ಎಂಬುದು ಕೂಡಾ ಅಷ್ಟೇ ಸತ್ಯ. ಆದರೆ ಅದರ ಅನುಯಾಯಿಗಳು ...ರಲ್ಲಿ ತಿದ್ದುಪಡಿಗಳನ್ನು ಮಾಡಿದರು. ತಮ್ಮ ಸ್ವೇಚ್ಛೆಯನ್ನು ಅದರಲ್ಲಿ ಸೇರಿಸಿದರು. ಆದರೆ ...ಲಾಮ್ ಧರ್ಮ'ವು ಇಂದಿಗೂ ಅದು ಅವತೀರ್ಣವಾದ ರೂಪದಲ್ಲೇ ಉಳಿದುಕೊಂಡಿದೆ.

ಅಲ್ಲಾಹನು ಕಳುಹಿಸಿದ ಪವಿತ್ರ ಕುರ್‌ಆನ್ ತನ್ನ ನಿಜ ರೂಪದಲ್ಲಿ ಸುರಕ್ಷಿತವಾಗುಳಿ ಪ್ರವಾದಿವರ್ಯರ(ಸ) ಚರ್ಯೆ ಮತ್ತು ಚರಿತ್ರೆ ಕೂಡಾ ಸುರಕ್ಷಿತವಾಗಿದೆ. ಇಂದು ಯಾರಾ ಇಸ್ಲಾಮ್ ಧರ್ಮದ ಮತ್ತು ಅಂತಿಮ ಪ್ರವಾದಿ ಮುಹಮ್ಮದ್‌ರ(ಸ) ಕುರಿತು ತಿ ಬಯಸಿದರೆ ಅವನು ಖಂಡಿತ ನಿರಾಶನಾಗಲಾರ. ಇದು ಅಲ್ಲಾಹನ ಅಂತಿಮ ಪ ಸಂಪೂರ್ಣವಾದ ಧರ್ಮವಾಗಿದೆ. ಅಂತಿಮ ದಿನದ ವರೆಗೂ ಅದು ನೆಲೆ ನಿಲ್ಲು ಅಲ್ಲಾಹನು ಸ್ವಯಂ ಅದರ ಸುರಕ್ಷೆಯ ವಾಗ್ದಾನವನ್ನು ಮಾಡಿದ್ದಾನೆ.

"ಈ ದಿಕ್ರನ್ನು (ಉಪದೇಶವನ್ನು) ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ."

(ಸೂರಃ ಅಲ್ ಹಿಜ್ರ್ - 9)

نَحْنُ نَزَّلْنَا الذِّكْرَ ... لَحٰفِظُوْنَ ۔

(الحجر:٩)

❋ ❋ ❋

ಸತ್ಯ ವಿಶ್ವಾಸ

ಅಲ್ಲಾಹನ ಸಂಪೂರ್ಣ ಅನುಸರಣೆ ಮತ್ತು ಆಜ್ಞಾಪಾಲನೆಯೇ 'ಇಸ್ಲಾಮ್' ಎಂದು ತಿಳಿದುಕೊಂಡಿರಿ. ಆದರೆ ಈ ಅನುಸರಣೆ ಸುಲಭ ಸಾಧ್ಯವಲ್ಲ. ಇದರರ್ಥ ಅಲ್ಲಾಹನು ಗೆ ದುಃಸ್ಸಾಧ್ಯವಾದ ಕೆಲಸಗಳನ್ನು ಮಾಡಲು ಆದೇಶಿಸಿದ್ದಾನೆಂದಲ್ಲ. ಬದಲಾಗಿ ೀಚರವಾದ ದೇವನ ಆದೇಶಗಳ ಮುಂದೆ, ಇತರ ಮಾನವರ ಮತ್ತು ಸ್ವತಃ ತನ್ನ ಸ್ಸಿನ ಇಚ್ಛೆಗಳನ್ನು ತಿರಸ್ಕರಿಸುವುದು ಮತ್ತು ಎಲ್ಲ ಕೆಲಸಗಳ ವೇಳೆ ಅಲ್ಲಾಹನ ಅನುಸರಣೆ ಹುವುದು ಬಹಳ ತ್ರಾಸದಾಯಕವಾಗಿದೆ. ಆದುದರಿಂದಲೇ ಕೆಲವು ವಿಷಯಗಳ ಬಗ್ಗೆ ವಿದ್ದು ಅದನ್ನು ಸಂಪೂರ್ಣ ಸತ್ಯವೆಂದು ನಂಬುವವರು ಮಾತ್ರ ಇಸ್ಲಾಮಿನ ರ್ಗದಲ್ಲಿ ನಡೆಯಬಲ್ಲರು. ಈ ವಿಶ್ವಾಸದ ಹೆಸರೇ 'ಈಮಾನ್' ಅಥವಾ ಸತ್ಯವಿಶ್ವಾಸವಾಗಿದೆ. ಿಶ್ವಾಸವಿಲ್ಲದೆ ಇಸ್ಲಾಮಿನ ಆದೇಶಗಳನ್ನು ಪಾಲಿಸಲು ಸಾಧ್ಯವಿಲ್ಲ. ಒಂದು ವೇಳೆ ವುದಾದರೊಂದು ಆದೇಶದ ಪಾಲನೆ ಮಾಡಲಾದರೂ ಅದರಿಂದ ನಿರೀಕ್ಷಿತ ಪ್ರಭಾವ ಬಾಗಲಾರದು. ಸತ್ಯ ವಿಶ್ವಾಸವೆಂದರೆ ಮನಸ್ಸಿನಲ್ಲಿ ದೃಢ ವಿಶ್ವಾಸವಿರಿಸುವುದು ಮತ್ತು ಿಶ್ವಾಸಕ್ಕೆ ವಿರುದ್ಧವಾದ ಯಾವ ಮಾತನ್ನೂ ಸಮ್ಮತಿಸದಿರುವುದಾಗಿದೆ.

ಒಬ್ಬ ವ್ಯಕ್ತಿಯು ಮುಸ್ಲಿಮನಾಗಬೇಕಾದರೆ ಅನಿವಾರ್ಯವಾಗಿ ಈ ಕೆಳಗಿನ ಅಂಶಗಳಲ್ಲಿ ಸವಿರಿಸಬೇಕು-

1. ದೇವನ ಮೇಲೆ ವಿಶ್ವಾಸ.
2. ಪ್ರವಾದಿಗಳಲ್ಲಿ ವಿಶ್ವಾಸ.
3. ಪರಲೋಕದ ಬಗ್ಗೆ ವಿಶ್ವಾಸ.
4. ಅಲ್ಲಾಹನ ಎಲ್ಲ ಗ್ರಂಥ, ದೇವಚರರು ಮತ್ತು ವಿಧಿಯಲ್ಲಿ ವಿಶ್ವಾಸ.

1. ದೇವನ ಮೇಲೆ ವಿಶ್ವಾಸ

ಈ ಲೋಕಕ್ಕೆ ಯಾವ ಸೃಷ್ಟಿಕರ್ತನೂ ಒಡೆಯನೂ ಇಲ್ಲವೆಂದು ವಾದಿಸುವ ಿಡಿಗಳ ಸಂಖ್ಯೆ ಬಹಳ ಕಡಿಮೆ. ಹೆಚ್ಚಿನವರು ದೇವನನ್ನು ನಂಬುತ್ತಾರೆ, ಆದರೆ ುಸ್ಲಿಮನನಾಗಬೇಕಾದರೆ ದೇವನಲ್ಲಿ ವಿಶ್ವಾಸವಿರಿಸುವ ರೀತಿಯೇ ಬೇರೆ. ದೇವನಿದ್ದಾನೆ

ಎಂದು ಕೇವಲ ನಂಬಿದರೆ ಸಾಲದು. ಅಲ್ಲಾಹನಲ್ಲಿ ನಂಬಿಕೆ ಇರಿಸುವ ಬಗ್ಗೆ ಮುಸಲ್ಮಾನನ ವಿಶ್ವಾಸ ಇಂತಿದೆ-

1. ತನ್ನ ಅಸ್ತಿತ್ವ ಮತ್ತು ವಿಶೇಷತೆಗಳಲ್ಲಿ ದೇವನು ಅದ್ವಿತೀಯನಾಗಿದ್ದಾನೆ. ಆತ ಬೇರೆ ಯಾರೂ ಇಲ್ಲ.

"ನಿಸರ್ಗದ ಯಾವ ವಸ್ತುವೂ ಅವನನ್ನು ಹೋಲುವುದಿಲ್ಲ." (ಸೂರಃ ಅಶ್ಶೂರಾ -11)

كَمِثْلِهِ شَيْءٌ

2. ಆತನಿಗೆ ಯಾವ ಸಂತಾನವೂ ಇಲ್ಲ ಮತ್ತು ಆತನು ಯಾರ ಸಂತಾನವೂ ಆತನಿಗೆ ತಂದೆಯಾಗಲೀ ಮಗನಾಗಲೀ ಇಲ್ಲ.

"ಅವನಿಗೆ ಯಾವುದೇ ಸಂತಾನವಿಲ್ಲ ಮತ್ತವನು ಯಾರ ಸಂತಾನವೂ ಅಲ್ಲ".
(ಸೂರಃ ಅಲ್ ಇಖ್‌ಲಾಸ್ - 3)

يَلِدْ وَلَمْ يُولَدْ

3. ಆತನು ಎಲ್ಲವನ್ನೂ ವೀಕ್ಷಿಸುತ್ತಾನೆ ಮತ್ತು ಆಲಿಸುತ್ತಾನೆ. ಯಾವ ವಿಷಯ ಆತನ ಅರಿವಿಗೆ ಹೊರತಾಗಿಲ್ಲ. ಹಾಗೆ ನೋಡಿದರೆ ನಾವು ಕೂಡಾ ನೋಡಬಲ್ಲೆವು ಕೇಳಬಲ್ಲೆವು. ಆದರೆ ನಾವು ನೋಡಬೇಕಾದರೆ ಬೆಳಕಿರಬೇಕು, ಕಣ್ಣುಗಳು ಸರಿಯಾಗಿರಬೇ ಮತ್ತು ಅಗೋಚರವಾಗುವಷ್ಟು ದೂರದಲ್ಲಿರಬಾರದು. ನಾವು ಆಲಿಸಬೇಕಾದರೂ ಇಂ ಕೆಲವು ಶರ್ತಗಳನ್ನು ಪೂರೈಸಬೇಕಾಗಿದೆ ಆದರೆ ಅಲ್ಲಾಹನ ವೀಕ್ಷಣೆ ಮತ್ತು ಆಲಿಸ ನಿಶ್ಶರ್ತವಾದುದಾಗಿದೆ. ಅಲ್ಲಾಹನ ಹೊರತು ಬೇರಾರಿಗೂ ಹೀಗೆ ನಿಶ್ಶರ್ತವಾಗಿ ನೋ ಮತ್ತು ಕೇಳುವ ಸಾಮರ್ಥ್ಯ ಇಲ್ಲ. ಬದುಕಿರುವವರಿಗಾಗಲಿ ಮರಣಹೊಂ ಮಹಾನುಭಾವರಿಗಾಗಲಿ, ಯಾವುದೇ ದೇವಿ-ದೇವತೆಗಳಿಗಾಗಲಿ ಆ ಸಾಮರ್ಥ್ಯವಿಲ್ಲ.

"ನಿಶ್ಚಯವಾಗಿಯೂ ಅಲ್ಲಾಹನು ಎಲ್ಲವನ್ನೂ ಕೇಳುವವನೂ ಕಾಣುವವನೂ ಆಗಿರುವನು." (ಸೂರಃ ಅಲ್ ಮೂಮಿನ್- 20)

اللَّهَ هُوَ السَّمِيعُ الْبَصِيرُ

4. ಅಲ್ಲಾಹನು ಎಲ್ಲ ಗೋಪ್ಯವಾದ ಮತ್ತು ಮರೆಯಾದ ವಿಷಯಗ ಅರಿಯುವವನಾಗಿದ್ದಾನೆ. ಪರೋಕ್ಷದ ಜ್ಞಾನ ಆತನಿಗೆ ಮಾತ್ರವಿದೆ. ಆತನ ಹೊ ಇನ್ನಾರಿಗೂ ಪರೋಕ್ಷದ ಜ್ಞಾನವಿಲ್ಲ ಮತ್ತು ಇರಲು ಸಾಧ್ಯವೂ ಇಲ್ಲ. ಅವನಿಚ್ಛಿ ಯಾರಿಗೆ ಬೇಕಾದರೂ ಯಾವುದರ ಜ್ಞಾನವನ್ನೂ ನೀಡಬಹುದು. ಆತನಿಚ್ಛೆ ಇಲ್ಲದೆ ಯಾರಿ ಪರೋಕ್ಷದ ಬಗ್ಗೆ ತಿಳಿಯಲು ಸಾಧ್ಯವಿಲ್ಲ. ಅವರು ಅಲ್ಲಾಹನ ದೇವಚರ, ಜಿನ್ನ್, ಅಲ್ಲಾ ಪ್ರೀತಿ ಪಾತ್ರ ಪ್ರವಾದಿ ಅಥವಾ ಅಲ್ಲಾಹನ ನಿಕಟ ಮಿತ್ರರಾಗಿದ್ದರೂ ಸರಿಯೇ. ಅಲ್ಲಾ ಹೇಳುತ್ತಾನೆ:

"ಇವರೊಡನೆ ಹೇಳಿರಿ, ಭೂಮಿ, ಆಕಾಶಗಳಲ್ಲಿ, ಪರೋಕ್ಷದ ಜ್ಞಾನವುಳ್ಳವರು

لَا يَعْلَمُ مَنْ فِي السَّمَاوَاتِ

ಲ್ಲಾಹನ ಹೊರತು ಯಾರೂ ಇಲ್ಲ". وَالْاَرْضِ الْغَيْبَ اِلَّا اللّٰهُ

(ಸೂರಃ ಅನ್ನಮ್ಲ್ - 65)

ಅಲ್ಲಾಹನು ಮತ್ತೊಂದೆಡೆ ಹೇಳುತ್ತಾನೆ:

"ಅವನು ಅದೃಶ್ಯ ಜ್ಞಾನಿಯಾಗಿದ್ದಾನೆ. ನ್ನ ಅದೃಶ್ಯ ಜ್ಞಾನವನ್ನು ಅವನು ಯಾರಿಗೂ ಳಿಯ ಪಡಿಸುವುದಿಲ್ಲ. (ಸೂರಃ ಜಿನ್ನ್ - 26)

عَالِمُ الْغَيْبِ فَلَا يُظْهِرُ عَلٰى غَيْبِهٖ اَحَدًا ـ

5. ಲಾಭ ನಷ್ಟಗಳು ಅಲ್ಲಾಹನ ಅಧಿಕಾರದಲ್ಲಿ ಮಾತ್ರವಿದೆ. ಬೇರಾರೂ ಯಾರಿಗೂ ಭ-ನಷ್ಟಗಳನ್ನುಂಟು ಮಾಡಲಾರರು. ಅರೇಬಿಯಾದ ಬಹುದೇವಾರಾಧಕರು, ಅಲ್ಲಾಹನಲ್ಲದೆ ೇರೆ ಅನೇಕರಲ್ಲಿ ಲಾಭದ ಭರವಸೆ ಇಡುತ್ತಿದ್ದರು ಮತ್ತು ಅವರು ನಷ್ಟವನ್ನುಂಟು ಾಡಬಹುದೆಂದು ಹೆದರುತ್ತಲೂ ಇದ್ದರು. ಅವುಗಳಿಗೆ ಸ್ವತಃ ತಮಗೆ ಲಾಭ ನಷ್ಟಗಳನ್ನುಂಟು ಾಡಲು ಕೂಡಾ ಸಾಧ್ಯವಿಲ್ಲ. ಹಾಗಿರುವಾಗ ನಿಮಗೇನು ಲಾಭ ನಷ್ಟಗಳನ್ನು ಮಾಡಬಲ್ಲವು ುದು ಅಲ್ಲಾಹನು ಕೇಳುತ್ತಾನೆ-

"ಅವು ಸ್ವತಃ ತಮಗೂ ಯಾವುದೇ ಭ ಅಥವಾ ಹಾನಿಯನ್ನುಂಟು ಮಾಡುವ ಧಿಕಾರ ಹೊಂದಿಲ್ಲ."

(ಸೂರಃ ಅಲ್ ಫುರ್ಕಾನ್ - 3)

وَلَا يَمْلِكُوْنَ لِاَنْفُسِهِمْ ضَرًّا وَّلَا نَفْعًا (الفرقان آيت ٣)

6. ಅಲ್ಲಾಹನೇ ನಮ್ಮೆಲ್ಲ ಇಚ್ಛೆಗಳನ್ನು ಪೂರೈಸುತ್ತಾನೆ ಮತ್ತು ಆತನಿಗೆ ಮಾತ್ರ ಅದನ್ನು ೂರೈಸಲು ಸಾಧ್ಯವಿದೆ. ನಮ್ಮ ಪ್ರಾರ್ಥನೆಗಳನ್ನು ಆಲಿಸುವವನೂ ಅವನೇ. ಆತನಲ್ಲದೆ ಯಾರಿಗೂ ನಮ್ಮ ಕರೆ ಕೇಳಿಸಲಾರದು ಮತ್ತು ಯಾರೂ ನಮಗೆ ನೆರವಾಗಲಾರರು. ರೇಬಿಯಾದ ಬಹುದೇವಾರಾಧಕರು ಅಲ್ಲಾಹನ ಹೊರತು ಪ್ರಾರ್ಥಿಸುತ್ತಿದ್ದ ಇತರ ಆರಾಧ್ಯರ ಸಹಾಯಕತೆಯ ಕುರಿತು ಅಲ್ಲಾಹನು ಹೇಳುತ್ತಾನೆ:

"ನೀವು ಅವರನ್ನು ಪ್ರಾರ್ಥಿಸಿದರೆ ಅವರು ಮ್ಮ ಪ್ರಾರ್ಥನೆಗಳನ್ನು ಕೇಳಲಾರರು ಮತ್ತು ಳಿದರೂ ಅವುಗಳ ಉತ್ತರವನ್ನು ನಿಮಗೆ ಡಲಾರರು." (ಸೂರಃ ಅಲ್‌ಫಾತಿರ್ - 14)

اِنْ تَدْعُوْهُمْ لَا يَسْمَعُوْا دُعَآءَكُمْ وَلَوْ سَمِعُوْا مَا اسْتَجَابُوْا لَكُمْ ـ

7. ಭರವಸೆ ಇಡಲು ಅರ್ಹನಾದವನು ಅಲ್ಲಾಹನು ಮಾತ್ರ. ಆತನ ಹೊರತು ಇತರರ ಲೆ ಭರವಸೆ ಇಡುವುದು ಮತ್ತು ಅವರಿಂದ ಏನಾದರೂ ನಿರೀಕ್ಷಿಸುವುದು ಸರಿಯಲ್ಲ. ೇ ರೀತಿ ಅಲ್ಲಾಹನ ಹೊರತು ಇತರರನ್ನು ಅದೃಶ್ಯ ಸಹಾಯಕ್ಕಾಗಿ ಕರೆದು ಪ್ರಾರ್ಥಿಸುವುದು ತ್ತು ಆ ರೀತಿ ಪ್ರಾರ್ಥಿಸಿದರೆ ಅವರು ತಮ್ಮ ಇಚ್ಛೆಗಳನ್ನು ಪೂರೈಸುವರು ಎಂಬ ನಂಬಿಕೆ ಸುವುದು ಸ್ಪಷ್ಟವಾದ ಬಹುದೇವಾರಾಧನೆಯಾಗಿದೆ. ಮುಸಲ್ಮಾನನು ಅಲ್ಲಾಹನಲ್ಲಿ ಮಾತ್ರ ಡುತ್ತಾನೆ ಮತ್ತು ಆತನು ಮಾತ್ರ ಇಚ್ಛೆಗಳನ್ನು ಪೂರೈಸುವವನೆಂದು ನಂಬುತ್ತಾನೆ.

8. ನಾವು ಯಾವ ಕೆಲಸಗಳನ್ನು ಮಾಡಬೇಕು, ಯಾವುದನ್ನು ಮಾಡಬಾರದು? ನಮ ಯಾವ ಕೆಲಸಗಳನ್ನು ಮಾಡಲು ಅನುಮತಿ ಇದೆ ಮತ್ತು ಯಾವುದು ನಿಷಿದ್ಧ? ಯಾವುದ ನ್ಯಾಯ ಸಮ್ಮತ ಮತ್ತು ಯಾವುದು ಅಸಮ್ಮತ? ಇದರ ತೀರ್ಮಾನವೂ ಅಲ್ಲಾಹ ಅಧಿಕಾರದಲ್ಲಿದೆ, ನಮ್ಮ ಜೀವನಕ್ಕೆ ನಿಯಮಗಳನ್ನು ವಿಧಿಸುವ ಅಧಿಕಾರ ಆತನಿಗಲ್ಲ ಇನ್ನಾರಿಗೂ ಇಲ್ಲ. ಅಲ್ಲಾಹನ ಹೊರತು ಇತರರಿಗೂ ನಿಯಮಗಳನ್ನುಂಟು ಮಾಡು ಅಧಿಕಾರ ನೀಡುವುದು ಮತ್ತು ಆ ನಿಯಮಗಳು ಸಮಗ್ರವೆಂದು ಭಾವಿಸುವುದು ಏಕದೇ ವಿಶ್ವಾಸಕ್ಕೆ ವಿರುದ್ಧವಾದ ಮಾತಾಗಿದೆ. ಮಾನವನ ಜೀವನಕ್ಕೆ ನಿಯಮಗಳನ್ನು ರೂಪಿಸು ಅಧಿಕಾರ ಅಲ್ಲಾಹನಿಗೆ ಮಾತ್ರವಿದೆ. ಆ ನಿಯಮಗಳನ್ನು ವ್ಯಾಖ್ಯಾನಿಸುವ ಅಧಿಕಾ ಅಲ್ಲಾಹನ ಪ್ರವಾದಿಗಳಿಗೆ(ಸ) ಮತ್ತು ಅಲ್ಲಾಹನ ನಿಯಮಗಳು ಮತ್ತು ಪ್ರವಾದಿವರ್ಯರ(ಆಜ್ಞೆಗಳನ್ನು ಆಧಾರವಾಗಿರಿಸಿ, ಅದರ ಆಧಾರದಲ್ಲಿ ಸಂದರ್ಭಾನುಸಾರ ನಿಯಮಗಳನ ಸೂಚಿಸುವವರಿಗೆ ಮಾತ್ರವಿದೆ. ಸೃಷ್ಟಿಕರ್ತನೊಬ್ಬನಾಗಿರುವಾಗ, ಆಜ್ಞಾಧಿಕಾ ಮತ್ತೊಬ್ಬನಾಗಿರುವುದು ಇಸ್ಲಾಮಿನ ಪ್ರಕಾರ ಘೋರವಾದ ತಪ್ಪಾಗಿರುತ್ತದೆ.

ಇಸ್ಲಾಮಿನ ಬೋಧನೆಗಳ ಪ್ರಕಾರ ಸೃಷ್ಟಿಕರ್ತನೇ ಆಜ್ಞಾಧಿಕಾರಿಯಾಗಿದ್ದಾನೆ. ನಿಸರ್ಗದ ಆತನ ಆಜ್ಞೆಗಳೇ ನಡೆಯುತ್ತದೆ ಮತ್ತು ನಡೆಯಲೇ ಬೇಕಾಗಿದೆ-

"ಎಚ್ಚರಿಕೆ ಅವನದೇ ಸೃಷ್ಟಿ, ಅವನದೇ ಅಪ್ಪಣೆ, ಸರ್ವಲೋಕಗಳ ಒಡೆಯನೂ ಪ್ರಭುವೂ ಆಗಿರುವ ಅಲ್ಲಾಹನು ಮಹಾ ಸಮೃದ್ಧನು."

(ಸೂರಃ ಅಲ್ ಆಲ್‌ರಾಫ್- 54)

لا لَهُ الْخَلْقُ وَ
لْأَمْرُ تَبَارَكَ اللّٰهُ رَبُّ الْعَالَمِينَ ۔

ಇನ್ನೊಂದೆಡೆ ಅಲ್ಲಾಹನು ಹೇಳುತ್ತಾನೆ,

"ಆಜ್ಞಾಧಿಕಾರ ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರ ದೆಂದು ಅವನ ಕಟ್ಟಪ್ಪಣೆ ಇದೆ. ಇದೇ ಅಪ್ಪಟ ಋಜು ಜೀವನ ಮಾರ್ಗ. ಆದರೆ ಹೆಚ್ಚಿನ ಜನರು ಅರಿಯುವುದಿಲ್ಲ."

(ಸೂರಃ ಯೂಸುಫ್: 40)

نِ الْحُكْمُ اِلَّا لِلّٰهِ
رَ اَلَّا تَعْبُدُوْا
لا اِيَّاهُ ذٰلِكَ الدِّيْنُ
قَيِّمُ وَلٰكِنَّ اَكْثَرَ النَّاسِ لَا يَعْلَمُوْنَ ۔

ಮುಸಲ್ಮಾನನಿಗೆ ಅಲ್ಲಾಹನ ಅನುಸರಣೆ ಮಾತ್ರವೇ ಸಿಂಧು. ಆಜ್ಞಾಧಿಕಾರ ಆತ ಮಾತ್ರವಿದೆ. ಅಲ್ಲಾಹನ ಆಜ್ಞೆಗಳನ್ನು ಗ್ರಹಿಸಲು ಎಲ್ಲರಿಗೂ ಸಾಧ್ಯವಿಲ್ಲ. ಆದುದರಿಂದ ಪ್ರವಾದಿ ಮುಹಮ್ಮದ್‌ರವರ(ಸ) ಅನುಸರಣೆ ಮಾಡಿದರೆ ಅಲ್ಲಾಹನ ಅನುಸ ಮಾಡಿದಂತಾಗುತ್ತದೆ. ಪ್ರವಾದಿವರ್ಯರನ್ನು(ಸ) ಅನುಸರಿಸದಿದ್ದರೆ ಅಲ್ಲಾಹನ ಅನುಸ ಸಾಧ್ಯವಿಲ್ಲ. ನಿಜವಾಗಿ ಪ್ರವಾದಿವರ್ಯರ(ಸ) ಅನುಸರಣೆಯೇ ಅಲ್ಲಾಹನ ಅನುಸರಣೆಯಾಗಿ

ಲ್ಲಾಹ್ ಮತ್ತು ಆತನ ಪ್ರವಾದಿಯವರ(ಸ) ಅನಸರಣೆಯೊಂದಿಗೆ ಅಲ್ಲಾಹನ ನಿಯಮವನ್ನು ಪ್ಪಿಕೊಂಡು ಅದರ ಆಧಾರದಲ್ಲೇ ಅಧಿಕಾರ ನಿರ್ವಹಿಸುವವರನ್ನು ಅನುಸರಿಸುವುದೂ ನಮ್ಮ ರ್ತವ್ಯವಾಗಿದೆ. ಅವರು ಇಸ್ಲಾಮಿ ಆಡಳಿತಾಧಿಕಾರಿಯಾಗಿರಲಿ, ಮುಸಲ್ಮಾನರ ರಾಜಕೀಯ ಾಯಕನಾಗಿರಲಿ ಅಥವಾ ಧಾರ್ಮಿಕ ವಿದ್ವಾಂಸರಾಗಿರಲಿ. ಅಲ್ಲಾಹನು ಹೇಳುತ್ತಾನೆ:

"ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಜ್ಞಾಪಾಲನೆ ಮಾಡಿರಿ, ಸಂದೇಶವಾಹಕರು ುತ್ತು ನಿಮ್ಮೊಳಗಿನ 'ಉಲುಲ್ ಅಮ್ರ್'ರ ಆಜ್ಞಾಧಿಕಾರ ಹೊಂದಿದವರ) ಆಜ್ಞಾಪಾಲನೆ ಾಡಿರಿ." (ಸೂರಃ ಅನ್ನಿಸಾ- 59)

يَآ أَيُّهَا الَّذِينَ آمَنُوٓا أَطِيعُوا اللّٰهَ وَأَطِيعُوا الرَّسُولَ وَأُولِي الْأَمْرِ مِنكُمْ۔

9. ನಮ್ಮ ಮೇಲೆ ಅಲ್ಲಾಹನ ಅಸಂಖ್ಯಾತ ಅನುಗ್ರಹಗಳಿವೆ. ಆತನು ಜೀವನವನ್ನು ಡಿದ್ದಾನೆ, ಜೀವನಕ್ಕೆ ಬೇಕಾದ ಎಲ್ಲ ವಸ್ತುಗಳನ್ನೂ ದಯಪಾಲಿಸುತ್ತಾನೆ. ಆದುದರಿಂದಲೇ ಮ್ಮೆಲ್ಲಾ ಆರಾಧನೆ ಮತ್ತು ಬಲಿದಾನಗಳಿಗೆ ಆತನೇ ಅರ್ಹನು. ನಾವು ಆತನ ಮುಂದೆ ಾತ್ರ ಕೈ ಕಟ್ಟಿ, ನಿಂತು, ಬಾಗಿ, ಸಾಷ್ಟಾಂಗವೆರಗಬೇಕು. ಆತನ ಹೊರತು ಇತರ ಯಾರ ುಂದೆಯೂ ಈ ರೀತಿ ನಿಂತು ಬಾಗುವುದು ಸಮ್ಮತವಲ್ಲ. ಯಾರದೇ ಮೇಲ್ಮೆ ಅಥವಾ ುಪಕಾರಭಾರವನ್ನು ಮನದಲ್ಲಿರಿಸಿ ಹಾಗೆ ಮಾಡುವುದು ಸುವ್ಯಕ್ತವಾದ ಹುದೇವಾರಾಧನೆಯಾಗಿದೆ.

ಅಲ್ಲಾಹನು ಹೇಳುತ್ತಾನೆ:

"ಸತ್ಯವಿಶ್ವಾಸಿಗಳೇ ರುಕೂಅ್ ಮಾಡಿರಿ ಾಗಿರಿ), ಸಜ್ದಃ ಮಾಡಿರಿ (ಸಾಷ್ಟಾಂಗವೆರಗಿರಿ), ುತ್ತು ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಾಡಿರಿ, ಸತ್ಕರ್ಮಗಳನ್ನೆಸಗಿರಿ ಇದರಿಂದಲೇ ುಗೆ ಯಶಸ್ಸು ಸಿಗುವುದೆಂದು ನಿರೀಕ್ಷಿಸ ಹುದು." (ಸೂರಃ ಅಲ್ ಹಜ್ಜ್- 77)

يَآ أَيُّهَا الَّذِينَ آمَنُوا ارْكَعُوا وَاسْجُدُوا وَاعْبُدُوا رَبَّكُمْ وَافْعَلُوا الْخَيْرَ لَعَلَّكُمْ تُفْلِحُونَ۔

10. ಬಲಿದಾನ, ಕಾಣಿಕೆ, ಹರಕೆಗಳೆಲ್ಲವೂ ಆರಾಧನೆಯ ಪ್ರಕಾರಗಳಾಗಿವೆ. ಇತರೆಲ್ಲ ರಾಧನೆಗಳನ್ನು ಅಲ್ಲಾಹನಿಗೆ ಮೀಸಲಿರಿಸುವಂತೆಯೇ ಇವುಗಳನ್ನೂ ಸಲ್ಲಿಸಲು ಅಲ್ಲಾಹನು ಾತ್ರ ಅರ್ಹನಾಗಿದ್ದಾನೆ. ಅಲ್ಲಾಹನ ಹೊರತು ಇತರರ ಹೆಸರಲ್ಲಿ ಬಲಿದಾನ ಮಾಡುವುದು, ರಕೆಯಿಡುವುದು, ಕಾಣಿಕೆ ಸಲ್ಲಿಸುವುದು ಇತ್ಯಾದಿಗಳೆಲ್ಲವೂ ಬಹುದೇವಾರಾಧನೆಗೆ ತುಲ್ಯವಾಗಿದೆ. ುಗ್ರಹಗಳನ್ನು ನೀಡಿದವನೇ ಕೃತಜ್ಞತೆಗೆ ಅರ್ಹನಾಗಿದ್ದಾನೆ. ಅಲ್ಲಾಹನಲ್ಲದೆ ನೀಡುವವರು ಾರೂ ಇಲ್ಲ. ಆದುದರಿಂದಲೇ ಆತನಲ್ಲದೆ ಇನ್ನಾರೂ ಆರಾಧನೆಗೆ ಅರ್ಹರಲ್ಲ.

ل اِنَّ صَلَاتِيْ وَ
كِيْ وَمَحْيَايَ وَمَمَاتِيْ
هِ رَبِّ الْعَالَمِيْنَ ۝
شَرِيْكَ لَهٗ

ಅಲ್ಲಾಹನು ಹೇಳುತ್ತಾನೆ:

'ಹೇಳಿರಿ- ನನ್ನ ನಮಾಝ್, ನನ್ನ ಸರ್ವ ಉಪಾಸನಾ ವಿಧಿಗಳು, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಯಾವ ಸಹಭಾಗಿಯೂ ಇಲ್ಲದ ಸರ್ವಲೋಕ ಪಾಲಕನಿಗಾಗಿದೆ.

(ಸೂರಃ ಅಲ್ ಅನ್‌ಆಮ್ -162, 163)

ಅಲ್ಲಾಹನ ದಾಸನು ಆತನ ಕ್ರೋಧಕ್ಕೆ ಮಾತ್ರ ಹೆದರಬೇಕಾಗಿದೆ, ಆತನ ಆಜ್ಞಾಭಂ
ಬಗ್ಗೆ ಮಾತ್ರ ಭಯಪಡಬೇಕಾಗಿದೆ. ಇದು ಅಲ್ಲಾಹನಿಗೆ ಮಾತ್ರವೇ ಸಲ್ಲಬೇಕಾದ ಹ
ಅಲ್ಲಾಹನಿಗೆ ಪ್ರತಿಯಾಗಿ ಇತರರ ಆಜ್ಞಾಭಂಗದ ಬಗ್ಗೆ ಹೆದರುವುದು ಅಥವಾ ಇತರರ ಕ್ರೋ
ಮತ್ತು ಅಸಂತುಷ್ಟಿಯ ಬಗ್ಗೆ ಭಯಪಡುವುದು 'ವಿಶ್ವಾಸಕ್ಕೆ' ವಿರುದ್ಧವಾದ ಕೆಲಸವಾಗಿ
ಜೀವನದ ಎಲ್ಲಾ ಕಾರ್ಯಗಳಲ್ಲೂ ಅಲ್ಲಾಹನ ಮಾರ್ಗದರ್ಶನವನ್ನು ಅನುಸರಿಸಿ, ಆ
ಆಜ್ಞಾಭಂಗ ಮಾಡದೆ, ಆತನ ಅಸಂತುಷ್ಟಿಯನ್ನು ಭಯಪಡುತ್ತಿರುವುದೇ ಧರ್ಮನಿಷ್ಠೆಯಾಗಿ
ಧರ್ಮನಿಷ್ಠೆ ಅಲ್ಲಾಹನಿಗೆ ಮಾತ್ರವಿರುವ ಹಕ್ಕು. ಅಲ್ಲಾಹನ ಹೊರತು ಇತರರ ಆಜ್ಞಾಭ
ಅಥವಾ ಅಸಂತೃಪ್ತಿಯ ಬಗ್ಗೆ ಭಯವಿರಿಸುವುದು ಕೂಡಾ, ಅಲ್ಲಾಹನ ಹಕ್ಕುಗಳಲ್ಲಿ ಇತರರ
ಭಾಗೀದಾರರನ್ನಾಗಿ ಮಾಡುವಂತೆಯೇ ಸಲ್ಲದ ಕಾರ್ಯ. 'ಲಾ ಇಲಾಹ ಇಲ್ಲಲ್ಲಾಹ್' ಎ
ವಾಕ್ಯದ ಅರ್ಥ ಇದೇ ಆಗಿದೆ.

2. ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸ

ಇಸ್ಲಾಮಿನ ಮಾರ್ಗದಲ್ಲಿ ನಡೆಯಬೇಕಾದರೆ ಅಲ್ಲಾಹನ ಅಂತ್ಯ ಪ್ರವ
ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸವಿರಿಸುವುದು ಅವಶ್ಯಕವಾಗಿದೆ. ಪ್ರವ
ಮುಹಮ್ಮದ್‌ರು(ಸ) ಅಲ್ಲಾಹನ ಪ್ರವಾದಿಯಾಗಿದ್ದಾರೆ, ಅವರು ಹೇಳಿದ ಮಾತುಗಳೆಲ್ಲ
ಅಲ್ಲಾಹನ ಕಡೆಯಿಂದಾಗಿವೆ. ಅಲ್ಲಾಹನು ಅವರಿಗೆ ಅರುಹಿದ ಮಾತುಗಳನ್ನೇ ಅ
ಹೇಳಿದ್ದಾರೆ ಮತ್ತು ಅವುಗಳೆಲ್ಲವೂ ಸರಿಯಾದ, ಸತ್ಯವಾದ ಮಾತುಗಳಾಗಿವೆ ಎ
ವಿಶ್ವಾಸವಿರಿಸುವುದಾಗಿದೆ. ಪ್ರವಾದಿವರ್ಯರ(ಸ) ಮಾತುಗಳಲ್ಲಿ ಯಾವುದೇ ಶಂಕೆ- ಸಂದೇಹಗ
ಆಸ್ಪದವಿಲ್ಲ. ಅವರ ಮಾತುಗಳೆಲ್ಲವೂ ನೈಜ ತಿಳುವಳಿಕೆಯ ಆಧಾರದಲ್ಲಿವೆಯೇ ವಿನಾ ಕೇ
ಕಾಲ್ಪನಿಕವಲ್ಲ. ಸರಿಯಾದ ತಿಳುವಳಿಕೆ ಇಲ್ಲದೆ ತನ್ನ ಅಂದಾಜಿನ ಪ್ರಕಾರ ನುಡಿದ ಮಾತು
ಸತ್ಯವಾಗಬಹುದು ಅಥವಾ ಸುಳ್ಳಾಗಲೂಬಹುದು. ಆದರೆ ಪ್ರವಾದಿವರ್ಯರ(ಸ) ಬೋಧನೆಗ
ಅಸತ್ಯವಾದ ಮಾತುಗಳಿರಲು ಸಾಧ್ಯವಿಲ್ಲ.

ಪ್ರವಾದಿ ಮುಹಮ್ಮದ್‌ರನ್ನು(ಸ) ಪ್ರವಾದಿಯೆಂದು ವಿಶ್ವಾಸವಿರಿಸಿ, ಅವರ ಮಾತುಗಳೆಲ್ಲ

ೆಂದು ನಂಬಿದ ನಂತರ, ಈ ಕೆಳಗಿನ ಕೆಲವು ವಿಷಯಗಳು ನಮ್ಮ ಮೇಲೆ ಯವಾಗುತ್ತವೆ-

1) ಪ್ರವಾದಿವರ್ಯರ(ಸ) ಆದೇಶಗಳೆಂದು ಖಾತ್ರಿಯಾದ ಎಲ್ಲಾ ಆದೇಶಗಳನ್ನು ನಾವು ಸರಿಸಬೇಕಾಗಿದೆ. ಏಕೆಂದರೆ ಪ್ರವಾದಿವರ್ಯರ(ಸ) ಆದೇಶಗಳೆಲ್ಲವೂ ಅಲ್ಲಾಹನ ಶಗಳಾಗಿವೆ. ಜನರು ಪ್ರವಾದಿಗಳನ್ನು ಅನುಸರಿಸುವ, ಅವರ ಮಾತಿನಂತೆ ನಡೆಯುವ ಜೀವನದ ಎಲ್ಲ ಹಂತಗಳಲ್ಲಿಯೂ ಅಲ್ಲಾಹನ ಮತ್ತು ಆತನ ಪ್ರವಾದಿಯ ್ಗವನ್ನೇ ಅನುಸರಿಸುವ ಉದ್ದೇಶದಿಂದಲೇ ಅಲ್ಲಾಹನು ತನ್ನ ದಾಸರ ಮೂಲಕವೇ ರನ್ನು ಪ್ರವಾದಿಯಾಗಿ ಆಯ್ಕೆ ಮಾಡುತ್ತಾನೆ. ಅಲ್ಲಾಹನು ಹೇಳುತ್ತಾನೆ:

وَمَا أَرْسَلْنَا مِن رَّسُولٍ إِلَّا لِيُطَاعَ بِإِذْنِ اللَّهِ

"ನಾವು ಪ್ರತಿಯೊಬ್ಬ ಸಂದೇಶ ಕನನ್ನು ಅಲ್ಲಾಹನ ಆಜ್ಞೆ ಅನುಸರಿಸಲ್ಪಡ ಗಿಯೇ ಕಳುಹಿಸಿರುತ್ತೇವೆ"

(ಸೂರಃ ಅನ್ನಿಸಾ- 64)

2) ಅಲ್ಲಾಹನ ಪ್ರವಾದಿಯು ವಿರೋಧಿಸಿದಂತಹ ಎಲ್ಲಾ ಮಾತುಗಳನ್ನು ನೀವು ೀಕ್ಷಿಸಬೇಕು. ಏಕೆಂದರೆ ಒಬ್ಬ ವ್ಯಕ್ತಿಯನ್ನು ಅಲ್ಲಾಹನ ಪ್ರವಾದಿಯೆಂದು ನಂಬಿದ ರ, ಪ್ರವಾದಿಯ ಆದೇಶಗಳನ್ನು ಧಿಕ್ಕರಿಸಿ ತನ್ನ ಮನ ಬಂದಂತೆ ವರ್ತಿಸುವುದು ಮಹಾ . ಉದ್ದೇಶಪೂರ್ವಕವಾಗಿ ಹೀಗೆ ಮಾಡಿದರೆ ಪ್ರವಾದಿಯನ್ನು ಧಿಕ್ಕರಿಸಿದಂತಾಗುವುದು. ಪ್ರವಾದಿವರ್ಯರು(ಸ) ಹೇಳಿದರು, "ನನ್ನ ಸಮುದಾಯದ ಎಲ್ಲ ವ್ಯಕ್ತಿಗಳೂ ವನ್ನು ಪ್ರವೇಶಿಸುವರು, ನನ್ನನ್ನು ಧಿಕ್ಕರಿಸಿದವರ ಹೊರತು".

ಪ್ರವಾದಿವರ್ಯರ(ಸ) ಸಮುದಾಯದಲ್ಲಿರುತ್ತಾ ಅವರನ್ನು ಧಿಕ್ಕರಿಸುವುದು ದಿವರ್ಯರ(ಸ) ಅನುಯಾಯಿಗಳ ಮಟ್ಟಿಗೆ ಆಶ್ಚರ್ಯದ ಸಂಗತಿಯಾಗಿತ್ತು. ಅವರು ದಿವರ್ಯರೊಡನೆ(ಸ), "ಪ್ರವಾದಿವರ್ಯರೇ! ತಮ್ಮ ಸಮುದಾಯದವರಾಗಿದ್ದುಕೊಂಡು ನ್ನು ಧಿಕ್ಕರಿಸುವುದಾದರೂ ಹೇಗೆ?" ಎಂದು ಕೇಳಿದರು. ಪ್ರವಾದಿವರ್ಯರು(ಸ) ದರು, "ನನ್ನನ್ನು ಅನುಸರಿಸಿದವನು ಖಂಡಿತವಾಗಿಯೂ ಸ್ವರ್ಗ ಪ್ರವೇಶಿಸುವನು ಮತ್ತು ಮಾತನ್ನು ಪಾಲಿಸದೆ ನನ್ನ ಆಜ್ಞೆಗಳನ್ನು ಉಲ್ಲಂಘಿಸುವವನು ನನ್ನನ್ನು ಧಿಕ್ಕರಿಸುವನು."

ಇದು ಬಹಳ ಸ್ಪಷ್ಟವಾದ ಮಾತು. ಒಬ್ಬ ವ್ಯಕ್ತಿಯನ್ನು ಒಂದೆಡೆ ಪ್ರವಾದಿ ಎಂದು , ಅವರ ಆಜ್ಞೆಗಳನ್ನು ಅಲ್ಲಾಹನ ಆಜ್ಞೆ ಎಂದು ಅಂಗೀಕರಿಸಿದ ನಂತರ ಪ್ರವಾದಿಯ ಳಿಗೆ ವಿರುದ್ಧವಾದ ಕೆಲಸಗಳನ್ನು ಮಾಡುವುದಾದರೂ ಹೇಗೆ? ಇಂತಹವರು ಯಥಾರ್ಥದಲ್ಲಿ ಅನುಯಾಯಿಗಳಾಗಲು ಸಾಧ್ಯವಿಲ್ಲ.

3) ಪ್ರವಾದಿವರ್ಯರ(ಸ) ಮಾರ್ಗದರ್ಶನದಿಂದ ಮುಕ್ತವಾದ ಯಾವ ಅನುಸರಣೆಯನ್ನೂ ೆಂದು ನಂಬಬಾರದು. ಲೋಕದ ಯಾವುದೇ ನಾಯಕ, ಮಹಾತ್ಮ, ಮಹಾ ಪುರುಷ, ತ, ಸಂತ ಅಥವಾ ಯಾವುದೇ ರಾಷ್ಟ್ರ ನಾಯಕನ ಆಜ್ಞೆಗಳನ್ನು, ಅದು ಕೇವಲ ಅವರ

ಆಜ್ಞೆ ಎಂಬ ನೆಲೆಯಲ್ಲಿ ನೀವು ಅಂಗೀಕರಿಸುವಂತಿಲ್ಲ. ಅಲ್ಲಾಹನ ಮತ್ತು ಆತನ ಪ್ರವಾ ಆಜ್ಞೆಗಳಿಗೆ ವಿರುದ್ಧವಾದ ಯಾವ ಆಜ್ಞೆಗಳನ್ನೂ ಮುಸಲ್ಮಾನನು ಅನುಸರಿಸುವಂ ಜೀವನದ ಎಲ್ಲ ರಂಗಗಳಲ್ಲಿಯೂ ಒಬ್ಬ ಮುಸಲ್ಮಾನನು ಅಲ್ಲಾಹನ ಗ್ರಂಥ ಮತ್ತು ಪ್ರವಾದಿಯ ಚರ್ಯೆಯನ್ನು ಆಧಾರವಾಗಿಟ್ಟುಕೊಂಡು ನೀಡಲ್ಪಟ್ಟ ಆಜ್ಞೆಗಳನ್ನು ಅನುಸರಿಸಬೇಕಾಗಿದೆ.

ಪವಿತ್ರ ಕುರ್‌ಆನಿನ ಸೂರಃ ಮುಹಮ್ಮದ್‌ನಲ್ಲಿ ಅಲ್ಲಾಹನು ಹೇಳುತ್ತಾನೆ, ಜೀವನವನ್ನು ಸತ್ಯ ನಿಷೇಧದ ಮಾರ್ಗದಲ್ಲಿ ಕಳೆಯುವವರು ಯಾವ ಸತ್ಕರ್ಮ ಮಾಡಿ ಅದು ವಿಫಲವಾಗುವುದು. ವಿಶ್ವಾಸವನ್ನು ಆಧಾರವಾಗಿರಿಸಿ ಮಾಡಲಾಗುವ ಕರ್ಮಗಳು ಅಲ್ಲಾಹನ ದೃಷ್ಟಿಯಲ್ಲಿ ಉತ್ತಮವಾದುದಾಗಿವೆ. ನಂತರ ಅಲ್ಲಾಹನು ಹೇಳುತ್ತಾನೆ:

ك بِأَنَّ الَّذِينَ
وا اتَّبَعُوا الْبَاطِلَ
الَّذِينَ آمَنُوا اتَّبَعُوا
مِن رَّبِّهِمْ

"ಇದೇಕೆಂದರೆ, ಸತ್ಯನಿಷೇಧಿಗಳು ಮಿಥ್ಯವನ್ನು ಅನುಸರಿಸಿದರು. ಮತ್ತು ಸತ್ಯವಿಶ್ವಾಸಿಗಳು ಅವರ ಪ್ರಭುವಿನ ಕಡೆಯಿಂದ ಬಂದಿರುವ ಸತ್ಯವನ್ನು ಅನುಸರಿಸಿದರು."

(ಸೂರಃ ಮುಹಮ್ಮದ್ : 3)

ಪವಿತ್ರ ಕುರ್‌ಆನಿನ ಭಾಷೆಯಲ್ಲಿ ಅಲ್ಲಾಹನಿಂದ ಬಂದಂತಹ ಮತ್ತು ಪ್ರವಾದಿವರ್ಯರು(ಸ) ಸೂಚಿಸಿದಂತಹ ಎಲ್ಲ ಮಾತುಗಳು 'ಸತ್ಯ'ವಾಗಿವೆ. ಈ ವಿರುದ್ಧವಾದುದೆಲ್ಲವೂ ಮಿಥ್ಯವಾಗಿವೆ.

4) ಅಲ್ಲಾಹನ ಪ್ರವಾದಿವರ್ಯರು(ಸ) ತೋರಿಸಿದ ಮಾರ್ಗಕ್ಕಿಂತ ಭಿನ್ನ ಯಾವುದೇ ಮಾರ್ಗವನ್ನು ನೀವು ಅನುಸರಿಸಬಾರದು. ಅದು ನಿಮ್ಮ ಪರಿವಾರ ಅಥವಾ ಸಮಾಜದ ಎಷ್ಟು ಹಳೆಯ ಸಂಪ್ರದಾಯವಾಗಿದ್ದರೂ ಮತ್ತು ಜನರು ಅದಕ್ಕೆ ನಿಷ್ಠರಾಗಿದ್ದರೂ ಸರಿ.

ಅಲ್ಲಾಹನ ಪ್ರವಾದಿಯ(ಸ) ಮೇಲೆ ವಿಶ್ವಾಸವಿರಿಸಿದ ನಂತರ ಯಾವುದಾ ಕೆಲಸವನ್ನು ಮಾಡುವಾಗ, "ಇದು ನಮ್ಮಲ್ಲಿ ನಮ್ಮ ಪೂರ್ವಜರಿಂದಲೇ ನಡೆದು ಬಂದ ರಿವಾಜುಗಳು" ಎಂದು ಹೇಳುವುದು ಸರ್ವಥಾ ಸರಿಯಲ್ಲ. ಯಾವುದೇ ವಿಷಯದಲ್ಲಿ ಇ ಮೊಂಡುತನ ನಮ್ಮನ್ನು ಧರ್ಮ ಬಾಹಿರರನ್ನಾಗಿ ಮಾಡಲೂ ಬಹುದು. ಇದು ಸದಾ ದೇವಾರಾಧಕರು ಮತ್ತು ಸತ್ಯನಿಷೇಧಿಗಳ ಬಾಯಿಯಿಂದ ಹೊರಟಂತಹ ಮಾತುಗಳ

ಪವಿತ್ರ ಕುರ್‌ಆನ್ ಹೇಳುತ್ತದೆ:

قِيلَ لَهُمْ
إِلَىٰ مَا أَنزَلَ اللَّهُ

"ಅಲ್ಲಾಹನು ಅವತೀರ್ಣಗೊಳಿಸಿದ ಶಾಸನದ ಕಡೆಗೂ ಆತನ ಸಂದೇಶವಾಹಕರ ಕಡೆಗೂ ಬನ್ನಿರಿ" ಎಂದು ಅವರೊಡನೆ

ಾಗ ಅವರು 'ನಾವು ನಮ್ಮ ಪೂರ್ವಿಕರನ್ನು
; ಮಾರ್ಗದಲ್ಲಿ ಕಂಡಿದ್ದೆವೋ ಅದೇ
 ಸಾಕು' ಎಂದು ಹೇಳುತ್ತಾರೆ. ಪೂರ್ವಿಕರು
 ಅರಿತಿರದಿದ್ದರೂ ಮತ್ತು ಅವರಿಗೆ
ರ್ಗದ ಅರಿವೇ ಇಲ್ಲದಿದ್ದರೂ ಇವರು
ನ್ನೇ ಅನುಸರಿಸುತ್ತಲಿರುವರೇ?"
(ಸೂರಃ ಅಲ್ ಮಾಯಿದಃ : 104)

وَإِلَى الرَّسُولِ قَالُوا حَسْبُنَا مَا وَجَدْنَا عَلَيْهِ آبَاءَنَا ۚ أَوَلَوْ كَانَ آبَاؤُهُمْ لَا يَعْلَمُونَ شَيْئًا وَلَا يَهْتَدُونَ ○

5) ನೀವು ಪ್ರವಾದಿ ಮುಹಮ್ಮದ್‌ರವರ(ಸ) ಎಲ್ಲಾ ವಚನಗಳಲ್ಲಿ ಪೂರ್ಣ ವಿಶ್ವಾಸ ಬೇಕು, ಅವು ಬುದ್ಧಿಗೆ ನಿಲುಕಿದರೂ ಇಲ್ಲದಿದ್ದರೂ ಸರಿ. ವ್ಯಕ್ತಿಯು ಅಲ್ಲಾಹನ ದಿಯೋ, ಅಲ್ಲವೋ ಎಂದು ತೀರ್ಮಾನಿಸುವುದು ಬುದ್ಧಿಯ ಕೆಲಸ. ಅವರು ಅಲ್ಲಾಹನ ದಿಯಾಗಿದ್ದಾರೆಂದು ವಿವೇಕ ಪೂರ್ಣವಾಗಿ ತಿಳಿದು ಬಂದ ನಂತರ ಅವರ ವಚನಗಳ ಕೆಲವನ್ನು ಪಾಲಿಸುವುದು ಮತ್ತು ಕೆಲವನ್ನು ಅನುಸರಿಸದಿರುವುದು ಸರ್ವಥಾ ಸರಿಯಲ್ಲ.

ಬುದ್ಧಿಯಿಂದ ಗ್ರಹಿಸಿಕೊಳ್ಳಲಾಗದಂತಹ ಕೆಲವು ವಿಷಯಗಳನ್ನು ಅಲ್ಲಾಹನ ದಿವರ್ಯರು(ಸ) ನಮಗೆ ತಿಳಿಸಿದ್ದಾರೆ. ಉದಾಹರಣೆಗೆ: ಅಲ್ಲಾಹನ ಗುಣ ವಿಶೇಷತೆಗಳು, ಚರರ ಬಗೆಗಿನ ವಿವರಗಳು, ಸ್ವರ್ಗ, ನರಕ ಮತ್ತು ಅಂತ್ಯದಿನ, ಹಾಗೆಯೇ ಗತ ದಾಯಗಳ ವೃತ್ತಾಂತ, ಹಿಂದಿನ ಗ್ರಂಥಗಳು ಹಾಗೂ ಗತ ಪ್ರವಾದಿಗಳ ಘಟನೆಗಳು ದಿ. ಇವುಗಳ ಕುರಿತು ತಿಳಿಯಲು ಯಾವ ನಂಬಲರ್ಹ ಮೂಲಗಳೂ ನಮ್ಮ ಬಳಿ ಈ ವಿಷಯಗಳನ್ನೆಲ್ಲ ಪ್ರವಾದಿವರ್ಯರು(ಸ) ತಿಳಿಸಿದ ರೀತಿಯಲ್ಲೇ ಅರಿಯಬೇಕಾದುದು ಶ್ಯಕ. ಅಲ್ಲಾಹನು ನಮ್ಮ ಬುದ್ಧಿಗೆ ನಿಲುಕದ, ಆದರೆ ನಾವು ತಿಳಿಯಬೇಕಾಗಿರುವುದು ರ್ಯವಾಗಿರುವ ಕೆಲವು ವಿಷಯಗಳನ್ನು ಪ್ರವಾದಿವರ್ಯರಿಗೆ(ಸ) ತಿಳಿಸಿದ್ದಾನೆ. ಅಂತಹ ಯಗಳನ್ನೆಲ್ಲಾ ಪ್ರವಾದಿವರ್ಯರು(ಸ) ನಮಗೆ ಬಹಳ ಸ್ಪಷ್ಟವಾಗಿ ಸಾರಿ ಹೇಳಿದ್ದಾರೆ ಅದರಲ್ಲಾವ ಕೊರತೆಯನ್ನೂ ಬಾಕಿ ಉಳಿಸಿಲ್ಲ. ಅಲ್ಲಾಹನು ಹೇಳುತ್ತಾನೆ,

"ಮತ್ತು ಅವರು ಪರೋಕ್ಷದ (ಈ
ನ್ನು ಜನರಿಗೆ ತಲುಪಿಸುವ) ವಿಷಯದಲ್ಲಿ
ರಲ್ಲ." (ಸೂರಃ ಅತ್ತಕ್ವೀರ್- 24)

وَمَا هُوَ عَلَى الْغَيْبِ بِضَنِينٍ ○

ಆದ್ದರಿಂದ ಪೂರ್ವೋಕ್ತ ವಿಷಯಗಳಿಗೆ ಸಂಬಂಧಿಸಿದಂತೆ ಪ್ರವಾದಿವರ್ಯರು(ಸ) ದಂತೆಯೇ ವಿಶ್ವಾಸವಿರಿಸಬೇಕಾಗಿದೆ.

ಪ್ರವಾದಿವರ್ಯರನ್ನು(ಸ) ಅನುಸರಿಸುವುದರೊಂದಿಗೆ ಅವರಲ್ಲಿ ಅಮಿತವಾದ ಯನ್ನಿರಿಸುವುದು ಮತ್ತು ಅವರನ್ನು ಲೋಕದ ಸರ್ವ ಮಾನವರಿಗಿಂತಲೂ ಹೆಚ್ಚಾಗಿ ಸುವುದು ಕೂಡಾ ಸತ್ಯ ವಿಶ್ವಾಸದ ಬೇಡಿಕೆಯಾಗಿದೆ. ಯಾವ ಮನಸ್ಸಲ್ಲಾದರೂ ದಿವರ್ಯರ(ಸ) ಕುರಿತು ಅಮಿತವಾದ ಪ್ರೀತಿ-ಆದರಗಳಿಲ್ಲದಿದ್ದರೆ ಸತ್ಯವಿಶ್ವಾಸವು ಅವರ

ಮನಸ್ಸಲ್ಲಿ ಸಂಪೂರ್ಣವಾಗಿ ಇಳಿದಿಲ್ಲ ಎಂದರ್ಥ.

'ಮುಹಮ್ಮದುರ್‍ರಸೂಲುಲ್ಲಾಹ್' رَسُوْلُ اللّٰهِ

'ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ' ಎಂದು ಹೇಳು ತಾತ್ಪರ್ಯ ಇದುವೇ ಆಗಿದೆ.

"ಲಾ ಇಲಾಹ ಇಲ್ಲಲ್ಲಾಹ್ لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ ಮುಹಮ್ಮದುರ್‍ರಸೂಲುಲ್ಲಾಹ್"

ಎಂಬುದು ನಮ್ಮ ಮೂಲಮಂತ್ರ. ಈ ಪವಿತ್ರ ವಚನವನ್ನು ಗ್ರಹಿಸಿ ಉಚ್ಚರಿಸುವ ಅದರ ಮೇಲೆ ವಿಶ್ವಾಸವಿರಿಸುವ ಮೂಲಕವೇ ಒಬ್ಬ ವ್ಯಕ್ತಿಯು ಮುಸ್ಲಿಮನಾಗುತ್ತಾನೆ ಪವಿತ್ರ ವಚನದ ಅರ್ಥವನ್ನು ಚೆನ್ನಾಗಿ ಗ್ರಹಿಸಿ ಅದರ ಮೇಲೆ ವಿಶ್ವಾಸವಿರಿಸುವ ಯಾರೂ ಮುಸ್ಲಿಮನಾಗಲು ಸಾಧ್ಯವಿಲ್ಲ. ಈ ಪವಿತ್ರ ವಚನದ ಮೂಲಕವೇ ವ್ಯಕ್ತಿ ಅಲ ಕರುಣೆಗೆ ಬಾಧ್ಯಸ್ಥನಾಗುತ್ತಾನೆ. ಈ ವಚನವೇ ಸ್ವರ್ಗದ ಕೀಲಿಕೈಯಾಗಿದೆ ಮತ್ತು ಪರಲೋ ಮೋಕ್ಷ ಮತ್ತು ಯಶಸ್ಸಿಗೆ ನಾಂದಿಯಾಗಿದೆ.

ಈ ಪವಿತ್ರ ವಚನವನ್ನು ಪಠಿಸಿದವರಿಗೆ ಪ್ರವಾದಿವರ್ಯರು(ಸ) ಸ್ವರ್ಗದ ಸುವಾರ್ತೆ ನೀಡಿದ್ದಾರೆ. ಹ. ಮುಆದ್‌ರೊಡನೆ(ರ) ಒಮ್ಮೆ ಪ್ರವಾದಿವರ್ಯರು(ಸ) ಹೇಳಿದರು, "ಯಾರಾ ಹೃತ್ಪೂರ್ವಕವಾಗಿ لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ 'ಲಾ ಇಲಾಹ ಇಲ್ಲಲಾ ಮುಹಮ್ಮದುರ್‍ರಸೂಲುಲ್ಲಾಹ್' ಎಂಬ ಸಾಕ್ಷ್ಯವಚನ ನುಡಿದರೆ ಅಲ್ಲಾಹನು ಆ ವ್ಯ ಮೇಲೆ ನರಕಾಗ್ನಿಯನ್ನು ನಿಷಿದ್ಧಗೊಳಿಸುತ್ತಾನೆ."

ಇಂತಹ ಸುವಾರ್ತೆಯನ್ನು ಸುಮ್ಮನೆ ನೀಡಲಾಗಿಲ್ಲವೆಂದು ನೀವೇ ಅಂದಾಜಿಸಬಹ ಈ ಪವಿತ್ರ ವಚನದ ಅರ್ಥವನ್ನು ಗ್ರಹಿಸಿಕೊಂಡು, ಹೃತ್ಪೂರ್ವಕವಾಗಿ 'ಲಾ ಇ ಇಲ್ಲಲ್ಲಾಹ್' ಹೇಳಿದ ನಂತರ ನಮ್ಮಲ್ಲಿ ಯಾವ ಬದಲಾವಣೆಗಳಾಗಬೇಕಾಗಿದೆ, ರೀತಿ مُحَمَّدٌ رَّسُوْلُ اللّٰهِ 'ಮುಹಮ್ಮದುರ್‍ರಸೂಲುಲ್ಲಾಹ್' ಎಂಬ ವಾಕ್ಯದ ನೈಜ ಅರ್ಥವೇನೆಂದು ನೀವು ಸ್ವತಃ ಆಲೋಚಿಸಿ ನೋಡಿ. ಆಗ ವ್ಯಕ್ತಿ ಅಲ್ಲಾಹನ ಮತ್ತು ಆತನ ಪ್ರವಾದಿಯ ಆಜ್ಞಾನುಸರಣೆಯ ಹೊರತು ಇತ ಆರಾಧನೆ ಮತ್ತು ಅನುಸರಣೆಯಿಂದ ವಿಮುಖನಾಗುತ್ತಾನೋ ಮತ್ತು ತನ್ನ ಸಂಪ ಜೀವನವನ್ನೇ ಅಲ್ಲಾಹನ ಆಜ್ಞಾನುಸರಣೆಗೆ ಮುಡಿಪಾಗಿಡುತ್ತಾನೋ ಖಂಡಿತವಾಗಿ ಆತನಿಗೆ ಇಂತಹ ಉತ್ಕೃಷ್ಟವಾದ ಪ್ರತಿಫಲ ಸಿಗಲೇಬೇಕು ಎಂದು ನಿಮ್ಮ ಮನಸ್ಸು ಸಾಕ್ಷ್ಯ ನುಡಿಯುವುದು. ಯಾರು ಲೋಕದ ನೈಜ ಒಡೆಯ ಮತ್ತು ಪರಿಪಾಲಕನಲ್ಲಿ ತೋರಲಿಕ್ಕಾಗಿ ಇತರೆಲ್ಲರಿಂದ ವಿಮುಖರಾಗುವರೋ ಅವರಿಗೆ ಜಗದೊಡೆ ಖಂಡಿತವಾಗಿಯೂ ತನ್ನ ವಿಪುಲ ಅನುಗ್ರಹವನ್ನು ದಯಪಾಲಿಸುವನು. ಪವಿತ್ರ ವ

ರ್ಯವನ್ನು ತಿಳಿಯದೆ ಕೇವಲ ಅದನ್ನು ಉಚ್ಚರಿಸಿದರೆ ಸಾಕೆಂದು ಹೇಳುವವರು ಾಗಿಯೂ ಭ್ರಮೆಗೊಳಗಾದವರಾಗಿದ್ದಾರೆ.

ಅಲ್ಲಾಹನಿಗೆ ನಮ್ಮ ನಾಲಗೆಯಿಂದ ಹೊರಡುವ ಪದಗಳು ಬೇಕಾಗಿಲ್ಲ. ಬದಲಾಗಿ ಸಂಪ್ರೀತಿಗಳಿಸಲು ತೋರುವ ಹೃದಯ ಸಮರ್ಪಣೆ ಮತ್ತು ಜೀವನದ ಮಾರ್ಪಾಟನ್ನು ು ಬಯಸುತ್ತಾನೆ. ಪವಿತ್ರ ವಚನವು ಯಥಾರ್ಥವಾಗಿ ದಾಸನು ತನ್ನ ಒಡೆಯನೊಂದಿಗೆ ುವ ಕರಾರಾಗಿದೆ. ಈ ಪವಿತ್ರ ವಚನವನ್ನು ಪಠಿಸಿ ದಾಸನು ತನ್ನ ಒಡೆಯನ ಹೊರತು ಲ್ಲ ಒಡೆಯರನ್ನು ಹಾಗೂ ಅಲ್ಲಾಹನ ಹೊರತು ಇತರೆಲ್ಲರ ದೇವತ್ವವನ್ನು ಬಹಿರಂಗವಾಗಿ ಗಳೆಯುತ್ತಾನೆ.

ಈ ಎಲ್ಲ ಅಧಿಪತಿಗಳಿಗಿಂತ ಮಿಗಿಲಾದ ಮಹಾ ಅಧಿಪತಿಯೊಂದಿಗೆ ಪ್ರಮಾಣ ವಚನ ಂಡು ಆತನನ್ನು ಧಿಕ್ಕರಿಸುವವರೆಲ್ಲರ ವಿರುದ್ಧ ತನ್ನ ಪ್ರತಿರೋಧವನ್ನು ಪ್ರಕಟಿಸುತ್ತಾನೆ. ಪ್ರವಾದಿಯ ಪ್ರಾಮಾಣಿಕತೆ ಮತ್ತು ಸತ್ಯತೆಯ ಸಾಕ್ಷ್ಯ ವಹಿಸುತ್ತಾನೆ ಮತ್ತು ತನ್ನನ್ನು ಾಹ್ ಮತ್ತು ಆತನ ಸಂದೇಶವಾಹಕರಿಗೆ ಸಮರ್ಪಿಸಿ ಬಿಡುತ್ತಾನೆ.

ಇದು ಜೀವನದ ಅತ್ಯಂತ ದೊಡ್ಡ ಪ್ರಮಾಣ. ಅದರ ಮೊದಲು ಮತ್ತು ಅದರ ರ ವ್ಯಕ್ತಿಯ ಜೀವನವು ಸಮಾನವಾಗಿರಲು ಸಾಧ್ಯವಿಲ್ಲ. ಚೆನ್ನಾಗಿ ಆಲೋಚಿಸಿ ೇಶಪೂರ್ವಕವಾಗಿ ಜಗದೊಡನೆಯನಿಗೆ ನಿಷ್ಠರಾಗಿರುವ ಮತ್ತು ಅಜ್ಞಾನ ಅಥವಾ ್ಟತನದಿಂದ ಆತನಿಗೆ ವಿರುದ್ಧ ಬಂಡಾಯ ತೋರುವವರ ಜೀವನ ಎಂದೂ ನವಾಗಿರಲಾರದು. ಪವಿತ್ರ ಕುರ್‌ಆನ್ ಹೇಳುತ್ತದೆ:

أَفَمَن كَانَ مُؤْمِنًا كَمَن كَانَ
فَاسِقًا ۚ لَّا يَسْتَوُونَ ۝

"ಸತ್ಯ ವಿಶ್ವಾಸಿಯಾದವನು ಕರ್ಮಭ್ರಷ್ಟ
ಾಗಿರಲು ಎಂದಾದರೂ ಸಾಧ್ಯವಿದೆಯೇ?
ಬ್ಬರೂ ಸರಿ ಸಮಾನರಾಗಲಾರರು"

(ಸೂರಃ ಅಸ್ಸಜ್ದಃ- 18)

3. ಪರಲೋಕ ವಿಶ್ವಾಸ

ವಿಶ್ವದ ಪ್ರಸಕ್ತ ವ್ಯವಸ್ಥೆಯು ಅಡಿಮೇಲಾಗಿಸಲ್ಪಡುವ ಒಂದು ದಿನ ಬರಲಿದೆ. ಾಹನ ಆಜ್ಞೆಯೊಂದಿಗೆ ಈ ಭೂಮಿ ಮತ್ತು ಅದರಲ್ಲಿರುವ ಸಕಲ ವಸ್ತುಗಳೂ ಮವಾಗಲಿವೆ. ಆಗ ಭೂಮಿಯಲ್ಲಿರುವ ಎಲ್ಲ ಜೀವಿಗಳೂ ನಾಶವಾಗುವುವು ಮತ್ತು ್ಯನ ಈ ಕಾರ್ಯಾಗಾರವು ಹಠಾತ್ತನೆ ಸ್ಥಗಿತಗೊಳ್ಳುವುದು.

ತದನಂತರ ಮಾನವರೆಲ್ಲರೂ ಪುನಃ ಜೀವಂತ ಎಬ್ಬಿಸಲ್ಪಡುವರು. ಅವರನ್ನು ಪ್ರಥಮ ಸೃಷ್ಟಿಸಿದ ಅಲ್ಲಾಹನೇ ಅವರನ್ನು ಪುನಃ ಸೃಷ್ಟಿಸುವನು. ಎಲ್ಲರೂ ಅಲ್ಲಾಹನ ಮುಂದೆ ರಾಗುವರು ಮತ್ತು ಎಲ್ಲರ ಕರ್ಮಗಳ ಬಗ್ಗೆ ವಿಚಾರಣೆ ನಡೆಯುವುದು. ಇಹಲೋಕ ನದಲ್ಲಿ ಸತ್ಕರ್ಮವೆಸಗಿದವರಿಗೆ ಉತ್ತಮ ಪ್ರತಿಫಲ ನೀಡಲಾಗುವುದು ಮತ್ತು

ದುಷ್ಕರ್ಮವೆಸಗಿದವರಿಗೆ ಅವರ ಕರ್ಮಕ್ಕೆ ತಕ್ಕ ಶಿಕ್ಷೆ ಅನುಭವಿಸಬೇಕಾಗುವುದು. ಅಲ
ವಿರುದ್ಧ ಬಂಡಾಯ ತೋರಿದವರು ತಮ್ಮ ಅವಿಧೇಯತೆಯ ಕುರಿತು ಪ್ರಶ್ನಿಸಲಾಗುವುದಿಲ್ಲ
ಭಾವಿಸುತ್ತಿದ್ದರು. ಆದರೆ ಅಂದು ಅವರಿಗೆ ಕಠಿಣ ಶಿಕ್ಷೆ ನೀಡಲಾಗುವುದು. ಆ ದಿನ
ಅನುಗ್ರಹ ಮತ್ತು ಸುಖಾನಂದಗಳು ಅಲ್ಲಾಹನ ಅಜ್ಞಾನುಸಾರಿಗಳಾದ ಪ್ರಾಮಾಣಿಕ ದ
ಮಾತ್ರವೇ ಮೀಸಲಾಗುವುದು. ಇಹಲೋಕದಲ್ಲಿ ಅಲ್ಲಾಹನ ಸಂಪ್ರೀತಿಗಾಗಿ ತ
ಕಷ್ಟಕಾರ್ಪಣ್ಯಗಳನ್ನು ಸಹಿಸಿದ, ವಿಪತ್ತುಗಳನ್ನು ಅನುಭವಿಸಿದ ನಿಷ್ಠಾವಂತ
ಪರಲೋಕದಲ್ಲಿ ಅಲ್ಲಾಹನ ಅಸಂಖ್ಯಾತ ಅನುಗ್ರಹಗಳಿಗೆ ಅರ್ಹರಾಗುವರು ಮತ್ತು
ತೋರಿದ ನಿಷ್ಠೆಗೆ ಪೂರ್ಣ ಪ್ರತಿಫಲ ನೀಡಲಾಗುವುದು. ಅದುವೇ ನಿರ್ಣಾಯಕ ದಿ
ದಿನದ ಆಗಮನ ನಿಶ್ಚಿತ. ಮಾನವರು ತಮ್ಮ ಕರ್ಮಗಳಿಗೆ ತಕ್ಕ ಪ್ರತಿಫಲ ಪಡೆಯ
ಮತ್ತು ಆತನ ಕರುಣೆಗೆ ಅರ್ಹರಾದವರಿಗೆ ಕರುಣೆ ಲಭಿಸುವುದೆಲ್ಲವೂ ಅಲ್ಲಾಹನ
ಮತ್ತು ದಯಾ ಗುಣಗಳ ಬೇಡಿಕೆಯೂ ಆಗಿದೆ.

ಅಂತ್ಯ ದಿನದ ಮೇಲಿನ ವಿಶ್ವಾಸವು ಇಸ್ಲಾಮಿನ ಮೂರನೆಯ ಮೂಲ
ವಿಶ್ವಾಸವಾಗಿದೆ. ಈ ವಿಶ್ವಾಸವೇ ಇಸ್ಲಾಮಿನ ಜೀವಾಳ. ಪವಿತ್ರ ಕುರ್‌ಆನಿನಲ್ಲಿ ಅಂತ್ಯ
ಕುರಿತು ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಅದರ ಯಾವ ಭೋದನೆಯೂ ಅಂತ್ಯ
ಕಲ್ಪನೆಯಿಂದ ಮುಕ್ತವಾಗಿಲ್ಲ. ಈ ವಾಸ್ತವಿಕತೆಯನ್ನು ಇಸ್ಲಾಮ್ ಸದಾ ಮಾನವರ ಮ
ಬಯಸುತ್ತದೆ.

ಪರಲೋಕ ವಿಶ್ವಾಸ ಮತ್ತು ಪರಲೋಕವನ್ನು ಸದಾ ಮುಂದಿರಿಸುವುದರ ಉ
ಅನೇಕರಿಗೆ ತಿಳಿದಿಲ್ಲ. ಇತರ ಧರ್ಮಗಳಲ್ಲಿ ಇಹಲೋಕವನ್ನು ತ್ಯಜಿಸಿ ಏಕಾಂತದಲ್ಲಿದ್ದು ಲೌ
ಜಂಜಡಗಳಿಂದ ವಿಮುಖಿನಾಗುವುದನ್ನು ವ್ಯಕ್ತಿಯ ಶ್ರೇಷ್ಠತೆ ಎಂದು ಭಾವಿಸಲಾಗುತ್ತದೆ.
ಮಿನ ದೃಷ್ಟಿಯಲ್ಲೂ ಲೋಕ ಪರಿತ್ಯಾಗವು ಮಹತ್ಕಾರ್ಯವೆಂದು ನಂಬುವವರಿದ್ದಾರೆ.
ಅದು ತಪ್ಪು ಕಲ್ಪನೆಯಾಗಿದೆ. ನಿಜವಾಗಿ ಲೋಕದಿಂದ ವಿರಕ್ತನಾಗುವುದು ಮಹಾ ತಪ್ಪಾ

ಪ್ರವಾದಿ ಮುಹಮ್ಮದ್‌ರವರು(ಸ) ಹೇಳಿದ್ದಾರೆ, "ಇಸ್ಲಾಮಿನಲ್ಲಿ ವೈರಾಗ್ಯವಿಲ್ಲ"
ಕುರ್‌ಆನಿನಲ್ಲಿ ಕ್ರೈಸ್ತ ಸನ್ಯಾಸಿಗಳ ಕುರಿತು ಅಲ್ಲಾಹನು ಹೇಳಿದ್ದಾನೆ,

"ಮತ್ತು ಸನ್ಯಾಸವನ್ನು ಅವರು ತಾವೇ ಆವಿಷ್ಕರಿಸಿಕೊಂಡರು, ನಾವು ಅದನ್ನು
ಮೇಲೆ ಕಡ್ಡಾಯಗೊಳಿಸಿರಲಿಲ್ಲ. ಆದರೆ ಅಲ್ಲಾಹನ ಸಂಪ್ರೀತಿಯ ಅಭಿಲಾಷೆಯಿಂದ
ಅವರೇ ಈ ನವೀನಾಚಾರವನ್ನು ಆರಂಭಿಸಿಕೊಂಡರು. ಆದರೆ ಅವರು ಅದನ್ನು ಪಾಲಿಸಬ
ರೀತಿಯಲ್ಲಿ ಪಾಲಿಸಲಿಲ್ಲ." (ಸೂರಃ ಅಲ್ ಹದೀದ

ಇಸ್ಲಾಮಿನಲ್ಲಿ ಪರಲೋಕ ವಿಶ್ವಾಸ ಮತ್ತು ಸದಾ ಪರಲೋಕವನ್ನೇ ಮುಂದಿಡು
ಉದ್ದೇಶವು ಇದಕ್ಕಿಂತ ಭಿನ್ನವಾಗಿದೆ. ಇಸ್ಲಾಮಿನ ಪ್ರಕಾರ ಮಾನವರಲ್ಲಿ ಪ್ರಮುಖ
ಗುಂಪುಗಳಿವೆ-

ಒಂದು, ಇಹಲೋಕವನ್ನೇ ಉದ್ದೇಶವಾಗಿರಿಸಿಕೊಂಡಿರುವಂತಹ ಗುಂಪು. ಇಂತ
ಇಹಲೋಕಕ್ಕಾಗಿಯೇ ಜೀವಿಸುತ್ತಾರೆ ಮತ್ತು ಇಹಲೋಕದ ಚಿಂತೆಯಿಂದಾಗಿಯೇ ಮಡಿಯ

ು ಸತ್ಕರ್ಮವನ್ನು ಮಾಡುವುದು ಕೂಡ ಇಹಲೋಕಕ್ಕಾಗಿಯೇ. ಇಹಲೋಕದ ಲಾಭಕ್ಕಾಗಿಯೇ ನಾಮಸ್ಮರಣೆ ಮಾಡುತ್ತಾರೆ. ಧಾರ್ಮಿಕತೆಯ ಸೋಗನ್ನು ಇಹಲೋಕಕ್ಕಾಗಿಯೇ ತ್ತಾರೆ. ಅವರ ದೃಷ್ಟಿಯಲ್ಲಿ ಇಹಲೋಕದ ಗೌರವಾದರ, ಲಾಭ ಮತ್ತು ಪ್ರಸಿದ್ಧಿಗಿಂತ ಾದ ಯಶಸ್ಸು ಇನ್ನೊಂದಿಲ್ಲ. ಅಂತಹವರು ಸೃಷ್ಟಿಕರ್ತ, ಪರಲೋಕ ಮತ್ತು ಧರ್ಮದ ೆ ವಿಶ್ವಾಸವಿರಿಸಿದರೂ ಇಲ್ಲದಿದ್ದರೂ ಒಂದೇ ಗುಂಪಿಗೆ ಸೇರಿದವರಾಗಿದ್ದಾರೆ. ಅವರನ್ನೇ ಕ ವಾದಿಗಳೆಂದು ಕರೆಯಲಾಗುತ್ತದೆ. ಪರಲೋಕ ವಿಜಯ ಮತ್ತು ಅಲ್ಲಾಹನ ್ರೀತಿಯನ್ನೇ ಮುಂದಿಟ್ಟುಕೊಂಡವರದ್ದು ಇನ್ನೊಂದು ಗುಂಪು. ಜೀವನದ ತಮ್ಮೆಲ್ಲಾ ಗಳಲ್ಲಿ ಅವರು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾರೆ. ಅವರು ಲೌಕಿಕ ಕೆಲಸಗಳನ್ನು ಬೆಟ್ಟ ಗುಡ್ಡಗಳಿಗೆ, ಕಾಡುಮೇಡುಗಳಿಗೆ ಪಲಾಯನ ಮಾಡುವುದಿಲ್ಲ. ಏಕಾಂತದ ಕಿನಲ್ಲಿ ತಮ್ಮ ಮುಖ ಮರೆಸುವುದೂ ಇಲ್ಲ. ಇಹಲೋಕದ ವ್ಯವಸ್ಥೆಗಳನ್ನು ಅವರು ನಿಭಾಯಿಸುತ್ತಾರೆ ಮತ್ತು ಅವುಗಳನ್ನು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವ ರ್ಗದಲ್ಲೇ ನಡೆಸುತ್ತಾರೆ. ಅವರು ತಮ್ಮ ಮಡದಿ, ಮಕ್ಕಳು, ಮನೆ, ಸಂತಾನ, ವ್ಯಾಪಾರ, ಕೆ, ವೈಜ್ಞಾನಿಕ ಸಂಶೋಧನೆ, ವೈಜ್ಞಾನಿಕ ಆವಿಷ್ಕಾರ, ಸರಕಾರ, ರಾಜಕಾರಣ ಮುಂತಾದ ಲೌಕಿಕ ಕಾರ್ಯಗಳನ್ನು ತಮ್ಮೊಡೆಯನ ಇಷ್ಟಾನುಸಾರವೇ ನಡೆಸುತ್ತಾರೆ. ಅವರು ಕೇವಲ ೋಕ ಯಶಸ್ಸನ್ನು ಮುಂದಿಟ್ಟು ಕಾರ್ಯವೆಸಗುತ್ತಾರೆ. ಅವರು ಯಾವ ಬೆಲೆ ತೆತ್ತಾದರೂ ಹನ ಸಂಪ್ರೀತಿ ಗಳಿಸ ಬಯಸುತ್ತಾರೆ. ಅಲ್ಲಾಹನ ಸಂಪ್ರೀತಿಗೆ ವಿರುದ್ಧವಾಗಿರುವ ಯಾವ ಿಗೂ ಅವರ ದೃಷ್ಟಿಯಲ್ಲಿ ಯಾವ ಬೆಲೆಯೂ ಇಲ್ಲ. ಅಲ್ಲಾಹನಿಗೆ ಇಷ್ಟವಾದ ರ್ಗಗಳು ಮಾತ್ರ ಅವರಿಗೆ ಇಷ್ಟವಾಗುತ್ತವೆ. ಅವರಿಗೆ ಇಂತಹ ಕಾರ್ಯಗಳನ್ನು ಮಾಡುವ ಪು ಹೆಚ್ಚಿರುತ್ತದೆ. ಲೌಕಿಕ ವಾದಿಗಳಿಗೆ ಸಂಪತ್ತುಗಳಿಸುವ ನಿಟ್ಟಿನಲ್ಲಿ ಇರುವಂತಹ ಪುಗಳಿಗಿಂತಲೂ ಮಿಗಿಲಾದ ಹುರುಪು ಅಲ್ಲಾಹನ ಆಜ್ಞೋಲ್ಲಂಘನೆ ಮತ್ತು ಬಂಡಾಯವನ್ನು ು ಕ್ಷಣ ಮಾತ್ರಕ್ಕೂ ನೋಡಿ ಸುಮ್ಮನಿರಲಾರರು. ಇಂತಹ ಸಂದರ್ಭದಲ್ಲಿ ತಮ್ಮ ುನ ನಿಷ್ಠೆಯ ಹಕ್ಕನ್ನು ನಿಭಾಯಿಸದಿದ್ದರೆ ಆತನ ಕ್ರೋಧಕ್ಕೆ ತುತ್ತಾಗಬೇಕಾದೀತೆಂದು ು ತಿಳಿದಿರುತ್ತಾರೆ. ಇಂತಹ ಸಂದರ್ಭದಲ್ಲಿ ದೌರ್ಬಲ್ಯವನ್ನು ಪ್ರದರ್ಶಿಸುವುದು ೋಕದ ಮಹಾ ವೈಫಲ್ಯವಾಗಿದೆ ಎಂದವರು ಭಾವಿಸುತ್ತಾರೆ. ನರಕಾಗ್ನಿ ಮತ್ತು ೋಕದ ಶಿಕ್ಷೆಯಿಂದ ಮುಕ್ತರಾಗಲು ಅವರು ಇಹಲೋಕದ ಎಲ್ಲ ಕಷ್ಟ ಕಾರ್ಪಣ್ಯಗಳನ್ನು ವಿಸಲು ಸನ್ನದ್ಧರಾಗಿರುತ್ತಾರೆ. ವಿಶ್ವದ ನೈಜ ಒಡೆಯನ ಕರ್ತವ್ಯನಿಷ್ಠ ಸಿಪಾಯಿಗಳಂತೆ ುತ್ತಾರೆ. ತಮ್ಮ ಯಾವುದೇ ಮಾತು ಅಥವಾ ಕೃತಿಯಿಂದಾಗಿ ಅಲ್ಲಾಹನೊಂದಿಗೆ ದ ಕರ್ತವ್ಯ ನಿಷ್ಠೆಯ ಒಪ್ಪಂದಕ್ಕೆ ಧಕ್ಕೆಯುಂಟಾಗುವುದನ್ನು ಅವರೆಂದೂ ಸಹಿಸಲಾರರು. ್ಕಗಿ ಅವರು ತಮ್ಮ ಸರ್ವಸ್ವವನ್ನೇ ತ್ಯಾಗ ಮಾಡುತ್ತಾರೆ. ಪ್ರಾಣತ್ಯಾಗಕ್ಕೂ ಅವರು ರಾಗಿರುತ್ತಾರೆ. ತಮ್ಮ ಕರ್ತವ್ಯ ನಿಷ್ಠೆಯ ಸಾಕ್ಷ್ಯವಹಿಸಲು ಪ್ರಾಣತ್ಯಾಗ ಮಾಡುವುದನ್ನು ು ಮಹಾ ಯಶಸ್ಸೆಂದು ಭಾವಿಸುತ್ತಾರೆ. ಈ ಯಶಸ್ಸಿನ ಬಯಕೆಯೇ ಸತ್ಯವಿಶ್ವಾಸದ ಳ. ಅವರೇ ನೈಜ ವಿಜಯಿಗಳು ಮತ್ತು ಶ್ರೇಷ್ಠ ಪದವಿಯಲ್ಲಿರುವವರು. ಶ್ರೇಷ್ಠತೆಯ

ನೈಜ ಮಾನದಂಡವು ಪರಲೋಕದ ಯಶಸ್ಸಾಗಿದೆ. ಪರಲೋಕದ ಯಶಸ್ಸನ್ನು ಗಳಿಸಿದ ಶ್ರೇಷ್ಠರು ಮತ್ತು ಅಲ್ಲಿ ಪರಾಜಿತರಾದವರೇ ನಿಂದ್ಯರು ಮತ್ತು ನೀಚರಾಗಿದ್ದಾರೆ.

ಇಹಲೋಕದಲ್ಲಿ ಅಲ್ಲಾಹನ ಧರ್ಮದಲ್ಲಿ ನೆಲೆ ನಿಲ್ಲಲು ಬಹಳ ಧೈರ್ಯ ಬೇಕ ಆ ಮಾರ್ಗದಲ್ಲಿ ನಡೆಯುವಾಗ ಸಾವಿರಾರು ಅಡ್ಡಿ ಆತಂಕಗಳನ್ನೆದುರಿಸಬೇಕಾಗುತ್ತದೆ. ಮೊದಲು ಮಾನವನ ಆತ್ಮವೇ ಅವನ ವಿರುದ್ಧ ನಿಲ್ಲುತ್ತದೆ. ಮಾನವನ ಮನಸ್ಸು ಸುಲಭದಲ್ಲಿ ಸಿಗುವಂತಹ ಲಾಭ ಮತ್ತು ಸುಖ ಸೌಲಭ್ಯಗಳಿಗಾಗಿ ಹಾತೊರೆಯು ಆದ್ದರಿಂದ ಸನ್ಮಾರ್ಗದಲ್ಲಿ ಮುಂದುವರಿಯುವುದು ಸುಲಭ ಕಾರ್ಯವಲ್ಲ. ಅಲ ಧರ್ಮದ ಧ್ವಜವಾಹಕನಾಗಿರುವ ನಾನು, ದೇವನ ಹೊರತು ಇತರೆಲ್ಲರ ವಿರುದ್ಧ ಬಂ ಹೂಡಿದ್ದೇನೆ, ಅಲ್ಲಾಹ್ ಮತ್ತು ಆತನ ಪ್ರವಾದಿಯ ಅನುಸರಣೆಯ ಹೊರತು ಇತ ಅನುಸರಣೆಯನ್ನು ಧಿಕ್ಕರಿಸುತ್ತೇನೆ ಮತ್ತು ಶ್ರೇಷ್ಠತೆಯ ಇತರೆಲ್ಲಾ ವಾದ ಅಲ್ಲಗಳೆಯುತ್ತೇನೆಂದು ಘೋಷಿಸಿದಾಗ ಜಗತ್ತಿನೆಲ್ಲೆಡೆ ಇರುವ ದುರಹಂಕಾರಿಗಳು* ವಿರುದ್ಧ ನಿಲ್ಲುವರು. ಅದು ಅವನಿಗೆ ಕಠಿಣ ಪರೀಕ್ಷೆಯ ಸಮಯವಾಗಿರುತ್ತದೆ. ಏಕೆ ಒಂದೆಡೆ ಅಲ್ಲಾಹನ ಧರ್ಮ ಮತ್ತದರ ಬೇಡಿಕೆಗಳಿರುತ್ತವೆ, ಮತ್ತೊಂದೆಡೆ ತನ್ನ ಮತ್ತು ಲೋಕದ ಜನರ ಒತ್ತಡಗಳಿರುತ್ತದೆ. ಒಂದೆಡೆ ಅವನು ಅಲ್ಲಾಹನೇ ಮಹ ಎಂಬ ಘೋಷಣೆಯನ್ನು ಮೊಳಗಿಸಿ ಲೋಕದ ಇತರೆಲ್ಲರ ಶ್ರೇಷ್ಠತೆಯನ್ನು ತುಚ್ಛಗೊಳಿಸು ಇನ್ನೊಂದೆಡೆ ಲೋಕದಲ್ಲಿ ತಾವೇ ಶ್ರೇಷ್ಠರಾಗಿರುವವರು ಎಂದು ವಾದಿಸುವವರು ಪ್ರಾಣದ ಹಿಂದೆ ಬೀಳುತ್ತಾರೆ. ಇಂತಹ ಸಂದರ್ಭದಲ್ಲಿ ಅವರು ಧೈರ್ಯಗು ಸನ್ಮಾರ್ಗದಲ್ಲಿ ಸ್ಥಿರವಾಗಬೇಕಾದರೆ, ಅವನಲ್ಲಿ ಪರಲೋಕದ ಕುರಿತು ತಿಳುವಳಿಕೆ ಇರ ಮಾತ್ರವಲ್ಲ, ಅವನಿಗೆ ಪರಲೋಕದ ಮೇಲೆ ದೃಢವಾದ ವಿಶ್ವಾಸ ಕೂಡ ಈ ಸಂದರ್ಭ ಅತ್ಯವಶ್ಯಕವಾಗಿದೆ. ಹಾರ್ದಿಕವಾದ ಮತ್ತು ಅಚಲವಾದ ವಿಶ್ವಾಸ. ಈ ವಿಶ ದೃಢವಾಗಿರುವಷ್ಟು ಇಸ್ಲಾಮಿನ ಮಾರ್ಗದಲ್ಲಿ ನೆಲೆ ನಿಲ್ಲುವುದು ಅವನಿಗೆ ಹೆಚ್ಚು ಸುಲಭವಾ

ಅಲ್ಲಾಹನ ಅಸ್ತಿತ್ವ ಮತ್ತು ಗುಣವಿಶೇಷತೆಗಳ ಮೇಲೆ, ಪ್ರವಾದಿ ಮುಹಮ್ಮದ್‌ರ ಪ್ರವಾದಿತ್ವದ ಮೇಲೆ ಹಾಗೂ ಪರಲೋಕದ ಮೇಲೆ ವಿಶ್ವಾಸವಿರಿಸಿದ ನಂತರ, ಅಲ್ಲಾ ಪವಿತ್ರ ಕುರ್‌ಆನಿನಲ್ಲಿ ಮತ್ತು ಪ್ರವಾದಿವರ್ಯರು(ಸ) ತಮ್ಮ ವಚನಗಳಲ್ಲಿ ತಿಳಿಸಿದ ಪ್ರತಿಯೊಂದು ಮಾತಿನಲ್ಲಿ ವಿಶ್ವಾಸವಿರಿಸುವುದು ಅನಿವಾರ್ಯವಾಗುತ್ತದೆ. ಆ ಪೈಕಿ ವಿಷಯಗಳು ಬಹಳ ಮಹತ್ವಪೂರ್ಣವಾಗಿವೆ. ಮುಸ್ಲಿಮನಾಗಬೇಕಾದರೆ ಅವುಗಳ ವಿಶ್ವಾಸವಿರಿಸುವುದು ಅನಿವಾರ್ಯ-

1. ಪವಿತ್ರ ಕುರ್‌ಆನಿಗಿಂತ ಮುಂಚೆ ಮಾನವನ ಮಾರ್ಗದರ್ಶ ಅವತೀರ್ಣವಾದಂತಹ ಎಲ್ಲಾ ಗ್ರಂಥಗಳಲ್ಲಿ ವಿಶ್ವಾಸವಿರಿಸುವುದು- ಉದಾರಣೆಗೆ ತೌ

---

* ಅರ್ಥಾತ್ ಮಾನವರನ್ನು ತಮ್ಮ ಮಹಾನತೆಯ ಎದುರು ಮಣಿಸ ಬಯಸುವ ವ್ಯಕ್ತಿಗಳು. ಅವರು ಲೋಕದ ಆಡಳಿತ ಪ್ರಭೃತಿಗಳಾಗಿರಬಹುದು, ಸಮುದಾಯ ನಾಯಕರಾಗಿರಬ ಪಂಡಿತ, ಪಾದ್ರಿ, ಮುಂತಾದವರೂ ಆಗಿರಬಹುದು.

ಬೂರ್, ಇಂಜೀಲ್ ಇತ್ಯಾದಿ.

ದುರದೃಷ್ಟವಶಾತ್ ಈ ಗ್ರಂಥಗಳು ಇಂದು ಅದರ ನೈಜ ಸ್ಥಿತಿಯಲ್ಲಿ ಅಸ್ತಿತ್ವದಲ್ಲಿಲ್ಲ. ರ ಅನುಯಾಯಿಗಳು ಅದರಲ್ಲಿ ತಮ್ಮದೇ ಆದ ಅನೇಕ ವಿಚಾರಗಳನ್ನು ಮಿಶ್ರಗೊಳಿಸಿದ್ದಾರೆ. ದ್ದರಿಂದ ಅವುಗಳಲ್ಲಿ ಕುರ್‌ಆನಿನ ಬೋಧನೆಗಳಿಗೆ ವಿರುದ್ಧವಲ್ಲದ ವಿಚಾರಗಳು ಮಾತ್ರವೇ ಬಲರ್ಹವಾಗಿವೆ.

2. ಮಾನವರ ಮಾರ್ಗದರ್ಶನಕ್ಕಾಗಿ ಅಲ್ಲಾಹನಿಂದ ಕಳುಹಿಸಲ್ಪಟ್ಟ ಎಲ್ಲಾ ಪ್ರವಾದಿಗಳ ಲೂ ವಿಶ್ವಾಸವಿರಿಸುವುದು, ಅವರಲ್ಲಿ ಕೆಲವರ ಹೆಸರುಗಳನ್ನು ಪವಿತ್ರ ಕುರ್‌ಆನ್ ಸ್ತಾಪಿಸಿದೆ. ಆದರೆ ಅವುಗಳ ಹೊರತಾಗಿಯೂ ಹಲವಾರು ಪ್ರವಾದಿಗಳು ಕಳುಹಿಸಲ್ಪಟ್ಟಿದ್ದಾರೆ.

3. ವಿಶ್ವದ ವ್ಯವಸ್ಥೆಯನ್ನು ನೋಡಿಕೊಳ್ಳಲಿಕ್ಕಾಗಿ ಅಲ್ಲಾಹನು ಪ್ರಕಾಶದಿಂದ ವಚರರನ್ನು ಸೃಷ್ಟಿಸಿದ್ದಾನೆ. ದೇವಚರರು ಅಲ್ಲಾಹನ ಆಜ್ಞೆಯ ಪ್ರಕಾರವೇ ಕಾರ್ಯವೆಸಗುತ್ತಾರೆ. ಮ್ಮಿಷ್ಟದಂತೆ ಯಾವುದೇ ಕೆಲಸವನ್ನು ಅವರು ಮಾಡುವಂತಿಲ್ಲ. ಕೇವಲ ಅಲ್ಲಾಹನ ಜ್ಞೆಗಳನ್ನು ಪಾಲಿಸುತ್ತಾರೆ. ದೇವಚರರ ಬಗ್ಗೆ ಅಲ್ಲಾಹನು ಮತ್ತು ಆತನ ಪ್ರವಾದಿಯವರು(ಸ) ಸಿದಂತಹ ವಿಷಯಗಳು ಮಾತ್ರ ನಮಗೆ ತಿಳಿದಿವೆ. ನಾವು ದೇವಚರರನ್ನು ನೋಡಲು ಧ್ಯವಿಲ್ಲ. ಅವರಿಂದ ನಮಗೇನೂ ಸಹಾಯ ದೊರೆಯಲಾರದು. ಅವರಿಂದ ಯಾವುದೇ ರೀಕ್ಷೆ ಇರಿಸುವುದು ಮತ್ತು ಏನನ್ನಾದರೂ ಅಪೇಕ್ಷಿಸುವುದು, ಅಕ್ಷರಶಃ ತಪ್ಪು. ಅವರು ವಲ ಅಲ್ಲಾಹನ ಆಜ್ಞಾಪಾಲಕರಾಗಿರುತ್ತಾರೆ ಮತ್ತು ಅಲ್ಲಾಹನು ಆಜ್ಞಾಪಿಸಿದಂತಹ ಸಗಳನ್ನು ಮಾತ್ರ ಮಾಡಲು ಶಕ್ತರಾಗಿದ್ದಾರೆ. ದೇವಚರರ ಅಸ್ತಿತ್ವವನ್ನು ನಂಬಿ ಅವರ ಅಲ್ಲಾಹನು ಮತ್ತು ಆತನ ಪ್ರವಾದಿಯವರು(ಸ) ತಿಳಿಸಿದ ವಿಷಯಗಳಲ್ಲಿ ವಿಶ್ವಾಸವಿರಿಸುವುದು ವಿಶ್ವಾಸದ ಭಾಗವಾಗಿದೆ.

4. ಲೋಕದಲ್ಲಿ ಸಂಭವಿಸುವುದೆಲ್ಲವೂ ಅಲ್ಲಾಹನ ಆಜ್ಞೆಗಳಿಗನುಸಾರ ಮತ್ತು ಆತನ ಮಕ್ಕನುಸಾರವಾಗಿ ನಡೆಯುತ್ತದೆ. ಆತನ ಇಚ್ಛೆ ಮತ್ತು ಆಜ್ಞೆಗೆ ವಿರುದ್ಧವಾಗಿ ಯಾವ ಸವೂ ನಡೆಯಲು ಸಾಧ್ಯವಿಲ್ಲ. ಇದೇ 'ದೇವ ವಿಧಿ'ಯಾಗಿದೆ. ಎಲ್ಲವೂ ಅಲ್ಲಾಹನ ಯಿಂದಾಗಿ ಸಂಭವಿಸುತ್ತದೆಂಬ ನಂಬಿಕೆಯಿಂದ ಒಬ್ಬ ಮುಸ್ಲಿಮನು ಆಲ್ಲಾಹನು ಪಾಲಿಸಿರುವುದರ ಬಗ್ಗೆ ಸಂತುಷ್ಟನಾಗಿರುತ್ತಾನೆ. ಪ್ರತಿಕ್ಷಣವೂ ಅಲ್ಲಾಹನ ಆಜ್ಞೆಗಳನ್ನು ಸರಿಸಲು ಮತ್ತು ಆತನು ನೀಡಿದಂತಹ ಶಕ್ತಿಯೊಂದಿಗೆ ಕಾರ್ಯವೆಸಗಲು ಸದಾ ದ್ಧನಾಗಿರುತ್ತಾನೆ.

***

ಸತ್ಕರ್ಮ

ಸತ್ಯವಿಶ್ವಾಸದ ನಂತರ ಸತ್ಕರ್ಮವು ಇಸ್ಲಾಮಿನ ಎರಡನೆಯ ಮುಖ್ಯ ಅಂಗವಾಗಿ ಇದನ್ನು ಸಾಮಾನ್ಯವಾಗಿ ಎಲ್ಲ ಒಳ್ಳೆಯ ಕಾರ್ಯಗಳು ಎಂದು ಭಾವಿಸಲಾಗುತ್ತದೆ. ಆ ಸಾಮಾನ್ಯ ಭಾಷೆಯಲ್ಲಿ ಹೇಳಲಾಗುವ ಉತ್ತಮ ಕರ್ಮಗಳಿಗಿಂತ ಸತ್ಕರ್ಮ ಅಥವಾ 'ಅವ ಸಾಲಿಹ್' ಎಂಬ ಇಸ್ಲಾಮೀ ಪಾರಿಭಾಷಿಕದ ಅರ್ಥ ಹೆಚ್ಚು ವಿಶಾಲವಾಗಿದೆ. ಏಕೆಂ ಇದೊಂದು ಧಾರ್ಮಿಕ ಪಾರಿಭಾಷಿಕ.

ಅಲ್ಲಾಹನ ಕಾನೂನು ಮತ್ತು ಅವನ ಮಾರ್ಗದರ್ಶನಕ್ಕೆ ಬದ್ಧವಾಗಿ ಹಾಗೂ ಕೇ ಅವನ ಸಂಪ್ರೀತಿಗಾಗಿ ಮಾಡಲಾದ ಪ್ರತಿಯೊಂದು ಕಾರ್ಯವೂ 'ಸತ್ಕರ್ಮ' ಎನಿಸಿಕೊಳ್ಳುತ್ತ ಸತ್ಯವಿಶ್ವಾಸದ ನಂತರ ಧರ್ಮದಲ್ಲಿ ಸತ್ಕರ್ಮಕ್ಕೆ ಬಹಳ ಪ್ರಾಮುಖ್ಯವಿದೆ.

ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ತನ್ನ ಸಚ್ಚರಿತ ದಾಸರಿಗೆ ಅನೇಕ ಭರವಸೆಗಳ ನೀಡಿದ್ದಾನೆ. ಈ ಭರವಸೆಗಳು ಲೋಕದ ಉನ್ನತಿಗೆ ಮತ್ತು ಪರಲೋಕದ ವಿಜಯ ಸಂಬಂಧಿಸಿದ್ದಾಗಿವೆ. ಈ ಪೈಕಿ ಪ್ರತಿಯೊಂದು ಭರವಸೆಗೂ ಸತ್ಯವಿಶ್ವಾಸದ ನಂ ಸತ್ಕರ್ಮದ ಶರ್ತವೊಡ್ಡಲಾಗಿದೆ. ಎಲ್ಲೆಡೆಯೂ 'ಸತ್ಯವಿಶ್ವಾಸ'ದ ಜೊತೆಗೆ 'ಸತ್ಕರ್ಮ'ವ ಪ್ರಸ್ತಾಪಿಸಲಾಗಿದೆ. ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕದ ವಿಜಯವನ್ನು ಬಯಸ ವ್ಯಕ್ತಿಯು ಸತ್ಕರ್ಮವೇನೆಂದು ತಿಳಿಯಬೇಕಾಗಿದೆ. ಸತ್ಕರ್ಮದಿಂದ ಮುಕ್ತವಾದ ಜೀ ವಿಫಲ ಜೀವನವಾಗಿದೆ.

ಮೇಲೆ ಪ್ರಸ್ತಾಪಿಸಲಾಗಿರುವ 'ಸತ್ಕರ್ಮ'ದ ವಿವರಣೆಯ ಕುರಿತು ಮತ್ತೊಮ್ಮೆ ಆಲೋ ನೋಡಿ. ಅದರ ಪ್ರಕಾರ ಈ ಕೆಳಗಿನ ಕರ್ಮಗಳೆಲ್ಲವೂ ಸತ್ಕರ್ಮವಾಗಿದೆ-

1. ಅದು ಅಲ್ಲಾಹನು ವ್ಯಕ್ತಪಡಿಸಿರುವ ಕಾನೂನುಗಳಿಗೆ ಬದ್ಧವಾಗಿರಬೇಕು.
2. ಅಲ್ಲಾಹನ ಸಂಪ್ರೀತಿ ಮಾತ್ರವೇ ಅದರ ಉದ್ದೇಶವಾಗಿರಬೇಕು.

ಇಸ್ಲಾಮ್, ಧರ್ಮವನ್ನು ಲೋಕದಿಂದ ಪ್ರತ್ಯೇಕಿಸುವುದಿಲ್ಲ. ಇಸ್ಲಾಮಿನ ಪ್ರಕಾರ ಕೆ ಕೆಲಸಗಳನ್ನು ಧಾರ್ಮಿಕ ಕೆಲಸ ಮತ್ತೆ ಕೆಲವನ್ನು ಲೌಕಿಕ ಕೆಲಸವೆಂದು ವಿಭಜಿಸುವ ತಪ್ಪು. ಬೇರೆ ಧರ್ಮದಲ್ಲಿ ಪೂಜೆ ಮತ್ತು ಉಪಾಸನೆ ಹಾಗೂ ಕೆಲವು ಧಾ

ಯೆಗಳನ್ನಷ್ಟೇ ಧಾರ್ಮಿಕ ವೃತ್ತಿಯೆಂದು ಭಾವಿಸಲಾಗುತ್ತದೆ. ಅದಕ್ಕೆ ಹೊರತಾದ ಕೌಟುಂಬಿಕ ೀವನ, ವ್ಯಾಪಾರ, ನೌಕರಿ, ರಾಜಕೀಯ ಮತ್ತು ಆಡಳಿತ ಇತ್ಯಾದಿಗಳನ್ನು ಲೌಕಿಕ ಲಸವೆಂದು ಭಾವಿಸಲಾಗುತ್ತದೆ. ಆದರೆ ಇಸ್ಲಾಮಿನ ದೃಷ್ಟಿಯಲ್ಲಿ ಈ ಭಾವನೆಯು ಮಹಾ ಪ್ಪು. ಈ ತಪ್ಪು ಕಲ್ಪನೆಯಿಂದಾಗಿ ಜನರು ಕೆಲವು ಕೆಲಸಗಳಲ್ಲಿ ಧರ್ಮದ ಅನುಸರಣೆ ಾಡುತ್ತಾರೆ ಹಾಗೂ ಜೀವನದ ಇತರ ಕೆಲಸಗಳಲ್ಲಿ ಧರ್ಮದಿಂದ ಮುಕ್ತರಾಗಿರುತ್ತಾರೆ. ಲವೊಮ್ಮೆ ಅವರು ತಮ್ಮ ಸ್ವೇಚ್ಛೆಯನ್ನು ಅನುಸರಿಸುತ್ತಾರೆ, ಮತ್ತೆ ಕೆಲವೊಮ್ಮೆ ಇತರ ಾನವರನ್ನು ಅನುಸರಿಸುತ್ತಾರೆ. ಒಮ್ಮೆ ಒಂದು ಮಾರ್ಗವನ್ನು ಅನುಸರಿಸಿದರೆ ಇನ್ನೊಮ್ಮೆ ೇರೊಂದನ್ನು ಅನುಸರಿಸುತ್ತಾರೆ. ಈ ಪಿಡುಗು ಇಂದು ಸರ್ವ ವ್ಯಾಪಕವಾಗಿದೆ. ಒಳ್ಳೆಯ ಶಿಕ್ಷಿತ ವ್ಯಕ್ತಿಗಳು ಇಂತಹ ತಪ್ಪು ಕಲ್ಪನೆಗೆ ಈಡಾಗಿದ್ದಾರೆ. ಎಲ್ಲಾ ವಿಷಯಗಳಲ್ಲಿ ರ್ಮವನ್ನು ಎಳೆದು ತರುವುದು ಬೇಡ ಎಂದು ಅವರು ಜನರಿಗೆ ಹಿತೋಪದೇಶ ನೀಡುತ್ತಾರೆ. ಮ್ಮ ಜೀವನದ ಎಲ್ಲಾ ವ್ಯವಹಾರಗಳನ್ನು ಧರ್ಮದ ಬೆಳಕಿನಲ್ಲಿ ನಿರ್ಧರಿಸುವುದನ್ನು ಮಹಾ ಪಾಯವೆಂಬಂತೆ ಅವರು ಪ್ರಸ್ತುತ ಪಡಿಸುತ್ತಾರೆ.

ಇತರ ಧರ್ಮಗಳ ಬಗ್ಗೆ ಹೇಳುವುದಾದರೆ, ಅವರಲ್ಲಿಯೂ ಇದೇ ರೀತಿಯ ಧೋರಣೆ ದೆಯೋ ಇಲ್ಲವೋ ಎಂದು ನಾವು ಹೇಳಲಾರೆವು. ಕೆಲವು ಧರ್ಮಗಳಲ್ಲಿ ಲೌಕಿಕ ರ್ಯಗಳು ಮತ್ತು ಧಾರ್ಮಿಕ ಕಾರ್ಯಗಳು ಎಂಬ ಎರಡು ಭಾಗಗಳಿರಬಹುದು ಮತ್ತು ಧರ್ಮಗಳ ನೇತಾರರು ತಮ್ಮ ಅನುಯಾಯಿಗಳಿಗೂ ಅದನ್ನೇ ಬೋಧಿಸುತ್ತಿರಬಹುದು. ದರೆ ಇಸ್ಲಾಮ್ ಧರ್ಮಕ್ಕೆ ಸಂಬಂಧಿಸಿದಂತೆ ಈ ಮಾತು ಸರಿಯಲ್ಲ. ಮಾನವ ೀವನವನ್ನು ಈ ರೀತಿ ವಿಭಜಿಸುವ ಅವಕಾಶವೇ ಇಸ್ಲಾಮಿನಲ್ಲಿಲ್ಲ. ಈ ವಿಷಯದಲ್ಲಿ ಸ್ಲಾಮಿನ ನಿಯಮಗಳು ಬಹಳ ನೇರ ಮತ್ತು ಸ್ಪಷ್ಟವಾಗಿವೆ. ಮಾನವನ ಸೃಷ್ಟಿಕರ್ತನು ಲ್ಲಾಹನಾಗಿದ್ದು ಆತನೇ ಈ ಜೀವನವನ್ನು ನೀಡಿದ್ದಾನೆಂಬುದನ್ನು ಇಸ್ಲಾಮ್ ಕಲಿಸುತ್ತದೆ. ಕೆಲಸದಲ್ಲಿ ಆತನಿಗಾವ ಸಹಭಾಗಿಗಳೂ ಇಲ್ಲ.

ಮಾನವ ಕೇವಲ ಅಲ್ಲಾಹನ ದಾಸನಾಗಿರುವನೇ ಹೊರತು ಇನ್ನಾರ ದಾಸನೂ ಅಲ್ಲ. ದ್ದರಿಂದಲೇ ಮಾನವ ತನ್ನ ಇಡೀ ಜೀವನದಲ್ಲಿ ಕೇವಲ ಆ ಒಡೆಯನ ಅನುಸರಣೆಯನ್ನು ಾಡಬೇಕೆಂದು ಆಜ್ಞಾಪಿಸಲಾಗಿದೆ. ಒಬ್ಬ ದಾಸನಿಗೆ ಅನೇಕ ಒಡೆಯರಿರಲು ಸಾಧ್ಯವಿಲ್ಲ. ಲ್ಲಾಹನು ಹೇಳುತ್ತಾನೆ,

"ಓ ಸತ್ಯವಿಶ್ವಾಸಿಗಳೇ ನೀವು ಸಂಪೂರ್ಣ ಗಿ ಇಸ್ಲಾಮಿನೊಳಗೆ ಸೇರಿಕೊಳ್ಳಿರಿ"

يَاأَيُّهَا الَّذِينَ آمَنُوا ادْخُلُوا فِي السِّلْمِ كَافَّةً

(ಸೂರಃ ಅಲ್‌ಬಕರ- 208)

ಅಲ್ಲಾಹನಿರುವಾಗ ಬೇರಾವ ಆಜ್ಞಾಧಿಕಾರಿ ಮತ್ತು ಒಡೆಯನ ಅವಶ್ಯಕತೆಯಿಲ್ಲ.

"ಅನೇಕ ಭಿನ್ನ ಭಿನ್ನ ಪ್ರಭುಗಳು ಲೇಸೋ ಥವಾ ಸರ್ವ ಸಮರ್ಥನಾದ ಏಕ ಅಲ್ಲಾಹನೋ?"

ءَأَرْبَابٌ مُتَفَرِّقُونَ خَيْرٌ أَمِ اللهُ الْوَاحِدُ الْقَهَّارُ -

(ಸೂರಃ ಯೂಸುಫ್-39)

ಪವಿತ್ರ ಕುರ್‌ಆನಿನ ಇಂತಹ ಅನೇಕ ಸೂಕ್ತಗಳನ್ನು ಮುಸಲ್ಮಾನನು ತನ್ನ ಜೀವನ ಎಲ್ಲಾ ಕೆಲಸಗಳನ್ನು ಅಲ್ಲಾಹನ ಆಜ್ಞಾನುಸಾರ ಅವನ ನಿಯಮಗಳಿಗೆ ಬದ್ಧವ ಮಾಡಬೇಕೆಂದು ಬಹಳ ಸ್ಪಷ್ಟವಾಗಿ ಸಾರಿ ಹೇಳಲಾಗಿದೆ. ಮಾನವನ ಸೃಷ್ಟಿಯ ಮೂ ಉದ್ಧೇಶವೇ ದೇವಾನುಸರಣೆಯಾಗಿದೆ ಎಂದೂ ಪವಿತ್ರ ಕುರ್‌ಆನ್ ಹೇಳುತ್ತದೆ-

"ನಾನು ಜಿನ್ನ್‌ಗಳನ್ನೂ, ಮನುಷ್ಯರನ್ನೂ ಸೃಷ್ಟಿಸಿರುವುದು ನನ್ನ ದಾಸ್ಯ ಮತ್ತು ಆರಾಧನೆ ಗಾಗಿಯೇ ಹೊರತು ಬೇರಾವುದೇ ಕಾರ್ಯಕ್ಕಾಗಿ ಅಲ್ಲ. ನಾನು ಅವರಿಂದ ಜೀವನಾಧಾರವನ್ನೇನೂ ಬಯಸುವುದಿಲ್ಲ ಮತ್ತು ಅವರು ನನಗೆ ಉಣಿಸಬೇಕೆಂದೂ ಅಪೇಕ್ಷಿಸುವುದಿಲ್ಲ."

(ಸೂರಃ ಅದ್ದಾರಿಯಾತ್- 56,57)

مَاخَلَقْتُ الْجِنَّ
وَالْإِنْسَ إِلَّا لِيَعْبُدُوْنِ ۝
مَا أُرِيْدُ مِنْهُمْ مِّنْ
رِّزْقٍ وَّمَا أُرِيْدُ أَنْ يُّطْعِمُوْنِ -

ಜೀವನವನ್ನು ದಯಪಾಲಿಸುವವನು ಒಬ್ಬನೇ ಆಗಿದ್ದು, ಜೀವನೋಪಾಯದ ವಸ್ತುಗಳ ಆತನೇ ದಯಪಾಲಿಸುತ್ತಾನೆ. ಹಾಗಿರುವಾಗ ಸಮಸ್ತ ಜೀವನವು ಅವನಿಗೇ ಮುಡಿಪಾಗಿರಬೇಕಾಗಿ

ಮಾನವನ ಸಂಪೂರ್ಣ ಜೀವನವು ಅಲ್ಲಾಹನ ದಾಸ್ಯ- ಆರಾಧನೆಗಾಗಿ ಆಗಿ ಮಾನವನ ಸೃಷ್ಟಿಯ ಉದ್ದೇಶವೇ ಆತನ ದಾಸ್ಯ-ಆರಾಧನೆಯಾಗಿದೆ. ಇದರ ಅರ್ಥ ಮಾನವ ಸದಾ ನಮಾಝ್ ನಿರ್ವಹಿಸುತ್ತಾ, ಉಪವಾಸ ಆಚರಿಸುತ್ತಾ, ಅಂತಹ ಇತರ ಆರಾಧ ಕರ್ಮಗಳನ್ನು ನಿರ್ವಹಿಸುವುದರಲ್ಲೇ ಕಾಲವನ್ನು ಕಳೆಯಬೇಕೆಂದೇ? ಖಂಡಿತ ಇಲ್ಲ, ಇ ದುಃಸ್ಸಾಧ್ಯ, ಮಾತ್ರವಲ್ಲ ಅಲ್ಲಾಹನು ಅಂತಹ ಆಜ್ಞೆಯನ್ನು ನೀಡಲು ಸಾಧ್ಯವಿಲ್ಲ. ಮಾನ ಸಂಪೂರ್ಣ ಜೀವನವು 'ಸತ್ಕರ್ಮ'ವಾಗಿರಬೇಕೆಂಬುದೇ ಇದರ ತಾತ್ಪರ್ಯ. ಮಾನವನ ಎ ಕೆಲಸಗಳು ಆರಾಧನೆಯಾಗಿ ಮಾರ್ಪಡಬೇಕು. ಅವನ ನಿದ್ರೆ, ಎಚ್ಚರ, ನಡೆ-ನು ಜೀವನಾಧಾರದ ಗಳಿಕೆ, ಪತ್ನಿ ಮಕ್ಕಳ ಪರಿಪಾಲನೆ, ರಾಜ್ಯಭಾರದಲ್ಲಿ ಆಸಕ್ತಿ, ರಾಜಕಾರಣದ ಪಾತ್ರ ಮತ್ತು ಸರಕಾರದ ವ್ಯವಸ್ಥೆ ಮಾಡುವುದು ಮುಂತಾದವುಗಳೆಲ್ಲವೂ 'ಸತ್ಕರ್ಮ'ವಾಗಿರಬೇ ಮೇಲ್ನೋಟಕ್ಕೆ ಲೌಕಿಕ ಕೆಲಸಗಳಂತೆ ತೋರುವ ಈ ಎಲ್ಲ ಕೆಲಸಗಳನ್ನು ಅಲ್ಲಾಹ ಆಜ್ಞಾಪಿಸಿದ ರೀತಿಯಲ್ಲಿ ನಿರ್ವಹಿಸಬೇಕು ಮತ್ತು ಅದಕ್ಕೆ ಪ್ರತಿಫಲವಾಗಿ ಆತನ ಸಂಪ್ರೀತಿಯ ಬಯಸಬೇಕು. ಹಾಗೆ ಮಾಡಿದಾಗ ಪೂರ್ವೋಕ್ತ ಕೆಲಸಗಳೆಲ್ಲವೂ ದಾಸ್ಯ-ಆರಾಧನೆಯ ಮಾರ್ಪಡುತ್ತದೆ. ಇಸ್ಲಾಮ್ ಸಕಲ ಮಾನವರ ಜೀವನದಲ್ಲಿ ಇಂತಹ ಬದಲಾವಣೆಯ ತರ ಬಯಸುತ್ತದೆ. ಅದು ಲೌಕಿಕ ಮತ್ತು ಧಾರ್ಮಿಕ ಕಾರ್ಯಗಳ ಬೇರೆ ಬೇರೆ ಪಟ್ಟಿಯ ತಯಾರಿಸದೆ ಸಂಪೂರ್ಣ ಜೀವನಕ್ಕಾಗಿ ನಿಯಮಗಳನ್ನು ನೀಡುತ್ತದೆ. ವೈಯಕ್ತಿಕ ಮ ಕೌಟುಂಬಿಕ ಜೀವನದಿಂದ ಪ್ರಾರಂಭಿಸಿ ರಾಷ್ಟ್ರ, ಸರಕಾರ ಮತ್ತು ರಾಜಕೀಯಕ್ಕೆ ಬೇಕ ಪರಿಪೂರ್ಣ ಕಾನೂನನ್ನೇ ನಿರ್ಧರಿಸುತ್ತದೆ ಹಾಗೂ ಎಲ್ಲ ಕಾರ್ಯಗಳಲ್ಲೂ ಕೇವಲ ಅಲ್ಲಾ ಅನುಸರಣೆ ಮತ್ತು ಆತನ ಸಂಪ್ರೀತಿಯೆಡೆಗೆ ಜನರನ್ನು ಹುರಿದುಂಬಿಸುತ್ತದೆ. ಹ

ರ್ಮ'ದ ವ್ಯಾಖ್ಯೆಗೆ ಒಳಪಡುವ ಎಲ್ಲಾ ಕೆಲಸಗಳೂ ಧಾರ್ಮಿಕ ಕೆಲಸಗಳಾಗಿವೆ. ರ್ಮ'ದ ಪೂರ್ವೋಕ್ತ ಶರ್ತಗಳನ್ನು ಪೂರೈಸದ ಕೆಲಸಗಳೆಲ್ಲವೂ ಲೌಕಿಕ ಕೆಲಸಗಳಾಗಿವೆ. ಕ್ಯ ನೋಟಕ್ಕೆ ಅದು ಮಹಾ ಧಾರ್ಮಿಕ ಕೆಲಸವಾಗಿ ಕಂಡು ಬಂದರೂ ಸರಿ. ಾಹರಣೆಗೆ, ಹಸಿದವನಿಗೆ ಉಣಬಡಿಸುವುದು ಒಂದು ಒಳ್ಳೆಯ ಕೆಲಸವಾಗಿದೆ. ಆದರೆ ಕೆಲಸವನ್ನು ಅಲ್ಲಾಹನ ನಿಯಮಕ್ಕನುಸಾರವಾಗಿ, ಆತನ ಸಂಪ್ರೀತಿಗಾಗಿ ಮಾಡಿದರೆ ಮಾತ್ರ ಲ್ಲಮಿನ ದೃಷ್ಟಿಯಲ್ಲಿ ಇದು ಸತ್ಕರ್ಮವೆನಿಸಿಕೊಳ್ಳುವುದು. ಅನ್ಯಥಾ ಅದು ರ್ಮವೆನಿಸಿಕೊಳ್ಳಲಾರದು. ಜನರ ಮೆಚ್ಚುಗೆಗಾಗಿ, ಪ್ರಸಿದ್ಧಿಗಾಗಿ ಅಥವಾ ಇತರ ಯಾವುದೇ ದ್ದೇಶಕ್ಕಾಗಿ ಮಾಡಲಾದ ಕರ್ಮಗಳು ಲೌಕಿಕ ಕಾರ್ಯಗಳೆನಿಸುವುದು. ಈ ಮಾತನ್ನು ಪಡಿಸಲಿಕ್ಕಾಗಿಯೇ ಪ್ರವಾದಿ ಮುಹಮ್ಮದ್‌ರವರು(ಸ) ಹೀಗೆ ಹೇಳಿದ್ದಾರೆ,

"ನಿರ್ಣಾಯಕ ದಿನದಂದು ಮೂರು ಬಗೆಯ ಜನರ ಕುರಿತು ಮೊಟ್ಟ ಮೊದಲು ರ್ಣನ ನಡೆಯುವುದು. ಆ ಪೈಕಿ ಅಲ್ಲಾಹನ ಧರ್ಮಕ್ಕಾಗಿ ತನ್ನ ಪ್ರಾಣಾರ್ಪಣೆ ಡಿದವನು ಒಬ್ಬನು, ಅವನನ್ನು ಅಲ್ಲಾಹನ ಮುಂದೆ ತರಲಾಗುವುದು. ಅಲ್ಲಾಹನು ನಿಗೆ ತಾನು ಲೋಕದಲ್ಲಿ ದಯಪಾಲಿಸಿದ ಅನುಗ್ರಹಗಳನ್ನು ನೆನಪಿಸುವನು ಮತ್ತು ನೊಡನೆ ಈ ಅನುಗ್ರಹಗಳ ಬಗ್ಗೆ, 'ನೀನು ಹೇಗೆ ಕೃತಜ್ಞತೆ ಪ್ರಕಟಿಸಿದೆ?' ಎಂದು ಸಲಾಗುವುದು. ಅವನು ಹೇಳುವನು, 'ಅಲ್ಲಾಹನೇ ನಾನಂತೂ ನಿನ್ನ ಮಾರ್ಗದಲ್ಲಿ ನನ್ನ ವನ್ನೇ ಅರ್ಪಿಸಿದೆ', ಅಲ್ಲಾಹನು ಹೇಳುವನು, 'ಇಲ್ಲ ನೀನು ಸುಳ್ಳು ಹೇಳುತ್ತಿರುವೆ. ು ನಿನ್ನನ್ನು ಮಹಾ ಧೈರ್ಯಶಾಲಿಯೆಂದು ಕರೆಯಲಿಕ್ಕಾಗಿ ನೀನು ಯುದ್ಧ ಮಾಡಿದೆ. ಜನರು ನಿನ್ನನ್ನು ಧೈರ್ಯಶಾಲಿ ಎಂದು ಕರೆದರು' ಅನಂತರ ಅವನನ್ನು ಮುಖ ವೆಳೆದು ನರಕಕ್ಕೆ ಹಾಕುವಂತೆ ಆದೇಶವಾಗುವುದು.

ಅನಂತರ ಮತ್ತೊಬ್ಬ ವ್ಯಕ್ತಿಯನ್ನು ವಿಚಾರಣೆಗಾಗಿ ಮುಂದೆ ತರಲಾಗುವುದು. ಅವನು ಜ್ಞಾನ ಪಡೆದಿರುವವನು, ಕುರ್‌ಆನ್ ಕಲಿತಿರುವವನು. ಅಲ್ಲಾಹನು ಅವನಿಗೆ ದಯಪಾಲಿಸಿದ ಗ್ರಹಗಳನ್ನು ನೆನಪಿಸುವನು. ಅವನು ಅದನ್ನು ಗುರುತಿಸಿದ ನಂತರ, 'ಈ ಅನುಗ್ರಹಗಳ ಯಾವ ರೀತಿ ಕೃತಜ್ಞತೆ ಪ್ರಕಟಿಸಿದೆ' ಎಂದು ಕೇಳಲಾಗುವುದು. ಅವನು ಹೇಳುವನು, ್ಲಾಹನೇ ನಾನು ನಿನ್ನ ಸಂಪ್ರೀತಿಗಾಗಿ ಧರ್ಮದ ಜ್ಞಾನವನ್ನು ಪಡೆದೆ ಮತ್ತು ಇತರರಿಗೆ ದೆ." ಅಲ್ಲಾಹನು ಹೇಳುವನು, "ಇಲ್ಲ ನೀನು ಸುಳ್ಳು ಹೇಳುತ್ತಿರುವೆ. ಜನರು ನಿನ್ನನ್ನು ಂಸನೆಂದು ಕರೆಯುವ ಉದ್ದೇಶದಿಂದ ನೀನು ವಿದ್ಯೆ ಕಲಿತೆ ಮತ್ತು ನಿನ್ನನ್ನು ಹಾಗೆಯೇ ಲಾಯಿತು." ಅನಂತರ ಅವನನ್ನು ಮುಖ ಹಿಡಿದೆಳೆದು ನರಕಕ್ಕೆ ಹಾಕುವಂತೆ ಶವಾಗುವುದು.

ಹಾಗೆಯೇ ಮೂರನೆಯ ವ್ಯಕ್ತಿಯನ್ನು ಮುಂದೆ ತರಲಾಗುವುದು, ಅವನಿಗೆ ಅಲ್ಲಾಹನು ಕದಲ್ಲಿ ಹೇರಳ ಧನ ಸಂಪತ್ತನ್ನು ದಯಪಾಲಿಸಿರುವನು. ಅವನಿಗೂ ಅಲ್ಲಾಹನ ಗ್ರಹಗಳನ್ನು ನೆನಪಿಸಲಾಗುವುದು. ಅವನು ಅದನ್ನು ಅರಿತ ನಂತರ, "ಈ ಅನುಗ್ರಹಗಳ ನೀನು ಯಾವ ರೀತಿ ಕೃತಜ್ಞತೆ ಪ್ರಕಟಿಸಿದೆ?" ಎಂದು ಅವನೊಡನೆ ಪ್ರಶ್ನಿಸಲಾಗುವುದು.

ಅವನು ಹೇಳುವನು, "ಅಲ್ಲಾಹನೇ ಸಂಪತ್ತನ್ನು ವ್ಯಯಿಸುವುದರಿಂದ ನೀನು ಸಂತುಷ್ಟನಾಗುವ ಯಾವುದೇ ಅವಕಾಶವನ್ನೂ ನಾನು ಕಳೆದುಕೊಳ್ಳಲಿಲ್ಲ ಮತ್ತು ನಾನು ನಿನಗಾಗಿ ಸಂಪತ್ತನ್ನು ವ್ಯಯಿಸಿದೆ." ಅಲ್ಲಾಹನು ಹೇಳುವನು, "ನೀನು ಸುಳ್ಳು ಹೇಳುತ್ತಿರುವೆ. ನಿ ಮಹಾ ಉದಾರಿಯೆಂದು ಕರೆಯಲಿಕ್ಕಾಗಿ ನೀನು ಈ ಕೆಲಸ ಮಾಡಿದೆ. ಅಂತೆಯೇ ನಿ ಕರೆಯಲಾಯಿತು." ಅನಂತರ ಅವನನ್ನು ಮುಖ ಹಿಡಿದೆಳೆದು ನರಕಕ್ಕೆ ಹಾಕು ಆದೇಶಿಸಲಾಗುವುದು.

ಪ್ರವಾದಿವರ್ಯರ(ಸ) ಈ ವಚನವನ್ನು ಮುಂದಿಟ್ಟು ನೋಡಿದರೆ ನಮಾ ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್‌ನಂತಹ ಆರಾಧನಾ ಕರ್ಮಗಳು ಕೆಲವೊ ಲೌಕಿಕ ಕರ್ಮವಾಗಿ ಮಾರ್ಪಡುವುದು ಮತ್ತು ಅನೇಕ ಲೌಕಿಕ ಕರ್ಮಗಳು ಆರಾಧನಾ ಕ ಗಳಾಗಿ ತೀರುವುದು ಎಂದು ನೀವು ಸ್ವತಃ ತೀರ್ಮಾನಿಸುವಿರಿ. ಲೋಕದ ಎಲ್ಲಾ ಧರ್ಮಗಳಿ ಭಿನ್ನವಾದ ಇಸ್ಲಾಮಿನ ವೈಶಿಷ್ಟ್ಯ ಇದುವೇ ಆಗಿದೆ. ಇಸ್ಲಾಮಿನಲ್ಲಿ ಧಾರ್ಮಿಕ ಕಾರ್ಯ ಮತ್ತು ಲೌಕಿಕ ಕಾರ್ಯಗಳನ್ನು ಪ್ರತ್ಯೇಕಿಸುವಂತಿಲ್ಲ. ಮುಸ್ಲಿಮನು ಯಾವುದೇ ಕೆಲಸದ ಅದು ಕೇವಲ ಲೌಕಿಕ ಕಾರ್ಯವಾದ್ದರಿಂದ ಅದರಲ್ಲಿ ಅಲ್ಲಾಹನ ಸಂಪ್ರೀತಿ ಮತ್ತು ಧವ ಆಜ್ಞೆ ಏನೆಂಬುದು ತಿಳಿಯಬೇಕಾಗಿಲ್ಲ ಎಂದು ಹೇಳುವಂತಿಲ್ಲ. ಮುಸಲ್ಮಾನನ ಕೆಲಸಗಳು ಅಲ್ಲಾಹನ ಇಚ್ಛೆ ಮತ್ತು ಧರ್ಮದ ಆದೇಶಕ್ಕನುಸಾರವಾಗಿ ಇರಬೇಕು.

ಅಲ್ಲಾಹನ ದಾಸರಲ್ಲಿ ಕೆಲವರು ಜನರನ್ನು ಮೋಸಗೊಳಿಸುವವರಿದ್ದಾರೆ. ಅ ಹೇಳುವುದೇನೆಂದರೆ, ವೈಯಕ್ತಿಕ ಜೀವನದ ವ್ಯವಹಾರಗಳೆಲ್ಲಾ ಸದಾ ಇಸ್ಲಾಮಿನ ಆ ಮತ್ತು ಅಲ್ಲಾಹನ ನಿಯಮದ ಪ್ರಕಾರವೇ ನಡೆಯಬೇಕು, ಆದರೆ ರಾಜಕೀಯಕ್ಕೆ ಸಂಬಂ ಹಾಗೂ ಮುಸ್ಲಿಮ್-ಮುಸ್ಲಿಮೇತರರಿಗೆ ಸಮಾನವಾಗಿ ಅನ್ವಯವಾಗುವ ವಿಷಯದಲ್ಲಿ ಅಲ ಆಜ್ಞೆಯನ್ನು ಅನುಸರಿಸಬೇಕಾಗಿಲ್ಲ. ಧರ್ಮ ಕೇವಲ ವೈಯಕ್ತಿಕ ಜೀವನಕ್ಕೆ ಅನ್ವಯಿ ವಿಷಯವಾಗಿದೆ. ಆಡಳಿತ ಮತ್ತು ರಾಜ್ಯಭಾರಕ್ಕೂ ಧರ್ಮಕ್ಕೂ ಯಾವುದೇ ಸಂಬಂಧ ಇಸ್ಲಾಮಿನ ದೃಷ್ಟಿಯಲ್ಲಿ ಇವೆಲ್ಲವೂ ಶುದ್ಧ ತಪ್ಪು.

ಹಿಂದಿನ ಕಾಲದಲ್ಲಿ ರಾಜ್ಯಭಾರವು ಅರಸರ ಮತ್ತು ರಾಜರ ಕೈಯಲ್ಲಿರುತ್ತಿತ್ತು. ಅ ಹೆಚ್ಚಾಗಿ ತಮ್ಮ ಭೋಗ ವಿಲಾಸಗಳಲ್ಲಿ ತಲ್ಲೀನರಾಗಿರುತ್ತಿದ್ದರು. ಪ್ರಜೆಗಳು ಶ್ರೇಷ್ಠತೆಯನ್ನು ಮನ್ನಿಸಿ ಅವರ ಖಜಾನೆಗಳನ್ನು ತುಂಬಿಸುತ್ತಿರುವಷ್ಟು ಕಾಲ ಆ ಅರ ಬೇರೆ ಯಾವುದೇ ವಿಷಯದ ಪರಿವೆ ಇರುತ್ತಿರಲಿಲ್ಲ. ಯಾವ ವಿಚಾರಗಳನ್ನು ಬೇಕಾ ತಿಳಿಯಲು, ತಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ಬೇಕಾದರೂ ನೀಡಲು ತಮ್ಮ ಜೀವನವನ್ನು ಯಾವ ಮಾರ್ಗದಲ್ಲಿ ಬೇಕಾದರೂ ಮುನ್ನಡೆಸಲು ಪ್ರ ಸ್ವತಂತ್ರರಾಗಿದ್ದರು. ಪ್ರಜೆಗಳ ಆಚಾರ, ವಿಚಾರ, ಸಂಸ್ಕೃತಿ ಮತ್ತು ಶಿಕ್ಷಣದ ವಿಷಯ ಆ ಅರಸರು ಹಸ್ತಕ್ಷೇಪ ಮಾಡುತ್ತಿರಲಿಲ್ಲ.

ಆದರೆ ಇಂದಿನ ಸ್ಥಿತಿ ಅದಕ್ಕಿಂತ ಭಿನ್ನವಾದುದು. ಇಂದು ಸರಕಾರ ಜನ ರಚಿಸಲ್ಪಡುತ್ತದೆ. ಜನ ಸಾಮಾನ್ಯರ ಇಷ್ಟಾನಿಷ್ಟಗಳಿಗನುಸಾರ ಕಾನೂನು ರಚಿತವಾಗು

ಕಾರ ಯಾರ ಕೈಯಲ್ಲಿದೆಯೋ ಅವರು ಜನಸಾಮಾನ್ಯರನ್ನು ತಮ್ಮ ಇಚ್ಛಾನುಸಾರ ಸಿಸಬಯಸುತ್ತಾರೆ. ಏಕೆಂದರೆ ಆ ಸರಕಾರದ ಅಸ್ತಿತ್ವವು ಅದನ್ನೇ ಅವಲಂಬಿಸಿರುತ್ತದೆ. ರಿಂದ ಜೀವನದ ಎಲ್ಲಾ ವಿಷಯಗಳಲ್ಲೂ ಸರಕಾರದ ಪ್ರಭಾವವಿರುತ್ತದೆ. ಸರಕಾರಕ್ಕೆ ಕ್ತವೆನಿಸಿದ ಮತ್ತು ಅದರ ಹಿತಾಸಕ್ತಿಗೆ ಪೂರಕವಾದ ಶಿಕ್ಷಣವೇ ಅಲ್ಲಿನ ಶಿಕ್ಷಣವಾಗಿರುತ್ತದೆ.

ರಾಜಕಾರಣಿಗಳಿಗೆ ಸ್ವೀಕಾರಾರ್ಹವಾದ ಕಾನೂನು ಮಾತ್ರ ರಚಿಸಲ್ಪಡುತ್ತದೆ ಮತ್ತು ಜೂರಾಗುತ್ತದೆ. ಕೇವಲ ರಾಜ್ಯಭಾರಕ್ಕೆ ಸಂಬಂಧಿಸಿದಂತೆ, ಮಾತ್ರವಲ್ಲ ವೈಯಕ್ತಿಕ ಮತ್ತು ಟುಂಬಿಕ ವಿಷಯದಲ್ಲೂ ರಾಜಕಾರಣಿಗಳಿಗೆ ಸೂಕ್ತವೆನಿಸಿದ ಕಾನೂನನ್ನೇ ರಚಿಸಲಾಗುತ್ತದೆ. ದ್ಧ ಮತ್ತು ಸಂಧಾನಕ್ಕೆ ಸಂಬಂಧಿಸಿದಂತೆ ಅನುಸರಿಸಲಾಗುವ ಕಾರ್ಯ ನೀತಿಯಿಂದ ವ ವ್ಯಕ್ತಿಯೂ ತನ್ನನ್ನು ಮುಕ್ತಗೊಳಿಸಿಕೊಳ್ಳಲು ಸಾಧ್ಯವಿಲ್ಲ. ಇಂದಿನ ಕಾಲದಲ್ಲಿ ದ್ಧದ ಜವಾಬ್ದಾರಿಕೆ ಕೇವಲ ಸರಕಾರಿ ಸೈನ್ಯಕ್ಕೆ ಮಾತ್ರವಿರುವುದಲ್ಲ. ಪ್ರತಿಯೊಬ್ಬ ರಿಕನೂ ಒಂದಲ್ಲ ಒಂದು ರೀತಿಯಲ್ಲಿ ಅದರಲ್ಲಿ ಭಾಗಿಯಾಗಬೇಕಾಗುತ್ತದೆ.

ಈಗ ಚಿಂತಿಸಿ ನೋಡಿ ಒಬ್ಬ ಮುಸಲ್ಮಾನನು ಇಂತಹ ಸಂದರ್ಭದಲ್ಲಿ ಏನು ಡಬೇಕು? ಜೀವನದ ಎಲ್ಲಾ ಕಾರ್ಯಗಳಲ್ಲಿ ಕೇವಲ ಅಲ್ಲಾಹನ ಆಜ್ಞಾನುಸರಣೆ ಡುವೆನೆಂಬ ಕರಾರು ಮಾಡಿರುವ ಅವನು ತನ್ನ ಕರಾರನ್ನು ಪೂರ್ತೀಕರಿಸುವುದು ಹೇಗೆ? ದೆಡೆ ಅಲ್ಲಾಹನ ಧರ್ಮದ ಬೇಡಿಕೆಯಿದ್ದರೆ ಇನ್ನೊಂದೆಡೆ ರಾಷ್ಟ್ರದ ಕಾನೂನು ಮತ್ತು ರ ಒತ್ತಡವಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮುಸಲ್ಮಾನನು ಸಂಪೂರ್ಣವಾಗಿ ರ್ಮವನ್ನು ಅನುಸರಿಸಿ ಜೀವಿಸಲು ಸಾಧ್ಯವಿಲ್ಲ. ನಿರ್ವಾಹವಿಲ್ಲದೆ ಧರ್ಮದ ವುದಾದರೊಂದು ಭಾಗವನ್ನು ಬಿಡಬೇಕಾಗುತ್ತದೆ. ಈ ಅಸಹಾಯಕತೆ ಎಲ್ಲಿಯ ವರೆಗೆ? ತಹ ಅಸಹಾಯಕತೆಯ ಬಗ್ಗೆ ಸಂತೃಪ್ತಿಯಿಂದಿರಲು ಸಾಧ್ಯವೇ? ಮುಸಲ್ಮಾನರು ಸಂಖ್ಯಾತರಾಗಿರುವ ಮತ್ತು ಸ್ವತಂತ್ರರಾಗಿರುವ ದೇಶಗಳಲ್ಲಿರುವ ಜನರ ಮೊದಲ ವ್ಯವೆಂದರೆ ಅವರು ಧಾರ್ಮಿಕ ಕಾರ್ಯ ಮತ್ತು ಲೌಕಿಕ ಕಾರ್ಯಗಳ ನಡುವಿನ ಈ ತರವನ್ನು ದೂರೀಕರಿಸಬೇಕಾಗಿದೆ. ಇನ್ನು ಮುಸಲ್ಮಾನರಿಗೆ ಯಾವುದೇ ಅಧಿಕಾರವಿಲ್ಲದ ಗಳಲ್ಲಿ ಅವರು ಈ ವಿಷಯಕ್ಕೆ ಸಂಬಂಧಿಸಿದಂತೆ ಅಸಹಾಯಕರಾಗಿದ್ದಾರೆಂದು ಕೊಳ್ಳಬಹುದು. ಇಂತಹ ಅನಿವಾರ್ಯ ಪರಿಸ್ಥಿತಿಯಲ್ಲಿ ಸರಕಾರವನ್ನು ಬುಡಮೇಲುಗೊಳಿಸುವ ಯತ್ನ ಮಾಡಬೇಕೆಂಬುದು ಇದರ ಅರ್ಥವಲ್ಲ. ಯಾವ ಪರಿಸ್ಥಿತಿಯಲ್ಲೂ ಇಸ್ಲಾಮ್ ವಸ್ಥೆಯ ಮತ್ತು ಕ್ಷೋಭೆಯ ಮೊರೆ ಹೋಗುವುದಿಲ್ಲ. ಏನೂ ಮಾಡದೆ ಮೂಕ ಕ್ಷಕರಾಗಬೇಕೆಂಬುದು ಕೂಡಾ ಇದರ ಅರ್ಥವಲ್ಲ. ಈ ನಿಟ್ಟಿನಲ್ಲಿ ಮುಸಲ್ಮಾನನ ವ್ಯವೇನೆಂಬುದನ್ನು ಮುಂದೆ ಪ್ರಸ್ತಾಪಿಸಲಾಗುವುದು.

❋ ❋ ❋

ಇಸ್ಲಾಮಿನ ಸ್ತಂಭಗಳು

ಮಾನವನ ಸಂಪೂರ್ಣ ಜೀವನವು ಆರಾಧನೆಯಾಗಿರಬೇಕೆಂಬುದು ಅಲ್ಲಾ ಅಭಿಲಾಷೆಯಾಗಿದೆ. ಆದುದರಿಂದ ಮಾನವನು ತಾನು ಅಲ್ಲಾಹನ ದಾಸನಾಗಿದ್ದು ಸದಾ ಅ ದಾಸ್ಯ-ಆರಾಧನೆಯನ್ನು ಮಾಡಬೇಕೆಂಬುದನ್ನು ನೆನಪಿಟ್ಟುಕೊಳ್ಳಬೇಕು. ಈ ವಿಷಯವ ನೆನಪಿಟ್ಟುಕೊಳ್ಳದೆ ಅವನ ಜೀವನವು 'ಸತ್ಕರ್ಮ'ದ ಮಾದರಿಯಾಗಿ ಮಾರ್ಪಡಲಾರದು. ವಿಷಯವನ್ನು ಸದಾ ನೆನಪಿಟ್ಟುಕೊಳ್ಳಲು ಮತ್ತು ಸಮಸ್ತ ಜೀವನವನ್ನು 'ಸತ್ಕರ್ಮ'ವನ ಮಾಡಲು ಇಸ್ಲಾಮ್ ಕೆಲವು ನಿರ್ದಿಷ್ಟ ಕಾರ್ಯಕ್ರಮವನ್ನು ಮುಂದಿಡುತ್ತದೆ. ಧರ್ಮದ ಕಾರ್ಯಕ್ರಮಕ್ಕೆ ಬಹಳ ಮಹತ್ವವಿದೆ. ಸತ್ಯವಿಶ್ವಾಸದ ನಂತರದ ಹಂತ ಇವುಗ ಅನುಸರಿಸುವುದಾಗಿದೆ. ಅದರ ಅನುಸರಣೆಯಲ್ಲೇ ಇಸ್ಲಾಮಿನ ಸಂಪೂರ್ಣ ಕಟ್ಟಡ ನೆಲೆನಿಂ ಈ ವಿಷಯಗಳನ್ನೇ 'ಇಸ್ಲಾಮಿನ ಸ್ತಂಭಗಳು' ಎಂದು ಕರೆಯಲಾಗಿದೆ.

ಮೇಲೆ ಪ್ರಸ್ತಾಪಿಸಲಾದ ಕಾರ್ಯಕ್ರಮದ ಅಂಶಗಳು ಸತ್ಯವಿಶ್ವಾಸವ ಆಧಾರವಾಗಿರಿಸಿಕೊಂಡು ನಿರ್ಮಿಸಬೇಕಾದ ಇಸ್ಲಾಮೀ ಕಟ್ಟಡದ ಸ್ತಂಭಗಳಾಗಿವೆ.

ಈ ಸ್ತಂಭಗಳ ವಿನಾ ಕಟ್ಟಡದ ನಿರ್ಮಾಣವು ಸಾಧ್ಯವಿಲ್ಲ. ಈ ಸ್ತಂಭ ದುರ್ಬಲವಾಗಿದ್ದರೆ, ಕಟ್ಟಡವು ಅಷ್ಟೇ ದುರ್ಬಲವಾಗಿರುವುದು ಮತ್ತು ಈ ಸ್ತಂಭ ಬಲಿಷ್ಠವಾಗಿದ್ದಷ್ಟೇ ಇಸ್ಲಾಮೀ ಜೀವನದ ಕಟ್ಟಡವೂ ಬಲಿಷ್ಠ ಮತ್ತು ಸರಿಯ ರೂಪದಲ್ಲಿರುವುದು. ಪ್ರವಾದಿಯವರು(ಸ) ಹೇಳಿದ್ದಾರೆ,

"ಇಸ್ಲಾಮಿನ ಬುನಾದಿಯು ಐದು ವಿಷಯಗಳ ಮೇಲೆ ನಿಂತಿದೆ. ಅಲ್ಲಾಹನಲ್ಲದೆ ಆರಾಧ್ಯನಿಲ್ಲ ಹಾಗೂ ಮುಹಮ್ಮದ್‌ರವರು(ಸ) ಅಲ್ಲಾಹನ ದಾಸ ಮತ್ತು ಪ್ರವಾದಿ ಎಂಬ ಸಾಕ್ಷ್ಯವಚನ. ನಮಾಝ್‌ನ ಸಂಸ್ಥಾಪನೆ, ಝಕಾತ್ ನೀಡುವುದು, ಹಜ್ಜ್ ನಿರ್ವಹಿಸುವುದು ಮತ್ತು ರಮಝಾನ್ ತಿಂಗಳಲ್ಲಿ ಉಪವಾಸ ವ್ರತವನ್ನಾಚರಿಸುವುದು". (ಬುಖಾರಿ, ಮುಸ್ಲಿಮ್)

الاسلام على خمس
ة ان لا اله الا الله
محمدا عبده ورسوله
ام الصلوة وايتاء
ة والحج وصوم رمضان

ಕೆಲವೊಮ್ಮೆ ಪ್ರವಾದಿವರ್ಯರು(ಸ) ಇದನ್ನೇ 'ಇಸ್ಲಾಮ್' ಎಂದು ಸಾರಿದ್ದಾರೆ. ಕೆಂದರೆ ಇದನ್ನು ಸರಿಯಾಗಿ ಪಾಲಿಸುವುದರಿಂದ ಮಾನವನ ಸಂಪೂರ್ಣ ಜೀವನವು ಸ್ಲಾಮಿೂ ಚೌಕಟ್ಟಿಗೆ ಬದ್ಧವಾಗುತ್ತದೆ.

ಪೂರ್ವೋಕ್ತ ಪ್ರವಾದಿ ವಚನದಿಂದ ಇಸ್ಲಾಮಿನ ಸ್ತಂಭಗಳು ಐದೆಂದು ವ್ಯಕ್ತವಾಗುತ್ತದೆ.

1. ಸತ್ಯ ವಿಶ್ವಾಸದ ಸಾಕ್ಷ್ಯ ವಹಿಸುವುದು- ಅರ್ಥಾತ್ ಅಲ್ಲಾಹನೇ ನನ್ನ ಆರಾಧ್ಯ ುತ್ತು ಒಡೆಯನಾಗಿದ್ದಾನೆಂದೂ ಮುಹಮ್ಮದ್(ಸ) ಅಲ್ಲಾಹನ ನೈಜ ಸಂದೇಶವಾಹಕ ಗಿದ್ದಾರೆಂದೂ ಸ್ಪಷ್ಟೋಕ್ತಿಗಳಲ್ಲಿ ಪ್ರಮಾಣ ಮಾಡಬೇಕು. ಮುಂದೆ ಜೀವನದ ಎಲ್ಲಾ ರ್ಯಗಳಲ್ಲಿಯೂ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಅನುಸರಣೆಯನ್ನು ಾಡುವೆನೆಂಬ ಕರಾರು ಮಾಡಬೇಕು.

"ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್"

"ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ವಹಿಸುತ್ತೇನೆ" ಎಂಬ ವಾಕ್ಯದ ಅರ್ಥವೂ ನೇ ಆಗಿದೆ. ಅಲ್ಲಾಹನ ಹೊರತು ಇತರೆಲ್ಲರ ಅನುಸರಣೆ, ದಾಸ್ಯ ಮತ್ತು ನಿಷ್ಠೆಯನ್ನು ಷ್ಟವಾಗಿ ನಿರಾಕರಿಸಿ ಅಲ್ಲಾಹನನ್ನು ಮತ್ತು ಆತನ ಪ್ರವಾದಿಯವರನ್ನು(ಸ) ಮಾತ್ರ ನುಸರಿಸುವೆನೆಂದು ದೃಢಪಡಿಸುವಷ್ಟು ಧೈರ್ಯ ಪ್ರಥಮವಾಗಿ ಪ್ರತಿಯೊಬ್ಬ ್ಯವಿಶ್ವಾಸಿಯಲ್ಲಿರಬೇಕೆಂದು ಇಸ್ಲಾಮ್ ಬಯಸುತ್ತದೆ. ನಂತರ ಅವನು ಜೀವನದ ಪ್ರತಿ ಂತದಲ್ಲೂ ಕೇವಲ ಅಲ್ಲಾಹನ ಅನುಸರಣೆ ಮಾಡಬೇಕು ಮತ್ತು ಆತನ ಹೊರತು ಇನ್ನಾರ ಾಧನೆಯನ್ನೂ ಮಾಡಬಾರದು.

2. ನಮಾಝ್ ಸ್ಥಾಪಿಸುವುದು.

3. ಝಕಾತ್ ನೀಡುವುದು.

4. ಉಪವಾಸ ವ್ರತ ಆಚರಿಸುವುದು.

5. ಹಜ್ಜ್ ನಿರ್ವಹಿಸುವುದು.

ಪ್ರಥಮ ಸ್ತಂಭದ ವಿವರಣೆಯನ್ನು ನೀವು 'ಸತ್ಯವಿಶ್ವಾಸ'ದ ಅಧ್ಯಾಯದಲ್ಲಿ ಓದಿದ್ದೀರಿ ಷ್ಪಳಿದ ಸ್ತಂಭಗಳ ಕುರಿತು ಅತ್ಯಗತ್ಯವಾದ ಕೆಲವು ವಿಷಯಗಳನ್ನು ತಿಳಿಯೋಣ-

ಮಾಝ್

ಸತ್ಯವಿಶ್ವಾಸದ ನಂತರ ಇಸ್ಲಾಮಿನಲ್ಲಿ ಪ್ರಮುಖವಾದ ಕಡ್ಡಾಯ ಕರ್ಮವು ನಮಾಝ್ ದೆ. ಮುಸಲ್ಮಾನನು ಅಲ್ಲಾಹನ ಆಜ್ಞೆಗಳಲ್ಲಿ ನಮಾಝ್ ನಿರ್ವಹಿಸುವುದು ಅತ್ಯಂತ ಮುಖವಾದ ಆಜ್ಞೆ ಎಂದು ಭಾವಿಸುತ್ತಾನೆ. ಪ್ರವಾದಿವರ್ಯರ(ಸ) ಕಾಲದಲ್ಲಿ ನಮಾಝ್ ಸಲ್ಮಾನನ ಗುರುತಾಗಿತ್ತು. ನಮಾಝ್ ನಿರ್ವಹಿಸದವನನ್ನು ಪ್ರವಾದಿವರ್ಯರ(ಸ) ಂಯಾಯಿಗಳು ಮುಸಲ್ಮಾನನೆಂದು ಗುರುತಿಸುತ್ತಿರಲಿಲ್ಲ. ಪವಿತ್ರ ಕುರ್‌ಆನಿನಲ್ಲಿ ಅನೇಕ ು ನಮಾಝಿನ ಬಗ್ಗೆ ತಾಕೀತು ಮಾಡಲಾಗಿದೆ. ಒಂದೆಡೆ ಅಲ್ಲಾಹನು ಹೇಳುತ್ತಾನೆ-

"ನಮಾಝನ್ನು ಸಂಸ್ಥಾಪಿಸಿರಿ ಮತ್ತು ಬಹುದೇವವಿಶ್ವಾಸಿಗಳಲ್ಲಾಗಬೇಡಿರಿ."
(ಸೂರಃ ಅರ್ರೂಮ್: 31)

اَقِيمُوا الصَّلٰوةَ وَلَا
كُونُوا مِنَ الْمُشْرِكِينَ ۝

ಇದರಿಂದ ತಿಳಿಯುವುದೇನೆಂದರೆ ನಮಾಝನ್ನು ತೊರೆಯುವುದು ಮುಸ್ಲಿಮರ ಲಕ್ಷಣವ ಬದಲಾಗಿ ಬಹುದೇವಾರಾಧಕರ ಕೆಲಸವಾಗಿದೆ.*

ಪ್ರವಾದಿವರ್ಯರು(ಸ) ಹೇಳಿದ್ದಾರೆ,

"ದಾಸ (ಸತ್ಯವಿಶ್ವಾಸಿ) ಮತ್ತು ಸತ್ಯ ನಿಷೇಧದ ಮಧ್ಯೆ ನಮಾಝನ್ನು ತೊರೆಯು ಅಂತರ ಮಾತ್ರವಿದೆ."

ಅರ್ಥಾತ್ ನಮಾಝನ್ನು ತೊರೆಯುವವರು ಸತ್ಯ ನಿಷೇಧದ ಅಂಚಿಗೆ ತಲುಪುವ ಮತ್ತು ಯಾವ ಸಂದರ್ಭದಲ್ಲಾದರೂ ಅವರು ಇಸ್ಲಾಮಿನಿಂದ ಸಂಬಂಧ ಕಡಿದು ಸ ನಿಷೇಧಿಗಳ ಕೂಟದಲ್ಲಿ ಸೇರಿ ಬಿಡುವರು.

ನಮಾಝ್ ಇಸ್ಲಾಮಿನ ಗುರುತಾಗಿದೆ. ನಮಾಝ್ ಇಸ್ಲಾಮಿನ ಅತ್ಯಂತ ಪ್ರಮು ಆಜ್ಞೆಯಾಗಿದೆ. ನಮಾಝ್ ತೊರೆದವ ಧರ್ಮದ ಬುನಾದಿಯನ್ನೇ ಕೆಡಹಿದಂತೆ. ನಮಾ ಇಸ್ಲಾಮೀ ಬದುಕಿನ ಜೀವಾಳವಾಗಿದೆ. ಅಂತ್ಯ ದಿನದಂದು ಅಲ್ಲಾಹನ ಬಳಿ ಆತನ ದಾ ವಿಚಾರಣೆ ಮತ್ತು ಪ್ರತಿಫಲ, ಶಿಕ್ಷೆಗಳ ತೀರ್ಮಾನವಾಗುವಾಗ ಪ್ರಪ್ರಥಮವಾಗಿ ನಮಾ ಬಗ್ಗೆ ವಿಚಾರಿಸಲಾಗುವುದು. ಈ ಪರೀಕ್ಷೆಯಲ್ಲಿ ಯಶಸ್ಸು ಹೊಂದಿದವರು ಮಾತ್ರ ಇ ಪರೀಕ್ಷೆಯಲ್ಲಿ ಯಶಸ್ಸನ್ನು ಹೊಂದುವರು. ಈ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರು ಇ ಪರೀಕ್ಷೆಯಲ್ಲೂ ವಿಜೇತರಾಗುವ ಸಾಧ್ಯತೆಯಿಲ್ಲ. ನಮಾಝ್‌ನ ಹೊರತು ಪರಲೋಕದ ಅಲ್ಲಾಹನ ಕ್ಷಮೆ ಮತ್ತು ಸ್ವರ್ಗಪ್ರಾಪ್ತಿ ಹಾಗೂ ಇಹಲೋಕದಲ್ಲಿ ಗೌರವ ಮ ಉತ್ತುಂಗತೆಯನ್ನು ನಿರೀಕ್ಷಿಸುವಂತಿಲ್ಲ.

ಅಲ್ಲಾಹನ ದೃಷ್ಟಿಯಲ್ಲಿ ಮಾನವಕುಲದ ಎರಡು ಗುಂಪುಗಳಿವೆ ಎಂದು ನಾವು ಮೊದಲು ತಿಳಿದುಕೊಂಡೆವು. ಒಂದು ಅಲ್ಲಾಹನನ್ನು ಧಿಕ್ಕರಿಸಿದ ಸತ್ಯನಿಷೇಧಿಗಳ ಗುಂ ಇನ್ನೊಂದು ಆತನ ಮೇಲೆ ವಿಶ್ವಾಸವಿರಿಸಿ ಆತನನ್ನು ಅನುಸರಿಸುವವರ ಗುಂಪು. ವಿಭಜನೆಯ ಹೊರತಾದ ಬೇರಾವ ವಿಭಜನೆಯೂ ಅಲ್ಲಾಹನ ಬಳಿ ಅಂಗೀಕಾರಾರ್ಹವ ಪ್ರಳಯ ಕಾಲದಂದು ಸಕಲ ಮಾನವರು ಈ ಎರಡು ಗುಂಪುಗಳಲ್ಲೇ ವಿಂಗಡಿಸಲ್ಪಡುವ

ಅಲ್ಲಾಹನನ್ನು ಅನುಸರಿಸಿದವರು ಅಂದು ವಿಜಯಿಗಳಾಗುವರು. ಅಲ್ಲಾಹನ ಪ್ರಿ ಮತ್ತು ವಾತ್ಸಲ್ಯಕ್ಕೆ ಪಾತ್ರರಾಗಿರುವರು. ಶಾಶ್ವತವಾದ ಸುಖ ಅವರಿಗೆ ದೊರಕುವು ಅಲ್ಲಾಹನನ್ನು ಧಿಕ್ಕರಿಸಿ ಆತನ ವಿರುದ್ಧ ಬಂಡಾಯ ತೋರಿದವರು ಅಂದು ಅತ್ಯಂತ ಹೀ

---

* ನಮಾಝ್ ತೊರೆಯುವುದರಿಂದ ಒಬ್ಬನು ಬಹುದೇವಾರಾಧಕನಾಗಿ ಬಿಡುವನೆಂಬುದು ಇ ಅರ್ಥವಲ್ಲ. ಆದರೆ ನಿರಂತರವಾಗಿ ನಮಾಝ್ ತೊರೆದರೆ ಇಸ್ಲಾಮಿನೊಂದಿಗೆ ಮುಸಲ್ಮಾನನ ಸಂಬ ಕೇವಲ ನಾಮ ಮಾತ್ರಕ್ಕೆ ಸೀಮಿತವಾಗಬಹುದು, ಮಾತ್ರವಲ್ಲ ಆ ಸಂಬಂಧವೂ ಕಡಿದು ಹೋಗ ಸಾಧ್ಯತೆ ಇದೆ.

ತದೃಷ್ಟರಾಗಿರುವರು. ಅವರು ಅವಮಾನ ಮತ್ತು ನಿಂದ್ಯತೆಯನ್ನು ಎದುರಿಸಬೇಕಾಗುವುದು. ಲ್ಲಾಹನ ಕಾರುಣ್ಯ ಅವರಿಗೆ ದೊರಕಲಾರದು ಮತ್ತು ಅವರು ಶಾಶ್ವತವಾದ ಯಾತನೆಯಲ್ಲಿ ೞಳಲಾಡುವರು. ಸ್ವಲ್ಪ ಚಿಂತಿಸಿ ನೋಡಿ, ಅಲ್ಲಾಹನಲ್ಲಿ ಮತ್ತು 'ಪರಲೋಕದಲ್ಲಿ ಶ್ವಾಸವಿಡುವವರು ಯಾವ ಗುಂಪಿನವರಾಗಲು ಬಯಸಬಹುದು?

ಉತ್ತರ ಸ್ಪಷ್ಟ- ತನ್ನನ್ನು ಮುಸ್ಲಿಮನೆಂದು ಕರೆದುಕೊಳ್ಳುವ ಯಾವ ವ್ಯಕ್ತಿಯೂ ರಲೋಕದಲ್ಲಿ ಅವಮಾನಿತನಾಗಿ ಅಲ್ಲಾಹನ ಶಿಕ್ಷೆಗೊಳಗಾದವರ ಗುಂಪಿಗೆ ಸೇರಲು ಷ್ಟಪಡಲಾರ. ನಮಾಝ್‌ನ ಆಧಾರದಲ್ಲಿಯೇ ಪರಲೋಕದಲ್ಲಿ ಈ ಎರಡು ಗುಂಪುಗಳನ್ನು ಂಗಡಿಸಲಾಗುವುದು. ಪವಿತ್ರ ಕುರ್‌ಆನಿನ ಸೂರಃ ಅಲ್‌ಕಲಮ್‌ನಲ್ಲಿ ಅಂದಿನ ದೃಶ್ಯವನ್ನು ೀಗೆ ವಿವರಿಸಲಾಗಿದೆ- ನಿರ್ಣಾಯಕ ದಿನದ ಹಶರ್‌ನ ಮೈದಾನದಲ್ಲಿ ಒಂದುಗೂಡಿಸಲ್ಪಡುವಾಗ ನರು ಬಹಳ ಶೋಚನೀಯ ಪರಿಸ್ಥಿತಿಯಲ್ಲಿರುವರು. ಆಗ ಸಾಷ್ಟಾಂಗವೆರಗುವಂತೆ ಜನರಿಗೆ ಜ್ಞಾಪಿಸಲಾಗುವುದು. ಸತ್ಯವಿಶ್ವಾಸಿಗಳು ತಕ್ಷಣವೇ ಸಾಷ್ಟಾಂಗವೆರಗುವರು. ಆದರೆ ಇಹಲೋಕ ೀವನದಲ್ಲಿ ನಮಾಝ್ ನಿರ್ವಹಿಸದವರು, ಆರೋಗ್ಯವಾಗಿದ್ದು ಯಾವ ನೆಪವೂ ಇಲ್ಲದೆ ಮಾಝಿನ ಕರೆ ಕೇಳಿಯೂ ಅಲಕ್ಷ್ಯ ತೋರುತ್ತಿದ್ದವರು ಅಂದು ನಿಂತಲ್ಲೇ ನಿಂತು ಬಿಡುವರು. ವರ ಬೆನ್ನು ಹಲಗೆಯಂತಾಗುವುದು, ಅವರಿಗೆ ಸಾಷ್ಟಾಂಗವೆರಗಲು ಸಾಧ್ಯವಾಗಲಾರದು. ಂದಿನ ಸನ್ನಿವೇಶ ವಿಚಿತ್ರವಾಗಿರುವುದು. ನೈಜ ಒಡೆಯನ ಕರ್ತವ್ಯನಿಷ್ಠ ದಾಸರು ಷ್ಟಾಂಗದಲ್ಲಿರುವರು. ದೇವಧಿಕ್ಕಾರಿಗಳು, ದುರ್ಜನರು ಅಪರಾಧಿಗಳಂತೆ ತಲೆ ತಗ್ಗಿಸಿ, ವಮಾನಿತರಾಗಿ, ಚಿಂತಾಕ್ರಾಂತರಾಗಿ ನಿಂತಿರುವರು. ಅವರೆಲ್ಲರ ಪರಿಣಾಮವೂ ಶ್ಚಳವಾಗಿರುವುದು. ಅಲ್ಲಾಹನ ನಿಷ್ಠ ದಾಸರಿಗಾಗಿ ಶಾಶ್ವತವಾದ ರಕ್ಷೆ ಮತ್ತು ಒಡೆಯನ ಂಪ್ರೀತಿ ದೊರೆಯುವುದು. ದೇವಧಿಕ್ಕಾರಿಗಳಿಗೆ ಶಾಶ್ವತವಾದ ಶಿಕ್ಷೆ ಮತ್ತು ಒಡೆಯನ ಕ್ರೋಧ ಾರಕುವುದು. ಅಲ್ಲಾಹನು ನಮ್ಮೆಲ್ಲರನ್ನೂ ಆ ದಿನದ ಅವಮಾನ ಮತ್ತು ನಿಂದ್ಯತೆಯಿಂದ ್ಷಸಲಿ. ಸತ್ಯವಿಶ್ವಾಸಿಯ ದೃಷ್ಟಿಯಲ್ಲಿ ನಿರ್ಣಾಯಕ ದಿನದ ನಿಂದ್ಯತೆಯು ಅತ್ಯಂತ ೞರವಾದ ಅವಮರ್ಯಾದೆಯಾಗಿದೆ.

ಅಲ್ಲಾಹನನ್ನೇ ತನ್ನ ಒಡೆಯನೆಂದು ತಿಳಿದು ಪರಲೋಕದ ಮೇಲೆ ದೃಢವಾದ ಶ್ವಾಸವಿರಿಸಿ, ಪರಲೋಕದ ಯಶಸ್ಸೇ ನಿಜವಾದ ವಿಜಯವೆಂದು ತಿಳಿದವರಿಗೆ ಇದರಲ್ಲಿ ಹಾ ಪಾಠವಿದೆ. ಅಂಥವರು ನಮಾಝಿನ ಕರೆ ಕೇಳಿಯೂ ನಮಾಝಿಗಾಗಿ ಏಳದೆ ಅಲ್ಲಾಹನ ೈಂತ ಪ್ರಮುಖ ಆಜ್ಞೆಯ ಬಗ್ಗೆ ಅಲಕ್ಷ್ಯ ತೋರಿ ನಾವು ಎಷ್ಟೊಂದು ತಿಳಿಗೇಡಿತನದಿಂದ ರ್ತಿಸುತ್ತಿದ್ದೇವೆಂಬುದನ್ನು ಆಲೋಚಿಸಿ ನೋಡಬೇಕು. ಯಾರಾದರೂ ಸತ್ಯವಿಶ್ವಾಸ ಸ್ವೀಕರಿಸಿದ ೕಕ ನಮಾಝನ್ನು ತೊರೆಯುವ ಸಂಭವವಿದೆಯೇ? ಸತ್ಯವಿಶ್ವಾಸ ಸ್ವೀಕರಿಸಿದ ನಂತರ ಾವ ವ್ಯಕ್ತಿಯಾದರೂ ಮನಃಪೂರ್ವಕ ನಮಾಝನ್ನು ತೊರೆಯಲು ಸಾಧ್ಯವೇ? ಸತ್ಯ ವಿಶ್ವಾಸ ಕರಿಸಿದ ನಂತರ ವ್ಯಕ್ತಿಯು ಇಂತಹ ಭಂಡ ಧೈರ್ಯ ತೋರಲು ಮತ್ತು ಬೇಜವಾಬ್ದಾರಿ ೀರಲು ಸಾಧ್ಯವೇ? ನಿಜವಾಗಿ ನಮಾಝಿನ ಬಗ್ಗೆ ಆಲಸ್ಯವು ವಿಶ್ವಾಸದ ದೌರ್ಬಲ್ಯದ ಷ್ಟ ಲಕ್ಷಣವಾಗಿದೆ. ನಮಾಝ್‌ನ ಬಗ್ಗೆ ಶ್ರದ್ಧೆ ಇರಿಸಲು ಪ್ರಪ್ರಥಮವಾಗಿ ವಿಶ್ವಾಸವನ್ನು

ದೃಢೀಕರಿಸಬೇಕಾದುದು ಅತ್ಯಗತ್ಯವಾಗಿದೆ. ಮನಸ್ಸಿನಲ್ಲಿ ಅಲ್ಲಾಹನ ಬಗ್ಗೆ ವಿಶ್ವಾಸ ಮ ಆತನ ಕ್ರೋಧದ ಭಯವಿದ್ದರೆ ನಮಾಝನ್ನು ತೊರೆದು ಆತನ ಅತೀ ಪ್ರಮುಖವಾ ಆಜ್ಞೆಯನ್ನು ಉಲ್ಲಂಘಿಸುವ ಬಗ್ಗೆ ಅವನು ಭಯದಿಂದ ನಡುಗುವನು. ನಮಾಝಿನ ಬ ಅಶ್ರದ್ಧೆಯನ್ನು ತೋರುವವರ ಹೃದಯವು ಅಲ್ಲಾಹನ ಭಯದಿಂದ ಮುಕ್ತವಾಗಿರುವುದ ಇಸ್ಲಾಮಿನಲ್ಲಿ ನಮಾಝಿಗೆ ಇಷ್ಟು ಮಹತ್ವವನ್ನು ಯಾಕೆ ಕಲ್ಪಿಸಲಾಗಿದೆ? ಇಸ್ಲಾಮಿ ಆರಾಧನಾ ಕರ್ಮಗಳು ಮತ್ತು ಇತರ ಧರ್ಮಾನುಯಾಯಿಗಳ ಪೂಜೆ ಪುರಸ್ಕಾರಗಳ ನಡು ಇರುವ ಅಂತರವನ್ನು ನೀವು ಅರಿತಿದ್ದರೆ ಈ ವಿಷಯವನ್ನು ಸುಲಭವಾಗಿ ಗ್ರಹಿಸಬಹುದಾಗಿ ಇತರ ಧರ್ಮಾನುಯಾಯಿಗಳಲ್ಲಿ ಕೆಲವರು ದೇವನೆಂದರೆ ರಾಜ ಮಹಾರಾಜ ಮ ನವಾಬರಂತೆ ಪ್ರಶಂಸೆಯಿಂದ ಸಂತುಷ್ಟಗೊಳ್ಳುತ್ತಾನೆಂದು ನಂಬುತ್ತಾರೆ. ಅವರು ತಮ ಪೂಜೆ ಪುರಸ್ಕಾರಗಳನ್ನು ಅಂತೆಯೇ ನೆರವೇರಿಸುತ್ತಾರೆ. ಮತ್ತೆ ಕೆಲವರ ಅಭಿಪ್ರಾಯವೇನೆಂದ ಈ ಲೋಕವು ಮಾನವನನ್ನು ದೇವನಿಂದ ದೂರ ಮಾಡುವಂತಹ ಪೀಡೆಯಾಗಿದೆ. ಮಾನ ಜೀವನೋದ್ದೇಶವು ದೇವನಲ್ಲಿ ಲೀನವಾಗುವುದಾಗಿದೆ. ಆದುದರಿಂದ ಈ ಲೋಕ ವ್ಯವಹಾರಗಳನ್ನು ತೊರೆದು ಕೇವಲ ದೇವನ ಧ್ಯಾನದಲ್ಲಿ ಮಗ್ನವಾಗಿರಬೇಕಾಗಿದೆ. 'ಇಸ್ಲಾಮಿ ಪ್ರಕಾರ ಸಂಪೂರ್ಣ ಜೀವನವನ್ನು ಅಲ್ಲಾಹನ ಅನುಸರಣೆಯಲ್ಲಿ ಕಳೆಯುವುದು ಮತ್ತು ಎ ಲೌಕಿಕ ಕಾರ್ಯಗಳನ್ನು ಅಲ್ಲಾಹನ ಆಜ್ಞೆಯಂತೆ ಆತನ ತೃಪ್ತಿಗಾಗಿ ಮಾಡುವುದೇ ಆಗಿ ಎಂದು ನೀವು ಈ ಮೊದಲೇ ಓದಿದ್ದೀರಿ.

ಇಂತಹ ಆರಾಧನೆಯು ಸುಲಭ ಕಾರ್ಯವಲ್ಲ. ಇದು ಕೆಲವು ನಿಮಿಷ ಅಥ ಗಂಟೆಗಳ ಆರಾಧನೆಯಲ್ಲ. ಆದ್ದರಿಂದ ಸ್ವಲ್ಪ ಸಮಯವನ್ನು ಹೇಗಾದರೂ ಮಾಡಿಕೊಂ ಸಂತೃಪ್ತಿ ಪಡುವಂತಿಲ್ಲ.ಇದು ಸಮಸ್ತ ಜೀವನದ ಪ್ರಶ್ನೆಯಾಗಿದೆ. ಇದು ಪ್ರತಿ ಕ್ಷ ನಿರ್ವಹಿಸಬೇಕಾದ ಕಾರ್ಯವಾಗಿದೆ.

ಈ ಕಠಿಣ ಕಾರ್ಯವನ್ನು ಸುಲಭಗೊಳಿಸಲಿಕ್ಕಾಗಿಯೇ ಅಲ್ಲಾಹನು ನಮಾಝ್, ಝಕಾ ಉಪವಾಸ ವ್ರತ ಮತ್ತು ಹಜ್ಜ್‌ನಂತಹ ಆರಾಧನಾ ಕರ್ಮಗಳ ಆಜ್ಞೆಯನ್ನು ನೀಡಿರುತ್ತಾ ನಮಾಝ್ ಈ ಉದ್ದೇಶಕ್ಕಾಗಿರುವ ಪ್ರಮುಖ ಮತ್ತು ಅತ್ಯಂತ ಉಪಯುಕ್ತ ಆಜ್ಞೆಯಾಗಿದೆ.

ನಮಾಝ್ ಮಾನವನ ಸಂಪೂರ್ಣ ಜೀವನವನ್ನು ಅಲ್ಲಾಹನ ಅನುಸರಣೆ ಮ ಆಜ್ಞಾಪಾಲನೆಯಾಗಿ ಮಾರ್ಪಡಿಸುವುದು ಹೇಗೆ ಎಂದು ಗ್ರಹಿಸುವುದು ಕಷ್ಟವಲ್ಲ.

ಸ್ವಲ್ಪ ಆಲೋಚಿಸಿ ನೋಡಿ. ಅಲ್ಲಾಹನನ್ನು ತನ್ನ ಒಡೆಯ, ಮಾಲಕ ಮ ಆಜ್ಞಾಧಿಕಾರಿಯೆಂದು ತಿಳಿದೂ ಮಾನವನು ಆತನ ಆಜ್ಞೆಯನ್ನು ಧಿಕ್ಕರಿಸುವುದಾದರೂ ಯಾ ಇದಕ್ಕೆ ಹಲವಾರು ಕಾರಣಗಳಿವೆ-

1. ಮಾನವನು ತುಂಬಾ ಮರೆಗುಳಿಯಾಗಿದ್ದಾನೆ.
2. ಅವನು ಅಶ್ರದ್ಧನಾಗಿದ್ದಾನೆ.
3. ಎಲ್ಲಾ ಕಾರ್ಯದಲ್ಲಿ ಅವನಿಗೆ ತರಬೇತಿ ಮತ್ತು ಸುಧಾರಣೆಯ ಅಗತ್ಯವಿ
4. ಹೆಚ್ಚಾಗಿ, ಆತನಿಗೆ ತನ್ನ ಭಾವನೆಗಳನ್ನು ನಿಯಂತ್ರಿಸುವುದು ಅಸಾಧ್ಯವಾಗುತ್ತ

ಈ ಎಲ್ಲಾ ಕೆಲಸಗಳು ನಮಾಝಿನಿಂದ ಸರಿಯಾಗಿ ನೆರವೇರಿಸಲು ಸಾಧ್ಯ. ನಿಜವಾಗಿ ಂರ್ವೋಕ್ತ ಸಮಸ್ಯೆಗಳಿಗೆ ನಮಾಝಿಗಿಂತ ಉತ್ತಮವಾದ ಪರಿಹಾರವಿರಲಾರದು. ಒಬ್ಬ ಕ್ತಿಯು ನಮಾಝಿನಲ್ಲಿ ಅನೇಕ ಬಾರಿ ತಾನು ಅಲ್ಲಾಹನ ದಾಸ ಮತ್ತು ದಾಸ್ಯ ಾಧಾನೆಯು ತನ್ನ ಕರ್ತವ್ಯವೆಂದು ದೃಢೀಕರಿಸುತ್ತಾನೆ. ಅಲ್ಲಾಹನ ಔನ್ನತ್ಯದ ಮುಂದೆ ್ನಾರ ಔನ್ನತ್ಯವನ್ನೂ ಆತನು ಅಂಗೀಕರಿಸುವುದಿಲ್ಲ. ಅಲ್ಲಾಹನೇ ತನ್ನ ಒಡೆಯ, ಪ್ರಭು ತ್ತು ಆಜ್ಞಾಧಿಕಾರಿಯಾಗಿದ್ದಾನೆ, ತನ್ನ ಸಂಪೂರ್ಣ ಜೀವನದ ಲೆಕ್ಕಾಚಾರವನ್ನು ಅಲ್ಲಾಹನಿಗೇ ಡಬೇಕಾಗುತ್ತದೆ, ಅಲ್ಲಾಹ್ ಮತ್ತು ಆತನ ಪ್ರವಾದಿವರ್ಯರು(ಸ) ತೋರಿಸಿದ ಮಾರ್ಗದಲ್ಲೇ ನು ಜೀವನಪರ್ಯಂತ ಸಾಗಬೇಕಾಗಿದೆ. ಎಂಬಿತ್ಯಾದಿ ಮಾತುಗಳನ್ನು ಅವನು ನಮಾಝಿನಲ್ಲಿ ೇಕ ಬಾರಿ ಪುನರಾವರ್ತಿಸುತ್ತಾನೆ ಮತ್ತು ತನ್ನ ವಿಶ್ವಾಸವನ್ನು ನವೀಕರಿಸುತ್ತಾನೆ. ತದನಂತರ ರೆಗುಳಿತನದಿಂದಾಗಿ ತಪ್ಪು ಮಾರ್ಗವನ್ನು ಅನುಸರಿಸುವ ಭಯ ಬಾಕಿಯುಳಿಯುವುದಿಲ್ಲ. ಮಾಝಿನ ಕರೆ ಕೇಳಿ ಪದೇ ಪದೇ ಅಲ್ಲಾಹನ ಬಳಿ ಓಡೋಡಿ ಹೋಗುವುದರಿಂದ ್ರದ್ಧೆಯ ಸ್ವಭಾವವು ಬದಲಾಗುತ್ತದೆ. ಮಾನವ ತನ್ನೆಲ್ಲಾ ಕೆಲಸಗಳನ್ನು ಸೂಕ್ತ ಸಮಯಕ್ಕೆ ಡುವ ಹವ್ಯಾಸ ಬೆಳೆಸಿಕೊಳ್ಳುತ್ತಾನೆ ಮತ್ತು ಅವನಲ್ಲಿ ಜವಾಬ್ದಾರಿಕೆ ಮೂಡುತ್ತದೆ. ತನ್ನ ಚ್ಛೆ ಮತ್ತು ಅಭೀಷ್ಟೆಗಳ ಬದಲು ಅಲ್ಲಾಹನ ಆಜ್ಞಾನುಸರಣೆಯೇ ಅಭ್ಯಾಸವಾಗುತ್ತದೆ. ಂತಹ ವ್ಯಕ್ತಿಗಳು ಅನಿವಾರ್ಯ ಪರಿಸ್ಥಿತಿಯಲ್ಲಿ ಪಳಗಿದ ಸಿಪಾಯಿಯಂತೆ, ಎಂತಹ ಷ್ಟಕರವಾದ ಕೆಲಸವನ್ನೂ ಮಾಡಲು ಸನ್ನದ್ಧರಾಗಿರುವರೆಂದು ನಿರೀಕ್ಷಿಸಬಹುದು. ಅವರಿಗೆ ಮನಸ್ಸಿನ ಮೇಲೆ ನಿಯಂತ್ರಣವಿರುತ್ತದೆ. ಅವನ ಮನಸ್ಸು ಅವನ ಹತೋಟಿಯಲ್ಲಿರುತ್ತದೆ. ್ಲಾಹನನ್ನು ಪದೇ ಪದೇ ಸ್ಮರಿಸುವುದು, ಆತನ ಸನ್ನಿಧಾನದಲ್ಲಿ ಹಾಜರಾಗುವುದು, ಆತನ ಂದೆ ಆಗಾಗ ಬಾಗಿ ಸಾಷ್ಟಾಂಗವೆರಗುವುದು ಮತ್ತು ಆತನ ಗುಣ ವಿಶೇಷಗಳನ್ನು ಿಸುವುದರಿಂದ ಮನಸ್ಸಿನಲ್ಲಿ ಅಲ್ಲಾಹನ ಸಂಪ್ರೀತಿ ಮತ್ತು ಭಯ ಭಕ್ತಿಯು ವೃದ್ಧಿಯಾಗುತ್ತದೆ. ಗೆ ಮಾನವನಲ್ಲಿ ಅಲ್ಲಾಹನ ಆಜ್ಞೆ ಕೇಳಿದಾಕ್ಷಣ ಮನಸ್ಸಿನ ಸನ್ನದ್ಧತೆಯೊಂದಿಗೆ, ಆ ಜ್ಞೆಗಳನ್ನು ಉತ್ಸಾಹದಿಂದ ಪಾಲಿಸುವ ಮತ್ತು ಅದಕ್ಕೆ ವಿರುದ್ಧವಾಗಿ ವರ್ತಿಸುವುದರಿಂದ, ಕುಂಡಕ್ಕೆ ದೂಡಿದಷ್ಟು ಭಯಪಡುವಂತಹ ಭಾವನೆಯು ಮೂಡುತ್ತದೆ.

ಈ ಎಲ್ಲಾ ಭಾವನೆಗಳು ಮನಸ್ಸಿನಲ್ಲಿ ಮೂಡದೆ ಯಾವ ವ್ಯಕ್ತಿಯೂ ಧರ್ಮಕ್ಕಾಗಿ ಪಯುಕ್ತವಾದ ವ್ಯಕ್ತಿಯಾಗಲಾರನು, ಎಂದು ನೀವು ಸ್ವತಃ ಅಂದಾಜಿಸಬಹುದು. ಇದಕ್ಕೆ ಮಾಝ್' ಬಹಳ ಉಪಯುಕ್ತವಾಗಿದೆ. ಇದರಿಂದಾಗಿಯೇ ಇಸ್ಲಾಮಿನ ಸ್ತಂಭಗಳ ಪೈಕಿ ಾಝಿಗೆ ಇಷ್ಟೊಂದು ಮಹತ್ವ ನೀಡಲಾಗಿದೆ. ನಮಾಝಿನ ಹೊರತು ಯಾವ ವ್ಯಕ್ತಿಯೂ ರ್ಮದ ಮಾರ್ಗದಲ್ಲಿ ಸ್ಥಿರವಾಗಲಾರನು. ಒಮ್ಮೆ ಪ್ರವಾದಿಯವರು(ಸ) ಹೇಳಿದರು,

"ನಮ್ಮ ಮತ್ತು ಗ್ರಾಮೀಣ ಅರಬರ (ಬದ್ದುಗಳ) ನಡುವೆ ಇರುವ ಸಂಬಂಧವು ಾಝಿನದ್ದಾಗಿದೆ. ಯಾರಾದರೂ ನಮಾಝನ್ನು ತೊರೆದರೆ ಅವನು ಸತ್ಯನಿಷೇಧಿಯಾಗುವನು ತ್ತು ಅವನೊಂದಿಗೆ ನಮ್ಮ ಸಂಬಂಧವು ಮುರಿದು ಬೀಳುವುದು."

(ಅಹ್ಮದ್, ತಿರ್ಮಿದಿ, ನಸಾಈ, ಇಬ್ನುಮಾಜಃ)

ಇನ್ನು ನಿಮ್ಮ ಮನಸ್ಸಿನಲ್ಲಿ ನಮಾಝ್ ನಿರ್ವಹಿಸುವ ಎಲ್ಲರ ಜೀವನ ಸರಿಯಾ
ಇಸ್ಲಾಮೀ ಜೀವನವಾಗುತ್ತದೆಯೇ ಎಂಬ ಪ್ರಶ್ನೆ ಮೂಡಬಹುದು. ವಸ್ತುಸ್ಥಿ
ಹಾಗಿಲ್ಲವೆಂಬುದನ್ನು ನಾವು ಕಾಣುತ್ತಿದ್ದೇವೆ. ನಮಾಝ್ ಸರಿಯಾಗಿ ನಿರ್ವಹಿಸುವವರ ಪ
ಅನೇಕರ ಜೀವನವು ಅಲ್ಲಾಹನ ಸಂಪೂರ್ಣ ಅನುಸರಣೆಯಿಂದ ಮುಕ್ತವಾಗಿರುತ್ತದೆ.

ಅವರಲ್ಲಿ ಅನೇಕರು ಅಲ್ಲಾಹನ ಹೊರತು ಇತರರ ದಾಸ್ಯ ಮತ್ತು ಅನುಸರಣೆಯ
ತೊಡಗಿದ್ದಾರೆ. ಹೀಗೇಕೆ? ಇದಕ್ಕೂ ಎರಡು ದೊಡ್ಡ ಕಾರಣಗಳಿವೆ. ಮೊದಲನೆಯದಾ
ನಾವಿರುವ ಪರಿಸರ ಇಸ್ಲಾಮೇತರ ಪರಿಸರವಾಗಿದೆ. ನಿಮ್ಮನ್ನು ಆವರಿಸಿಕೊಂಡಿರುವ ಆಡ
ವ್ಯವಸ್ಥೆಗೆ ದೇವಾನುಸರಣೆಯೊಂದಿಗೆ ಮತ್ತು ದೇವನೊಂದಿಗೆ ಯಾವುದೇ ಸಂಬಂಧವಿ
ಇದ್ದರೂ ನಾಮಮಾತ್ರದ ಸಂಬಂಧವಾಗಿದೆ. ಇಂತಹ ಪರಿಸರದಲ್ಲಿದ್ದುಕೊಂಡು ಸಂಪೂರ್ಣವ
ಅಲ್ಲಾಹನ ಅನುಸರಣೆ ಮತ್ತು ಜೀವನವಿಡೀ ಆತನ ಆಜ್ಞೆಗಳ ಪಾಲನೆ ಸಾಧ್ಯವಿಲ್ಲ.

ನಮಾಝಿನಲ್ಲಿ ಅಲ್ಲಾಹನೊಡನೆ 'ನಿನ್ನನ್ನು ಮಾತ್ರ ಆರಾಧಿಸುತ್ತೇವೆ' ಎಂದು ನೀ
ಸಾರುತ್ತೀರಿ. ಆದರೆ ನಮಾಝಿನ ನಂತರ ನಿಮ್ಮ ಶಿರ ಅಲ್ಲಾಹೇತರರ ಮುಂದೆ ಬಾಗುತ್ತ
ನಮಾಝ್‌ನಲ್ಲಿ ನೀವು ಅಲ್ಲಾಹನೊಡನೆ ನೇರ ಮಾರ್ಗದಲ್ಲಿ ಮುನ್ನಡೆಸೆಂದು ಬೇಡುತ್ತೀ
ಆದರೆ ನಮಾಝಿನ ನಂತರ ನೀವು ಅಲ್ಲಾಹೇತರರ ಇಷ್ಟದ ಮಾರ್ಗದಲ್ಲಿ ನಡೆಯುತ್ತೀ

ಅದು ಸನ್ಮಾರ್ಗಕ್ಕೆ ವಿರುದ್ಧವಾದ ದುರ್ಮಾರ್ಗವಾಗಿರುತ್ತದೆ. ಕೆಲವೊಮ್ಮೆ ನೀ
ನಿರ್ವಾಹವಿಲ್ಲದೆ ಈ ವಕ್ರಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಮತ್ತೆ ಕೆಲವೊ
ನಿಮ್ಮಿಷ್ಟದಿಂದಲೇ ನೀವು ಈ ಮಾರ್ಗವನ್ನು ಅಂಗೀಕರಿಸುತ್ತೀರಿ. ಕೆಲವೊಮ್ಮೆ ಬೇರೆಯವ
ನಿಮ್ಮನ್ನು ಅಲ್ಲಾಹನ ಅನುಸರಣೆ ಮಾಡಲು ಬಿಡುವುದಿಲ್ಲ. ಮತ್ತೆ ಕೆಲವೊಮ್ಮೆ ನೀವು ಸ್
ಆ ಮಾರ್ಗದಲ್ಲಿ ನಡೆಯುವ ಪ್ರಯತ್ನವನ್ನು ಮಾಡುವುದಿಲ್ಲ. ಇಸ್ಲಾಮ್ ಒಂದು ಜೀ
ವ್ಯವಸ್ಥೆಯಾಗಿದ್ದು ಸಂಪೂರ್ಣ ಜೀವನದಲ್ಲಿ ಅದನ್ನು ಅಳವಡಿಸಿದರೆ ಮಾತ್ರ ಅದರ ಒ
ಮತ್ತು ಸಮೃದ್ಧಿ ನಮಗೆ ಗೋಚರವಾಗಲು ಸಾಧ್ಯ.

ಇಸ್ಲಾಮನ್ನು ಕೇವಲ ಸಾಂಕೇತಿಕವಾಗಿ ಅವಲಂಬಿಸುವ ವ್ಯವಸ್ಥೆಯಲ್ಲಿ ಅ
ಪರಿಣಾಮ ಗೋಚರವಾಗುವುದಿಲ್ಲ. ಹೀಗಿರುವಾಗ ದೇವ, ಪರಲೋಕ ಮತ್ತು ದೇ
ಮಾರ್ಗದರ್ಶನಗಳೊಂದಿಗೆ ಸಂಬಂಧವಿಲ್ಲದ ಒಂದು ವ್ಯವಸ್ಥೆಯಿಂದ ನಾವು ಇಂ
ಯಾವುದೇ ಪರಿಣಾಮವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಇಸ್ಲಾಮೀ ಪರಿಸರ ಮತ್ತು ವ್ಯ
ಜಾರಿಯಲ್ಲಿದ್ದಾಗ ಮಾತ್ರ ಇಸ್ಲಾಮೀ ಜೀವನದ ಪರಿಪೂರ್ಣ ಮಾದರಿಯು ನಮ್ಮ ಮು
ಬರುತ್ತದೆ. ಅಲ್ಲಾಹನ ಸಂಪ್ರೀತಿ ಗಳಿಸಲು ಇದು ಬಹಳ ಅಪೇಕ್ಷಣೀಯ. ಆದರೆ ಇಸ್ಲಾ
ಪರಿಸರ ಮತ್ತು ವ್ಯವಸ್ಥೆಯಿಲ್ಲದಿದ್ದರೆ ನಮ್ಮ ಜೀವನ ಇಸ್ಲಾಮೀ ಜೀವನವಾ
ಸಾಧ್ಯವಿಲ್ಲವೆಂಬುದು ಇದರ ಅರ್ಥವಲ್ಲ. ಈ ಪರಿಸ್ಥಿತಿಯಲ್ಲಿ ಇಸ್ಲಾಮೀ ಜೀವನ ವ್ಯವಸ್ಥೆ
ವಿಭಿನ್ನವಾಗಿರುತ್ತದೆ. ಇಂತಹ ಕಾಲದಲ್ಲಿ ಅಲ್ಲಾಹನ ಸಂಪ್ರೀತಿಯನ್ನು ಗಳಿಸಿ ಅ
ಶಿಕ್ಷೆಯಿಂದ ನಮ್ಮನ್ನು ರಕ್ಷಿಸಬೇಕಾದರೆ ಎರಡು ವಿಷಯಗಳು ಅತ್ಯವಶ್ಯಕವಾಗಿರುತ್ತವೆ ಮ
ಅವುಗಳೇ ಇಸ್ಲಾಮೀ ಜೀವನದ ಗುರಾಣಿಯೂ ಆಗಿರುತ್ತವೆ-

1. ನಮ್ಮೆಲ್ಲಾ ಕಾರ್ಯಗಳಲ್ಲಿ ನಮಗೆ ಸಾಧ್ಯವಿದ್ದಷ್ಟು ಅಲ್ಲಾಹನ ಆಜ್ಞೆ ಮತ್ತು ಯಮವನ್ನು ಪಾಲಿಸಲು ಪ್ರಯತ್ನಿಸಬೇಕು. ಹೆಜ್ಜೆ ಹೆಜ್ಜೆಗೂ ಪ್ರವಾದಿಯವರ(ಸ) ಮತ್ತು ವರ ಅನುಯಾಯಿಗಳ ಜೀವನ ರೀತಿಯನ್ನು ಮುಂದಿರಿಸಿ ಸಾಧ್ಯವಿದ್ದಷ್ಟು ಎಲ್ಲಾ ವಹಾರಗಳಲ್ಲೂ ಅವರನ್ನು ಅನುಸರಿಸಬೇಕು.

2. ಅಲ್ಲಾಹನನ್ನು ಧಿಕ್ಕರಿಸುವವರ ರೀತಿ ನೀತಿಯ ಬಗ್ಗೆ ತಿರಸ್ಕಾರ ವ್ಯಕ್ತಪಡಿಸಬೇಕು ತ್ತು ಅಲ್ಲಾಹನ ಬಗ್ಗೆ ನಿರ್ಲಕ್ಷ್ಯರು ಮತ್ತು ಆತನ ಪ್ರವಾದಿವರ್ಯರು(ಸ) ತೋರಿಸಿದ ರ್ಗದ ವಿರೋಧಿಗಳಿಂದ ನಡೆಸಲ್ಪಡುವ ಯಾವ ಕಾರ್ಯಕ್ರಮದಲ್ಲೂ ಭಾಗವಹಿಸಕೂಡದು. ಮಾಜದಲ್ಲಿ ಅಲ್ಲಾಹನ ವಿರುದ್ಧವಿರುವ ಬಂಡಾಯವನ್ನು ಅಳಿಸಲು ಅಲ್ಲಾಹನ ದಾಸರು ವಲ ಆತನ ದಾಸ್ಯವನ್ನು ಸ್ವೀಕರಿಸಿ ಆತನು ಕಳುಹಿಸಿದಂತಹ ನಿಯಮಕ್ಕನುಸಾರವಾಗಿ ವಿಸಿ ತಮ್ಮನ್ನು ತಾವು ನಷ್ಟದಿಂದ ತಡೆಯುವಂತೆ ಪ್ರಯತ್ನಿಸಬೇಕು. ಈ ಕೆಲಸವನ್ನು ಮ್ಮೆಲ್ಲಾ ಶಕ್ತಿಯನ್ನು ಉಪಯೋಗಿಸಿ, ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕ ಶಸ್ಸಿಗಾಗಿ ತಮ್ಮದೆಲ್ಲವನ್ನೂ ಉಪಯೋಗಿಸಬೇಕು.

ದ್ವಿತೀಯ ಕಾರಣವೇನೆಂದರೆ, ನಮ್ಮ ನಮಾಝ್‌ಗಳನ್ನು ಯಾವ ರೀತಿಯಲ್ಲಿ ವೇರಿಸಬೇಕೋ ಆ ರೀತಿಯಲ್ಲಿ ನಾವು ನೆರವೇರಿಸುವುದಿಲ್ಲ. ನಮಾಝುನ್ನು ನಿರ್ವಹಿಸಬೇಕಾದ ಯಾದ ರೀತಿಯಲ್ಲಿ ನಿರ್ವಹಿಸಿದರೆ ಮಾತ್ರ ನಮಗೆ ಅದರಿಂದ ದೊರಕಬೇಕಾದ ೃದ್ಧಿಯು ದೊರಕುತ್ತದೆ. ನಮಾಝಿನ ಎರಡು ಭಾಗಗಳಿವೆ- ಹೊರ ನೋಟದಲ್ಲಿ ುವಂತಹ ಒಂದು ಭಾಗ- ನಿಂತುಕೊಳ್ಳುವುದು, ಬಾಗುವುದು, ಸಾಷ್ಟಾಂಗವೆರಗುವುದು ್ಯಾದಿ. ಇದು ನಮಾಝಿನ ಶರೀರವಾಗಿದೆ. ಆದರೆ ಆತ್ಮವಿಲ್ಲದೆ ಶರೀರವು ನಿಷ್ಪ್ರಯೋಜಕ ಗಿರುವಂತೆಯೇ ನಮಾಝಿನ ಈ ಶರೀರವೂ ಆತ್ಮದ ವಿನಾ ನಿಷ್ಪ್ರಯೋಜಕವೆಂದು ಗಣಿಸಲ್ಪಡುತ್ತದೆ. ನಮಾಝಿನ ಆತ್ಮವು ಉತ್ಕೃಷ್ಟವಾಗಿರುವಷ್ಟೇ ನಮಾಝಿನ ಮಟ್ಟವೂ ನ್ನತವಾಗಿರುವುದು ಮತ್ತು ಅದರಿಂದ ಉತ್ತಮವಾದ ಫಲಿತಾಂಶ ದೊರಕುವುದು.

ಈ ಕೆಳಗಿನ ಅಂಶಗಳನ್ನು ನಮಾಝಿನ ಆತ್ಮವೆಂದು ಕರೆಯಬಹುದು-

1. ನಾನು ನನ್ನೊಡೆಯನ ಮುಂದೆ ಹಾಜರಾಗಿದ್ದೇನೆ ಮತ್ತು ಆತನು ತನ್ನ ಮುಂದೆಯೇ ಇದ್ದಾನೆಂದು ದಾಸನಿಗೆ ತೋರಬೇಕು. ಅನ್ಯಥಾ ಕನಿಷ್ಟ ಪಕ್ಷ ಒಡೆಯನು ನ್ನು ನೋಡುತ್ತಿದ್ದಾನೆಂದು ಅವನಿಗೆ ಭಾಸವಾಗಬೇಕು.

2. ಅಲ್ಲಾಹನ ಮುಂದೆ ತಾನು ನಗಣ್ಯ, ವಿನೀತ ಮತ್ತು ದೀನನೆಂಬ ಪ್ರಜ್ಞೆ ಇರಬೇಕು. ತೆಯೇ ಅಲ್ಲಾಹನ ಶ್ರೇಷ್ಠತೆ, ಮಹಾನತೆ ಮತ್ತು ಹಿರಿತನದ ಬಗ್ಗೆ ದೃಢ ವಿಶ್ವಾಸ ಮ್ಮನ್ನಾವರಿಸಿರಬೇಕು.

3. ಅಲ್ಲಾಹನ ಬಗ್ಗೆ ಅತೀವ ಶ್ರದ್ಧೆ, ಗಾಢ ಪ್ರೀತಿ ಮತ್ತು ಆಸಕ್ತಿ ಇರಬೇಕು.

ನಮಾಝಿನ ಶ್ರೇಷ್ಠತೆಯ ಮಾನದಂಡವು ಇದೇ ಆಗಿದೆ. ಈ ಅಂಶ ಅತ್ಯಂತ ಕ್ತಿರುವಂತೆ ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ. ಅದು ಸಾಧ್ಯವಾಗಲು ಆ ಬಗ್ಗೆ ಗಮನ ತ್ತು ಪ್ರಯತ್ನವು ಅತ್ಯವಶ್ಯಕವಾಗಿದೆ. ಪ್ರಪ್ರಥಮವಾಗಿ ನಾವು ನಮ್ಮ ನಮಾಝುನ್ನು ಅತ್ಯಂತ

ಶ್ರೇಷ್ಠ ರೀತಿಯಲ್ಲಿ ನಿರ್ವಹಿಸಲು ಪ್ರಯತ್ನಿಸುವೆವು ಎಂಬ ತೀರ್ಮಾನ ಮಾಡಬೇಕು. ನಂತ ನಮಾಝಿನ ಅರ್ಥವನ್ನು ಸರಿಯಾಗಿ ಮನನ ಮಾಡಿಕೊಳ್ಳಬೇಕು. ಅದರಲ್ಲಿ ಮಾಡು ಕ್ರಿಯೆಗಳ ಬಗ್ಗೆ ಪರ್ಯಾಲೋಚಿಸಬೇಕು. ಕೈ ಕಟ್ಟಿ ನಿಂತುಕೊಳ್ಳುವಾಗ ತಾನು ಸರ್ವಲೋಕಗ ಪಾಲಕ ಪ್ರಭುವಿನ ಮುಂದೆ ದೈನ್ಯತೆಯಿಂದ ನಿಂತಿರುವೆನೆಂಬುದನ್ನು ತಿಳಿದಿರಬೇಕ ಬಾಗುವಾಗ ಸರ್ವಲೋಕಗಳ ನಿಯಂತ್ರಕನ ಮುಂದೆ ವಿನಮ್ರತೆಯೊಂದಿಗೆ ಬಾಗುತ್ತಿದ್ದೇನೆಂ ಅರಿವಿನೊಂದಿಗೆ ಬಾಗಬೇಕು. ನೆಲದ ಮೇಲೆ ಹಣೆಯಿರಿಸಿ ಸಾಷ್ಟಾಂಗವೆರಗುವಾಗ, ನಾ ನನ್ನ ಮಾಲಕ, ಒಡೆಯ ಮತ್ತು ನೈಜ ಆರಾಧ್ಯನ ಮುಂದೆ ಅತ್ಯಂತ ದೈನ್ಯತೆಯೊಂದಿ ಶರಣಾಗಿದ್ದೇನೆ ಮತ್ತು ತನು- ಮನದೊಂದಿಗೆ ಆತನ ದಾಸ್ಯವನ್ನು ಸ್ವೀಕರಿಸಿದ್ದೇನೆಂ ಅರಿಯಬೇಕು. ಶ್ರದ್ಧೆ ವಹಿಸದೆ, ಅರ್ಥವರಿಯದೆ ನಮಾಝ್ ನಿರ್ವಹಿಸುವುದರಿಂದ ಇ ಸಾಧ್ಯವಾಗಲಾರದು. ಅವಸರವಸರವಾಗಿ ತರಾತುರಿಯಿಂದ ಏನನ್ನೂ ಆಲೋಚಿಸದೆ ನಿರ್ವಹಿಸ ನಮಾಝ್ ಬರಿಯ ತೋರಿಕೆಯ ನಮಾಝ್ ಆಗಿರುತ್ತದೆಯೇ ವಿನಾ ನೈಜ ನಮಾಝ ಆಗುವುದಿಲ್ಲ. ಹ. ಹಸನ್ ಬಸರಿ(ರ) ಹೇಳಿದ್ದಾರೆ, "ಹೃದಯ ಸಾನ್ನಿಧ್ಯದ ವಿ ಶ್ರದ್ಧಾಹೀನವಾಗಿ ಮಾಡಲಾಗುವ ನಮಾಝಿನಿಂದ ಪ್ರತಿಫಲದ ನಿರೀಕ್ಷೆಗಿಂತ ಶಿಕ್ಷೆಯ ಭ ಹೆಚ್ಚಿರುತ್ತದೆ." ಮನಃ ಪೂರ್ವಕವಾಗಿ ನಿರ್ವಹಿಸದ ನಮಾಝಿಗಾಗಿ ಅಲ್ಲಾಹನಿಂದ ಪ್ರತಿಫಲವ ಅಪೇಕ್ಷಿಸುವುದಾದೂ ಹೇಗೆ? ಸರ್ವಲೋಕಗಳ ಪಾಲಕ ಪ್ರಭುವಿನ ಮುಂದೆ ಯಾವುದಾದ ಬೇಡಿಕೆಯೊಂದಿಗೆ ಹಾಜರಾದ ನಂತರ ಮನಸ್ಸು ಬೇರೆಲ್ಲೋ ಇದ್ದು ನಾಲಗೆಯಿಂದ ಕೆ ಪದಗಳನ್ನು ಯೋಚಿಸದೆ, ಅರ್ಥವರಿಯದೆ ಉಚ್ಚರಿಸಿದರೆ ಅದೆಷ್ಟು ಘೋರವಾದ ಅಗೌರವವೆಂ ನೀವೇ ಆಲೋಚಿಸಿ ನೋಡಿ. ಮಾನವನಿಗೆ ತಾನು ಯಾರ ಮುಂದೆ ಇಷ್ಟೊಂ ಅಸಡ್ಡೆಯಿಂದ ಮಾತನಾಡುತ್ತಿದ್ದೇನೆ ಮತ್ತು ಯಾರ ಮುಂದೆ ಒಲ್ಲದ ಮನಸ್ಸಿನಿ ಬಾಗುತ್ತಿದ್ದೇನೆಂದು ಅರಿವಾದರೆ ಆತನು ಭಯದಿಂದ ಕಂಪಿಸದಿರಲಾರನು. ತಾನು ಅಲ್ಲಾಹ ಮುಂದೆ ಹಾಜರಾಗಿದ್ದೇನೆ ಮತ್ತು ಅವನು ತನ್ನನ್ನು ನೋಡುತ್ತಿದ್ದಾನೆ ಅರಿವಿಲ್ಲದಿರುವುದರಿಂದಲೇ ಇಂತಹ ಅಶ್ರದ್ಧೆ ಮೂಡುತ್ತದೆ. ನಮಾಝನ್ನು ನೈಜ ನಮಾಝಿನ ಪರಿವರ್ತಿಸಬೇಕಾದರೆ ಇಂತಹ ಅಜಾಗರೂಕತೆ ಮತ್ತು ಅಸಡ್ಡೆಯನ್ನು ಖಂಡಿತವಾಗಿಯ ತೊರೆಯಬೇಕಾಗಿದೆ. ನಮಾಝಿನಲ್ಲಿ ಇಂತಹ ಗುಣ ಉಂಟಾಗುವುದಾದರೂ ಹೇಗೆ? ಇದಕ ಮೊಟ್ಟಮೊದಲು ಸಂಕಲ್ಪ ಅವಶ್ಯವಾಗಿದೆ. ನಂತರ ನಮಾಝಿನಲ್ಲಿ ಪಠಿಸುವಂತಹ ಎ ಪ್ರಾರ್ಥನೆಗಳ ಅರ್ಥವನ್ನು ಅರಿತಿರಬೇಕು ಹಾಗೂ ಅದಕ್ಕಾಗಿ ಪ್ರಾಮಾಣಿಕ ಪ್ರಯ ಮಾಡಬೇಕು. ಈ ಪ್ರಯತ್ನದ ಮಾದರಿಯೊಂದು ಈ ಕೆಳಗಿನಂತಿದೆ- ಅಲ್ಲಾಹನ ಅನುಗ್ರಹ ನಿರೀಕ್ಷೆಯೊಂದಿಗೆ ಅದನ್ನು ಅನುಸರಿಸಿದರೆ, ಅಲ್ಲಾಹನಿಚ್ಛಿಸಿದರೆ ಅದು ಫಲಕಾರಿಯಾಗಬಹು

ನಾವು ಪ್ರಯಾಣಿಸುವಾಗ ಪ್ರಯಾಣದ ಸಮಯ ಮತ್ತು ನಮ್ಮೊಂ ಕೊಂಡುಹೋಗಬೇಕಾದ ಸಮಾನುಗಳ ಬಗ್ಗೆ ಗಮನ ಹರಿಸುವಂತೆಯೇ ನಮಾಝಿನ ಸಮ ಬರುವುದಕ್ಕಿಂತ ಮೊದಲೇ ಅದರ ಬಗ್ಗೆ ಗಮನ ಹರಿಸಬೇಕು. ಪ್ರವಾದಿವರ್ಯರು ಹೇಳುತ್ತಾರೆ,

لَا يَزَالُ اَحَدُكُمْ فِي الصَّلٰوةِ مَا انْتَظَرَ الصَّلٰوةَ

"ನಮಾಝನ್ನು ನಿರೀಕ್ಷಿಸುತ್ತಾ ಕಳೆಯುವ ಬಯದಲ್ಲಿ ನೀವು ನಮಾಝಿನಲ್ಲೇ ುತ್ತೀರಿ." (ಬುಖಾರಿ, ಮುಸ್ಲಿಮ್)

ನಮಾಝಿನ ಸಮಯವಾದಾಗ ಅದಾನ್ ಕೇಳಿದರೆ ಸಂಪೂರ್ಣವಾಗಿ ಅದಾನಿನೆಡೆಗೆ ುನಹರಿಸಿರಿ. ಮುಅದ್ದಿನ್ (ಅದಾನ್‌ಕೊಡುವವ)ರೊಂದಿಗೆ ಅದಾನಿನ ಪ್ರತಿಯೊಂದು ಕ್ಯವನ್ನು ಅರ್ಥವರಿತು ಪುನರುಚ್ಚರಿಸಿರಿ. 'ಅಲ್ಲಾಹು ಅಕ್ಬರ್' (ಅಲ್ಲಾಹನು ಮಹಾನನು) ಂಬ ವಚನ ಕೇಳಿದಾಗ ಅಲ್ಲಾಹನ ಶ್ರೇಷ್ಠತೆ ಮತ್ತು ಮಹಾನತೆಯನ್ನು ಸ್ಮರಿಸಿರಿ. ಇತರರ ಷ್ಠತೆ ಮತ್ತು ಮಹಾನತೆಯು ಮನಸ್ಸನ್ನು ಆವರಿಸಿದೆಯೇ ಎಂಬುದನ್ನು ಪರಿಶೀಲಿಸಿರಿ. ಲ್ಲಾಹೇತರರ ಶ್ರೇಷ್ಠತೆಯನ್ನು ಮನಸ್ಸಿನಿಂದ ಕಿತ್ತೊಗೆಯಿರಿ. ಅದೇ ರೀತಿ-

اَشْهَدُ اَنْ لَّا اِلٰهَ اِلَّا اللّٰهُ
اَشْهَدُ اَنَّ مُحَمَّدًا رَّسُوْلُ اللّٰهِ

'ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವ ಶ್ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್.'

ಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕ ಗಿದ್ದಾರೆಂದು ನಾನು ಸಾಕ್ಷ್ಯವಹಿಸುತ್ತೇನೆ) ಎಂಬೀ ವಚನಗಳನ್ನು ಆಲಿಸಿದಾಗ ನಿಮ್ಮ ಶ್ವಾಸವನ್ನು ನವೀಕರಿಸಿಕೊಳ್ಳಿರಿ. ಈ ಮೊದಲು 'ಸತ್ಯವಿಶ್ವಾಸ' ಎಂಬ ಭಾಗದಲ್ಲಿ ಸತ್ಯವಿಶ್ವಾಸದ ತ್ಪರ್ಯವನ್ನು ವಿವರಿಸಲಾಗಿದೆಯೆಷ್ಟೆ- ತದನಂತರ

حَيَّ عَلَى الصَّلٰوةِ حَيَّ عَلَى الْفَلَاحِ
لَا حَوْلَ وَلَا قُوَّةَ اِلَّا بِاللّٰهِ

'ಹಯ್ಯ ಅಲಸ್ಸಲಾತ್' (ನಮಾಝಿನೆಡೆಗೆ ನ್ನಿ) ಮತ್ತು 'ಹಯ್ಯಅಲಲ್ ಫಲಾಹ್' ಜಯದೆಡೆಗೆ ಬನ್ನಿ) ಎಂಬ ವಚನಗಳನ್ನು ಿದಾಗ ಅದಕ್ಕುತ್ತರವಾಗಿ 'ಲಾ ಹೌಲ ವಲಾ ವ್ವತ ಇಲ್ಲಾ ಬಿಲ್ಲಾಹ್' (ಅಲ್ಲಾಹನ ಹೊರತು ನ್ನಾರಲ್ಲೂ ಶಕ್ತಿ ಸಾಮರ್ಥ್ಯಗಳಿಲ್ಲ) ಹೇಳಿರಿ.

ಆ ಮುಅದ್ದಿನ್ ನಮ್ಮನ್ನು ಯಾವ ಮಹತ್ತರ ಮತ್ತು ಶ್ರೇಷ್ಠ ಆರಾಧನೆಗಾಗಿ ಯುತ್ತಿದ್ದಾರೋ ಅದನ್ನು ವಸ್ತುನಿಷ್ಠವಾಗಿ ನಿರ್ವಹಿಸಲು ಮತ್ತು ಅದರಿಂದ ಸಂಪೂರ್ಣ ಯೋಜನವನ್ನು ಪಡೆಯಲು ಅಲ್ಲಾಹನ ಸಹಾಯವು ಅತ್ಯವಶ್ಯಕವಾಗಿದೆ ಎಂಬುದನ್ನು ರಿಸಿರಿ. ಅಲ್ಲಾಹನ ಸಹಾಯವಿಲ್ಲದೆ ತನ್ನಂತಹ ದುರ್ಬಲ ದಾಸನಿಗೆ ಏನೂ ರಕಲಾರದೆಂಬುದನ್ನು ನೆನಪಿಟ್ಟುಕೊಳ್ಳಿರಿ.

ನಂತರ لَا اِلٰهَ اِلَّا اللّٰهُ 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ್ಯ ಆರಾಧ್ಯರಿಲ್ಲ) ಎಂಬ ವಾಕ್ಯವನ್ನು ಮುಅದ್ದಿನ್‌ರೊಂದಿಗೆ ಪುನರುಚ್ಚರಿಸುವಾಗ ನಿಮ್ಮ ನಸ್ಸಿನಲ್ಲಿ ಅಲ್ಲಾಹೇತರರ ದಾಸ್ಯ ಮತ್ತು ಆರಾಧನೆಯ ಕಳಂಕವಿಲ್ಲವೆಂದು ಖಾತ್ರಿಪಡಿಸಿಕೊಳ್ಳಿರಿ.

ಹೀಗೆ ಅದಾನ್ ಮುಗಿದ ನಂತರ ನಿಮ್ಮ ವಿಶ್ವಾಸವನ್ನು ಪುನಃ ನವೀಕರಿಸಿಕೊ ಮತ್ತು ವಿವೇಚನೆಯೊಂದಿಗೆ-

أَشْهَدُ أَنْ لَا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

'ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕಲಹೂ ವ ಅಶ್ಹ ಅನ್ನ ಮುಹಮ್ಮದನ್ ಅಬ್‌ದುಹು ವರಸೂಲುಹೂ' ಪಠಿಸಿರಿ. (ಅಲ್ಲಾಹನಲ್ಲದೆ ಆರಾಧ್ಯರಿಲ್ಲ ಅವನು ಏಕೈಕನು ಅವನಿಗಾರೂ ಭಾಗೀದಾರರಿಲ್ಲ ಮತ್ತು ಮುಹಮ್ಮದ್ ಅಲ್ಲಾಹನ ದಾಸ ಹಾಗೂ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ವಹಿಸುತ್ತೇ ತದನಂತರ ದೇವಸ್ಮರಣೆಯ ಈ ವಾಕ್ಯವನ್ನು ಪಠಿಸಿರಿ-

'ರದೀತು ಬಿಲ್ಲಾಹಿ ರಬ್ಬನ್ ವಬಿಮುಹಮ್ಮದಿನ್ ರಸೂಲನ್ ವಬಿಲ್ ಇಸ್ಲಾಮಿ ದೀನನ್.'

رَضِيتُ بِاللهِ رَبًّا وَبِمُحَمَّدٍ رَسُولًا وَبِالْإِسْلَامِ دِينًا

(ನಾನು ಅಲ್ಲಾಹನನ್ನು ಪಾಲಕ ಪ್ರಭುವಾಗಿ, ಮುಹಮ್ಮದ್‌ರನ್ನು(ಸ) ಸಂದೇಶವಾಹಕ ಮತ್ತು ಇಸ್ಲಾಮನ್ನು ಧರ್ಮವಾಗಿ ಸ್ವೀಕರಿಸಿ ನಾನು ಸಂತೃಪ್ತನಾಗಿದ್ದೇನೆ.)

ಈ ರೀತಿ ಅದಾನ್ ಕೇಳಿ ನಮ್ಮ ವಿಶ್ವಾಸವು ನವಚೈತನ್ಯ ಪಡೆದಾಗ ಎಲ್ಲಾ ಲೌ ಕಾರ್ಯಗಳಿಂದ ವಿಮುಖರಾಗಿ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗುವ ಸಿದ್ಧತೆಯ ನಡೆಸಿರಿ. ಶ್ರದ್ಧಾಪೂರ್ವಕ ಸರಿಯಾದ ರೀತಿಯಲ್ಲಿ ಅಂಗಸ್ನಾನ ಮಾಡಿರಿ. ಸರಿಯ ಅಂಗಸ್ನಾನವು ನಮಾಝಿನ ಸಂಸ್ಥಾಪನೆಯ ಒಂದು ಮುಖ್ಯ ಅಂಗವಾಗಿದೆ. ಪ್ರವಾದಿವರ್ಯರು ಹೇಳಿದ್ದಾರೆ, "ಅಲ್ಲಾಹನು ಐದು ಹೊತ್ತಿನ ನಮಾಝನ್ನು ಕಡ್ಡಾಯಗೊಳಿಸಿದ್ದಾನೆ. ಯಾ ಅದಕ್ಕಾಗಿ ಉತ್ತಮ ರೀತಿಯಲ್ಲಿ ಅಂಗಸ್ನಾನ ಮಾಡಿ ಅವುಗಳನ್ನು ಸರಿಯಾದ ಸಮಯದ ನಿರ್ವಹಿಸುತ್ತಾನೋ ಮತ್ತು ಬಾಗುವಿಕೆ, ಸಾಷ್ಟಾಂಗ ಮತ್ತು ಭಯಭಕ್ತಿಯಲ್ಲಿ ಯ ಚ್ಯುತಿಯನ್ನೂ ಮಾಡುವುದಿಲ್ಲವೋ ಅಂತಹ ವ್ಯಕ್ತಿಯನ್ನು ಕ್ಷಮಿಸುವ ಹೊಣೆಯ ಅಲ್ಲಾಹನು ವಹಿಸಿಕೊಳ್ಳುತ್ತಾನೆ. ಈ ರೀತಿಯಲ್ಲಿ ನಮಾಝ್ ನಿರ್ವಹಿಸದವನ ಒ ಅಲ್ಲಾಹನು ಯಾವುದೇ ಹೊಣೆ ವಹಿಸುವುದಿಲ್ಲ. ಅಲ್ಲಾಹನಿಚ್ಛಿಸಿದರೆ ಆತನನ್ನು ಕ್ಷಮಿಸಬಹು ಅಥವಾ ಶಿಕ್ಷೆಗೊಳಪಡಿಸಲೂಬಹುದು" (ಅಹ್ಮದ್, ಅಬೂ ದಾವೂದ್, ಮಾಲಿಕ್, ನಸಾ

ಸರಿಯಾದ ವುಝೂ ಎಂದರೆ ಅದರಲ್ಲಿರುವ ಎಲ್ಲಾ ಬಾಹ್ಯ ಶಿಷ್ಟಾಚಾರ ಮತ್ತು ಪ್ರವಾ ಚರ್ಯೆಯ ಬಗ್ಗೆ ಗಮನ ಹರಿಸಬೇಕು. ಅದರ ವಿವರಣೆಯನ್ನು ಹದೀಸ್ ಮತ್ತು ಕರ್ಮಶಾಸ್ತ್ರ ಗ್ರಂಥಗಳಲ್ಲಿ ಕಾಣಬಹುದಾಗಿದೆ. ವುಝೂವಿನ ಹಿಂದಿರುವ ಸ್ಫೂರ್ತಿಯನ್ನರಿತು ಸರಿಯ ವುಝೂ ನಿರ್ವಹಿಸಬೇಕು. ವುಝೂವಿನ ಉದ್ದೇಶವು ಕೇವಲ ಕೈ ಕಾಲುಗಳನ್ನು ತೊಳೆಯುವುದ ಬದಲಾಗಿ ಅಲ್ಲಾಹನ ಆಸ್ಥಾನದಲ್ಲಿ ಹಾಜರಾಗಿ ಆತನೊಂದಿಗೆ ಸಂಭಾಷಣೆ ನಡೆಸಲಿಕ್ಕಾ ಅಂತರಂಗ ಮತ್ತು ಬಹಿರಂಗದ ಶುದ್ಧಿಯ ಸಿದ್ಧತೆ ಮತ್ತು ದೇವನ ಸ್ಮರಣೆಯಾಗಿದೆ.

ಶವನ್ನು ಮನದಲ್ಲಿರಿಸಿದರೆ ವುಝೂವಿನ ವೇಳೆಯೇ ನಮ್ಮಲ್ಲಿ ಪಶ್ಚಾತ್ತಾಪ ಮತ್ತು ಭಕ್ತಿಯ ಭಾವನೆಗಳು ಮೂಡಲು ಪ್ರಾರಂಭವಾಗುತ್ತವೆ. ಪ್ರತಿಯೊಂದು ಅಂಗವನ್ನು ಳೆಯುವಾಗ ಬಹಿರಂಗ ಶುದ್ಧಿಯೊಂದಿಗೆ ಅಂತರಂಗ ಶುದ್ಧಿಯ ಸಿದ್ಧತೆಯನ್ನೂ ನೀವು ಸುತ್ತೀರಿ. ಇಂತಹ ವುಝೂವಿನ ಬಗ್ಗೆ ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ,

ٱللهُ تَعَالَىٰ مَنْ أَحْسَنَ وُضُوءَهُنَّ وَصَلَّاهُنَّ لِوَقْتِهِنَّ وَأَتَمَّ رُكُوعَهُنَّ وَخُشُوعَهُنَّ كَانَ لَهُ عَلَى ٱللهِ عَهْدٌ أَنْ يَغْفِرَ لَهُ وَمَنْ لَمْ يَفْعَلْ فَلَيْسَ لَهُ عَلَى ٱللهِ عَهْدٌ إِنْ شَاءَ غَفَرَ لَهُ وَإِنْ شَاءَ عَذَّبَهُ.

"ಒಬ್ಬ ಮುಸಲ್ಮಾನ ಅಥವಾ ಸತ್ಯ ವಿಶ್ವಾಸಿ ದ-ದಾಸನು ವುಝೂ ನಿರ್ವಹಿಸಿದಾಗ ತನ್ನ ಖ ತೊಳೆದರೆ, ವುಝೂವಿನ ನೀರಿನೊಂದಿಗೆ ನು ಮುಖದಿಂದ ಮತ್ತು ಕಣ್ಣಿನಿಂದ ಮಾಡಿದ ಪಗಳೆಲ್ಲವೂ ತೊಳೆಯಲ್ಪಡುತ್ತವೆ. ಅವನು ರಡು ಕೈಗಳನ್ನು ತೊಳೆಯುವಾಗ ನೀರಿನೊಂದಿಗೆ ಳಿಂದ ಮಾಡಿದ ಪಾಪಗಳೆಲ್ಲವೂ ಳೆಯಲ್ಪಡುತ್ತವೆ. ಮತ್ತು ಕಾಲುಗಳನ್ನು ಳೆಯುವಾಗ ಎರಡು ಕಾಲುಗಳಿಂದ ಮಾಡಿದ ಪಗಳೆಲ್ಲವೂ ತೊಳೆಯಲ್ಪಡುತ್ತವೆ ಮತ್ತು ನು ಪರಿಶುದ್ಧನಾಗುತ್ತಾನೆ." (ಮುಸ್ಲಿಮ್)

ಇಂತಹ ವುಝೂ ನಿರ್ವಹಿಸ ಬೇಕಾದರೆ ಪ್ರವಾದಿಯವರ(ಸ) ಆದೇಶದಂತೆ 'ಬಿಸ್ಮಿಲ್ಲಾಹಿ ಹ್ಮಾನಿರ್ರಹೀಮ್' (ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ) ಬ ವಚನದೊಂದಿಗೆ ಪ್ರಾರಂಭಿಸಬೇಕು. ಮಧ್ಯದಲ್ಲಿ ಅನಾವಶ್ಯಕವಾದ ಮಾತುಗಳನ್ನಾಡದೆ, ತರಂಗ ಮತ್ತು ಬಹಿರಂಗ ಶುದ್ಧಿ ಹಾಗೂ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗುವುದರ ತು ಯೋಚಿಸಬೇಕು. ವುಝೂವಿನ ನಂತರ ಪ್ರಜ್ಞಾಪೂರ್ವಕವಾಗಿ ಈ ಪ್ರಾರ್ಥನೆ ಪಠಿಸಬೇಕು-

أَشْهَدُ أَنْ لَا إِلٰهَ إِلَّا ٱللهُ وَأَشْهَدُ أَنَّ مُحَمَّدًا عَبْدُهُ وَرَسُولُهُ، اَللّٰهُمَّ ٱجْعَلْنِي مِنَ ٱلتَّوَّابِينَ وَٱجْعَلْنِي مِنَ ٱلْمُتَطَهِّرِينَ.

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ಅಶ್‌ಹದು ಅನ್ನ ಮುಹಮ್ಮದನ್ ್‌ದುಹೂ ವರಸೂಲುಹೂ, ಅಲ್ಲಾಹುಮ್ಮ ಅಲ್‌ನೀ ಮಿನತ್ತವ್ವಾಬೀನ್ ವಜ್‌ಅಲ್‌ನೀ ನಲ್ ಮುತತಹ್ಹಿರೀನ್"

"ಅಲ್ಲಾಹನ ಹೊರತು ಇತರ ಆರಾಧ್ಯರಿಲ್ಲ ಮತ್ತು ಮುಹಮ್ಮದ್ ಅಲ್ಲಾಹನ ದಾಸ ಗೂ ಸಂದೇಶ ವಾಹಕರಾಗಿದ್ದರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಅಲ್ಲಾಹನೇ ನನ್ನನ್ನು ಧಿಕ ಪಶ್ಚಾತ್ತಾಪ ಪಡುವವರಲ್ಲಿ ಮಾಡು ಮತ್ತು ನನ್ನನ್ನು ನೀನು ಪರಿಶುದ್ಧರಲ್ಲಿ ಸೇರಿಸು."

ಈ ರೀತಿ ಪ್ರತಿಯೊಂದು ವುಝೂವಿನೊಂದಿಗೆ ವಿಶ್ವಾಸವನ್ನು ನವೀಕರಿಸಿ, ತಪ್ಪು ಮ ಅಪರಾಧಗಳಿಗಾಗಿ ಪಾಶ್ಚಾತ್ತಾಪ ಪಡುವ, ಭಯಭಕ್ತಿ ಮತ್ತು ಪರಿಶುದ್ಧತೆಯನ್ನು ಸ್ವೀಕರಿಸ ಹೊಸ ಸಂಕಲ್ಪವನ್ನು ಮಾಡಬೇಕಾಗಿದೆ.

ವುಝೂ ನಿರ್ವಹಿಸಿದ ನಂತರ ಗಾಂಭೀರ್ಯ ಮತ್ತು ಮೌನದೊಂದಿಗೆ ಮಸೀದಿಯೆ ತೆರಳಬೇಕು. ಮನೆಯಿಂದ ಹೊರಡುವಾಗ ಕೇವಲ ಅಲ್ಲಾಹನ ಸ್ಮರಣೆ ಮತ್ತು ನಮಾಝಿನೆ ಗಮನ ನಿಮ್ಮ ಮನಸ್ಸನ್ನು ಆವರಿಸಬೇಕು. ಕೇವಲ ನಮಾಝ್ ನಿರ್ವಹಿಸುವ ಸಂಕಲ್ಪದೊಂ ಮನೆಯಿಂದ ಹೊರಡುವವರ ಬಗ್ಗೆ ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ-

"ಸಾಮೂಹಿಕ ನಮಾಝ್‌ಗೆ ಮನೆಯಲ್ಲಿ ಅಥವಾ ಪೇಟೆಯಲ್ಲಿ ನಿರ್ವಹಿಸುವ ನಮಾಝಿಗಿಂತ ಇಪ್ಪತ್ತೈದು ಪಟ್ಟು ಹೆಚ್ಚು ಶ್ರೇಷ್ಠತೆಯಿದೆ. ಅದು ಹೇಗೆಂದರೆ ಒಬ್ಬನು ಸರಿಯಾಗಿ ವುಝೂ ನಿರ್ವಹಿಸಿ ನಂತರ ಮಸೀದಿ ಯೆಡೆಗೆ ಸಾಗಿದರೆ ಮತ್ತು ಅವನ ಉದ್ದೇಶ ಕೇವಲ ನಮಾಝ್‌ಗಾಗಿ ತೆರಳುವುದು ಮಾತ್ರ ವಾಗಿದ್ದರೆ, ಪ್ರತಿಯೊಂದು ಹೆಜ್ಜೆಯೊಂದಿಗೆ ಅವನ ಸ್ಥಾನ ಒಂದು ಪಟ್ಟು ಹೆಚ್ಚಾಗುವುದು, ಅವನ ಒಂದು ಪಾಪವು ಕ್ಷಮಿಸಲ್ಪಡುವುದು ಮತ್ತು ಅವನು ನಮಾಝ್ ನಿರ್ವಹಿಸಿದರೆ, ಅವನು ಮಸೀದಿಯಲ್ಲಿರುವ ವರೆಗೂ ದೇವಚರರು ಅವನಿಗಾಗಿ ಹೀಗೆ ಪ್ರಾರ್ಥಿಸುತ್ತಿರುವರು, 'ಓ ಅಲ್ಲಾಹ್ ಅವನ ಮೇಲೆ ಕೃಪೆ ಮತ್ತು ಕರುಣೆಯನ್ನು ವರ್ಷಿಸು." (ಬುಖಾರಿ, ಮುಸ್ಲಿಮ್)

وة الرجل فی الجماعة
عف علی صلوته فی بيته
سوقه خمسا وعشرين
عفا وذلك انه اذا توضأ
سن الوضوء ثم خرج الی المسجد
خرجه الا الصلوة لم يخط
وة الا رفعت له بها درجة
ط عنه بها خطيئة فاذا صلی
زل الملائكة تصلی عليه
صلاه اللهم صل عليه
هم ارحمه

ಮಸೀದಿಯೊಳಗೆ ಪ್ರವೇಶಿಸುವಾಗ ಗೌರವಪೂರ್ಣವಾಗಿ ಪ್ರವೇಶಿಸಿರಿ. ತಾ ರಾಜಾಧಿರಾಜನ ಮತ್ತು ಸಕಲ ಲೋಕದ ಪರಿಪಾಲಕನ ಆಸ್ಥಾನದಲ್ಲಿ ಪ್ರವೇಶಿಸುತ್ತಿದ್ದೇ ಎಂದು ಭಾವಿಸುತ್ತಾ ಪ್ರವೇಶಿಸಿರಿ. ಮೊದಲು ಬಲಕಾಲನ್ನು ಒಳಗಿಟ್ಟು ಪ್ರಜ್ಞಾಪೂರ್ವಕವ ಹೀಗೆ ಪ್ರಾರ್ಥಿಸಿರಿ, اَللّٰهُمَّ افْتَحْ لِي اَبْوَابَ رَحْمَتِكَ "ಅಲ್ಲಾಹುಮ್ಮ ಫ್‌ತಹ್‌ಲೀ ಅಬ್ವಾ ರಹ್ಮತಿಕ" (ಓ ಅಲ್ಲಾಹ್ ನನಗಾಗಿ ನಿನ್ನ ಕರುಣೆಯ ದ್ವಾರವನ್ನು ತೆರೆದಿರಿಸು.) ಈ ದ ಕಂಠಪಾಠವಿಲ್ಲದಿದ್ದರೆ ಅದರ ಅರ್ಥವನ್ನಾದರೂ ಗ್ರಹಿಸಬೇಕು. ನಮಾಝ್ ಪ್ರಾರಂಭಿಸುವುದಕ್ಕ

ವಲು ಮಸೀದಿಯಲ್ಲಿ ಕುಳಿತುಕೊಳ್ಳುವಷ್ಟು ಸಮಯವನ್ನು ಭಾರವೆಂದು ಭಾವಿಸದಿರಿ. ರಾಗಿ ತಾನು ಅಲ್ಲಾಹನ ದರ್ಬಾರಿನಲ್ಲಿ ಹಾಜರಾಗಿದ್ದೇನೆ ಮತ್ತು ಅಲ್ಲಾಹನ ಸಾನಿಧ್ಯದ ಾಗ್ಯವು ತನಗೆ ಪ್ರಾಪ್ತವಾಗಿದೆಯೆಂದು ತಿಳಿದುಕೊಳ್ಳಿರಿ. ಮಸೀದಿಯೊಳಗೆ ಲೌಕಿಕ ುಗಳ ಬಗ್ಗೆ ಮಾತನಾಡಬಾರದು. ಪ್ರವಾದಿವರ್ಯರು(ಸ) ಹೇಳಿದ್ದಾರೆ,

يأتي على الناس زمان يكون حديثهم في مساجدهم في امر دنياهم فلا تجالسوا فليس لله فيهم حاجة -

"ಜನರು ಮಸೀದಿಯಲ್ಲಿ ಲೌಕಿಕ ರ್ಗಗಳ ಕುರಿತು ಮಾತನಾಡುವ ಕಾಲ ದು ಬರುವುದು. ಅಂತಹವರ ಬಳಿ ಕುಳಿತು ಬೇಡಿ ಏಕೆಂದರೆ ಅಂತಹ ಜನರೊಂದಿಗೆ ಹನಿಗೆ ಯಾವುದೇ ಸಂಬಂಧವಿಲ್ಲ"

(ಬೈಹಕಿ)

ಇದಕ್ಕೆ ಪ್ರತಿಯಾಗಿ ಮನಸ್ಸನ್ನು ಅಲ್ಲಾಹನ ಸ್ಮರಣೆಯಲ್ಲಿ ತೊಡಗಿಸಿರಿ ಮತ್ತು ಐಚ್ಛಿಕ ಝ್‌ಗಳನ್ನು ನಿರ್ವಹಿಸಿರಿ. ಐಚ್ಛಿಕ ನಮಾಝ್‌ಗಳನ್ನು ನಿರ್ವಹಿಸಿಯಾಗಿದ್ದರೆ 'ತಹಿಯ್ಯತುಲ್ ದ್'ನ ಎರಡು ರಕಅತ್ ನಮಾಝ್ ನಿರ್ವಹಿಸಿರಿ. ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ,

اذا دخل احدكم المسجد فليركع ركعتين قبل ان يجلس

"ನಿಮ್ಮಲ್ಲಿ ಯಾರಾದರೂ ಮಸೀದಿಯನ್ನು ೇಶಿಸಿದ್ದರೆ ಕುಳಿತುಕೊಳ್ಳುವುದಕ್ಕಿಂತ ವಲು ಎರಡು ರಕಅತ್ ನಮಾಝ್ ಹಿಸಿರಿ." (ಬುಖಾರಿ, ಮುಸ್ಲಿಮ್)

ಅನ್ಯಥಾ ಪವಿತ್ರ ಕುರ್‌ಆನಿನ ಪಾರಾಯಣ ಮಾಡಿರಿ ಅಥವಾ ಸಾವಕಾಶವಾಗಿ ಹನನ್ನು ಸ್ತುತಿಸಿರಿ. ಪ್ರವಾದಿವರ್ಯರು(ಸ) ಹೇಳುತ್ತಾರೆ,

"ನೀವು ಸ್ವರ್ಗದ ತೋಟಗಳಿಂದ ಹಾದು ಹೋಗುವಾಗ ಚೆನ್ನಾಗಿ ತಿನ್ನಿರಿ, ಅನುಚರರು ವರು, "ಸ್ವರ್ಗದ ತೋಟಗಳೆಂದರೇನು?" ಪ್ರವಾದಿವರ್ಯರು(ಸ) ಹೇಳಿದರು, 'ಮಸೀದಿಗಳು' ಅನುಚರರು ಕೇಳಿದರು, "ತಿನ್ನುವುದೆಂದರೇನು?" ಅದಕ್ಕುತ್ತರವಾಗಿ ಪ್ರವಾದಿವರ್ಯರು(ಸ),

سبحان الله، الحمد لله ولا اله الا الله الله اكبر

ಾನಲ್ಲಾಹಿ ಅಲ್‌ಹಮ್ದುಲಿಲ್ಲಾಹಿ, ವಲಾ ಇಲಾಹ ಇಲ್ಲಲ್ಲಾಹು, ಅಲ್ಲಾಹು ಅಕ್ಬರ್'

(ತಿರ್ಮಿದಿ)

(ಅಲ್ಲಾಹನು ಪರಮ ಪಾವನನು, ಸರ್ವಸ್ತುತಿಗಳೂ ಅಲ್ಲಾಹನಿಗೆ ಮೀಸಲು, ಹನಲ್ಲದೆ ಅನ್ಯ ಆರಾಧ್ಯರಿಲ್ಲ, ಅಲ್ಲಾಹನು ಮಹಾನನು.)

ಈ ವಚನಗಳನ್ನು ಅರ್ಥವರಿತು ಸರಿಯಾಗಿ ಸಾವಕಾಶವಾಗಿ ಪಠಿಸುತ್ತಿರಬೇಕು. ಝ್‌ಗಿಂತ ಮೊದಲು ಅಲ್ಲಾಹನ ಸ್ಮರಣೆ ಮನಸ್ಸನ್ನು ಆವರಿಸಿರದಿದ್ದರೆ ಅಂತಹ ಝಿನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು ಸುಲಭವಲ್ಲ. ಆದ್ದರಿಂದ ನಮಾಝ್

ನಿರ್ವಹಿಸುವುದಕ್ಕಿಂತ ಮೊದಲು ಅದಕ್ಕಾಗಿ ಸಿದ್ಧತೆ ನಡೆಸುವುದು ಬಹಳ ಮುಖ್ಯವಾ
ನಮಾಝ್ ನಿರ್ವಹಿಸುವುದಕ್ಕಿಂತ ಮೊದಲು ಕಿಬ್ಲಾಭಿಮುಖವಾಗಿ ನಿಂತು ಇಕಾಮ
ಲಕ್ಷ್ಯವಿಟ್ಟು ಕೇಳಿರಿ. ಪಜ್ಞಾಪೂರ್ವಕವಾಗಿ ಅದಕ್ಕುತ್ತರ ಹೇಳಿರಿ. ಈ ಕುರಿತು ಪ್ರವಾದಿವರ್ಯ
ಚರ್ಯೆ ಹೀಗಿದೆ-

"ಬಿಲಾಲ್‌ರವರು(ರ) ಇಕಾಮತ್ತನ್ನು ಪಠಿಸಲು ಪ್ರಾರಂಭಿಸಿ 'ಕದ್‌ಕಾಮತ್ತಿಸ್ಸಲ
ಎಂಬ ವಚನ ಪಠಿಸಿದಾಗ ಪ್ರವಾದಿವರ್ಯರು(ಸ) 'ಅಕಾಮಹಲ್ಲಾಹು ವಅದಾಮ
(ಅಲ್ಲಾಹನು ಅದನ್ನು ಸ್ಥಿರಗೊಳಿಸಲಿ ಮತ್ತು ಶಾಶ್ವತಗೊಳಿಸಲಿ) ಎಂದು ಹೇಳಿದರು. ಉ
ಕಡೆ ಎಲ್ಲಾ ಅಝಾನ್‌ಗೆ ಉತ್ತರ ನೀಡುವಂತೆಯೇ ಪುನರುಚ್ಚರಿಸಿದರು." (ಅಬೂ ದಾವ

ಅದರ ನಂತರ ತಕ್ಬೀರ್ ತಹ್ರೀಮ್‌ಗೆ ಮೊದಲು ಅಥವಾ ಅದರ ನಂತರ
ಪಠಿಸಿರಿ-*

"ಇನ್ನೀ ವಜ್ಜಹ್ತು ವಜ್‌ಹಿಯ ಲಿಲ್ಲದೀ ಫತರಸ್ಸಮಾವಾತಿ ವಲ್ ಅರ್‌ದ ಹನೀಫನ್ ಮುಸ್ಲಿಮನ್ ವಮಾ ಅನ ಮಿನಲ್ ಮುಶ್ರಿಕೀನ್ ಇನ್ನ ಸಲಾತೀ ವನುಸುಕೀ ವಮಹ್‌ಯಾಯ ವ ಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್ ಲಾ ಶರೀಕಲಹು ವಬಿದಾಲಿಕ ಉಮಿರ್ತು ವಅನ ಮಿನಲ್ ಮುಸ್ಲಿಮೀನ್."

وَجَّهْتُ وَجْهِيَ لِلَّذِي
السَّمٰوٰتِ وَالْأَرْضَ
فًا وَّمَا أَنَا مِنَ الْمُشْرِكِيْنَ
صَلَاتِيْ وَنُسُكِيْ وَمَحْيَايَ
مَاتِيْ لِلّٰهِ رَبِّ الْعٰلَمِيْنَ
شَرِيْكَ لَهٗ وَبِذٰلِكَ أُمِرْتُ
مِنَ الْمُسْلِمِيْنَ

(ನಾನು ನನ್ನ ಮುಖವನ್ನು ಭೂಮಿ-ಆಕಾಶಗಳನ್ನು ಸೃಷ್ಟಿಸಿದವನ ಕಡೆಗೆ ತಿರುಗಿ
ನೇರವಾದ ಮಾರ್ಗದಲ್ಲಿದ್ದುಕೊಂಡು ಮತ್ತು ಮುಸ್ಲಿಮ್ (ವಿಧೇಯ) ಆಗಿದ್ದುಕೊಂಡು,
ಬಹುದೇವಾರಾಧಕರಲ್ಲಿ ಸೇರಿದವನಲ್ಲ. ನಿಶ್ಚಯವಾಗಿಯೂ ನನ್ನ ನಮಾಝ್,
ಬಲಿದಾನ, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಸರ್ವಲೋಕಗಳ ಪರಿಪಾಲಕ
ಅಲ್ಲಾಹನಿಗೇ ಆಗಿದೆ. ಅವನಿಗೆ ಭಾಗೀದಾರರು ಯಾರೂ ಇಲ್ಲ. ನಾನು ಮುಸ್ಲಿಮ
(ಅಲ್ಲಾಹನ ಆಜ್ಞಾಪಾಲಕರಲ್ಲಿ) ಸೇರಿದವ ನಾಗಿದ್ದೇನೆ.)

ಇದು ನಮಾಝಿನ ಆತ್ಮವಾಗಿದೆ. ವಾಸ್ತವದಲ್ಲಿ ಒಬ್ಬ ಮುಸ್ಲಿಮನ ಸಂಪೂ
ಜೀವನದ ಆತ್ಮವೂ ಇದೇ ಆಗಿದೆ. ಹೀಗೆ ಸಂಪೂರ್ಣ ಏಕಾಗ್ರತೆಯೊಂದಿಗೆ ಸ

---

* ಈ ಪ್ರಾರ್ಥನೆಯನ್ನು ಸ್ವಲ್ಪ ಹೆಚ್ಚಳದೊಂದಿಗೆ ತಕ್ಬೀರ್ ತಹ್ರೀಮದ ನಂತರ ಪಠಿಸಬೇಕೆ
ಹದೀಸ್‌ನ ಪ್ರಸ್ತಾಪವಿದೆ. ಇಂತಹ ಅನೇಕ ಪ್ರಾರ್ಥನೆಗಳ ಬಗ್ಗೆ ಪ್ರವಾದಿವರ್ಯರು(ಸ) ಪ್ರಸ್ತಾಪಿಸಿದ
ಈ ಪೈಕಿ 'ಸುಬ್ಹಾನಕಲ್ಲಾಹುಮ್ಮ' ಒಂದಾದರೆ 'ಇನ್ನೀ ವಜ್ಜಹ್ತು' ಮತ್ತೊಂದು.

ಂದಲೂ ಧ್ಯಾನವನ್ನು ಸರಿಸಿ ನಮಾಝ್ ನಿರ್ವಹಿಸಿದರೆ ಖಂಡಿತವಾಗಿಯೂ ಅಂತಹ ಝಿನಲ್ಲಿ ಮನಸ್ಸು ಕೇಂದ್ರೀಕೃತವಾಗುವುದು ಮತ್ತು ಅಂತಹ ನಮಾಝ್ ಒಬ್ಬ ಶ್ವಾಸಿಯ ಸ್ಥಾನವನ್ನು ಉನ್ನತಗೊಳಿಸುವುದು.

ಇನ್ನು ನೀವು ಅಲ್ಲಾಹನನ್ನು ಪ್ರತ್ಯಕ್ಷವೆಂದು ಬಗೆದು 'ಅಲ್ಲಾಹು ಅಕ್ಬರ್' ಚ್ಚರಿಸುತ್ತಾ ಕೈಗಳನ್ನು ಕಿವಿಗಳ ವರೆಗೆ ಎತ್ತುತ್ತೀರಿ. ಆ ಮೂಲಕ ಲೋಕದ ಎಲ್ಲಾ ಕ ದಂಧೆಗಳಿಂದ ಕೈಯೆತ್ತಿ ಗೌರವ ಭಾವದೊಂದಿಗೆ ಕೈ ಕಟ್ಟಿ ನಿಮ್ಮ ನೈಜ ಒಡೆಯನ ದೆ ನಿಂತುಕೊಳ್ಳುತ್ತೀರಿ. ನಮಾಝ್ 'ಅಲ್ಲಾಹು ಅಕ್ಬರ್'ನಿಂದ ಪ್ರಾರಂಭವಾಗುತ್ತದೆ ತ್ತ ಅದನ್ನು ಅನೇಕ ಬಾರಿ ನಮಾಝ್‌ನಲ್ಲಿ ಹೇಳಬೇಕಾಗುತ್ತದೆ. ಇದರಿಂದ ನಮಾಝ್ ಪವಾತನಿಗೆ ಸರ್ವಲೋಕಗಳ ಮಾಲಕನ ಮಹಾನತೆ ಮತ್ತು ಹಿರಿತನದ ಹಾಗೂ ತನ್ನ ಮತ್ತು ನಿಸ್ಸಹಾಯಕತೆಯ ಅರಿವಾಗುತ್ತದೆ. 'ಅಲ್ಲಾಹು ಅಕ್ಬರ್' ಎಂಬ ವಚನವನ್ನು ಲವೂ ಚೆನ್ನಾಗಿ ಆಲೋಚಿಸಿ ಪಠಿಸಬೇಕು. ಹಾಗೆಯೇ ಅದರೊಂದಿಗೆ ಇನ್ನೂ ಕೆಲವು ರುಗಳತ್ತ ಗಮನ ಹರಿಸಿರಿ.

1. ತಾನು ಅಲ್ಲಾಹನೆದುರು ನಿಂತಿದ್ದೇನೆ ಮತ್ತು ಆತನು ತನ್ನ ಅಂತರಂಗ ಮತ್ತು ರಂಗವನ್ನು ನೋಡುತ್ತಿದ್ದಾನೆ ಎಂಬುದನ್ನು ಪ್ರತಿಬಾರಿಯೂ ಸರಿಯಾಗಿ ಮನದಟ್ಟು ತಬೇಕು ಮತ್ತು ಮರೆತರೆ ಪುನಃ ಅದನ್ನು ನವೀಕರಿಸಬೇಕು. ಪ್ರವಾದಿಯವರಲ್ಲಿ(ಸ) ಸಾನ್' (ಉತ್ತಮ ದಾಸ್ಯಾರಾಧನೆ)ನ ತಾತ್ಪರ್ಯವನ್ನು ಕೇಳಿದಾಗ ಅವರು ಹೀಗೆಂದಿದ್ದರು,

"ನೀವು ಅವನನ್ನು ನೋಡುತ್ತಿದ್ದೀರೆಂದು ು ಅಲ್ಲಾಹನ ದಾಸ್ಯ- ಆರಾಧನೆ ಮಾಡಿರಿ. ು ವೇಳೆ ನೀವು ಅವನನ್ನು ನೋಡುತ್ತಲಿರ ರೆ ಅವನು ನಿಮ್ಮನ್ನು ನೋಡುತ್ತಿದ್ದಾನೆಂದು ಸಬೇಕು."

أَنْ تَعْبُدَ اللهَ كَأَنَّكَ
تَرَاهُ فَإِنْ لَمْ تَكُنْ تَرَاهُ
فَإِنَّهُ يَرَاكَ -

2. ನಮಾಝಿನಲ್ಲಿ ನಿಲ್ಲುವುದು, ಕುಳಿತುಕೊಳ್ಳುವುದು, ಬಾಗುವುದು ಮತ್ತು ಷ್ಟಾಂಗವೆರಗುವುದೆಲ್ಲವೂ ವಿಧೇಯತೆ ಮತ್ತು ವಿನಮ್ರತೆಯ ಪರಾಕಾಷ್ಠೆಯಾಗಿದೆ. ಮಾನವನಿಗೆ ಯತೆಯ ಅಭ್ಯಾಸವನ್ನು ಮಾಡಿಸಿ ಅವನಲ್ಲಿ ಅದರ ಪ್ರಜ್ಞೆಯನ್ನು ಕಾರ್ಯತಃ ಡಿಸಲು ಇವುಗಳನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಈ ಕ್ರಿಯೆಗಳೆಲ್ಲವೂ ಾಹೀನವಾದ ಔಪಚಾರಿಕವಾಗಿ ಮಾರ್ಪಟ್ಟಿರುವುದು ವಿಷಾದಕರ. ವಾಸ್ತವದಲ್ಲಿ ಈ ಗಳೇ ನಮಾಝನ್ನು ಇತರ ಆರಾಧನಾ ಕರ್ಮಗಳಿಗಿಂತ ಶ್ರೇಷ್ಠಗೊಳಿಸಿದೆ. ಆದ್ದರಿಂದ ಕ್ರಿಯೆಗಳ ಬಗ್ಗೆ ಗಮನ ವಹಿಸಿರಿ. ಅಲ್ಲಾಹನ ಸನ್ನಿಧಾನದಲ್ಲಿ ನಾವು ಕೈ ಕಟ್ಟಿ ಅಥವಾ ರೆದು ನಿಂತಿರುವಾಗ, ಆತನ ಸನ್ನಿಧಾನದಲ್ಲಿ ಕುಳಿತಿರುವಾಗ, ಆತನೆದುರು ಬಾಗುವಾಗ ವಾ ಸಾಷ್ಟಾಂಗವೆರಗುವಾಗ, ತಾನು ಸರ್ವಲೋಕಗಳ ಒಡೆಯ ಮತ್ತು ನಮ್ಮ ನೈಜ ಧ್ಯನ ಮುಂದೆ ಅತೀವ ವಿಧೇಯತೆ ಮತ್ತು ವಿನಮ್ರತೆ ಪ್ರಕಟಿಸುತ್ತಿದ್ದೇವೆಂಬ ಪ್ರಜ್ಞೆ

ನಮ್ಮಲ್ಲಿ ಮೂಡಬೇಕಾಗಿದೆ. ಪವಿತ್ರ ಕುರ್‌ಆನ್ ಹೇಳುತ್ತದೆ:

وقوموا لله قانتين -

"ಅತ್ಯಂತ ವಿಧೇಯ ದಾಸರು ನಿಲ್ಲುವ ಹಾಗೆ ಅಲ್ಲಾಹನ ಮುಂದೆ ನಿಲ್ಲಿ

3. ನಮಾಝಿನಲ್ಲಿ ಪಠಿಸುವವುಗಳನ್ನು ಸರಿಯಾಗಿ ಆಲೋಚಿಸಿ ಅರ್ಥವರಿತು ಪಠಿಸ ನೀವು ಅಲ್ಲಾಹನ ಸನ್ನಿಧಾನದಲ್ಲಿ ನಿಂತು ಆತನೊಂದಿಗೆ ಸಂಭಾಷಿಸುತ್ತಿದ್ದೀರಿ ಆತನೊಂದಿಗೆ ಪ್ರತಿಜ್ಞೆ ಮಾಡುತ್ತಿದ್ದೀರೆಂಬುದನ್ನು ನೆನಪಿನಲ್ಲಿರಿಸಬೇಕು. ಪ್ರವಾದಿವರ್ಯ ಹೇಳಿರುತ್ತಾರೆ,

"ನಮಾಝ್ ನಿರ್ವಹಿಸುವಾತನು ತನ್ನ ಪ್ರಭುವಿನೊಡನೆ ಸಂಭಾಷಣೆ ನಡೆಸುತ್ತಾನೆ. ಆಗ ತಾನೇನು ಹೇಳುತ್ತಿದ್ದೇನೆ ಎಂಬುದರೆಡೆಗೆ ಅವನು ಗಮನಹರಿಸಬೇಕು." (ಅಹ್ಮದ್)

المصلّى يناجى ربه
فلينظر ما يناجيه به

ಇನ್ನೊಂದು ಪ್ರವಾದಿ ವಚನ ಹೀಗೆನ್ನುತ್ತದೆ, ಅಲ್ಲಾಹನು ಹೇಳುತ್ತಾನೆ, 'ನಮಾ ನನ್ನ ಮತ್ತು ನನ್ನ ದಾಸನ ನಡುವೆ ಸಮಾನವಾಗಿ ವಿಭಜಿಸಲ್ಪಟ್ಟಿದೆ ಮತ್ತು ನನ್ನ ದಾ ಅವರು ಬೇಡಿದ್ದು ಪ್ರಾಪ್ತವಾಗುವುದು.' ಹೀಗಿರುವಾಗ ದಾಸನು الحمد لله رب العالمين "ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್" ಎಂದು ಹೇಳುವಾಗ ಅಲ್ಲಾಹನು ಹೇಳು "ನನ್ನ ದಾಸನು ನನ್ನನ್ನು ಸ್ತುತಿಸಿದನು" ಮತ್ತು ಅವನು الرحمن الرحيم "ಅರ್ರಹ್ಮಾನಿರ್ರಹೀಮ್" ಎಂದು ಪಠಿಸುವಾಗ ಅಲ್ಲಾಹನು ಹೇಳುತ್ತಾನೆ, "ನನ್ನ ದ ನನ್ನನ್ನು ಪ್ರಶಂಸೆ ಮಾಡಿದನು" ಮತ್ತು ಅವನು مالك يوم الدين "ಮ ಯೌಮಿದ್ದೀನ್" ಎಂದು ಹೇಳುವಾಗ ಅಲ್ಲಾಹನು ಹೇಳುತ್ತಾನೆ, "ನನ್ನ ದಾಸನು ಮಹಿಮೆಯನ್ನು ಕೊಂಡಾಡಿದನು" ಮತ್ತು إياك نعبد وإياك نستعين "ಇಯ್ಯಾಕ ನಲ್ ವ ಇಯ್ಯಾಕ ನಸ್ತಈನ್" ಎಂದು ಹೇಳುವಾಗ ಅಲ್ಲಾಹನು ಹೇಳುತ್ತಾನೆ, "ನನ್ನ ದಾಸನ ನಡುವೆ ಕರಾರು ಏರ್ಪಟ್ಟಿದೆ ಮತ್ತು ಅವನಿಗೆ ಅವನು ಬೇಡಿದ್ದು ಲಭ್ಯವಾಗುವ ಅವನು

اهدنا الصراط المستقيم صراط الذين أنعمت عليهم
غير المغضوب عليهم ولا الضالين

"ಇಹ್ದಿನಸ್ಸಿರಾತಲ್ ಮುಸ್ತಕೀಮ್, ಸಿರಾತಲ್ಲದೀನ ಅನ್‌ಅಮ್ತ ಅಲೈಹಿಮ್, ಗೈರಿಲ್ ದೂಬಿ ಅಲೈಹಿಮ್ ವಲದ್ದಾಲ್ಲೀನ್" ಎಂದು ಹೇಳುವಾಗ ಅಲ್ಲಾಹನು ಹೇಳುತ್ತಾನೆ, " ನನ್ನ ದಾಸನಿಗಾಗಿ ಇದೆ ಮತ್ತು ಅವನಿಗೆ ಅವನು ಬೇಡಿದ್ದೆಲ್ಲವೂ ದೊರಕುವುದು." (ಮುಸ್ಲಿ

ಈ ಹದೀಸ್‌ಗಳಿಂದ ತಿಳಿಯುವುದೇನೆಂದರೆ, ನಮಾಝ್ ನಿರ್ವಹಿಸುವಾತನು ಝಿನಲ್ಲಿ ಅಲ್ಲಾಹನೊಂದಿಗೆ ಮಾತನಾಡುತ್ತಾನೆ, ಆತನೊಂದಿಗೆ ಕರಾರು ಮತ್ತು ಗಳನ್ನು ಮಾಡುತ್ತಾನೆ, ಆತನಲ್ಲಿ ಪ್ರಾರ್ಥಿಸುತ್ತಾನೆ ಮತ್ತು ಆತನು ಅದಕ್ಕೆ ಉತ್ತರವನ್ನು ತ್ತಾನೆ. ಹೀಗಿರುವಾಗ ನಮಾಝ್ ನಿರ್ವಹಿಸುವಾತನು ತಾನು ಪಠಿಸುವುದನ್ನೆಲ್ಲ ನರಿಯದೇ ಪಠಿಸಿದರೆ ಅದು ಸರ್ವ ಲೋಕಗಳ ಒಡೆಯನೊಂದಿಗೆ ಅಸಭ್ಯತೆ ುವುದಲ್ಲವೇ?

4. ನಡೆ ನುಡಿಗಳಲ್ಲಿ ಅಲ್ಲಾಹನ ದಾಸ್ಯ ಮತ್ತು ವಿಧೇಯತೆಯನ್ನು ಪ್ರಕಟಿಸುವಾಗ ಮನಸ್ಸು ಆತನೊಂದಿಗಿರಬೇಕು. ಮನಃ ಪೂರ್ವಕವಾಗಿಯಲ್ಲದೆ ಕೇವಲ ಔಪಚಾರಿಕ ತೋರಿಕೆಗಾಗಿ ದಾಸ್ಯ-ಆರಾಧನೆ ಮಾಡುವಾಗ ಅಲ್ಲಾಹನ ದೃಷ್ಟಿಯಲ್ಲಿ ಅದಕ್ಕೆ ಯಾವ ಖ್ಯೂ ಇರುವುದಿಲ್ಲವೆಂಬುದು ಸರ್ವವಿಧಿತ.

ಏಕೆಂದರೆ ಆತನು ಅಂತರಾಳವನ್ನು ಅರಿಯುವವನಾಗಿದ್ದಾನೆ. ಆದುದರಿಂದ ಆರಾಧನಾ ಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷದ ದಾಸ್ಯ ಒಳಗೊಂಡಿರಬೇಕು. ನಮ್ಮ ಮನಸ್ಸು ಮುಂದೆ ಬಾಗುತ್ತದೋ ಎಂಬುದನ್ನು ಆತನು ನೋಡುತ್ತಿದ್ದಾನೆಂಬ ಅರಿವು ಸದಾ ಲ್ಲಿರಬೇಕು. ಮನಸ್ಸಿನ ಸಮರ್ಪಣೆ ಮತ್ತು ವಿಧೇಯತೆಯಲ್ಲಿ ನೈಜ ಮೌಲ್ಯ ವಾಗಿದೆ. ವಿಧೇಯತೆಯಲ್ಲಿ ಪ್ರತ್ಯಕ್ಷ ಬಾಗುವಿಕೆ ಅಡಕವಾಗಿದ್ದರೂ ಅದರ ನೈಜ ಪವು ಮನಸ್ಸಿನ ವಿಧೇಯತೆ ಮತ್ತು ವಿನೀತತೆಯಾಗಿದೆ. ಪವಿತ್ರ ಕುರ್‌ಆನ್ ಹೇಳುತ್ತದೆ.

أَلَمْ يَأْنِ لِلَّذِينَ آمَنُوا أَنْ تَخْشَعَ قُلُوبُهُمْ لِذِكْرِ اللَّهِ وَمَا نَزَلَ مِنَ الْحَقِّ

"ಸತ್ಯ ವಿಶ್ವಾಸಿಗಳೇ, ಅವರ ಹೃದಯವು ಹನ ಸ್ಮರಣೆಯಿಂದ ಕರಗುವ ಹಾಗೂ ಂದ ಅವತೀರ್ಣಗೊಂಡ ಸತ್ಯದ ಮುಂದೆ ವ ಕಾಲವಿನ್ನೂ ಬರಲಿಲ್ಲವೇ?"

(ಸೂರಃ ಹದೀದ್- 16)

5. ನಮಾಝಿನಲ್ಲಿ ಪ್ರಕಟಿಸುವಂತಹ ಭಕ್ತಿ ಮತ್ತು ವಿಧೇಯತೆಯು ವಾಸ್ತವದಲ್ಲಿ ಜೀವನದಲ್ಲಿ ಪ್ರತಿಬಿಂಬಿಸುತ್ತಿದೆಯೇ ಎಂದು ಆಲೋಚಿಸಿ ನೋಡಿ. ಹಾಗಿರದಿದ್ದಲ್ಲಿ ಅಲ್ಲಾಹನೊಂದಿಗೆ ಪಾಪ ವಿಮೋಚನೆಗಾಗಿ ಪ್ರಾರ್ಥಿಸಿ ಮತ್ತು ಆತನ ದಾಸ್ಯದ ಕೆಗಳನ್ನು ಪೂರೈಸುವ ಪ್ರತಿಜ್ಞೆ ಮಾಡಬೇಕು. ಆದುದರಿಂದಲೇ ಪ್ರತಿ ರಕಾಅತಿನ ್ಯದಲ್ಲಿ ಎರಡು ಸುಜೂದುಗಳ ಮಧ್ಯೆ ಈ ದುಆ ಪಠಿಸುವುದು ಪ್ರವಾದಿ ಚರ್ಯೆಯಾಗಿದೆ.

اللَّهُمَّ اغْفِرْ لِي وَارْحَمْنِي وَاهْدِنِي وَعَافِنِي وَارْزُقْنِي

"ಅಲ್ಲಾಹುಮ್ಮಗ್‌ಫಿರ್‌ಲೀ, ವರ್‌ಹಮ್ನೀ, ದಿನೀ, ವಆಫಿನೀ ವರ್‌ಝುಕ್‌ನೀ"

(ನನ್ನ ಪ್ರಭೂ! ನನ್ನನ್ನು ಕ್ಷಮಿಸು, ನನ್ನ ಮೇಲೆ ಕೃಪೆ ತೋರು, ನನ್ನನ್ನು ರ್ಗದಲ್ಲಿ ನಡೆಸು, ನನಗೆ ಆರೋಗ್ಯ ಪ್ರಧಾನ ಮಾಡು. ಮತ್ತು ನನಗೆ

ಜೀವನಾಧಾರ ದಯಪಾಲಿಸು). (ಅಬೂ ದಾವೂದ್, ತಿ

ನಮಾಝಿನ ಸಮಾಪ್ತಿಯ ವೇಳೆ ತಶಹ್ಹುದ್ ಮತ್ತು ದರೂದ್ (ಪ್ರವಾದಿವರ್ಯ ಮೇಲೆ ಸ್ವಸ್ತಿ ವಚನ) ಪಠಿಸಿದ ನಂತರ ನಮಾಝ್ ಮುಗಿಯುವುದಕ್ಕಿಂತ ಪ ಕ್ಷಮಾಯಾಚನೆಯ ಪ್ರಾರ್ಥನೆ ಇದೆ ಮತ್ತು ನಮಾಝ್ ಮುಗಿದ ತಕ್ಷಣ ಕ ಪ್ರವಾದಿವರ್ಯರು(ಸ) ಮೂರು ಸಲ ಕ್ಷಮಾಯಾಚನೆ ಮಾಡುತ್ತಿದ್ದರು. (ಮುಸ್ಲಿ

ಈ ಎಲ್ಲಾ ಕ್ಷಮಾಯಾಚನೆಯು ವಿವೇಚನೆ ಮತ್ತು ದೇವಭಕ್ತಿಯಿಂದ ಕೂ ಮತ್ತು ಪ್ರತಿ ಎರಡು ನಮಾಝ್‌ಗಳ ಮಧ್ಯೆ ಇರುವ ಸಮಯದಲ್ಲಿ ಆತ್ಮಾವಲೋಕನ ಪ್ರತಿ ನಮಾಝಿನಲ್ಲೂ ಕ್ಷಮೆ ಯಾಚಿಸಿದರೆ ಹಾಗೂ ದಾಸ್ಯ ಮತ್ತು ವಿಧೇಯತೆಯ ಸ ಮಾಡಿದರೆ ಮಾನವನ ಅದೃಷ್ಟವನ್ನು ಬದಲಿಸುವಲ್ಲಿ ನಮಾಝ್ ಖಂಡಿತವಾಗಿ ಪರಿಣಾಮಕಾರಿಯಾದ ಸಾಧನವಾಗಿ ಮಾರ್ಪಡುವುದು. ಪವಿತ್ರ ಕುರ್‌ಆನಿನಲ್ಲಿ ಹೇಳಿರು

"ನಮಾಝ್ ಎಲ್ಲಾ ಅಶ್ಲೀಲ ಕಾರ್ಯಗಳಿಂದಲೂ ಕೆಡುಕಿನಿಂದಲೂ ತಡೆಯುತ್ತದೆ."

الصَّلٰوةَ تَنْهٰى
فَحْشَآءِ وَالْمُنْكَرِ

ನಮಾಝಿನ ಸಂಸ್ಥಾಪನೆ

ಪವಿತ್ರ ಕುರ್‌ಆನಿನಲ್ಲಿ ನಮಾಝಿನ ತಾಕೀತು ಅನೇಕ ಬಾರಿ ಮಾಡಲಾಗಿದೆ. ಕಡೆಗಳಲ್ಲಿ ಅದರ ಪ್ರಸ್ತಾಪವಿದೆ. ಆದರೆ ಎಲ್ಲಾ ಕಡೆಗಳಲ್ಲೂ ಅದಕ್ಕಾಗಿ ಬಳಸಲಾದ ಬಗ್ಗೆ ಆಲೋಚಿಸಬೇಕಾಗಿದೆ. ಪವಿತ್ರ ಕುರ್‌ಆನಿನಲ್ಲಿ ನಮಾಝಿಗಾಗಿ ಪ್ರತಿಯೊ ಕಡೆಯಲ್ಲೂ 'ಅಕೀಮ್' (ಸಂಸ್ಥಾಪಿಸು), 'ಅಕೀಮೂ' (ಸಂಸ್ಥಾಪಿಸಿರಿ), 'ಅಕಾಮೂ' 'ಯುಕೀವ (ಸಂಸ್ಥಾಪಿಸುತ್ತಾರೆ) ಎಂಬಿತ್ಯಾದಿ ಪದಗಳನ್ನು ಉಪಯೋಗಿಸಲಾಗಿದೆ. ಇದರರ್ಥವೇನೆ ಪವಿತ್ರ ಕುರ್‌ಆನಿನಲ್ಲಿ ನಮಾಝನ್ನು ಸಂಸ್ಥಾಪಿಸಬೇಕೆಂಬ ಆದೇಶವಿದೆಯೇ ಹೊ ನಮಾಝನ್ನು ನಿರ್ವಹಿಸುವಂತೆ ಹೇಳಲಾಗಿಲ್ಲ. ಹಾಗಾದರೆ ನಮಾ ಸಂಸ್ಥಾಪಿಸುವುದೆಂದರೇನು? ಇದನ್ನು ಸರಿಯಾಗಿ ಮನದಟ್ಟು ಮಾಡಬೇಕಾಗಿದೆ. ಭಾಷೆಯಲ್ಲಿ ಯಾವುದೇ ಕೆಲಸಕ್ಕಾಗಿ ಈ ಪದವನ್ನು ಉಪಯೋಗಿಸಲಾದರೆ ಅದರ ಆ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಬೇಕು ಎಂಬುದಾಗಿದೆ. ಅರ್ಥವ ಅದರ ಬೇಡಿಕೆಗಳನ್ನೂ ಈಡೇರಿಸುತ್ತಾ ನಿರ್ವಹಿಸಬೇಕಾಗಿದೆ. ಈ ಪದವನ್ನು ನಮಾಝಿ ಉಪಯೋಗಿಸಲಾದರೆ ಅದರ ಅರ್ಥ ನಮಾಝನ್ನು ಅದರ ಬೇಡಿಕೆಗಳನ್ನು ಈಡೇರಿಸ ನಿರ್ವಹಿಸಬೇಕಾಗಿದೆ.

ನಮಾಝನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದರಲ್ಲಿ ಅನೇಕ ವಿಷಯ ಅಡಕವಾಗಿವೆ-

1. ಈ ನಿಟ್ಟಿನಲ್ಲಿ ಮೊದಲನೆಯದು, ಈ ಮೊದಲು ವಿವರವಾಗಿ ಹೇಳಿ ಮಾತುಗಳೇ ಆಗಿವೆ- ಅರ್ಥಾತ್ ನಮಾಝನ್ನು ಅರ್ಥವರಿತು, ಅಲ್ಲಾಹನ ಮು

ುತೆಯನ್ನು ಪ್ರಕಟಿಸುತ್ತಾ ಆತನ ಔನ್ನತ್ಯ ಮತ್ತು ಮಹಾನತೆಯ ಪ್ರಜ್ಞೆಯೊಂದಿಗೆ ಸುವುದು. ಇದನ್ನೇ ಭಯಭಕ್ತಿ ಎಂದು ಕರೆಯಲಾಗಿದೆ. ಇದು ನಮಾಝಿನ ಪನೆಗಾಗಿರುವ ಮೊದಲ ಶರ್ತವಾಗಿದೆ. ತನ್ನ ನಮಾಝಿನಲ್ಲಿ ಭಯಭಕ್ತಿ ತೋರುವ ಶ್ವಾಸಿಗಳು ವಿಜೇತರೆಂದು ಅಲ್ಲಾಹನು ಹೇಳಿದ್ದಾನೆ.

"ಖಂಡಿತವಾಗಿಯೂ ಸತ್ಯ ವಿಶ್ವಾಸಿಗಳು ಗಳಾದರು. ಅವರು ತಮ್ಮ ನಮಾಝಿ ಭಯಭಕ್ತಿ ತೋರುತ್ತಾರೆ."

قَدْ أَفْلَحَ الْمُؤْمِنُونَ الَّذِينَ هُمْ فِي صَلَاتِهِمْ خَاشِعُونَ

2. ನಮಾಝನ್ನು ಕ್ಲಪ್ತ ಸಮಯದಲ್ಲಿ ನೆರವೇರಿಸಬೇಕು. ಸಮಯ ತಪ್ಪಿಸಿ ಅಥವಾ ಗಿ ನೆರವೇರಿಸಬಾರದು. ಇಶಾ ನಮಾಝನ್ನು ಹೊರತು ಪಡಿಸಿ ಇತರೆಲ್ಲಾ ನಮಾಝನ್ನು ಷ್ಟ ಬೇಗ ನಿರ್ವಹಿಸಬೇಕು. ಇಶಾ ನಮಾಝನ್ನು ತಡವಾಗಿ ನಿರ್ವಹಿಸುವುದು ಸೂಕ್ತವಾಗಿದೆ.

3. ಪುರುಷರು ಸದಾ ಸಾಮೂಹಿಕ ನಮಾಝಿನಲ್ಲಿ ಪಾಲ್ಗೊಳ್ಳಬೇಕಾಗಿದೆ. ಯಾವ ವೂ ಇಲ್ಲದೆ ಸಾಮೂಹಿಕ ನಮಾಝನ್ನು ತೊರೆಯುವವನು* ಪಾಪಿಯಾಗಿದ್ದಾನೆ. ್ನ ತೊರೆಯಲು ಶರೀಅತ್ ಅಂಗೀಕರಿಸಿದ ಕಾರಣವಿರಬೇಕು. ಪ್ರವಾದಿ ವಚನಗಳಲ್ಲಿ ಹಿಕ ನಮಾಝಿನ ಕುರಿತು ಬಹಳ ಹೆಚ್ಚು ತಾಕೀತು ಮಾಡಲಾಗಿದೆ. ಪ್ರವಾದಿವರ್ಯರು(ಸ) ್ದಾರೆ, "ಸಾಮೂಹಿಕವಾಗಿ ನಮಾಝ್ ನಿರ್ವಹಿಸುವುದಕ್ಕೆ ಒಂಟಿಯಾಗಿ ನಮಾಝ್ ಹಿಸುವುದಕ್ಕಿಂತ 27 ಪಟ್ಟು ಹೆಚ್ಚು ಪ್ರತಿಫಲವಿದೆ." (ಬುಖಾರಿ, ಮುಸ್ಲಿಮ್)

ಇನ್ನೊಂದು ಪ್ರವಾದಿ ವಚನದಲ್ಲಿ ಹೀಗಿದೆ-

"ಒಬ್ಬ ವ್ಯಕ್ತಿಯು ಅದಾನ್ ಕೇಳಿಯೂ ಕಾರಣವಿಲ್ಲದೆ ಸಾಮೂಹಿಕ ನಮಾಝಿನಲ್ಲಿ ್ಗೊಳ್ಳದಿದ್ದರೆ, ಆತನು ಒಂಟಿಯಾಗಿ ನಿರ್ವಹಿಸುವ ನಮಾಝ್ ಸ್ವೀಕೃತವಾಗಲಾರದು." ಯಾಯಿಗಳು ಕೇಳಿದರು, "ಆ ಕಾರಣ ಯಾವುದು?" ಪ್ರವಾದಿವರ್ಯರು, "ಭಯ ಾ ರೋಗ"** ಎಂದು ಉತ್ತರಿಸಿದರು.

ಒಟ್ಟಿನಲ್ಲಿ ಸಾಮೂಹಿಕ ನಮಾಝ್‌ನ ಬಗ್ಗೆ ಎಷ್ಟು ತಾಕೀತು ಮಾಡಲಾಗಿದೆಯೆಂದರೆ ಯಾಗಿ ನಿರ್ವಹಿಸಲಾಗುವ ನಮಾಝ್, ನಮಾಝ್ ಆಗಿ ಉಳಿಯಲಾರದೆಂದು ವಾಗುತ್ತದೆ ಅಥವಾ ಕನಿಷ್ಟ ಪಕ್ಷ ನಮಾಝನ್ನು ಸಂಸ್ಥಾಪಿಸುವ ಶರ್ತ ಇದರಿಂದ ೇರಲಾರದು. ಯುದ್ಧದ ಸಮಯದಲ್ಲೂ ನಮಾಝ್‌ನ್ನು ಸಾಮೂಹಿಕವಾಗಿ ಹಿಸಬೇಕೆಂಬ ಆದೇಶವಿದೆ. ಇದರಿಂದ ಅದರ ಮಹತ್ವವನ್ನು ತಿಳಿಯಬಹುದಾಗಿದೆ.

---

* ಮನೆಯಲ್ಲಿ ನಮಾಝ್ ನಿರ್ವಹಿಸುವ ಅನುಮತಿ ಕೇವಲ ಮಹಿಳೆಯರಿಗಿದೆ ಅವರಿಗೆ ುಲ್ಲಿ ನಿರ್ವಹಿಸುವುದೇ ಶ್ರೇಷ್ಠವಾಗಿದೆ.

** ಇಲ್ಲಿ ಪ್ರಾಣಭಯ ಅಥವಾ ತೀವ್ರ ರೋಗದಿಂದ ಮಸೀದಿಗೆ ಹೋಗಲು ಸಾಧ್ಯವಾಗದಿದ್ದರೆ ಹೋದರೂ ಪ್ರಾಣಕ್ಕೇನಾದರೂ ಹಾನಿಯಾಗುವ ಭಯವಿದ್ದರೆ ಅದನ್ನು ಕಾರಣವೆಂದು ಣಿಸಬಹುದಾಗಿದೆ.

ಧರ್ಮದ ಮಾರ್ಗದಲ್ಲಿ ಕೇವಲ ಅಲ್ಲಾಹನ ಸಂಪ್ರೀತಿಯ ಅಭಿಲಾಷೆಯಿಂದ ಮಾಡುವುದೇ ಇಸ್ಲಾಮಿನ ದೃಷ್ಟಿಯಲ್ಲಿ ಆರಾಧನೆಯಾಗಿದೆ. ಆದರೆ ಇಂತಹ ಆರಾಧನ ನಿರತವಾಗಿರುವಾಗಲೂ ಸಾಮೂಹಿಕವಾಗಿ ನಮಾಝ್ ನಿರ್ವಹಿಸುವ ಆದೇಶ ನೀಡ ಪವಿತ್ರ ಕುರ್‌ಆನಿನಲ್ಲಿ ಧರ್ಮ ಯುದ್ಧದ ವೇಳೆ ನಮಾಝ್ ನಿರ್ವಹಿಸುವ ಪ್ರವಾದಿವರ್ಯರಿಗೆ ವಿವರವಾಗಿ ತಿಳಿಸಲಾಗಿದೆ. ಅಲ್ಲಾಹನು ಹೇಳಿದ್ದಾನೆ,

"ಓ ಪೈಗಂಬರರೇ, ನೀವು ಮುಸಲ್ಮಾನರೊಂದಿಗೆ ಇದ್ದು(ಯುದ್ಧಾವಸ್ಥೆಯಲ್ಲಿ) ನಮಾಝ್ ಮಾಡಿಸಲು ನಿಂತಾಗ ಅವರಲ್ಲೊಂದು ಗುಂಪು ನಿಮ್ಮ ಸಂಗಡ ನಿಲ್ಲಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡೇ ಇರಲಿ. ಅವರು 'ಸಜ್ದಃ' ಮಾಡಿದ ಮೇಲೆ ಹಿ ಸರಿದು ಬಿಡಲಿ ಮತ್ತು ನಮಾಝ್ ಮಾಡಿರದ ಇನ್ನೊಂದು ಗುಂಪು ಬಂದು ನಿಮ್ಮ ಸ ನಮಾಝ್ ಮಾಡಲಿ, ಅವರೂ ಜಾಗರೂಕರಾಗಿಯೂ ಶಸ್ತ್ರಧಾರಿಗಳಾಗಿಯೂ ಏಕೆಂದರೆ ನೀವು ನಿಮ್ಮ ಆಯುಧ ಮತ್ತು ಸಾಮಾನು- ಸರಂಜಾಮುಗಳಿಂದ ಕಿಂಚಿತ್ತಾ ಅಜಾಗರೂಕರಾದಾಗ ನಿಮ್ಮ ಮೇಲೆ ಹಠಾತ್ತಾಗಿ ಧಾಳಿಮಾಡಬೇಕೆಂದು ಸತ್ಯ ನಿಷೇ ಹೊಂಚು ಹಾಕಿಕೊಂಡಿರುತ್ತಾರೆ. ಒಂದು ವೇಳೆ ಮಳೆಯ ಕಾರಣದಿಂದ ತೊಂದರೆಯಾಗುವುದೆಂದು ಕಂಡರೆ ಅಥವಾ ನೀವು ರೋಗಗ್ರಸ್ಥರಾದರೆ ಆಯುಧ ಕೆಳಗಿಡುವುದರಲ್ಲಿ ದೋಷವಿಲ್ಲ. ಆಗಲೂ ಜಾಗೃತರಾಗಿರಿ. ಅಲ್ಲಾಹ್ ಸತ್ಯನಿಷೇಧಿ ಅಪಮಾನಕಾರಕ ಶಿಕ್ಷೆಯನ್ನು ಸಿದ್ಧಗೊಳಿಸಿಟ್ಟಿರುತ್ತಾನೆ." (ಸೂರಃ ಅನ್ನಿಸಾ

ನಮಾಝಿನ ಪ್ರಾಮುಖ್ಯತೆಯೊಂದಿಗೆ ಸಾಮೂಹಿಕ ನಮಾಝಿನ ಮಹತ್ವ ಎಂಬುದನ್ನು ಇದರಿಂದ ಅಂದಾಜಿಸಬಹುದು.

ಅಲ್ಲಾಹನ ಮಾರ್ಗದಲ್ಲಿ ಹೋರಾಡುವಾಗ ಸೋಲು- ಗೆಲುವಿನ (ಜೀವನ್ಮ ಸೆಣಸಾಟದಲ್ಲೂ ನಮಾಝನ್ನು ಮತ್ತು ಸಾಮಾಹಿಕ ನಮಾಝನ್ನು ತೊರೆಯುವ ಅನು ಇಲ್ಲ.

4. ನಮಾಝನ್ನು ನಿಧಾನವಾಗಿ, ಸಾವಕಾಶದಿಂದ ನಿರ್ವಹಿಸಬೇಕಾಗಿದೆ. ನಿಂತುಕೊಳ್ಳು ಬಾಗುವುದು, ರುಕೂವಿನ ನಂತರ ನಿಲ್ಲುವುದು, ಸಾಷ್ಟಾಂಗವೆರಗುವುದು, ಎರಡು ಸುಜೂ ಮಧ್ಯೆ ಕುಳಿತುಕೊಳ್ಳುವುದು ಮುಂತಾದ ಕ್ರಿಯೆಗಳೆಲ್ಲವನ್ನೂ ನಿಧಾನವಾಗಿ ಮರ್ಯಾದೆಯೊ ನಿರ್ವಹಿಸಬೇಕು. ಭಯಭಕ್ತಿಯ ಕುರಿತು ವಿವರಿಸಲಾದ ವಿಷಯಗಳ ಬಗ್ಗೆ ಗಮನವ ಈ ಸ್ಥಿತಿ ತನ್ನಷ್ಟಕ್ಕೆ ಉಂಟಾಗುತ್ತದೆ. ಇದನ್ನು ಈ ಕೆಳಗಿನ ಘಟನೆಯಿಂದ ಸುಲಭ ಗ್ರಹಿಸಬಹುದು-

ಒಮ್ಮೆ ಪ್ರವಾದಿವರ್ಯರು ಮಸೀದಿಗೆ ಆಗಮಿಸಿದರು. ಆಗ ಒಬ್ಬ ವ್ಯಕ್ತಿ ಬ ನಮಾಝ್ ನಿರ್ವಹಿಸಿ ಪ್ರವಾದಿವರ್ಯರಿಗೆ(ಸ) ಸಲಾಮ್ ಹೇಳಿದನು, ಪ್ರವಾದಿವರ್ಯ ಸಲಾಮ್‌ಗೆ ಉತ್ತರವನ್ನು ನೀಡಿ, "ಹೋಗಿ ಪುನಃ ನಮಾಝ್ ನಿರ್ವಹಿಸಿರಿ. ನಿಮ್ಮ ನಮಾ ಸರಿಯಾಗಿಲ್ಲ" ಎಂದು ಹೇಳಿದರು. ಹೀಗೆ ಮೂರು ಬಾರಿ ನಡೆಯಿತು (ಅವರು ನಮಾ ಮಾಡಿ ಸಲಾಮ್ ಹೇಳುತ್ತಿದ್ದು ಮತ್ತು ಪ್ರವಾದಿವರ್ಯರು(ಸ) ಅವನನ್ನು ಪುನಃ ನಮಾ

ಂಸುವಂತೆ ಹೇಳುತ್ತಿದ್ದರು.) ನಂತರ ಆ ವ್ಯಕ್ತಿಯು ಹೇಳಿದನು, "ತಮ್ಮನ್ನು ರ್ಮದೊಂದಿಗೆ ಕಳುಹಿಸಿದಾತನ ಆಣೆ, ನಾನು ಇದಕ್ಕಿಂತ ಒಳ್ಳೆಯ ರೀತಿಯ ನಮಾಝ್ ಂಸಲಾರೆ, ನನಗೆ ಅದನ್ನು ಕಲಿಸಿಕೊಡಿ." ಪ್ರವಾದಿ(ಸ) ಹೇಳಿದರು, "ನಮಾಝ್ ಂಸಲಿಕ್ಕಾಗಿ ಮೊದಲು ಚೆನ್ನಾಗಿ ವುಝೂಮಾಡಿ ನಂತರ ಕಿಬ್ಲಾಭಿಮುಖವಾಗಿ ನಿಂತುಕೊಂಡು ಹು ಅಕ್ಬರ್' ಎಂದು ಉಚ್ಚರಿಸಿ ಕುರ್‌ಆನಿನಿಂದ ಸುಲಭವಾಗಿ ಪಠಿಸಲು ಸಾಧ್ಯವಾದುದ್ದನ್ನು). ನಂತರ ರುಕೂಅ್(ಬಾಗುವುದು) ಮಾಡಿರಿ. ರುಕೂಅ್ ನೆಮ್ಮದಿಯಿಂದ ನಿರ್ವಹಿಸಿ, ನಿನಿಂದ ತಲೆಯೆತ್ತಿ ಸಾವಕಾಶದೊಂದಿಗೆ ನಿಂತುಕೊಳ್ಳಿರಿ. ನಂತರ ಸುಜೂದ್ (ಸಾಷ್ಟಾಂಗ) ಂಸಿರಿ, ಅದೂ ಸಂಪೂರ್ಣ ಶಾಂತತೆ ಮತ್ತು ನೆಮ್ಮದಿಯಿಂದಾಗಿರಬೇಕು. ನಂತರ ತಲೆ ಸಮಾಧಾನದೊಂದಿಗೆ ಕುಳಿತುಕೊಳ್ಳಿರಿ, ಪುನಃ ಸಾವಕಾಶವಾಗಿ ಸುಜೂದು ನಿರ್ವಹಿಸಿ, ರೀತಿ ಸಂಪೂರ್ಣ ನಮಾಝ್ ನಿರ್ವಹಿಸಿ." (ಬುಖಾರಿ)

ಇದಕ್ಕೆ ಪ್ರತಿಯಾಗಿ ಯಾರು ತಮ್ಮ ನಮಾಝ್‌ಗಳನ್ನು ಅತುರಾತುರವಾಗಿ ಹಿಸುತ್ತಾರೋ ಅಂತಹವರ ನಮಾಝ್ ನಿಷ್ಪ್ರಯೋಜಕವಾಗಿದೆ. ನಮಾಝಿನ ಪನೆಗಾಗಿ ಅತ್ಯಂತ ಹೆಚ್ಚು ಶಾಂತತೆ, ಸಾವಕಾಶ ಮತ್ತು ಮರ್ಯಾದೆಯ ಅಗತ್ಯವಿದೆ.

5. ನಮಾಝಿನ ಕುರಿತು ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಲ್ಲಿ ಬಂದಿರುವ ಕ್ಷ ಮತ್ತು ಪರೋಕ್ಷ ಆಜ್ಞೆಗಳು, ಶರ್ತಗಳು ಮತ್ತು ಶಿಷ್ಟಾಚಾರಗಳನ್ನು ಸರಿಯಾಗಿ ಸಬೇಕು. ಸತ್ಯವಿಶ್ವಾಸಿಗಳ ಲಕ್ಷಣವನ್ನು ಪವಿತ್ರ ಕುರ್‌ಆನ್ ಈ ರೀತಿ ಸ್ಪಷ್ಟಪಡಿಸಿದೆ-

وَالَّذِيْنَ هُمْ عَلٰى صَلَوٰتِهِمْ يُحَافِظُوْنَ

'ಮತ್ತು ತಮ್ಮ ನಮಾಝ್‌ಗಳನ್ನು ಕೊಳ್ಳುತ್ತಾರೆ.'

(ಸೂರಃ ಅಲ್ ಮೂಮಿನೂನ್-9)

ಸತ್ಯವಿಶ್ವಾಸಿಗಳನ್ನುದ್ದೇಶಿಸಿ ಈ ರೀತಿ ಹೇಳಲಾಗಿದೆ-

حَافِظُوْا عَلَى الصَّلَوٰتِ وَالصَّلٰوةِ الْوُسْطٰى -

"ನಿಮ್ಮ ನಮಾಝುನ್ನು ಜಾಗರೂಕತೆ ವ ಪಾಲಿಸಿರಿ, ಮುಖ್ಯವಾಗಿ ಸರ್ವ ಗುಣ ನ್ನವಾದ ನಮಾಝ್."

ಇದು ನಮಾಝ್‌ನ ಸಂಸ್ಥಾಪನೆಯಾಗಿದೆ. ಇದು ಧರ್ಮದ ಮೂಲ ಸ್ತಂಭ, ಧರ್ಮ ಸ್ಥಾಪನೆಯ ಪ್ರಮುಖ ಅಂಗ ಮತ್ತು ಬುನಾದಿಯಾಗಿದೆ!

❋ ❋ ❋

ಝಕಾತ್

'ಝಕಾತ್' ಇಸ್ಲಾಮಿನ ಮೂರನೆಯ ಸ್ತಂಭವಾಗಿದೆ. ಪವಿತ್ರ ಕುರ್‌ಆನಿನ ಕಡೆಗಳಲ್ಲಿ ಝಕಾತ್ ನೀಡುವ ಆದೇಶವಿದೆ. ನಮಾಝ್ ಸಂಸ್ಥಾಪನೆಯು ಮು ಕರ್ತವ್ಯವಾಗಿರುವಂತೆಯೇ ಝಕಾತ್ ನೀಡುವುದು ಕೂಡಾ ಮುಸ್ಲಿಮರ ಮೇಲಿನ ಕ ವಿಧಿಯಾಗಿದೆ. ಪವಿತ್ರ ಕುರ್‌ಆನಿನ ಅನೇಕ ಕಡೆಗಳಲ್ಲಿ ನಮಾಝಿನೊಂದಿಗೆ ಝ ಕೂಡಾ ಪ್ರಸ್ತಾಪಿಸಲಾಗಿದೆ. ಒಂದೆಡೆ ಝಕಾತ್ ಕೊಡದಿರುವುದು ಬಹುದೇವಾ ಗುಣವಾಗಿದೆ ಎಂದು ಹೇಳಲಾಗಿದೆ.

"ಬಹುದೇವ ವಿಶ್ವಾಸಿಗಳಿಗೆ ವಿನಾಶವಿದೆ. ಅವರು ಝಕಾತ್ ಕೊಡದವರು ಹಾಗೂ ಪರಲೋಕ ಜೀವನವನ್ನು ನಿರಾಕರಿಸುವವರು."

(ಸೂರಃ ಹಾಮೀಮ್ ಅಸ್ಸಜ್ದಃ -6,7)

لِّلْمُشْرِكِينَ الَّذِينَ
نَ الزَّكٰوةَ وَهُمْ
رَةِ هُمْ كٰفِرُوْنَ ٥

ಇದು ವಸ್ತು ಸ್ಥಿತಿಯೂ ಆಗಿದೆ. ಪರಲೋಕದ ಮೇಲೆ ವಿಶ್ವಾಸವಿರಿಸದ ಮತ್ತು ಕೊನೆಗೆ ತಮ್ಮೊಡೆಯನ ಮುಂದೆ ಹಾಜರಾಗಬೇಕೆಂದು ನಂಬದವರೇ, ಪ್ರಜ್ಞಾಪೂರ್ವ ಅಲ್ಲಾಹನ ಆಜ್ಞೆಯನ್ನು ಧಿಕ್ಕರಿಸುವ ಭಂಡತನ ತೋರಬಲ್ಲರು.

ತಮಗೆ ಎಲ್ಲವನ್ನೂ ನೀಡಿದ ಒಡೆಯನ ಆದೇಶವನ್ನು ನಿರಾಕರಿಸಿ ಆತನ ಮಾಗ ತನ್ನ ಸಂಪತ್ತನ್ನು ವ್ಯಯಿಸದೇ ಇರಲು ಇಂತಹವರಿಗೆ ಮಾತ್ರ ಸಾಧ್ಯ.

ಝಕಾತ್ ನೀಡಿದವರಿಗೆ ಪರಲೋಕದಲ್ಲಿ ಕಠಿಣ ಶಿಕ್ಷೆಯ ಎಚ್ಚರಿಕೆಯನ್ನು ನೀಡ ಪವಿತ್ರ ಕುರ್‌ಆನಿನ ಸೂರಃ ಅತೌಬಃ ದಲ್ಲಿ ಇದರ ಬಗ್ಗೆ ಬಹಳ ಸ್ಪಷ್ಟವಾಗಿ ತಿಳಿಸಲ ತಮ್ಮ ಸಂಪತ್ತಿನಿಂದ ಝಕಾತ್ ನೀಡದೆ ಅದನ್ನು ಕೂಡಿಟ್ಟರೆ ಪರಲೋಕದಲ್ಲಿ ಅ ಶ್ರೀಮಂತರ ಪಾಲಿಗೆ ಅವರ ಸಂಪತ್ತೇ ದೊಡ್ಡ ಪೀಡೆಯಾಗಿ ಮಾರ್ಪಡುವುದು. ಸಂಪತ್ತಿನಿಂದ ಅವರ ಹಣೆ ಮತ್ತು ಸೊಂಟಕ್ಕೆ ತಿವಿಯಲಾಗುವುದು ಮತ್ತು ಅವರ "ಇಂದು ನೀನು ಕೂಡಿಟ್ಟಿರುವ ಸಂಪತ್ತನ್ನು ಆಸ್ವಾದಿಸು ಎಂದು ಹೇಳಲಾಗುವುದು.

ೀಚಿಸಿ ನೋಡಿ, ಒಬ್ಬ ವ್ಯಕ್ತಿಯು ಅಲ್ಲಾಹನಲ್ಲಿ ವಿಶ್ವಾಸವಿರಿಸಿ, "ಆತನೇ ತನ್ನ ನೈಜ ಏನೆಂದು ಒಪ್ಪಿಕೊಳ್ಳುತ್ತಾನೆ. ಆತನು ತಾನಿಚ್ಛಿಸಿದವನಿಗೆ ನೀಡುತ್ತಾನೆ. ಅಂತೆಯೇ ತನ್ನ ಇರುವುದೆಲ್ಲವೂ ಆತನ ಕೃಪೆಯಿಂದ ದೊರಕಿರುವಂತಹುದು ಮತ್ತು ಇನ್ನು ಮುಂದೆ ಸಿಗಬಹುದಾದ ಸರ್ವಸ್ವವೂ ಆತನ ಕೃಪೆಯನ್ನೇ ಅವಲಂಬಿಸಿದೆ" ಎಂದು ನಂಬುತ್ತಾನೆ. ಇಷ್ಟೆಲ್ಲವನ್ನು ನಂಬಿದ ನಂತರ ಯಾವ ವ್ಯಕ್ತಿಯಾದರೂ ತನ್ನ ಸಂಪತ್ತಿನಿಂದ ಝಕಾತ್ ಿ, ಅಲ್ಲಾಹನು ಸಂಪತ್ತನ್ನು ವ್ಯಯಿಸುವ ಆದೇಶ ನೀಡಿರುವೆಡೆಯಲ್ಲಿ ಹಣವನ್ನು ಸದೇ ಇದ್ದರೆ ಅವನಿಗಿಂತ ಮಿಗಿಲಾದ ಆತ್ಮ ಶತ್ರು ಇನ್ನೊಬ್ಬನಿರಲಾರನು. ಅಂತಹ ವ್ಯಕ್ತಿಯು ತನಗೆ ತಾನೇ ಆಕ್ರಮ ಮಾಡುವವನಾಗಿದ್ದಾನೆ.ಅವನು ತನ್ನ ಕಾಲಿಗೆ ಕೊಡಲಿಯೇಟು ಕೊಡುವವನಾಗಿದ್ದಾನೆ.ಅಲ್ಲಾಹನು ಆ ವ್ಯಕ್ತಿಗೆ ತನ್ನ ಕೃಪೆಯಿಂದ ಅವನ ಸಂತೃಪ್ತಿಗಾಗಿ ನೀಡಿದ ಸಂಪತ್ತನ್ನು ಅವನು ತನ್ನ ಪಾಲಿಗೆ ಹಾವು ಮತ್ತು ಗಳನ್ನಾಗಿ ಮಾರ್ಪಡಿಸುತ್ತಿದ್ದಾನೆ. ಅವನು ಅಲ್ಪಾವಧಿಯ ಸಂಪತ್ತಿನ ಮೋಹದಲ್ಲಿ ಶಾಶ್ವತವಾದ ಜೀವನವನ್ನು ವ್ಯರ್ಥಗೊಳಿಸುತ್ತಿದ್ದಾನೆ.

ಸಂಪತ್ತಿನ ವ್ಯಾಮೋಹವು ಮಾನವನಲ್ಲಿ ಹಲವಾರು ಕೆಡುಕುಗಳನ್ನುಂಟುಮಾಡುತ್ತದೆ. ದೌರ್ಬಲ್ಯಗಳ ಮೂಲವೇ ಸಂಪತ್ತಿನ ವ್ಯಾಮೋಹವೆಂಬುದು ಸತ್ಯ. ಜನರು ಸಂಪತ್ತಿನ ೋಹದಲ್ಲಿ ಸಿಲುಕಿ ಬಿಟ್ಟಾಗಲೇ ಅಕ್ರಮ, ಕ್ಷೋಭೆ, ಅಶಾಂತಿ ಮತ್ತಿತರ ಅನೇಕ ಗಳು ತಲೆದೋರುತ್ತವೆ. ಲೋಕದಲ್ಲಿ ಪ್ರಚಲಿತವಿರುವ ಸಂಕಷ್ಟಗಳ ದೊಡ್ಡ ಕಾರಣವು ಬಂಡವಾಳ ಶಾಹಿತ್ವವಾಗಿದೆ ಎಂಬುದನ್ನು ಇಂದಿನ ಕಾಲದಲ್ಲಿ ಎಲ್ಲರೂ ಬಲ್ಲರು. ಂಡವಾಳ ಶಾಹಿತ್ವವೆಂದರೇನು? 'ಹಣದ ವ್ಯಾಮೋಹ ಮತ್ತು ಸಂಪತ್ತಿನೊಂದಿಗೆ ಗಾಢ ಂಧ.' ಹಾಗೆ ನೋಡುವುದಾದರೆ ಸಂಪತ್ತು ಸ್ವತಃ ಕೆಟ್ಟದ್ದೇನೂ ಅಲ್ಲ. ಅದು ಅಲ್ಲಾಹನ ್ರಹವಾಗಿದೆ. ಅದರಿಂದ ತಮ್ಮ ಜೀವನಾವಶ್ಯಕತೆಗಳು ಪೂರ್ತಿಯಾಗುತ್ತವೆ. ಅದು ಸುಖ ಮತ್ತು ಆರಾಮದ ಹೇತುವಾಗಿದೆ. ಆದರೆ ಅದನ್ನು ಬಳಸಬೇಕಾದ ರೀತಿಯಲ್ಲೇ ವರೆ ಮಾತ್ರ ಅದೊಂದು ಅನುಗ್ರಹವಾಗಿ ಉಳಿಯುತ್ತದೆ. ನಾವು ಸಂಪತ್ತಿನ ಕರಾಗಿ ಮಾರ್ಪಡಬಾರದು. ಸಂಪತ್ತು ಮಾನವನಿಗೆ ಅತ್ಯಂತ ಪ್ರಿಯಕರವಾದ ಾಗಿ ಮಾರ್ಪಟ್ಟು ಜನರು ಆ ಧನದೇವತೆಯನ್ನು ಪೂಜಿಸಲು ಪ್ರಾರಂಭಿಸುವಾಗ ಇಂದು ಕ್ಕೆ ದೊಡ್ಡ ಶಾಪವಾಗಿ ಮಾರ್ಪಟ್ಟಿರುವ ಬಂಡವಾಳ ಶಾಹಿತ್ವದ ಸೃಷ್ಟಿಯಾಗುತ್ತದೆ. ಹನ ಧರ್ಮವು ಮಾನವರಿಗೆ ಅನುಗ್ರಹವಾಗಿದೆ. ಅದು ಸಮಗ್ರವಾದ ಅನುಗ್ರಹ. ಂದಲೇ ಇಸ್ಲಾಮ್ ತನ್ನ ಅನುಯಾಯಿಗಳ ಮನಸ್ಸಿನಲ್ಲಿ ಸಂಪತ್ತಿನ ವ್ಯಾಮೋಹ ುವುದನ್ನು ಸಹಿಸುವುದಿಲ್ಲ. ಇಸ್ಲಾಮಿಗೆ ಸಂಪತ್ತಿನೊಂದಿಗೆ ವೈರತ್ವವಿಲ್ಲ, ಬದಲಾಗಿ ್ನ ಅಲ್ಲಾಹನ ಅನುಗ್ರಹವೆಂದು ಸಾರುತ್ತದೆ. ಆದರೆ ಅದರ ಅತಿಯಾದ ವ್ಯಾಮೋಹ ಹಾರ್ದಿಕ ಸಂಬಂಧವನ್ನು ಅದು ಖಂಡಿತ ಇಷ್ಟ ಪಡುವುದಿಲ್ಲ. ಅದು ಸಂಪತ್ತನ್ನು ವಣೆಯಲ್ಲಿಡ ಬಯಸುತ್ತದೆ. ಅದನ್ನು ವ್ಯಯಿಸುವ ಮಾರ್ಗವನ್ನು ತೋರಿಸುತ್ತದೆ. ಿಗೆ ಸಹಾಯ ಮಾಡುವ ಮತ್ತು ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು

ಮಾಡುವುದರ ಪ್ರತಿಯಾಗಿ ಎಂತಹ ಪ್ರತಿಫಲದ ಭರವಸೆ ನೀಡುತ್ತದೆಂದರೆ ಸತ್ಯವಿಶ್ವಾಸಿಗೆ ಹಣ ಕೂಡಿಡುವುದಕ್ಕಿಂತ ಹೆಚ್ಚು ಅಲ್ಲಾಹನ ಮಾರ್ಗದಲ್ಲಿ ವ್ಯಯಿ ಹೆಚ್ಚು ಸಂತೃಪ್ತಿಯುಂಟಾಗುತ್ತದೆ. ಇಸ್ಲಾಮಿನ ಸಮಗ್ರ ಬೋಧನೆಗಳು ನಮ್ಮ ಮು ಯಾವುದೇ ಸಮಾಜವು ಅದನ್ನು ಸರಿಯಾಗಿ ಪಾಲಿಸಿದರೆ ಇಂದು ಜಗತ್ತಿನ ಅಭಿಶಾಪವೆನಿಸಿಕೊಂಡಿರುವ ಬಂಡವಾಳ ಶಾಹಿತ್ವ ಅಲ್ಲಿ ತಲೆದೋರುವ ಸಾಧ್ಯತೆಯೇ ಈ ವಿಷಯವನ್ನು ತಿಳಿಯಬೇಕಾದರೆ ವ್ಯಾಪಾರ, ಕೃಷಿ, ಬಡ್ಡಿ, ಭೂ ಮಾಲಕತ್ವ, ಹಕ್ಕು ಮತ್ತು ಸಂಪತ್ತನ್ನು ವ್ಯಯಿಸುವ ಇಸ್ಲಾಮೀ ಶಿಷ್ಟಾಚಾರಗಳು ಮತ್ತು ದುರುಪಯೋಗದ ತಡೆಗಟ್ಟುವಿಕೆಯ ಬಗ್ಗೆ ಇಸ್ಲಾಮಿನ ಬೋಧನೆ ಇತ್ಯಾದಿಗಳೆಲ್ಲ ಕಲಿಯಬೇಕಾಗಿದೆ. ಅವುಗಳನ್ನು ಇಲ್ಲಿ ವಿವರಿಸುವ ಅವಕಾಶವಿಲ್ಲ. ಆದರೆ ಈ ನಿಮಯ ಝಕಾತ್‌ಗೆ ಮಹತ್ವದ ಪಾತ್ರವಿದೆ ಎಂಬುದು ಗಮನಾರ್ಹ-

ಇದು ಬಂಡವಾಳ ಶಾಹಿತ್ವವೆಂಬ ರೋಗದ ಬೇರನ್ನೇ ಕಿತ್ತೆಸೆಯುವ ಪ್ರಾಥಮಿಕ ಯಾಗಿದೆ. ಝಕಾತ್ ಪಾವತಿಸುವುದರಿಂದ ಮನಸ್ಸಿನಿಂದ ಸಂಪತ್ತಿನ ವ್ಯಾಮೋಹ ದೂರವಾ ಮತ್ತು ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕ ವಿಜಯದ ನಿರೀಕ್ಷೆಯಿಂದ ಅವನ ಕೊಂಡಿರುವ ಮುಷ್ಠಿ ಸಡಿಲವಾಗುತ್ತದೆ. ನಂತರ ಈ ಸಡಿಲವಾದ ಮುಷ್ಠಿಯು ಅ ಸಂಪ್ರೀತಿ ಮತ್ತು ಪರಲೋಕದ ಪ್ರತಿಫಲದ ನಿರೀಕ್ಷೆ ಇರುವೆಡೆಗಳಲ್ಲಿ ಸದಾ ತೆರೆದುಕೊಂಡಿ

ಝಕಾತಿನ ವಸೂಲಿ ಮತ್ತು ವಿತರಣೆಯ ಇಸ್ಲಾಮೀ ಪದ್ಧತಿ ಕೂಡ ಸಮಾಜದ ಸುಧಾರಣೆಯ ಅತ್ಯುತ್ತಮ ಮಾರ್ಗವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಝ ಸ್ವಯಂ ನಿಗದಿಪಡಿಸಿ ತಾನಿಚ್ಛಿಸಿದವರಿಗೆ ವಿತರಿಸುವುದು ಇಸ್ಲಾಮಿನ ರೀತಿಯಲ್ಲ. ಇ ಝಕಾತನ್ನು ಪಡೆಯುವವರ ಆತ್ಮ ಗೌರವ ಮತ್ತು ಸ್ವಾಭಿಮಾನಕ್ಕೆ ಧಕ್ಕೆಯುಂಟಾಗುವ ಝಕಾತ್ ನೀಡುವವನ ಮನಸ್ಸಿನಲ್ಲಿ ಒಂದು ವಿಧದ ಅಹಂಕಾರವುಂಟಾಗುವ ಸಾಧ್ಯತೆಯೀ ಇಸ್ಲಾಮ್ ಧರ್ಮದ ಪ್ರಕಾರ ಇವೆರಡೂ ಸರಿಯಲ್ಲ. ಝಕಾತ್ ವಿತರಣೆಯ ಸರಿ ವಿಧಾನವೇನೆಂದರೆ ಇಸ್ಲಾಮೀ ಆಡಳಿತದ ಸಿಬ್ಬಂದಿಗಳು ಮುಸ್ಲಿಮರಿಂದ ಝ ಹಣವನ್ನು ವಸೂಲಿ ಮಾಡಬೇಕು. ನಂತರ ಆ ಹಣವನ್ನು 'ಬೈತುಲ್ ಮಾಲ್' (ಬೊಕ್ಕಸ)ದಲ್ಲಿ ಜಮಾಯಿಸಬೇಕು. ಆ ಬಳಿಕ ಸರಕಾರ ತನ್ನ ವ್ಯವಸ್ಥೆಯ ಮೂಲಕ ಅರ್ಹರಿಗೆ ತಲುಪಿಸಬೇಕು. ಇಸ್ಲಾಮೀ ವ್ಯವಸ್ಥೆಯು ಜಾರಿಯಲ್ಲಿದ್ದಷ್ಟು ಕಾಲ ಝಕಾ ರೀತಿಯಲ್ಲೇ ಪಾವತಿಸಲ್ಪಡುತ್ತಿತ್ತು. ಪ್ರವಾದಿವರ್ಯರ(ಸ) ಮರಣಾನಂತರ ಕೆಲವು ಮುಸ್ಲಿ ಝಕಾತನ್ನು 'ಬೈತುಲ್‌ಮಾಲ್'ಗೆ ನೀಡದೆ ವೈಯಕ್ತಿಕವಾಗಿ ಪಾವತಿಸ ಬಯಸಿದರು ಇಸ್ಲಾಮಿನ ಮೊದಲ ಖಲೀಫರಾದ ಹ.ಅಬೂಬಕ್ಕರ್ ಸಿದ್ದೀಕರು(ರ) ಆ ಜನರ ಜಿಹಾದಿನ ಆದೇಶ ನೀಡಿದ್ದರು. ಇದರಿಂದ ಇಸ್ಲಾಮಿನಲ್ಲಿ ಝಕಾತಿಗಿರುವ ಮಹತ್ವ ಅದರ ಪಾವತಿಯ ಸರಿಯಾದ ರೀತಿಯನ್ನು ನೀವು ಅಂದಾಜಿಸಬಹುದು. ಇಸ್ಲಾಮೀ ವ್ಯ ಸಮಾಪ್ತಿಯ ನಂತರ ಮುಸ್ಲಿಮರು ಅದನ್ನು ಪುನಃ ಸ್ಥಾಪಿಸುವ ಪ್ರಯತ್ನ ಮಾಡಬೇಕಾ ಅದರ ಜೊತೆಗೆ ಇಸ್ಲಾಮಿನ ಈ ಸ್ತಂಭದ ಸ್ಥಾಪನೆಗಾಗಿಯೂ ಯಾವುದಾದರೊಂದು

ಬೇಕಾಗಿತ್ತು. ಇದರಲ್ಲಿ ಹೇರಳ ಅನುಗ್ರಹ ಮತ್ತು ಸಮೃದ್ಧಿ ಇದೆ. ಆದ್ದರಿಂದಲೇ ಎಲ್ಲಾ ಳಲ್ಲಿಯೂ ಝಕಾತನ್ನು ಸಾಮೂಹಿಕವಾಗಿ ಸಂಗ್ರಹಿಸಿ ನಂತರ ಅದನ್ನು ಸರಿಯಾದ ಲ್ಲಿ ವ್ಯಯಿಸುವ ಕಾರ್ಯದಲ್ಲಿ ಮುಸ್ಲಿಮರು ಶ್ರಮ ವಹಿಸಿದ್ದಾರೆ. ಪ್ರತಿಯೊಬ್ಬ ಯೂ ಸ್ವತಃ ತನ್ನ ಝಕಾತನ್ನು ನಿಗದಿ ಪಡಿಸಿ ತನಗೆ ಸೂಕ್ತವೆನಿಸುವಲ್ಲಿ ಖರ್ಚು ಬಿಡುವ ರೀತಿಯು ದೋಷ ಪೂರ್ಣವಾದುದಾಗಿದೆ.

ಝಕಾತ್ ಇಸ್ಲಾಮಿನ ಮೂಲಭೂತ ಆದೇಶವಾಗಿದೆ. ಅದನ್ನು ಪಾವತಿಸದವನು ಮಹಾ ಯಾಗಿದ್ದಾನೆ ಮತ್ತು ಅದನ್ನು ನಿರಾಕರಿಸುವವನು ಸತ್ಯ ನಿಷೇಧಿಯಾಗಿದ್ದಾನೆ. ಒಬ್ಬ ಝಕಾತ್ ನೀಡಿದ ನಂತರ ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ವಿಷಯದಲ್ಲಿ ರ್ಣವಾಗಿ ನಿಶ್ಚಿಂತನಾಗಿ ಬಿಡಬೇಕೆಂಬುದು ಇದರ ಅರ್ಥವಲ್ಲ. ಉದಾಹರಣೆಗೆ ಝ್ ಇಸ್ಲಾಮಿನ ಪ್ರಥಮ ಮೂಲಭೂತ ಆದೇಶ ಮತ್ತು ಅಲ್ಲಾಹನನ್ನು ಸ್ಮರಿಸುವ ಶ್ರಮವಾದ ಮಾರ್ಗವಾಗಿದೆ. ಆದರೆ ಒಬ್ಬ ವ್ಯಕ್ತಿಯು ನಮಾಝ್ ನಿರ್ವಹಿಸಿದ ನಂತರ ಯೂ ಅಲ್ಲಾಹನನ್ನು ಸ್ಮರಿಸದೇ ಇದ್ದರೆ ಅಂತಹವನ ಪಾಡೇನು? ಕಾನೂನಿನ ಪ್ರಕಾರ ನ್ನು ತಪ್ಪಿತಸ್ಥನೆಂದು ಹೇಳಲು ಸಾಧ್ಯವಿಲ್ಲ, ಆದರೆ ಅಂತಹ ವ್ಯಕ್ತಿಯ ಮನದಲ್ಲಿ ಝ್ ಸರಿಯಾಗಿ ಮನೆ ಮಾಡಿಲ್ಲ ಎಂದು ನೀವು ಹೇಳುತ್ತೀರಿ ತಾನೆ? ಇಸ್ಲಾಮನ್ನು ಸರಿಯಾಗಿ ಅರ್ಥೈಸಿದ್ದರೆ ನಮಾಝಿನಿಂದಾಗಿ ಅವನಲ್ಲಿ ಕನಿಷ್ಠಪಕ್ಷ ಅಲ್ಲಾಹನನ್ನು ಸ್ಮರಿಸುವ ಮತ್ತು ಆತನ ಆಜ್ಞಾಪಾಲನೆ ಮಾಡುವಷ್ಟು ಪರಿಣಾಮವಾಗಬೇಕಿತ್ತು. ತಿನ ವಿಷಯವೂ ಅಷ್ಟೇ. ಝಕಾತ್ ನೀಡಿದ ನಂತರ ನಾವು ಆ ವ್ಯಕ್ತಿಯ ಬಗ್ಗೆ ಕಾನೂನಿನ ಏನನ್ನೂ ಹೇಳಲು ಸಾಧ್ಯವಿಲ್ಲ. ಆದರೆ ವಾಸ್ತವದಲ್ಲಿ ಮಾನವನ ಮನಸ್ಸಿನಿಂದ ತ್ತಿನ ವ್ಯಾಮೋಹವನ್ನು ಕಿತ್ತೆಸೆದು, ಸದಾ ಅಲ್ಲಾಹನ ಸಂಪ್ರೀತಿಯನ್ನು ಬಯಸಿ, ರ್ಭ ಸಿಕ್ಕಿದಾಗಲೆಲ್ಲ ಆತನಿಗಾಗಿ ಮತ್ತು ಪರಲೋಕದ ಪ್ರತಿಫಲದ ಅಪೇಕ್ಷೆಯಿಂದ ರವಾಗಿ ತಮ್ಮ ಸಂಪತ್ತನ್ನು ವ್ಯಯಿಸುವ ಮನೋವೃತ್ತಿಯನ್ನು ಮಾನವನಲ್ಲಿ ಮೂಡಿಸುವುದೇ ತಿನ ಉದ್ದೇಶವಾಗಿದೆ. ಒಬ್ಬ ವ್ಯಕ್ತಿಯ ಮನಸ್ಸಿನಿಂದ ಸಂಪತ್ತಿನ ವ್ಯಾಮೋಹವು ದಿದ್ದರೆ ಮತ್ತು ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ವ್ಯಯಿಸಲು ಆತನ ಕೈಗಳು ದಿದ್ದರೆ, ಆ ವ್ಯಕ್ತಿಯು ಝಕಾತ್ ನೀಡುವುದು ಇಂದು ನಮಾಝ್ ನಿರ್ವಹಿಸುವ ರು ವ್ಯಕ್ತಿಗಳ ನಮಾಝಿಗೆ ಸಮಾನವಾಗುತ್ತದೆ. ಇಂತಹ ವ್ಯಕ್ತಿಯು ತನ್ನ ಬಗ್ಗೆ ಗಿ ಆಲೋಚಿಸಬೇಕಾಗಿದೆ ಮತ್ತು ತನ್ನ ಮನಸ್ಸಿನ ರೋಗವನ್ನು ಶಮನಗೊಳಿಸಬೇಕಾಗಿದೆ. ಕಷ್ಟ ಸಹಿಸಿ ಅಲ್ಲಾಹನ ಸಂಪ್ರೀತಿಗಾಗಿ ವೆಚ್ಚ ಮಾಡಿದರೆ ಹೃದಯದ ಗಂಟುಗಳು ವಾಗಿ ತೆರೆಯಲ್ಪಡುತ್ತದೆ. ಇದುವೇ ನೈಜ ವಿಜಯವಾಗಿದೆ. ಅಲ್ಲಾಹನು ಹೇಳುತ್ತಾನೆ:

وَمَنْ يُوقَ شُحَّ نَفْسِهِ فَأُولَٰئِكَ هُمُ الْمُفْلِحُونَ ۝

"ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ಉಗಳು" (ಸೂರಃ ಅಲ್ ಹಶ್ರ್-9)

ಝಕಾತ್ ಪಾವತಿಸುವುದು ಅಥವಾ ಅಲ್ಲಾಹನ ಮಾರ್ಗದಲ್ಲಿ ದಾನಧರ್ಮ ಮಾಡು ಇಸ್ಲಾಮಿನ ಮೂಲಭೂತ ಆರಾಧನೆಗಳಲ್ಲೊಂದಾಗಿದೆ. ಇವುಗಳು ಮನಸ್ಸನ್ನು ಶುದ್ಧಿ ವಿಶ್ವಾಸವನ್ನು ವೃದ್ಧಿಸುತ್ತವೆ. ಒತ್ತಾಯಕ್ಕೊಳಗಾಗಿ ಅಥವಾ ತೋರಿಕೆಗಾಗಿ ವ್ಯ ಸಂಪತ್ತಿನಿಂದ ಈ ಪ್ರತಿಫಲಗಳು ಸಿಗಲಾರವು. ಅಂತಹ ವಿನಿಯೋಗವು ಅಲ್ಲಾಹನ ಕೆ ಮತ್ತು ಶಿಕ್ಷೆಗೆ ಹೇತುವಾಗಬಹುದು.

ಸಂಪತ್ತು , ಆಭರಣ, ಕೃಷಿ, ಜಾನುವಾರು ಇತ್ಯಾದಿಗಳೆಲ್ಲದರ ಝಕಾತ್ ನೀಡಬೇಕ ಇದರ ಆದೇಶಗಳನ್ನು ವಿವರವಾಗಿ ತಿಳಿದು ಈ ಕಡ್ಡಾಯ ಕರ್ಮದ ಪಾವತಿಯ ವಿಶೇಷವಾದ ಕಾಳಜಿ ವಹಿಸಬೇಕಾಗಿದೆ. ಇಂದಿನ ಕಾಲದಲ್ಲಿ ಇಸ್ಲಾಮಿನ ಈ ಸ್ತಂಭದ ಜನರು ಹೆಚ್ಚು ಅಲಕ್ಷ್ಯರಾಗಿರುವುದು ಕಂಡು ಬರುತ್ತದೆ.

❋ ❋ ❋

ಉಪವಾಸ ವ್ರತ

ಇಸ್ಲಾಮಿನ ನಾಲ್ಕನೆಯ ಸ್ತಂಭ ಉಪವಾಸ ವ್ರತವಾಗಿದೆ. ಇದು ಧರ್ಮವೆಂಬ ೕದ ಒಂದು ಪ್ರಮುಖ ಸ್ತಂಭವಾಗಿದೆ. ಅಲ್ಲಾಹನು ಹೇಳುತ್ತಾನೆ,

"ಓ ಸತ್ಯವಿಶ್ವಾಸಿಗಳೇ, ಗತ ಪ್ರವಾದಿಗಳ ುಯಾಯಿಗಳಿಗೆ ಕಡ್ಡಾಯಗೊಳಿಸಿದ್ದಂತೆಯೇ ಮೇಲೂ ಉಪವಾಸ ವ್ರತವನ್ನು ಕಡ್ಡಾಯ ಸಲಾಗಿದೆ. ಇದರಿಂದ ನಿಮ್ಮಲ್ಲಿ 'ತಕ್ವಾ'ದ ರ್ನಿಷ್ಠೆ) ಗುಣವಿಶೇಷವುಂಟಾಗುವುದೆಂದು ಲಾಗಿದೆ."

(ಸೂರಃ ಅಲ್‌ಬಕರ-183)

يَا أَيُّهَا الَّذِينَ آمَنُوا كُتِبَ عَلَيْكُمُ الصِّيَامُ كَمَا كُتِبَ عَلَى الَّذِينَ مِن قَبْلِكُمْ لَعَلَّكُمْ تَتَّقُونَ ۝

ಇಸ್ಲಾಮಿನಲ್ಲಿ ರಮಝಾನ್ ತಿಂಗಳು ಸಂಪೂರ್ಣ ಉಪವಾಸ ವ್ರತವನ್ನಾಚರಿಸುವುದು ಯವಾಗಿದೆ. ವಿನಾ ಕಾರಣ ಉಪವಾಸವನ್ನು ತೊರೆಯುವವನು ಮಹಾ ಪಾಪಿಯಾಗಿದ್ದಾನೆ, ಾದರೂ ಪ್ರಯಾಣಿಕನೋ, ರೋಗಿಯೋ ಆಗಿದ್ದರೆ ಅಥವಾ ಅವನಿಗೆ ಅಲ್ಲಾಹನ ುನು ಉಪವಾಸವನ್ನು ತೊರೆಯುವ ಅನುಮತಿ ನೀಡಿರುವಂತಹ ಯಾವುದೇ ಅನಿವಾರ್ಯತೆ ರೆ ಅಂತಹವನು ಉಪವಾಸವನ್ನು ತೊರೆಯಬಹುದು. ಆದರೆ ತೊರೆದ ಉಪವಾಸಗಳನ್ನು ಿಸಿ ಅನಂತರ ಪೂರ್ತಿಗೊಳಿಸಬೇಕಾಗಿದೆ.

ಪ್ರವಾದಿವರ್ಯರು(ಸ) ಹೀಗೆ ಹೇಳಿದ್ದಾರೆ,

"ಯಾವನು ಅನಾರೋಗ್ಯ ಅಥವಾ ಇನ್ನಿತರ ಧರ್ಮಸಮ್ಮತ ಕಾರಣಗಳಿಲ್ಲದೆ ಝಾನಿನ ಒಂದು ಉಪವಾಸವನ್ನು ತೊರೆಯುತ್ತಾನೋ ಅವನು ಜೀವನ ಪರ್ಯಂತ ವಾಸ ವ್ರತ ಆಚರಿಸಿದರೂ ಆ ಒಂದು ಉಪವಾಸ ವ್ರತದ ಪರಿಹಾರವಾಗಲಾರದು."

ಪ್ರವಾದಿ ವಚನಗಳಲ್ಲಿ ಉಪವಾಸಿಗನಿಗೆ ಬಹುದೊಡ್ಡ ಪ್ರತಿಫಲದ ಪ್ರಸ್ತಾಪವಿದೆ. ಾದಿವರ್ಯರು(ಸ) ಹೇಳಿದ್ದಾರೆ,

"ಯಾವನು ಸತ್ಯವಿಶ್ವಾಸ ಮತ್ತು ಆತ್ಮಾವಲೋಕನದೊಂದಿಗೆ ಕೇವಲ ಅಲ್ಲಾಹನ

ಸಂಪ್ರೀತಿಗಾಗಿ ರಮಝಾನ್ ತಿಂಗಳ ಉಪವಾಸ ವ್ರತವನ್ನು ಆಚರಿಸುವನೋ ಆತನ ಪಾಪಗಳೆಲ್ಲವೂ ಕ್ಷಮಿಸಲ್ಪಡುವುದು."

ಇತರೆಲ್ಲ ಆರಾಧನಾ ಕರ್ಮಗಳಿಗಿಂತ ಉಪವಾಸ ವ್ರತವು ಒಂದು ವಿಷಯ ಭಿನ್ನವಾಗಿದೆ. ಇತರೆಲ್ಲಾ ಆರಾಧನಾ ಕರ್ಮಗಳನ್ನು ನಿರ್ವಹಿಸುವಾಗ ಅದನ್ನು ಯಾರಾ ಖಂಡಿತ ಗಮನಿಸುತ್ತಾರೆ.

ಪವಿತ್ರ ವಚನವನ್ನು ಪಠಿಸುವುದು, ನಮಾಝ್ ನಿರ್ವಹಿಸುವುದು, ಝಕಾತ್ ನೀಡು ಹಜ್ಜ್ ಕರ್ಮ ನೆರವೇರಿಸುವುದು, ಪ್ರಾಣಿ ಬಲಿಯರ್ಪಿಸುವುದು ಇತ್ಯಾದಿ ಎಲ್ಲ ಆರಾ ಕರ್ಮಗಳನ್ನು ನಿರ್ವಹಿಸಿದರೆ ಅದು ಇತರರಿಗೆ ಯಾವುದಾದರೊಂದು ರೀತಿಯಲ್ಲಿ ತಿಳಿಯು ಆದರೆ ಉಪವಾಸ ವ್ರತವು ಕೇವಲ ಅಲ್ಲಾಹನ ಮತ್ತು ಮಾನವನ ನಡುವೆ ಇ ವ್ಯವಹಾರವಾಗಿದೆ. ಉಪವಾಸ ವ್ರತವನ್ನು ಯಾರೂ ನೋಡಲು ಸಾಧ್ಯವಿಲ್ಲ. ಯಾವನಾ ರಹಸ್ಯವಾಗಿ ತಿಂದು ತಾನು ಉಪವಾಸಿಗನೆಂದು ಹೇಳಿದರೆ ಜನರು ಅವನನ್ನು ಉಪವಾಸಿಗನ ನಂಬುವರು. ಅಲ್ಲಾಹನು ಎಲ್ಲ ರಹಸ್ಯಗಳ ಬಗ್ಗೆ ತಿಳಿದವನೆಂದು ನಂಬುವವರಿಗೆ ಪ ಉಪವಾಸ ವ್ರತವನ್ನು ಆಚರಿಸಲು ಸಾಧ್ಯವಿದೆ. ಅಲ್ಲಾಹನಿಂದ ಮರೆಸಿ ಯಾವ ಕೆಲಸವ ಮಾಡಲು ಸಾಧ್ಯವಿಲ್ಲ. ಆದುದರಿಂದಲೇ ಅವನು ಅಲ್ಲಾಹನಿಗೆ ಮರೆಯಾಗಿ ಉಪವಾಸ ಮುರಿಯುವಂತಹ ಯಾವ ಕೆಲಸವನ್ನೂ ಮಾಡಲಾರನು. ಉಪವಾಸಿಗನಿಗೆ ತನ್ನ ಉಪ ವ್ರತದ ಪ್ರತಿಫಲವು ಕೇವಲ ಅಲ್ಲಾಹನಿಂದ ಸಿಗುತ್ತದೆಂಬುದು ಕೂಡಾ ಖಾತ್ರಿಯಾಗು ಉಪವಾಸ ವ್ರತವನ್ನು ಆಚರಿಸದಿದ್ದರೆ ಅಲ್ಲಾಹನ ಕ್ರೋಧಕ್ಕೆ ಪಾತ್ರರಾಗಬೇಕು ಪ ಪರಲೋಕದಲ್ಲಿ ಕಠಿಣ ಶಿಕ್ಷೆ ಅನುಭವಿಸಬೇಕಾದೀತೆಂಬುದನ್ನು ಕೂಡಾ ಅವನು ಅರಿಯುತ ಆದುದರಿಂದಲೇ ಉಪವಾಸ ವ್ರತವನ್ನಾಚರಿಸಿದರೆ ಅಲ್ಲಾಹನ ಮತ್ತು ಪರಲೋಕದ ಮೇಲಿ ವಿಶ್ವಾಸ ದೃಢವಾಗುತ್ತದೆ ಮತ್ತು ಅಲ್ಲಾಹನೊಂದಿಗಿನ ಸಂಬಂಧವು ಗಾಢವಾಗು ಪ್ರವಾದಿ ವಚನವೊಂದರಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ,

"ಉಪವಾಸ ವ್ರತ ನನಗಾಗಿ ಇದೆ ಮತ್ತು ನಾನೇ ಅದರ ಪ್ರತಿಫಲದ ಹೊಣೆ ವಹಿಸುತ್ತೇನೆ."

ಆದರೆ ಇತರ ಆರಾಧನಾ ಕರ್ಮಗಳಂತೆಯೇ ಉಪವಾಸ ವ್ರತವನ್ನು ಪ್ರಜ್ಞಾಪೂರ್ವಕ ಆಚರಿಸಿದರೆ ಮಾತ್ರ ಅದರ ಸರಿಯಾದ ಪ್ರಭಾವವು ಗೋಚರವಾಗುತ್ತದೆ. ಸರಿ ಆಲೋಚಿಸಿ ಅಲ್ಲಾಹನ ಇರುವಿಕೆಯನ್ನು ತಿಳಿದು ಆತನ ಸಂತುಷ್ಟಿಗಾಗಿ ಮಾತ್ರ ಉಪ ವ್ರತವನ್ನು ಆಚರಿಸಿದರೆ, ಖಂಡಿತವಾಗಿಯೂ ಉಪವಾಸಿಗನ ಜೀವನ ರೀತಿಯೇ ಬದ ಬಿಡುತ್ತದೆ.

ಅಲ್ಲಾಹನ ಭಯ ಮತ್ತು ಪರಲೋಕದ ಉತ್ತರದಾಯಿತ್ವದ ನೆನಪಿನಿಂ ಅನ್ನಪಾನೀಯಗಳನ್ನು ತೊರೆಯುವವನು ಜೀವನದ ಇತರ ಕಾರ್ಯಗಳಲ್ಲಿ ಅಲ್ಲಾ ಆಜ್ಞೆಗಳನ್ನು ಧಿಕ್ಕರಿಸಿ ಆತನ ಭಯ ಮತ್ತು ಪರಲೋಕದ ಬಗ್ಗೆ ನಿಶ್ಚಿಂತನಾಗಿರು ಸಾಧ್ಯವೇ? ಅಲ್ಲಾಹನ ಆಜ್ಞೆಯನ್ನು ನಾವೀಗ ಓದಿದ್ದೇವೆ. "ಉಪವಾಸ ವ್ರತ

ರಿಸುವುದರಿಂದ ಧರ್ಮನಿಷ್ಠೆಯು ಬೆಳೆಯುತ್ತದೆ." ಉಪವಾಸಿಗನ ಜೀವನವು ಪಾಪ ಕ್ತವಾಗುತ್ತದೆ. ಅವನು ಅಲ್ಲಾಹನ ಕ್ರೋಧಕ್ಕೆ ಹೆದರುತ್ತಾನೆ ಮತ್ತು ಆತನ ಆದೇಶಗಳನ್ನು ರಶಃ ಪಾಲಿಸಲಾರಂಭಿಸುತ್ತಾನೆ.

ನೈಜ ಇಸ್ಲಾಮೀ ಜೀವನವನ್ನು ನಡೆಸಬೇಕಾದರೆ ಅಲ್ಲಾಹನ ಕ್ರೋಧದ ಭಯ ಮತ್ತು ನ ಸಂತುಷ್ಟಿಯ ಅಪೇಕ್ಷೆಯು ಅತ್ಯವಶ್ಯಕವಾಗಿದೆ, ಅಲ್ಲಾಹನ ಭಯವಿಲ್ಲದ ಮತ್ತು ಆತನ ್ರೀತಿಯ ಆಗ್ರಹವಿಲ್ಲದ ವ್ಯಕ್ತಿ ಎಂದೂ ಇಸ್ಲಾಮೀ ಜೀವನವನ್ನು ನಡೆಸಲು ಸಾಧ್ಯವಿಲ್ಲ.

ಉಪವಾಸ ವ್ರತದಿಂದಾಗಿ ಧರ್ಮನಿಷ್ಠೆ ಉಂಟಾಗುತ್ತದೆ, ಎಂದು ಅಲ್ಲಾಹನು ುತ್ತಾನೆ. ಆದರೆ ಅದು ತನ್ನಿಂತಾನೇ ಉಂಟಾಗುವುದಿಲ್ಲ. ಉಪವಾಸಿಗನು ಸಾಧ್ಯವಾದಷ್ಟು ್ಲಾಹನ ಆಜ್ಞಾಪಾಲನೆಯನ್ನು ಮಾಡುವ ಪ್ರಯತ್ನ ಮಾಡಬೇಕು. ಉಪವಾಸ ವನ್ನಚರಿಸುತ್ತಾ ಅಲ್ಲಾಹನ ಆಜ್ಞೋಲ್ಲಂಘನೆಯನ್ನು ಮಾಡುತ್ತಿರುವಾತನನ್ನು 'ಉಪವಾಸ ವು ಬಲತ್ಕಾರವಾಗಿ ಸುಧಾರಿಸಲಾರದು.

ಯಾರಾದರೂ ಉಪವಾಸ ವ್ರತವನ್ನು ಆಚರಿಸಿಯೂ ಸುಳ್ಳು ಹೇಳಿದರೆ, ಅಲ್ಲಾಹನು ುಿಸಿದ ವಿಧಿ ನಿಷೇಧಗಳ ನಡುವೆ ಅಂತರ ತೋರದಿದ್ದರೆ, ಜೀವನದ ಇತರ ್ಗಗಳಲ್ಲಿ ಅಲ್ಲಾಹನ ಆಜ್ಞೋಲ್ಲಂಘಕರ ಮತ್ತು ಆತನೆದುರು ಬಂಡಾಯವೆದ್ದುದರ ನೆಯನ್ನು ಮಾಡಿದರೆ, ಅಪ್ರಾಮಾಣಿಕತೆ, ಬೈಗುಳ, ವಂಚನೆ, ಪರದೂಷಣೆ ಮತ್ತು ಹ ಇತರ ಅನೇಕ ಪಾಪಗಳನ್ನೆಸಗುತ್ತಿದ್ದರೆ ಅಂತಹ ವ್ಯಕ್ತಿಗಳಿಗೆ ಉಪವಾಸ ವ್ರತದಿಂದ ನ ಪ್ರಯೋಜನವೂ ಆಗಲಾರದು.

ಅವರು ವಿನಾಕಾರಣ ಉಪವಾಸ ವ್ರತವನ್ನಾಚರಿಸುತ್ತಾರೆ ಮತ್ತು ಹಸಿವೆ ಬಾಯಾರಿಕೆಗಳನ್ನು ುತ್ತಾರೆ. ಪ್ರವಾದಿವರ್ಯರು(ಸ) ಹೇಳಿದ್ದಾರೆ,

"ಯಾವನು ಉಪವಾಸ ವ್ರತ ಆಚರಿಸಿಯೂ ಸುಳ್ಳು ಹೇಳುವುದನ್ನು ಮತ್ತು ಸುಳ್ಳು ಸುವುದನ್ನು ತೊರೆಯುವುದಿಲ್ಲವೋ ಆತನು ಅನ್ನ ಪಾನೀಯಗಳನ್ನು ತೊರೆಯಬೇಕೆಂದು ್ಹನು ಬಯಸುವುದಿಲ್ಲ."

ಇನ್ನೊಂದು ಪ್ರವಾದಿ ವಚನವು ಹೀಗೆನ್ನುತ್ತದೆ,

"ಹಸಿವೆ ಮತ್ತು ದಾಹವಲ್ಲದೆ ಮತ್ತೇನನ್ನೂ ಗಳಿಸದ ಅನೇಕ ಉಪವಾಸಿಗರಿದ್ದಾರೆ."

ಇತರೆಲ್ಲ ಆರಾಧನಾ ಕರ್ಮಗಳಂತೆಯೇ ನಮ್ಮ ಉಪವಾಸ ವ್ರತ ಕೂಡಾ ನಿರ್ಜೀವವಾಗಿ ೆ. ಆರಾಧನಾ ಕರ್ಮಗಳನ್ನು ಸರಿಯಾಗಿ ತಿಳಿಯದೆ ಕೇವಲ ಔಪಚಾರಿಕವಾಗಿ ಳನ್ನು ನೆರವೇರಿಸುವುದೇ ಇದಕ್ಕೆ ಕಾರಣ. ಸರಿಯಾದ ಇಸ್ಲಾಮೀ ಜೀವನವನ್ನು ನಡೆಸಿ ೋಕದ ಯಶಸ್ಸನ್ನು ಗಳಿಸಬೇಕಾದರೆ ಉಪವಾಸ ವ್ರತಗಳೆಡೆಗೆ ಹೆಚ್ಚಿನ ಗಮನವನ್ನು ಬೇಕಾಗಿದೆ ಮತ್ತು ಜೀವನದ ಎಲ್ಲಾ ಕಾರ್ಯಗಳಲ್ಲಿಯೂ ಅಲ್ಲಾಹನ ೋಲ್ಲಂಘನೆಯಿಂದ ದೂರವಿರಬೇಕಾಗಿದೆ.

ವಾಸ್ತವದಲ್ಲಿ 'ತಕ್ವಾ' ಅಥವಾ ಧರ್ಮನಿಷ್ಠೆಯು ಇಸ್ಲಾಮ್ ಮತ್ತು ಸತ್ಯವಿಶ್ವಾಸದ ಳವಾಗಿದೆ. ಮುಸ್ಲಿಮನು ತನ್ನೆಲ್ಲಾ ಕೆಲಸಗಳನ್ನು ಅಲ್ಲಾಹನ ಅತೃಪ್ತಿಯ ಬಗ್ಗೆ

ಭಯವಿರಿಸಿಕೊಂಡು ಆತನ ಆಜ್ಞೆಯನ್ನು ಸರಿಯಾಗಿ ಪಾಲಿಸುತ್ತಾ ಮಾಡಬೇಕ ಧರ್ಮನಿಷ್ಠೆಯ ಜೀವನವನ್ನಾಗಿ ಮಾರ್ಪಡಿಸಲು ಇದು ಅತ್ಯಂತ ಹೆಚ್ಚು ಪರಿಣಾಮಕಾರಿಯ ಆದ್ದರಿಂದ ಪ್ರವಾದಿ ವಚನಗಳಲ್ಲಿ ಅನೇಕ ಐಚ್ಛಿಕ ಉಪವಾಸ ವ್ರತಗಳ ಬಗ್ಗೆ ಪ್ರಸ್ತಾಪಿಸಲ ಉದಾಹರಣೆಗೆ ಆಶೂರಾದ ದಿನ (ಮುಹರ್ರಮ್-10) ಮತ್ತು ಪ್ರತಿ ಚಂದ್ರಮಾನ ತ ಹದಿಮೂರು, ಹದಿನಾಲ್ಕು ಮತ್ತು ಹದಿನೈದನೆಯ ದಿನದ ಉಪವಾಸ ವ್ರತ.

ಉಪವಾಸ ವ್ರತವನ್ನು ಮನಃಪೂರ್ವಕ ಆಚರಿಸಿ ಅದನ್ನು ಕೇವಲ ಅಲ ಆಜ್ಞೋಲ್ಲಂಘನೆಯಿಂದ ದೂರ ಉಳಿಯುವ ಮತ್ತು ಜೀವನದಲ್ಲಿ ಆತನು ಮಾರ್ಗದರ್ಶನದಂತೆ ಕರ್ಮಗಳನ್ನೆಸಗುವ ಸಾಧನವನ್ನಾಗಿ ಮಾಡಿದರೆ ಮಾತ್ರ ಅದ ಪ್ರಯೋಜನವಾಗಬಹುದೆಂಬುದನ್ನು ಜ್ಞಾಪಕದಲ್ಲಿಡಬೇಕು. ಕೇವಲ ಔಪಚಾರಿಕವಾಗಿ ಮತ್ತು ಬಾಯಾರಿಕೆ ಸಹಿಸಿದರೆ ಅದರಿಂದೇನೂ ಪ್ರಯೋಜನವಾಗಲಾರದು.

❋ ❋ ❋

ಹಜ್ಜ್

ಹಜ್ಜ್ ಇಸ್ಲಾಮಿನ ಐದನೆಯ ಸ್ತಂಭವಾಗಿದೆ. ಯಾರು ಕಅಬಾ ಭವನದ ವರೆಗೆ ಗುವ ಖರ್ಚುವೆಚ್ಚಗಳನ್ನು ಭರಿಸಲು ಸಮರ್ಥನಾಗಿರುವನೋ ಜೀವಮಾನದಲ್ಲಿ ಒಮ್ಮೆ ಮಾಡುವುದು ಅವನ ಮೇಲೆ ಕಡ್ಡಾಯವಾಗಿದೆ. ಅಲ್ಲಾಹನು ಹೇಳುತ್ತಾನೆ,

وَلِلّٰهِ عَلَى النَّاسِ حِجُّ الْبَيْتِ مَنِ اسْتَطَاعَ اِلَيْهِ سَبِيْلًا ۗ وَمَنْ كَفَرَ فَاِنَّ اللّٰهَ غَنِيٌّ عَنِ الْعٰلَمِيْنَ ۝

"ಈ ಭವನದ ವರೆಗೆ ತಲುಪಲು ನಾನುಕೂಲತೆಗಳಿರುವವನು ಅದರ ಯಾತ್ರೆ ಕೈ ಗೊಳ್ಳಬೇಕೆಂಬುದು ಜನರ ಅಲ್ಲಾಹನ ಹಕ್ಕಾಗಿರುತ್ತದೆ. ಈ ಆಜ್ಞೆಯ ರಣೆಯನ್ನು ಯಾರಾದರೂ ನಿರಾಕರಿಸಿದರೆ, ಹ್ ಸಕಲ ಜಗತ್ತಿನವರಿಂದ ನಿರಪೇಕ್ಷ ತ್ತಾನೆಂಬುದನ್ನು ಅವನು ಅರಿತಿರಬೇಕು."

(ಸೂರಃ ಆಲಿ ಇಮ್ರಾನ್- 97)

ಇಲ್ಲಿ ಹಜ್ಜ್ ಕರ್ಮವನ್ನು ನೆರವೇರಿಸುವ ಸಾಮರ್ಥ್ಯದ ಹೊರತಾಗಿಯೂ ಹಜ್ಜ್ ರಿಸದವರು ಸತ್ಯನಿಷೇಧದಲ್ಲಿದ್ದಾರೆಂದು ಹೇಳಲಾಗಿದೆ. ಇಸ್ಲಾಮಿನ ಎಲ್ಲ ಆದೇಶಗಳೂ ನರ ಪ್ರಯೋಜನಕ್ಕಾಗಿಯೇ ಇರುವಂತೆ ಹಜ್ಜ್‌ನ ಆದೇಶವೂ ಅಲ್ಲಾಹನ ಪ್ರಯೋಜನಕ್ಕಾಗಿ ದಲ್ಲ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಆತನು ನಿರಪೇಕ್ಷನಾಗಿದ್ದಾನೆ.ಆತನಿಗೆ ಯಾರದೇ ನೆಯ ಅಗತ್ಯವಾಗಲಿ, ಯಾವುದೇ ಆಜ್ಞೋಲ್ಲಂಘನೆಯ ಭಯವಾಗಲಿ ಇಲ್ಲ. ನಲ್ಲಿ ಸ್ವತಃ ಹಜ್ಜ್ ನಿರ್ವಹಿಸುವವನ ಒಳಿತಿದೆ.

ಕಅಬಾ ಭವನವನ್ನು ಹ.ಇಬ್ರಾಹೀಮ್(ಅ) ನಿರ್ಮಿಸಿದ್ದರೆಂಬುದು ನಿಮಗೆ ಬಹುದು. ಇಂದಿಗೆ ಸುಮಾರು ನಾಲ್ಕುವರೆ ಸಾವಿರ ವರ್ಷಗಳ ಹಿಂದೆ ಅವರು ಜನರಿಗೆ ಹನ ಸಂದೇಶವನ್ನು ತಲುಪಿಸಿದರು. ಜನರು ಅಲ್ಲಾಹನ ಹೊರತು ಇತರ ಸಾವಿರಾರು ರನ್ನು ಪೂಜಿಸುತ್ತಿದ್ದರು. ಮಣ್ಣು ಮತ್ತು ಕಲ್ಲುಗಳಿಂದ ಮಾಡಿದ ಮೂರ್ತಿಗಳು,

ಆಕಾರ, ತಾರೆಗಳು, ಜಿನ್ನ್‌ಗಳು, ದೇವಚರರು, ಚಂದ್ರ, ಸೂರ್ಯ, ಮರಣ ಹೊಂ
ಮಹಾ ಪುರುಷರು ಇತ್ಯಾದಿ ಸಾವಿರಾರು ದೇವರುಗಳ ಮುಂದೆ ತಲೆಬಾಗಿ ಅವರನ್ನು
ನಷ್ಟಗಳ ಒಡೆಯರೆಂದು ನಂಬುತ್ತಿದ್ದರು. ಹ.ಇಬ್ರಾಹೀಮ್(ಅ), ಅವರನ್ನು ಏಕ
ವಿಶ್ವಾಸದೆಡೆಗೆ ಆಹ್ವಾನಿಸಿದರು. ಅಲ್ಲಾಹನ ಹೊರತು ಇನ್ಯಾರೂ ಆರಾಧನೆಗೆ ವ
ವಿಧೇಯತೆಗೆ ಅರ್ಹರಾದವರಿಲ್ಲ, ಆತನ ಮುಂದೆಯೇ ಸಾಷ್ಟಾಂಗವೆರಗಬೇಕು ವ
ಆತನನ್ನು ಮಾತ್ರ ಅನುಸರಿಸಬೇಕೆಂದು ಸಾರಿದರು. ಅವರು ಈ ಏಕದೇವ ವಿಶ್ವಾ
ಕೇಂದ್ರವಾಗಿ ಕಲಬಾ ಭವನವನ್ನು ಆಯ್ದುಕೊಂಡರು. ಅಲ್ಲಿ ಕೇವಲ ಅಲ್ಲಾಹನ ಆರಾ
ನಡೆಯುತ್ತಿತ್ತು. ಜನರು ಕೇವಲ ಅಲ್ಲಾಹನ ಮುಂದೆ ಗೌರವದಿಂದ ನಿಲ್ಲುತ್ತಿದ್ದ
ಬಾಗುತ್ತಿದ್ದರು ಮತ್ತು ಸಾಷ್ಟಾಂಗ ಮಾಡುತ್ತಿದ್ದರು. ಅವರು ಕಲಬಾ ಭವನ
ಏಕದೇವತ್ವದ ಕೇಂದ್ರವಾಗಿ ಮಾಡಿದ ನಂತರ ಏಕೈಕನಾದ ಅಲ್ಲಾಹನನ್ನು ಆರಾಧಿಸುವವ
ಸಮೀಪದಿಂದಲೂ, ದೂರದಿಂದಲೂ ಆ ಭವನದ ಕಡೆಗೆ ಬರಬೇಕೆಂದು ಅವರು
ನೀಡಿದರು. ಅಲ್ಲಿ ಅವರಿಗೆ ಏಕದೇವತ್ವ ಮತ್ತು ಕೇವಲ ಅಲ್ಲಾಹನ ಆರಾಧನೆಯ
ಕಲಿಯಲು ಸಾಧ್ಯವಾಗುತ್ತಿತ್ತು. ಅಲ್ಲಾಹನಲ್ಲದ ಇತರ ಆರಾಧ್ಯರಿಂದ ವಿಮುಖರಾಗಿ
ಸ್ಥಿತಿಯಲ್ಲೂ ಕೇವಲ ಅಲ್ಲಾಹನ ದಾಸನಾಗಿರಲು ಅಲ್ಲಿ ಒತ್ತು ಕೊಡಲಾಗಿದೆ. ಕೇ
ಅಲ್ಲಾಹನ ದಾಸ್ಯಕ್ಕೆ ಸಿದ್ಧನಾಗುವಂತೆ ಅವನನ್ನು ರೂಪುಗೊಳಿಸಲಾಗುತ್ತಿತ್ತು.

ಪ್ರವಾದಿ ಇಬ್ರಾಹೀಮ್‌ರ(ಅ) ನಂತರ ಬಹಳ ಕಾಲಗಳ ವರೆಗೆ ಕಲಬಾ ಭವ
ಏಕದೇವತ್ವದ ಕೇಂದ್ರವಾಗಿ ಉಳಿದಿತ್ತು. ಆದರೆ ಜನರು ಅಲ್ಲಾಹನನ್ನು ಮರೆತು
ಭವನದಲ್ಲಿ ಸಾವಿರಾರು ಆರಾಧ್ಯಮೂರ್ತಿಗಳನ್ನಿರಿಸಲು ಪ್ರಾರಂಭಿಸಿದ ಕಾಲವೂ ಬ
ಮುಟ್ಟಿತು. ಸ್ವತಃ ಇಬ್ರಾಹೀಮ್(ಅ) ಮತ್ತು ಅವರ ಪುತ್ರರಾದ ಇಸ್ಮಾಈಲ್
ಮೂರ್ತಿಗಳನ್ನು ನಿರ್ಮಿಸಿ, ಅದನ್ನು ಕಲಬಾ ಭವನದಲ್ಲಿರಿಸಿ ಪೂಜಿಸತೊಡಗಿದರು.

ಕೊನೆಗೆ ಅಲ್ಲಾಹನು ತನ್ನ ಅನುಗ್ರಹದಿದ ಅಂತ್ಯ ಪ್ರವಾದಿಯಾದ ಮುಹಮ್ಮದ್‌ರನ
ಕಳುಹಿಸಿದನು. ಅವರು ಆ ಭವನವನ್ನು ಬಹುದೇವಾರಾಧನೆಯಿಂದ ಮುಕ್ತಗೊಳಿಸಿ
ಏಕದೇವಾರಾಧನೆಯ ಕೇಂದ್ರವಾಗಿಸಿದರು. ಏಕದೇವಾರಾಧನೆಯು ಇಸ್ಲಾಮಿನ ಮೊಟ್ಟಮೊ
ಇಟ್ಟಿಗೆಯಾಗಿದೆ ಮತ್ತು ಈ ಭವನವು ಅದರ ಬಹುದೊಡ್ಡ ಸ್ಮಾರಕ ಮತ್ತು ಕೇಂದ್ರವಾ

ಹಜ್ಜ್ ಕರ್ಮವು ಕೂಡಾ ಇಂದು ಚೈತನ್ಯ ರಹಿತ ಔಪಚಾರಿಕ ಕರ್ಮ
ಮಾರ್ಪಟ್ಟಿದೆ. ಹಜ್ಜ್ ಯಾತ್ರಿಕರೆಲ್ಲರೂ ಪ್ರಜ್ಞಾಪೂರ್ವಕವಾಗಿ ಹಜ್ಜ್ ನಿರ್ವಹಿಸಬೇ
ರೀತಿಯಲ್ಲೇ ನಿರ್ವಹಿಸಿದರೆ ಅದರಲ್ಲಿ ಅತ್ಯಂತ ಹೆಚ್ಚು ಒಳಿತು ಮತ್ತು ಅನುಗ್ರಹ
ಅಡಕವಾಗಿದೆ. ಹಜ್ಜ್ ಕರ್ಮದ ಹೊರತು ಇತರೆಲ್ಲ ಆರಾಧನಾ ಕರ್ಮಗಳು (ಅ
ನಿರ್ವಹಿಸಿದವನ ಮೇಲೆ ಮಾತ್ರ) ಹೆಚ್ಚಾಗಿ ಪ್ರಭಾವ ಬೀರುತ್ತದೆ. ಆದರೆ ಹಜ್ಜ್
ಅದನ್ನು ನಿರ್ವಹಿಸಿದವನ ಜೊತೆಗೆ ಇತರರ ಮೇಲೂ ಅಷ್ಟೇ ಪ್ರಭಾವ ಬೀರುತ್ತದೆ.
ಕರ್ಮವನ್ನು ನಿರ್ವಹಿಸಲು ಹೊರಡುವವನಲ್ಲಿ ಸತ್ಯವಿಶ್ವಾಸದ ಬೆಳಕು, ಅಲ್ಲಾಹನ
ಮತ್ತು ಆತನ ಧರ್ಮದಲ್ಲಿ ದೃಢವಾಗಿ ನಿಲ್ಲುವ ಸಂಕಲ್ಪ ಮತ್ತು ಆತನ ಸಂಪ್ರೀ

ಸ್ಲಾ ತರಹದ ಕಷ್ಟಕಾರ್ಪಣ್ಯಗಳನ್ನು ಸಹಿಸುವ ಮನೋದಾರ್ಢ್ಯತೆ ಬೆಳೆಯುತ್ತದೆ. ಆದರೆ ತರಿಂದಾಗಿ ಇತರರ ಮೇಲೆ ಉಂಟಾಗುವ ಪ್ರಭಾವವು ಅಮೂಲ್ಯವಾಗಿದೆ.

ಒಬ್ಬ ವ್ಯಕ್ತಿಯು ಹಜ್ಜ್ ನಿರ್ವಹಿಸಲು ತಯಾರಾಗಿ ತನ್ನ ಜೀವನವನ್ನು ಕೆಡುಕುಗಳಿಂದ ಯುವ ಪ್ರಯತ್ನವನ್ನು ಮಾಡುವಾಗ ಅವನು ಜನರೊಂದಿಗೆ ಬೆರೆತು ಅವರ ಹಕ್ಕುಗಳನ್ನು ತಿ ಅವರಿಂದ ಕ್ಷಮೆ ಯಾಚಿಸುತ್ತಾನೆ. ಆಗ ಜನರು ಅವನನ್ನು ಕಂಡು ಅಲ್ಲಾಹನ ಬಗ್ಗೆ ತ್ತು ಪರಲೋಕದ ಪ್ರತಿಫಲದ ಬಗ್ಗೆ ಚಿಂತಿತರಾಗುತ್ತಾರೆ. ನಂತರ ಹಜ್ಜ್ ಯಾತ್ರಿಕರು ಯಾಣಿಸುವಾಗ, ಜನರ ಮುಂದೆ ತನ್ನ ಸಚ್ಚರಿತ ದಾಸರಿಗೆ ಭೂಷಣ ಪ್ರಾಯವಾದ ಚ್ಚರಿತ್ರ್ಯ ಮತ್ತು ಒಳ್ಳೆಯ ಸ್ವಭಾವದ ಮಾದರಿಯನ್ನು ತೋರಿಸುವಾಗ ಅವರ ಹೃದಯದಲ್ಲಿ ಸ್ಲಾಮಿನ ಬಗ್ಗೆ ಒಳ್ಳೆಯ ಚಿತ್ರಣ ಮೂಡುತ್ತದೆ. ದೇವ ನಿಷ್ಠರ ಸ್ಥಿತಿಗತಿ ಮತ್ತು ಅವರ ವಹಾರಗಳು ಹೇಗಿರುತ್ತವೆಂದು ಜನರಿಗೆ ತಿಳಿಯುತ್ತದೆ. ಒಟ್ಟಿನಲ್ಲಿ ಯಾತ್ರೆಯ ವೇಳೆ ಲ್ಲವನ್ನೂ ಗಮನಿಸುವಾಗ ಜನರು ಅಲ್ಲಾಹನನ್ನು ನೆನಪಿಸುತ್ತಾರೆ. ಆ ಜನರಲ್ಲಿ ಸ್ಲಿಮರಿದ್ದರೆ ಅವರ ಮನಸ್ಸಿನಲ್ಲಿ ಅಲ್ಲಾಹನ ಪ್ರೀತಿ, ಆತನ ಭವನವನ್ನು ಸಂದರ್ಶಿಸುವ ಬಕೆ ಮತ್ತು ಆತನ ಧರ್ಮದೊಂದಿಗೆ ಪ್ರೇಮವುಂಟಾಗುತ್ತದೆ. (ಅಂತೆಯೇ ಮುಸ್ಲಿಮೇತರ ಂಧವರು ಹಜ್ಜ್ ಯಾತ್ರಿಕರ ಸ್ವಭಾವವನ್ನು ನೋಡಿ, ಅವರ ಮಾತುಗಳನ್ನು ಕೇಳಿ ಸ್ಲಾಮಿನ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಬೆಳೆಸಿಕೊಳ್ಳುತ್ತಾರೆ) ಅದೇ ರೀತಿಯಲ್ಲಿ ಹಜ್ಜ್ ರ್ವಹಿಸಿ ಬಂದವರು ಆ ಏಕದೇವಾರಾಧನೆಯ ಕೇಂದ್ರದ ಒಳಿತು ಮತ್ತು ಅನುಗ್ರಹಗಳ ಮಾತನಾಡುವಾಗ ಜನರ ವಿಶ್ವಾಸ ನವೀಕರಿಸಲ್ಪಡುತ್ತದೆ. ಧರ್ಮಪ್ರೇಮ ಮತ್ತು ಲ್ಲಾಹನ ಆಜ್ಞೆಗಳನ್ನು ಪ್ರೀತಿಯಿಂದ ಮತ್ತು ಆಸಕ್ತಿಯಿಂದ ನೆರವೇರಿಸುವ ಉತ್ಸಾಹವನ್ನು ತು ಜನರ ಮಾನಸ ಲೋಕವೇ ಬದಲಾಗ ತೊಡಗುತ್ತದೆ.

ಸತ್ಯ ವಿಶ್ವಾಸ, ಪ್ರೀತಿ ಮತ್ತು ಪ್ರೇಮದ ಖಜಾನೆಯಿಂದ ಹಜ್ಜ್ ಯಾತ್ರಿಕರು ತಂದ ತ್ತು ಸ್ವತಃ ಅವನನ್ನು ಸಂಪನ್ನಗೊಳಿಸಿದೆಯಲ್ಲದೆ ಇತರರಿಗೂ ಅದರಿಂದ ಸ್ವಲ್ಪಾಂಶವನ್ನು ಿಸುತ್ತಿದ್ದಾನೆಂದು ಭಾಸವಾಗುತ್ತದೆ. ಇಸ್ಲಾಮಿನ ಆದೇಶ ಪಾಲನೆಯಲ್ಲಿ ಎರಡು ಗಳಿವೆ-

ಒಂದು, ಮಾನವನು ಆ ಆದೇಶಗಳನ್ನು ಅಲ್ಲಾಹನ ಆದೇಶ ಮತ್ತು ನಿಯಮವೆಂದು ಮ ಸಂಪೂರ್ಣ ಕಾಳಜಿಯೊಂದಿಗೆ ಯಾವ ಕೊರತೆಯೂ ಇಲ್ಲದೆ ಪಾಲಿಸುವವನು. ಇದು ತಾ ಬಹಳ ಉತ್ತಮ ದರ್ಜೆಯಾಗಿದ್ದು ಅಂತಹವರು ಅಲ್ಲಾಹನ ಪ್ರೀತಿಗೆ ಪಾತ್ರರಾಗುವರು ತ್ತು ಪರಲೋಕದಲ್ಲಿ ಅವರಿಗೆ ಅಲ್ಲಾಹನ ಸಂಪ್ರೀತಿ ಮತ್ತು ಸ್ವರ್ಗವು ಪ್ರಾಪ್ತವಾಗುವುದು. ೆ ಆದರ ಇನ್ನೊಂದು ವಿಧವೂ ಇದೆ. ವ್ಯಕ್ತಿ ಅಲ್ಲಾಹನ ಆದೇಶಗಳ ಬಗ್ಗೆ ಅತ್ಯಂತ ಷ್ಟ ಪ್ರೀತಿ ಮತ್ತು ಒಲವು ತೋರುವುದೇ ಈ ವಿಧಾನ. ಅವರ ಮನಸ್ಸಿನಲ್ಲಿ ಅಲ್ಲಾಹನ ತಿ ಮತ್ತು ಅವನ ಸಂಪ್ರೀತಿಯ ಆಕಾಂಕ್ಷೆ ಅತೀವವಾಗಿರುತ್ತದೆ. ಅವರು ಅಲ್ಲಾಹನ ಂಪ್ಯದ ಬಗ್ಗೆ ಎಷ್ಟೊಂದು ವ್ಯಾಮೋಹ ಹೊಂದಿರುತ್ತಾರೆಂದರೆ ಅದರ ಆಕಾಂಕ್ಷೆಯಿಂದ ಮ ತಮ್ಮ ಪ್ರಾಣವನ್ನೇ ಅರ್ಪಿಸುವುದರಲ್ಲಿ ಉತ್ಸುಕತೆ ತೋರುತ್ತಾರೆ. ಅದು ಕಠಿಣ ಶ್ರಮ

ಮತ್ತು ಕಾಳಜಿಯಿಂದ ಪ್ರಾಪ್ತವಾಗುತ್ತದೆ. ನಮಾಝ್, ಅಲ್ಲಾಹನ ಗ್ರಂಥ ಮತ್ತು ಆ ಸ್ಮರಣೆಯೊಂದಿಗೆ ಮಾನವ ಸಂಬಂಧವು ಗಾಢವಾದಷ್ಟು ಈ ಸ್ಥಿತಿ ಅವನ ಉಂಟಾಗುವುದಂತೂ ಸತ್ಯ.

ಆದರೆ ಹಜ್ಜ್ ಕರ್ಮವು ಈ ನಿಟ್ಟಿನಲ್ಲಿ ಬಹಳ ಹೆಚ್ಚು ಪ್ರಯೋಜನಕಾರಿಯಾ ವಿಶೇಷವಾಗಿ ಮದೀನಾ ಸಂದರ್ಶನದಿಂದ ಅದೃಷ್ಟದ ಮೇಲೆ ಅದೃಷ್ಟ ಖುಲಾಯಿಸಿದಂತಾಗುತ್ತ ಹಜ್ಜ್ ಕರ್ಮವನ್ನು ಸಂಪೂರ್ಣ ಕಾಳಜಿ ಮತ್ತು ಎಚ್ಚರಿಕೆಯಿಂದ ನೇರವೇರಿಸಿದರೆ ಮ ಈ ಪ್ರಭಾವ ಗೋಚರವಾಗಲು ಸಾಧ್ಯ.

ದುರದೃಷ್ಟವೇನೆಂದರೆ ಇಂದು ಹಜ್ಜ್ ಕೂಡಾ ಚೈತನ್ಯ ರಹಿತವಾಗಿ ಮಾರ್ಪಟ್ಟಿ ಹಜ್ಜ್ ನೆರವೇರಿಸಿದವನ ಮೇಲೆ ಅದರಿಂದ ಒಳ್ಳೆಯ ಪ್ರಭಾವ ಉಂಟಾಗುವುದಿಲ್ಲ ಮ ಇತರರು ಅವರನ್ನು ಕಂಡು ಇಸ್ಲಾಮಿನ ಚೈತನ್ಯವನ್ನರಿಯುವುದಿಲ್ಲ.

❋ ❋ ❋

ಸಚ್ಚಾರಿತ್ರ್ಯ

ವಿಶ್ವಾಸ ಮತ್ತು ಆರಾಧನಾ ಕರ್ಮಗಳ ನಂತರ ಸಚ್ಚಾರಿತ್ರ್ಯಕ್ಕೆ ಇಸ್ಲಾಮಿನಲ್ಲಿ ಅತೀ ಹೆಚ್ಚು ಮಹತ್ವವಿದೆ. ಪ್ರವಾದಿಯವರು(ಸ) ಹೇಳಿದ್ದಾರೆ,

"ನಿಮ್ಮಲ್ಲಿ ಒಳ್ಳೆಯ ಚಾರಿತ್ರ್ಯವಿರುವವನೇ ಸರ್ವೋತ್ತಮನು." (ಬುಖಾರಿ) اَخْيَارُكُمْ اَحْسَنُكُمْ اَخْلَاقًا-

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೇಳಿದರು,

"(ಪರಲೋಕದ) ತಕ್ಕಡಿಯಲ್ಲಿ ಸಚ್ಚಾರಿತ್ರ್ಯದಷ್ಟು ಭಾರವುಳ್ಳ ವಸ್ತು ಇನ್ನೊಂದು ಇರಲಾರದು. ಸಚ್ಚರಿತನು ತನ್ನ ಸಚ್ಚಾರಿತ್ರ್ಯದಿಂದ ಸದಾ ನಮಾಝ್ ನಿರ್ವಹಿಸುವ ಮತ್ತು ಉಪವಾಸ ವ್ರತವನ್ನಾಚರಿಸುವವರ ಸ್ಥಾನವನ್ನು ಗಳಿಸುತ್ತಾನೆ." (ತಿರ್ಮಿದಿ)

ಸತ್ಯಸಂಧತೆ: ಮಾನವರ ಚಾರಿತ್ರ್ಯದಲ್ಲಿ ಸತ್ಯ ಸಂಧತೆಯ ಸ್ಥಾನ ಬಹಳ ಉನ್ನತವಾಗಿದೆ. ಮಾನವನ ಹಲವಾರು ಒಳ್ಳೆತನಗಳು ಆತನ ಸತ್ಯಸಂಧತೆಯನ್ನು ಅವಲಂಬಿಸಿಕೊಂಡಿದೆ. ಸತ್ಯಸಂಧತೆಯು ಅಲ್ಲಾಹನ ಸಜ್ಜನ ದಾಸರ ಮೂಲಭೂತ ಲಕ್ಷಣವಾಗಿದೆ. ಸಾಮಾನ್ಯವಾಗಿ ಸತ್ಯ ಸಂಧತೆಯೆಂದರೆ ಸತ್ಯ ನುಡಿಯೆಂದು ಭಾವಿಸಲಾಗುತ್ತದೆ. ಆದರೆ ಇಸ್ಲಾಮಿನಲ್ಲಿ ಅದರ ತಾತ್ಪರ್ಯವು ಅದಕ್ಕಿಂತ ಬಹಳ ಹೆಚ್ಚು. ಮಾತಿನ ಸತ್ಯ ಸಂಧತೆಯೊಂದಿಗೆ ಮನಸ್ಸಿನ ಹಾಗೂ ಕಾರ್ಯದ ಸತ್ಯ ಸಂಧತೆಯು ಅದರಲ್ಲಿ ಅಡಕವಾಗಿದೆ. ಒಮ್ಮೆ ಪ್ರವಾದಿವರ್ಯರು(ಸ) ಹೇಳಿದರು, "ಸುಳ್ಳನ್ನು ಸಂಪೂರ್ಣವಾಗಿ ತ್ಯಜಿಸುವ ವರೆಗೆ ಒಬ್ಬನು ಸತ್ಯವಿಶ್ವಾಸಿಯಾಗಲಾರನು. ತಮಾಷೆಗಾಗಿ ಅಥವಾ ಜಗಳದ ವೇಳೆಯೂ ಅವನು ಸುಳ್ಳನ್ನು ಆಡಬಾರದು. ಅವನು ಸತ್ಯದಲ್ಲಿದ್ದರೂ ಸರಿಯೇ" ಕೆಲವೊಮ್ಮೆ ಒಬ್ಬನು ನಾಲಗೆಯಿಂದ ಸತ್ಯವಾದ ಮಾತನ್ನಾಡುತ್ತಾನೆ. ಆದರೆ ಮನಸ್ಸಿನಲ್ಲಿ ಆ ಮಾತಿನ ಬಗ್ಗೆ ಅವನಿಗೆ ತೃಪ್ತಿ ಇರುವುದಿಲ್ಲ. ಇದು ಕೂಡಾ ಸತ್ಯವಿಶ್ವಾಸಿಗೆ ಭೂಷಣಪ್ರಾಯವಲ್ಲ. ಸತ್ಯ ಸಂಧತೆಯು ಮೊದಲು ಸತ್ಯ ವಿಶ್ವಾಸಿಯ ಹೃದಯಕ್ಕೆ ಪ್ರವೇಶಿಸುತ್ತದೆ. ನಂತರ ಅದು ಅವನ ನಾಲಗೆಯಿಂದ ಪ್ರಕಟವಾಗುತ್ತದೆ ಮತ್ತು ಅವನ ಕರ್ಮಗಳು ಸತ್ಯ ಸಂಧತಾ ಪೂರ್ವಕವಾಗಿರುತ್ತವೆ. ಸತ್ಯವಿಶ್ವಾಸಿಯ ಮನಸ್ಸು, ನಾಲಗೆ ಮತ್ತು ಕೈ - ಕಾಲುಗಳು ಒಂದಕ್ಕೊಂದು ವಿರೋಧವಾಗಿರುವುದಿಲ್ಲ. ಅವನು ಯಾವ

ವಿಷಯವನ್ನು ಸತ್ಯವೆಂದು ತಿಳಿಯುತ್ತಾನೋ ಅದನ್ನೇ ನಾಲಗೆಯಿಂದ ಉಚ್ಚರಿಸುತ್ತಾನೆ ಮ ಅದರಂತೆಯೇ ಕಾರ್ಯವೆಸಗುತ್ತಾನೆ.

ಸನ್ನಡತೆ: ಸತ್ಯವಿಶ್ವಾಸಿಯ ಎರಡನೆಯ ಲಕ್ಷಣವು ಸನ್ನಡತೆ ಮತ್ತು ಪಾವನತೆಯಾಗಿ ಪವಿತ್ರ ಕುರ್‌ಆನಿನಲ್ಲಿ ಸತ್ಯವಿಶ್ವಾಸಿಯ ಲಕ್ಷಣಗಳ ಬಗ್ಗೆ ಪ್ರಸ್ತಾಪಿಸಿದಾಗಲೆಲ್ಲಾ ಅವನು ತ ಗುಹ್ಯೇಂದ್ರಿಯಗಳನ್ನು ರಕ್ಷಿಸುತ್ತಾನೆ ಮತ್ತು ಧರ್ಮಸಮ್ಮತವಾದ ಸಂಬಂಧಗಳಲ್ಲದೆ ಅನ್ಯ ಸಂಬಂಧಗಳ ಬಳಿಗೆ ಸುಳಿಯುವುದೂ ಇಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿ ಪ್ರವಾದಿವರ್ಯರು(ಸ) ಹೇಳಿದ ಈ ಮಾತುಗಳಿಂದ ಇದರ ಗಾಂಭೀರ್ಯವನ್ನು ತಿಳಿಯಬಹು "ಯಾರು ನನಗೆ ಎರಡು ದವಡೆಗಳು ಮತ್ತು ಎರಡು ಕಾಲುಗಳ ಮಧ್ಯೆ ಇರುವ (ನಾ ಮತ್ತು ಗುಹ್ಯೇಂದ್ರಿಯ) ವಸ್ತುಗಳ ಸಂರಕ್ಷಣೆಯ ಭರವಸೆಯನ್ನು ನೀಡುತ್ತಾನೋ ನಾ ಅವನಿಗೆ ಸ್ವರ್ಗದ ಭರವಸೆಯನ್ನು ನೀಡುತ್ತೇನೆ."

ಅಶ್ಲೀಲತೆ ಮತ್ತು ಧರ್ಮಬಾಹಿರವಾದ ಕಾರ್ಯಗಳನ್ನು ತಡೆಗಟ್ಟಲು ಇಸ್ಲಾ ಬಹಳ ಕಠಿಣವಾದ ಆದೇಶಗಳನ್ನು ನೀಡಿದೆ. ಇಸ್ಲಾಮಿ ನಿಯಮಗಳನ್ನು ನೋಡಿದರೆ ಅ ಅಶ್ಲೀಲತೆಯ ಕಡೆಗೆ ಕೊಂಡೊಯ್ಯುವ ಎಲ್ಲಾ ಮಾರ್ಗಗಳನ್ನು ತಡೆಗಟ್ಟಿದೆ ಎಂದು ತಿ ಬರುತ್ತದೆ. ದೃಷ್ಟಿಯನ್ನು ಕೆಳಗಿರಿಸುವುದು, ಸ್ತ್ರೀ- ಪುರುಷರ ಮುಕ್ತ ಮಿಲನವನ್ನು ತಡೆಗಟ್ಟುವು ಚಿತ್ರ ಬಿಡಿಸುವ ಕುರಿತು ನಿಬಂಧನೆ, ಅಶ್ಲೀಲ ಮಾತುಗಳನ್ನು ಹರಡುವವರಿಗೆ ದಂ ಪ್ರೇಮ ಕವನ ಮತ್ತು ಕಥೆಗಳನ್ನು ಸುಸ್ಪಷ್ಟ ಅಶ್ಲೀಲವೆಂದು ಸಾರಿರುವುದೇ ಮುಂತಾದ ಅ ಆದೇಶಗಳನ್ನು ನೀಡಿರುವುದರ ಉದ್ದೇಶ ಅಶ್ಲೀಲತೆ ಮತ್ತು ವ್ಯಭಿಚಾರದೆಡೆಗೆ ಒಯ ಸಣ್ಣಪುಟ್ಟ ದ್ವಾರಗಳನ್ನು ಮುಚ್ಚಿಬಿಡುವುದಾಗಿದೆ. ನಿಸ್ಪೃಹತೆ ಮತ್ತು ಪ್ರಾಮಾಣಿಕತೆ ಪರ ವ್ಯವಹಾರಗಳನ್ನು ಉತ್ತಮಗೊಳಿಸಲು ಬಹಳ ಮುಖ್ಯವಾದುವುಗಳಾಗಿವೆ.

ಧರ್ಮನಿಷ್ಠೆ ಮತ್ತು ಪ್ರಾಮಾಣಿಕತೆ: ಇದು ಒಬ್ಬ ಮುಸ್ಲಿಮನ ಪ್ರಾಥ ಕರ್ತವ್ಯವಾಗಿದೆ. ತನ್ನೆಲ್ಲಾ ವ್ಯವಹಾರಗಳಲ್ಲಿ ಸತ್ಯಸಂಧ, ಪ್ರಾಮಾಣಿಕ, ವಿಶ್ವಾಸಾರ್ಹ ವ ವಚನ ಬದ್ಧನಾಗಿರುವವನೇ ನೈಜ ಮುಸ್ಲಿಮನೆಂದು ಪ್ರವಾದಿ ವಚನಗಳಲ್ಲಿ ಸ್ಪಷ್ಟ ಹೇಳಲಾಗಿದೆ.

ಇತರರ ಸೊತ್ತನ್ನು ಕಬಳಿಸುವುದು, ವಾಗ್ದಾನವನ್ನು ಮುರಿಯುವುದು, ಸುಳ್ಳಾಡುವ ಅಥವಾ ಸುಳ್ಳುಸಾಕ್ಷ್ಯ ನೀಡುವುದು ಇವೆಲ್ಲವೂ ಕಪಟ ವಿಶ್ವಾಸಿಗಳ ಲಕ್ಷಣವೆ ಹೇಳಲಾಗಿದೆ. ಇಂತಹ ಕೆಲಸಗಳನ್ನು ಮಾಡುವವರ ಮನಸ್ಸಿನಲ್ಲಿ ನೈಜ ಸತ್ಯವಿಶ್ವಾಸವು ಮಾಡಿರುವುದಿಲ್ಲ ಮತ್ತು ಅವರಿಗೆ ಪರಲೋಕದ ಭಯವೂ ಇರುವುದಿಲ್ಲ. ಒಬ್ಬ ವ್ಯಕ್ತಿ ಬಳಿ ಒಂದು ವಸ್ತುವನ್ನು ಇರಿಸಲಾಗಿದ್ದರೆ ಅದನ್ನು ಕೇಳಿದಾಗ ಯಥಾರೂಪ ಹಿಂತಿರುಗಿಸುವುದು ಪ್ರಾಮಾಣಿಕತೆಯಾಗುತ್ತದೆ ಎಂಬುದು ನಮಗೆ ತಿಳಿದಿದೆ. ಹಾಗೆ ಮಾಡದಿ ಅದು ಅಪ್ರಮಾಣಿಕತೆಯಾಗುತ್ತದೆ. ಆದರೆ ಇಸ್ಲಾಮಿನ ಬೋಧನೆಗಳ ಪ್ರಕಾರ ಪ್ರಾಮಾಣಿಕ ತಾತ್ಪರ್ಯವು ಇದಕ್ಕಿಂತ ವಿಶಾಲವಾಗಿದೆ. ನಾವು ಇತರರಿಗೆ ನೀಡಬೇಕಾದ ಹಕ್ಕುಗ ಸರಿಯಾಗಿ ನೀಡುವುದು ಕೂಡಾ ಪ್ರಾಮಾಣಿಕತೆಯಾಗಿದೆ.

ಇತರರ ರಹಸ್ಯಗಳು ತಿಳಿದಿದ್ದರೆ ಅದನ್ನು ಗುಟ್ಟಾಗಿಡುವುದು ಪ್ರಾಮಾಣಿಕತೆಯಾಗಿದೆ, ಾರಾದರೂ ನಮ್ಮೊಂದಿಗೆ ಸಲಹೆ ಕೇಳಿದರೆ ನಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಸರಿಯಾದ ಹೆ ನೀಡುವುದು ಪ್ರಾಮಾಣಿಕತೆಯಾಗಿದೆ.

ನೌಕರಿಯ ತಗಾದೆಗಳ ಪ್ರಕಾರ ಜವಾಬ್ದಾರಿಕೆಯೊಂದಿಗೆ ಕೆಲಸ ನಿರ್ವಹಿಸುವುದು ಡಾ ಪ್ರಾಮಾಣಿಕತೆಯಾಗಿದೆ. ಕೆಲಸಕ್ಕೆ ತಡವಾಗಿ ಬರುವುದು, ಸಮಯ ಮುಗಿಯುವುದಕ್ಕಿಂತ ಂಚೆ ನಿರ್ಗಮಿಸುವುದು, ಕೆಲಸದ ಬಗ್ಗೆ ಆಲಸ್ಯ ತೋರುವುದು ಸಮಯ ಹರಣಮಾಡುವುದು ್ಯಾದಿಗಳೆಲ್ಲವೂ ಪ್ರಾಮಾಣಿಕತೆಗೆ ವಿರುದ್ಧವಾದುದು.

ಪ್ರವಾದಿವರ್ಯರು(ಸ) ಹೇಳಿದ್ದಾರೆ,

"ಯಾರಲ್ಲಿ ಪ್ರಾಮಾಣಿಕತೆ ಇಲ್ಲವೋ ಅವನಲ್ಲಿ ಸತ್ಯವಿಶ್ವಾಸವಿಲ್ಲ."

್ಜಾಗುಣ: ಅಲ್ಲಾಹನು ಮಾನವರಲ್ಲಿ ಸಹಜವಾಗಿ ಲಜ್ಜೆ ಮತ್ತು ನಾಚಿಕೆಯನ್ನಿರಿಸಿದ್ದಾನೆ. ನವನನ್ನು ಅನೇಕ ಕೆಡುಕುಗಳಿಂದ ತಡೆಯುವ ಗುಣವು ಇದೇ ಆಗಿದೆ. ಕೆಟ್ಟ ಸಂಗದಿಂದ ಗುಣ ನಷ್ಟವಾಗುತ್ತದೆ. ಇಸ್ಲಾಮ್ ಲಜ್ಜಾ ಗುಣವನ್ನು ಬೆಳೆಸುತ್ತದೆ ಮತ್ತು ನಿರ್ಲಜ್ಜೆಯ ್ಲ ಕೆಲಸಗಳಿಂದ ತಡೆಯುತ್ತದೆ. ಪ್ರವಾದಿವರ್ಯರು(ಸ) ಹೇಳಿದ್ದಾರೆ,

"ಎಲ್ಲಾ ಧರ್ಮಗಳಿಗೂ ಒಂದು ಸ್ವಭಾವವಿದೆ ಮತ್ತು ಇಸ್ಲಾಮಿನ ಸ್ವಭಾವವು ್ಯಯಾಗಿದೆ." ಇನ್ನೊಂದು ಸಂದರ್ಭದಲ್ಲಿ ಅವರು ಹೇಳಿದರು,

"ಲಜ್ಜೆಯೂ ಸತ್ಯವಿಶ್ವಾಸದ ಒಂದು ರೆಂಬೆಯಾಗಿದೆ."

ಾಗುಣ: ಇತರರ ತಪ್ಪುಗಳನ್ನು ಕ್ಷಮಿಸುವುದು ಸಚ್ಚಾರಿತ್ರ್ಯದ ಪ್ರಮುಖ ಲಕ್ಷಣವಾಗಿದೆ. ್ಲಮ್ ಈ ಗುಣವನ್ನು ತುಂಬಾ ಪ್ರೋತ್ಸಾಹಿಸುತ್ತದೆ. ನಾವು ಇತರರನ್ನು ಕ್ಷಮಿಸಿದರೆ ್ಲಾಹನು ನಮ್ಮ ತಪ್ಪುಗಳನ್ನು ಕ್ಷಮಿಸುವನೆಂಬ ಸೂಚನೆಯು ಪವಿತ್ರ ಕುರ್‌ಆನಿನಲ್ಲಿ ಕ ಕಡೆ ಬಂದಿದೆ. ಅಲ್ಲಾಹನ ವಚನವನ್ನು ಉನ್ನತಗೊಳಿಸಲು ಮತ್ತು ಜನರನ್ನು ್ಲಾಹನ ಧರ್ಮದೆಡೆಗೆ ಆಹ್ವಾನಿಸುವ ಕೆಲಸ ಮಾಡುವವರಲ್ಲಿ ಈ ಗುಣವು ಅತ್ಯಂತ ್ಟಗಿರಬೇಕು. ಇತರರ ತಪ್ಪುಗಳನ್ನು ಕ್ಷಮಿಸಿದರೆ ಮನಸ್ಸಿನ ಸಂಕುಚಿತತೆ ದೂರವಾಗುತ್ತದೆ.) ಧರ್ಮನಿಷ್ಠರ ಗುಣವಾಗಿದೆ. ಕೋಪವನ್ನು ನಿಯಂತ್ರಿಸಿ ಪ್ರತೀಕಾರ ತೀರಿಸುವ ಾರ್ಥ್ಯವಿದ್ದೂ ಕ್ಷಮಿಸುವ ಸ್ವಭಾವವು ಅಲ್ಲಾಹನಿಗೆ ಅತ್ಯಂತ ಪ್ರಿಯವಾದುದಾಗಿದೆ ಮತ್ತು ಲಸವನ್ನು ಧರ್ಮದ ಹಿತಕ್ಕಾಗಿ ಮಾಡಿದ್ದರೆ ಆತನ ಸ್ಥಾನವನ್ನು ಉನ್ನತಗೊಳಿಸಲಾಗುತ್ತದೆ. ಕ್ರೋಧದ ಅಗ್ನಿಯನ್ನು ನಂದಿಸಲು ಮತ್ತು ಮನಸ್ಸಿನ ಹಿತಕ್ಕಾಗಿ ಪ್ರತೀಕಾರ ತೀರಿಸುವುದು ನನ ಕೆಲಸವಾಗಿದೆಯೆಂದು ಪವಿತ್ರ ಕುರ್‌ಆನ್ ಹೇಳುತ್ತದೆ.

ುತೆ: ಇವರಿಗಿಂತ ತಾನು ದೊಡ್ಡವನೆಂದು ಕೊಚ್ಚಿಕೊಳ್ಳುವುದು ಮಹಾ ದುರ್ಗುಣವಾಗಿದೆ. ಯಿಯು ಕೇವಲ ಅಲ್ಲಾಹನ ಶೋಭೆಯಾಗಿದೆ. ತನ್ನನ್ನು ಕಿರಿಯನೆಂದು ತಿಳಿಯುವುದು ಶ್ವಾಸಿಯ ಲಕ್ಷಣವಾಗಿದೆ. ಸತ್ಯವಿಶ್ವಾಸಿಯ ನಡತೆಯಲ್ಲಿ ಅಹಂಕಾರವಿರುವುದಿಲ್ಲ. ಅವನ ಕತೆಗಳಲ್ಲಿ ಅಹಂಭಾವ ದರ್ಪವಿರುವುದಿಲ್ಲ ಮತ್ತು ಆತನು ದೊಡ್ಡ ಸ್ವರದಲ್ಲಿ ಕುತ್ತಾ ಮಾತನಾಡುವುದಿಲ್ಲ. ಆದರೆ ಸತ್ಯವಿಶ್ವಾಸಿಯು ಅಪಮಾನಿತ, ನಿಸ್ಸಹಾಯಕ ಮತ್ತು

ನೀಚನಾಗಿ ಜನರ ಮುಂದೆ ಬಂದು ವೃಥಾ ತನ್ನ ವಿನಮ್ರತೆಯನ್ನು ಪ್ರದರ್ಶಿಸುತ್ತಾ ಇತರರ
ಗೌರವಿಸುತ್ತಾನೆಂಬುದು ಇದರ ಅರ್ಥವಲ್ಲ.

ಸತ್ಯವಿಶ್ವಾಸಿಯ ವಿನಮ್ರತೆಯ ತಾತ್ಪರ್ಯವು ಅವನು ಅಲ್ಲಾಹನ ಸಂಪ್ರೀತಿಗಾಗಿ ಬಡ
ಮನಸ್ಸನ್ನು ನೋಯಿಸುವಂತಹ ಮಾತುಗಳನ್ನೆಂದೂ ಆಡುವುದಿಲ್ಲವೆಂದಾಗಿದೆ.

ಸವಿನುಡಿ: ಮಾತುಕತೆಗಳನ್ನು ನಡೆಸುವಾಗ ಇತರರ ಆತ್ಮಗೌರವದ ಬಗ್ಗೆ ಗಮನವಿ
ಕೇಳುವವರ ಮನಸ್ಸಿಗೆ ಸಂತೋಷವಾಗುವಂತಹ ಮಾತುಗಳನ್ನಾಡುವುದು ಸತ್ಯವಿಶ್ವಾಸಿ
ಒಂದು ಪ್ರಮುಖ ಲಕ್ಷಣವಾಗಿದೆ. ಇತರರ ಆತ್ಮಗೌರವಕ್ಕೆ ಧಕ್ಕೆ ತರುವಂತಹ ಮಾತುಗಳನ್ನಾ
ವುದು, ಇತರರನ್ನು ಕೆಟ್ಟ ಹೆಸರುಗಳಿಂದ ಕರೆಯುವುದು ಅಥವಾ ಇತರರನ್ನು ಕೀಳೆಂದು ಬಗ
ಮಾತನಾಡುವುದು, ಸತ್ಯವಿಶ್ವಾಸಿಗೆ ಭೂಷಣವಲ್ಲ. ಪ್ರವಾದಿವರ್ಯರು(ಸ) ಹೇಳಿದ್ದಾರೆ,

"ಮುಸ್ಲಿಮನು ಮೂದಲಿಸುವುದಿಲ್ಲ, ಶಪಿಸುವುದಿಲ್ಲ, ಕೆಟ್ಟ ಮಾತನ್ನಾಡುವುದಿ
ಬೈಯುವುದಿಲ್ಲ."

ಇನ್ನೊಮ್ಮೆ ಅವರು ಹೇಳಿದರು,

"ಒಳ್ಳೆಯ ಮಾತು ಕೂಡಾ ದಾನವಾಗಿದೆ."

"ನೀವು ನಿಮ್ಮ ಸಹೋದರನೊಂದಿಗೆ ಮುಗುಳ್ನಗುವುದು ಕೂಡಾ ದಾನವಾಗಿದ

ಸಚ್ಚಾರಿತ್ರ್ಯಗಳಲ್ಲಿ ಕೆಲವನ್ನು ಮಾತ್ರ ನಾವಿಲ್ಲಿ ಪ್ರಸ್ತಾಪಿಸಿದ್ದೇವೆ. ಇಸ್ಲಾಮ್
ಸದ್ಗುಣಗಳನ್ನು ಬೋಧಿಸುತ್ತದೆ ಮತ್ತು ಸತ್ಯವಿಶ್ವಾಸಿಯು ಅದರಿಂದ ಅಲಂಕೃತನಾಗಬೇಕೆ
ಬಯಸುತ್ತದೆ. ಸತ್ಯವಿಶ್ವಾಸಿಯ ಸಚ್ಚಾರಿತ್ರ್ಯದ ಪಟ್ಟಿಯು ಬಹಳ ದೊಡ್ಡದಾಗಿದ್ದರೂ ಅ
ವಿವರಣೆಯು ಸುದೀರ್ಘವಾಗಬಹುದೆಂದು ಭಾವಿಸಿ ಇಲ್ಲಿ ಅವುಗಳ ಬಗ್ಗೆ ಪ್ರಸ್ತಾಪಿಸಲಾಗಿ
ದಾನ-ಧರ್ಮ, ಶೌರ್ಯ, ಕರುಣೆ, ನ್ಯಾಯಪಾಲನೆ ಇತ್ಯಾದಿಗಳ ಬಗ್ಗೆ ಇಸ್ಲಾಮ್ ವಿವರ
ಬೋಧಿಸುತ್ತದಲ್ಲದೆ, ಒಬ್ಬ ಸತ್ಯವಿಶ್ವಾಸಿಯಲ್ಲಿ ಈ ಗುಣಗಳೆಲ್ಲವೂ ಬೆಳೆಯಬೇಕೆ
ಸಾರುತ್ತದೆ. ಅದರೊಂದಿಗೆ ದುರ್ಗುಣಗಳನ್ನೆಲ್ಲಾ ಸಂಪೂರ್ಣವಾಗಿ ಹೆಕ್ಕಿ ತೆಗೆಯಬೇಕೆ
ಇಸ್ಲಾಮ್ ಬೋಧಿಸುತ್ತದೆ. ಸಣ್ಣ ದುರ್ಗುಣದ ಬಗ್ಗೆಯೂ ಇಸ್ಲಾಮ್ ಅಲಕ್ಷ್ಯ ತೋರುವು
ಮತ್ತು ಅದನ್ನು ಸಹಿಸುವುದೂ ಇಲ್ಲ. ದುರ್ಗುಣಗಳಲ್ಲಿ ಕೆಲವನ್ನು ತ್ಯಜಿಸಲು ಬಹಳ ಹ
ಒತ್ತು ಕೊಡಲಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ-

ಪರದೂಷಣೆ ಮತ್ತು ಬೈಗುಳ: ಪರಸ್ಪರ ಬೆನ್ನ ಹಿಂದೆ ದೂಷಿಸಿ ಅಣಕಿಸುವುದರಿ
ಸಂಬಂಧಗಳು ಮುರಿದು ಬೀಳುತ್ತವೆ. ಸತ್ಯವಿಶ್ವಾಸಿಗಳ ಮನಸ್ಸಿನಲ್ಲಿ ಪರಸ್ಪರರಿ
ದ್ವೇಷವಿರುವುದು ಇಸ್ಲಾಮಿನ ದೃಷ್ಟಿಯಲ್ಲಿ ಬಹಳ ಅಪ್ರಿಯವಾಗಿದೆ. ಆದುದರಿಂದಲೇ ಆ
ಕಟ್ಟು ನಿಟ್ಟಿನ ಆದೇಶ ನೀಡಲಾಗಿದೆ. ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನು ಹೇಳುತ

يٰۤاَيُّهَا الَّذِيْنَ اٰمَنُوْا لَا
يَسْخَرْ قَوْمٌ مِّنْ قَوْمٍ

"ಸತ್ಯ ವಿಶ್ವಾಸಿಗಳೇ, ಪುರುಷರು ಇತರ
ಪುರುಷರನ್ನು ಪರಿಹಾಸ್ಯ ಮಾಡಬಾರದು. ಅವರು
ಇವರಿಗಿಂತ ಉತ್ತಮರಿರಲೂ ಬಹುದು ಮತ್ತು

೯ಯರು ಇತರ ಸ್ತ್ರೀಯರನ್ನೂ ಪರಿಹಾಸ್ಯ ಾಡಬಾರದು. ಅವರು ಇವರಿಗಿಂತ ತ್ತಮರಿರಲೂ ಬಹುದು. ಪರಸ್ಪರರನ್ನು ಂದಿಸಬೇಡಿರಿ ಮತ್ತು ಒಬ್ಬರು ಇನ್ನೊಬ್ಬರನ್ನು ಕ್ಕ ಹೆಸರಿನಿಂದ ಕರೆಯಬೇಡಿರಿ. ಸತ್ಯವಿಶ್ವಾಸ ಕರಿಸಿದ ಬಳಿಕ ಕರ್ಮಭ್ರಷ್ಟತೆಯಲ್ಲಿ ಹೆಸರು ಸುವುದು ಬಹಳ ಕೆಟ್ಟದು. ಈ ನಿಲುಮೆಯನ್ನು ಾರೆಯದವರು ಅಕ್ರಮಿಗಳಾಗಿರುವರು. ್ಯವಿಶ್ವಾಸಿಗಳೇ ಹೆಚ್ಚಿನ ಗುಮಾನಿಗಳಿಂದ ಾರವಿರಿ. ನಿಶ್ಚಯವಾಗಿಯೂ ಕೆಲವು ಮಾನಿಗಳು ಪಾಪವಾಗಿವೆ. ದೋಷಾನ್ವೇಷಣೆ ಾಡದಿರಿ. ನಿಮ್ಮಲ್ಲಿ ಯಾರು ಯಾರ ್ಲಿಯೂ ಪರದೂಷಣೆ ಮಾಡಬಾರದು. ಮ್ಮಲ್ಲಿ ಯಾರಾದರೂ ತನ್ನ ಮೃತ ೋದರನ ಮಾಂಸ ತಿನ್ನಲು ಇಷ್ಟಪಡುವನೇ? ವು ಸ್ವತಃ ಇದನ್ನು ಅಸಹ್ಯಪಡುತ್ತೀರಿ. ್ಲಾಹನನ್ನು ಭಯಪಡಿರಿ. ಅಲ್ಲಾಹ್ ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ರುತ್ತಾನೆ."

(ಸೂರಃ ಅಲ್ ಹುಜುರಾತ್-11,12)

عَسَىٰٓ أَن يَكُونُوا۟ خَيْرًا
مِّنْهُمْ وَلَا نِسَآءٌ مِّن
نِّسَآءٍ عَسَىٰٓ أَن يَكُنَّ خَيْرًا
مِّنْهُنَّ ۖ وَلَا تَلْمِزُوٓا۟
أَنفُسَكُمْ وَلَا تَنَابَزُوا۟
بِٱلْأَلْقَٰبِ ۖ بِئْسَ ٱلِٱسْمُ
ٱلْفُسُوقُ بَعْدَ ٱلْإِيمَٰنِ ۚ
وَمَن لَّمْ يَتُبْ فَأُو۟لَٰٓئِكَ
هُمُ ٱلظَّٰلِمُونَ ۝ يَٰٓأَيُّهَا
ٱلَّذِينَ ءَامَنُوا۟ ٱجْتَنِبُوا۟
كَثِيرًا مِّنَ ٱلظَّنِّ إِنَّ
بَعْضَ ٱلظَّنِّ إِثْمٌ ۖ وَلَا
تَجَسَّسُوا۟ وَلَا يَغْتَب بَّعْضُكُم
بَعْضًا ۚ أَيُحِبُّ أَحَدُكُمْ
أَن يَأْكُلَ لَحْمَ أَخِيهِ مَيْتًا
فَكَرِهْتُمُوهُ ۚ وَٱتَّقُوا۟ ٱللَّهَ ۚ
إِنَّ ٱللَّهَ تَوَّابٌ رَّحِيمٌ ۝

ಈ ಸೂಕ್ತಗಳಲ್ಲಿ ಪರಸ್ಪರ ಸಂಬಂಧಗಳನ್ನು ಕೆಡಿಸುವ ವಿಷಯಗಳನ್ನು ಕಟ್ಟುನಿಟ್ಟಾಗಿ ಯಲಾಗಿದೆ. ಇತರರನ್ನು ಕೀಳೆಂದು ಬಗೆಯುವುದು, ಅಪಹಾಸ್ಯ ಮಾಡುವುದು, ದಲಿಸುವುದು, ಅಡ್ಡ ಹೆಸರಿಟ್ಟು ಕರೆಯುವುದು, ಅನಾಗರಿಕರಂತಹ ಮಾತುಗಳನ್ನಾಡುವುದು,

ಇತರರ ಬಗ್ಗೆ ಸಂಶಯವಿರಿಸುವುದು, ವೃಥಾ ಇತರರ ಮಾತುಗಳನ್ನು ಕೆದಕುವುದು, ಬೆ ಹಿಂದೆ ಪರದೂಷಣೆ ಮಾಡುವುದು ಇವುಗಳೆಲ್ಲವೂ ಒಬ್ಬ ಸತ್ಯವಿಶ್ವಾಸಿಯಲ್ಲಿ ಎಂದ ಕಾಣಬಾರದ ದುರ್ಗುಣಗಳಾಗಿವೆ. ವಿಶೇಷವಾಗಿ ಪರದೂಷಣೆ ಅತ್ಯಂತ ಅರೋಚಕವಾ ಮಹಾ ಪಾಪವಾಗಿದೆ. ಅಲ್ಲಾಹನು ಈ ದುರ್ಗುಣಕ್ಕೆ ಎಷ್ಟೊಂದು ಕಠಿಣವಾದ ಉದಾಹರಣೆಯ ನೀಡಿರುವನೆಂದು ಸ್ವಲ್ಪ ಆಲೋಚಿಸಿ ನೋಡಿ. ಈ ರೋಗವು ಮುಸ್ಲಿಮರಲ್ಲಿ ಇಂ ಸಾಮಾನ್ಯವಾಗಿ ಬಿಟ್ಟಿದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇ ಹೊರತು ಇನ್ನೂ ಕೆಲವು ಕೆಡುಕುಗಳಿಂದ ದೂರವಿರುವ ಬೋಧನೆಯು ನಮಗೆ ಅಲ್ಲಾಹ ಗ್ರಂಥ ಮತ್ತು ಪ್ರವಾದಿಚರ್ಯೆಯಲ್ಲಿ ಕಾಣಸಿಗುತ್ತದೆ. ಅವುಗಳಲ್ಲಿ ಮುಖ್ಯವಾದ ಕೆ ಕೆಡುಕುಗಳು ಹೀಗಿವೆ- ಸುಳ್ಳು, ವಚನಭಂಗ, ಮೋಸ, ವಂಚನೆ, ಸುಳ್ಳಾರೋಪ ಹೊರಿಸುವು ಜಿಪುಣತೆ, ಲೋಭ, ವಿಶ್ವಾಸಘಾತುಕತನ, ಕಳ್ಳತನ, ಅಳತೆ ತೂಕದಲ್ಲಿ ವಂಚನೆ, ಲ ಸ್ವೀಕರಿಸುವುದು ಮತ್ತು ಲಂಚ ನೀಡುವುದು, ಬಡ್ಡಿ ಸ್ವೀಕರಿಸುವುದು ಮತ್ತು ಬಡ್ಡಿ ನೀಡುವು ಮದ್ಯಪಾನ, ಕೋಪ, ಅಸೂಯೆ, ಅಹಂಕಾರ, ತೋರಿಕೆ, ದುಂದುವೆಚ್ಚ ಇತ್ಯಾದಿ.

ಸತ್ಯವಿಶ್ವಾಸಿಯ ಜೀವನ ಇಂತಹ ದುರ್ಗುಣಗಳಿಂದ ಸಂಪೂರ್ಣ ಮುಕ್ತವಾಗಿರಬೇ ಸತ್ಯವಿಶ್ವಾಸಿಯು ಲೋಕದಲ್ಲಿ ಒಳಿತಿನ ಸಂದೇಶವಾಹಕನಾಗಿದ್ದಾನೆ. ಒಳಿತನ್ನು ಹರಡುವು ಮತ್ತು ಕೆಡುಕನ್ನು ಅಳಿಸುವುದು ಅವನ ಕಾಯಕವಾಗಿದೆ. ಅವನಲ್ಲೇ ದುರ್ಗುಣಗಳ ಹೋ ತುಂಬಿದ್ದರೆ, ಕೆಡುಕಿನ ವಿರುದ್ಧ ಹೋರಾಡಲು ಅವನು ಅಲ್ಲಾಹನ ಸೈನಿಕನ ಮಾರ್ಪಡುವುದಾದರೂ ಹೇಗೆ?

❋ ❋ ❋

ಹಕ್ಕು ಬಾಧ್ಯತೆಗಳು

ಒಬ್ಬ ವ್ಯಕ್ತಿ ಅಥವಾ ಒಂದು ವಸ್ತುವಿನ ಮೂಲಕ ನಮಗೇನಾದರೂ ಪ್ರಯೋಜನವಾದರೆ ನ್ನು ಸಂರಕ್ಷಿಸಿ ಅದರ ಏಳಿಗೆಗಾಗಿ ಪ್ರಯತ್ನಿಸುವುದು ನಮ್ಮ ಬಾಧ್ಯತೆಯಾಗಿದೆ. ಇದು ್ಯಕ್ತಿ ಅಥವಾ ವಸ್ತುವಿಗೆ ಸಂಬಂಧಿಸಿದಂತೆ, ನಮ್ಮ ಮೇಲಿರುವ ಬಾಧ್ಯತೆಯಾಗಿದೆ. ೋಕದ ಪ್ರತಿಯೊಂದು ವಸ್ತುವಿನೊಂದಿಗೂ ಮಾನವನ ಸಂಬಧವಿದೆ, ಆ ಸಂಬಂಧವು ೊಮ್ಮೆ ಹೆಚ್ಚಿರಬಹುದು, ಇನ್ನು ಕೆಲವೊಮ್ಮೆ ಕಡಿಮೆಯಿರಬಹುದು. ಆದುದರಿಂದಲೇ ವರ ಮೇಲೆ ಲೋಕದ ಪ್ರತಿಯೊಂದು ವಸ್ತುವಿನ ಕುರಿತೂ ಬಾಧ್ಯತೆಯಿದೆ. ಅದರಲ್ಲಿ ವನು ಮತ್ತು ಪ್ರಾಣಿಗಳಲ್ಲದೆ ನಿರ್ಜೀವ ವಸ್ತುಗಳೂ ಒಳಗೊಂಡಿವೆ. ಅಲ್ಲಾಹನು ಕೃಪೆಯಿಂದ ನಮ್ಮ ಹಿತಕ್ಕಾಗಿ ಸೃಷ್ಟಿಸಿದ ವಸ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಿರುವ ಬಾಧ್ಯತೆಯೇನೆಂದರೆ ಅಲ್ಲಾಹನು ಯಾವ ರೀತಿಯಲ್ಲಿ ಅವುಗಳನ್ನು ಯೋಗಿಸಬೇಕೆಂದು ಆದೇಶಿಸಿದ್ದಾನೋ ಅದೇ ರೀತಿಯಲ್ಲಿ ಅದನ್ನು ಉಪಯೋಗಿಸಿ ಕ್ಷಿಸಬೇಕು. ಅಲ್ಲಾಹನು ಹೇಳುತ್ತಾನೆ,

هُوَ الَّذِي خَلَقَ لَكُم مَّا فِي الْأَرْضِ جَمِيعًا

"ಭೂಮಿಯಲ್ಲಿರುವುದನ್ನೆಲ್ಲಾ ನಿಮ ಯೇ ಸೃಷ್ಟಿಸಿದವನು ಆತನೇ."

(ಸೂರಃ ಅಲ್ ಬಕರ- 29)

ಇಸ್ಲಾಮ್ ಈ ಎಲ್ಲಾ ಹಕ್ಕುಗಳ ಬಗ್ಗೆ ಜಾಗರೂಕರಾಗಿರಲು ಕರೆ ಕೊಡುತ್ತದೆ. ಆದರೆ ಕ್ಕು ಬಾಧ್ಯತೆಗಳಿಗೆ ಅದರದೇ ಆದ ಸ್ಥಾನಮಾನ ಕೊಡಲಾಗಿದೆ. ಕೆಲವರ ಮೇಲೆ ಈ ಬಾಧ್ಯತೆಗಳು ಹೆಚ್ಚಿದ್ದರೆ ಇನ್ನು ಕೆಲವರಿಗೆ ಸಂಬಂಧಿಸಿದಂತೆ ಕಡಿಮೆಯಿರುತ್ತದೆ.

ದೆ- ತಾಯಂದಿರ ಹಕ್ಕು: ಮನುಷ್ಯರಿಗೆ ತಂದೆ ತಾಯಿಗಳ ಕುರಿತಂತೆ ಅತ್ಯಧಿಕ ಗಳಿವೆ. ಅದರಲ್ಲೂ ತಾಯಿಯ ಹಕ್ಕು ತಂದೆಗಿಂತಲೂ ಅಧಿಕವಾಗಿದೆ. ಒಮ್ಮೆ ದಿವರ್ಯರ(ಸ) ಸಂಗಾತಿಯೊಬ್ಬರು ಕೇಳಿದರು, "ನನ್ನ ಸದ್ವರ್ತನೆಗೆ ಅತ್ಯಧಿಕ ಅರ್ಹರು ು?" "ನಿಮ್ಮ ತಾಯಿ" ಎಂದು ಪ್ರವಾದಿವರ್ಯರು(ಸ) ಉತ್ತರಿಸಿದರು. "ಆ ಬಳಿಕ ು?" ಎಂದು ಅವರು ವಿಚಾರಿಸಿದರು. "ನಿಮ್ಮ ತಾಯಿ" ಎಂದು ಪ್ರಾವಾದಿ(ಸ)

ಉತ್ತರಿಸಿದರು. "ತರುವಾಯ ಯಾರು?" ಎಂದು ಅವರು ಪ್ರಶ್ನಿಸಿದರು. "ನಿಮ್ಮ ತಾ ಎಂದು ಪ್ರವಾದಿ(ಸ) ಉತ್ತರಿಸಿದರು. "ಮತ್ತೆ ಯಾರು?" ಎಂದು ಕೇಳಿದ ಪ್ರವಾದಿವರ್ಯರು(ಸ), "ನಿಮ್ಮ ತಂದೆ" ಎಂದು ಉತ್ತರಿಸಿದರು. "ತಾಯಿಯಂ ಆಜ್ಞೋಲ್ಲಂಘನೆಯನ್ನು ನಿಮ್ಮ ಪ್ರಭು ನಿಮ್ಮ ಪಾಲಿಗೆ ನಿಷಿದ್ಧಗೊಳಿಸಿದ್ದಾನೆ". ಅಲ್ಲಾ ಆಜ್ಞೋಲ್ಲಂಘನೆಯನ್ನು ಮಾಡುವಂತೆ ತಂದೆ ತಾಯಿಗಳು ಆದೇಶಿಸಿದರೆ ಮಾತ್ರ ಅ ಮಾತನ್ನು ತಿರಸ್ಕರಿಸಬಹುದು. ಇದರ ಹೊರತು ಯಾವ ಪರಿಸ್ಥಿತಿಯಲ್ಲೂ ತಂದೆ ತಾಯಿ ಆಜ್ಞೋಲ್ಲಂಘನೆ ಮಾಡಬಾರದು. ಎಷ್ಟರ ವರೆಗೆಂದರೆ ಅವರು ಸತ್ಯ ನಿಷೇಧಿಗಳು ಅ ಬಹುದೇವಾರಾಧಕರಾಗಿದ್ದರೂ ಅವರೊಂದಿಗೆ ಸದ್ವರ್ತನೆ ಕೈಗೊಳ್ಳಬೇಕಾಗಿದೆ. ಆದರೆ ಅ ಮಾತುಗಳು ಅಲ್ಲಾಹನ ಧರ್ಮಕ್ಕೆ ವಿರುದ್ಧವಾಗಿದ್ದರೆ ಅದನ್ನು ಪಾಲಿಸಬೇಕಾಗಿಲ್ಲ. ಪ ಕುರ್‌ಆನ್ ಮತ್ತು ಪ್ರವಾದಿ ವಚನಗಳಲ್ಲಿ ತಂದೆ ತಾಯಿಗಳ ಸೇವೆ, ಅವರ ಸಹಾಯ ವ ಅವರ ಆಜ್ಞಾಪಾಲನೆಯ ಬಗ್ಗೆ ಬಹಳ ತಾಕೀತು ಮಾಡಲಾಗಿದೆ. ಅವರ ಸಂತೋಷ ನಮ್ಮ ಸುಖ ಮತ್ತು ನಮ್ಮ ಆಸೆ ಆಕಾಂಕ್ಷೆಗಳನ್ನು ಬಲಿಕೊಡಬೇಕೆಂದು ಆದೇಶಿಸಲಾ ಅವರ ಸಂತೋಷವು ಅಲ್ಲಾಹನ ಸಂತೋಷಕ್ಕೆ ವಿರುದ್ಧವಾಗಿದ್ದರೆ ಮತ್ತು ಅವರ ಆದೇ ಅಲ್ಲಾಹನ ಆದೇಶಗಳ ಪಾಲನೆಗೆ ತಡೆಯಾದರೆ ಅವರ ಸಂತೋಷ ಮತ್ತು ಅ ಆದೇಶವನ್ನು ನಿರ್ಲಕ್ಷಿಸುವುದೇ ಸೂಕ್ತವಾಗಿದೆ. ಒಮ್ಮೆ ಪ್ರವಾದಿವರ್ಯರು(ಸ) ಹೇಳಿ

"ಮೂರು ವಿಧದ ಜನರೆಡೆಗೆ ಅಲ್ಲಾಹನು ಅಂತ್ಯದಿನದಂದು ಕರುಣೆಯ ದೃಷ್ಟಿಯ ಬೀರಲಾರನು. ಅವರ ಪೈಕಿ ಒಂದು ವಿಧದ ಜನರು ತಂದೆ ತಾಯಿಗಳ ಆಜ್ಞೋಲ್ಲಂಘನೆಯ ಮಾಡಿದವರಾಗಿರುವರು."

ಮಕ್ಕಳ ಹಕ್ಕುಗಳು: ಮಕ್ಕಳ ಮೇಲೆ ತಂದೆ ತಾಯಿಗಳ ಬಾಧ್ಯತೆಗಳಿರುವಂತೆಯೇ ತಾಯಿಗಳ ಮೇಲೂ ಮಕ್ಕಳ ಮೇಲಿನ ಬಾಧ್ಯತೆಗಳಿವೆ. ಮಕ್ಕಳ ಮೇಲೆ ಹೆತ್ತವರ ಪ್ರ ಕರ್ತವ್ಯವು ಅವರ ದೈಹಿಕ ಮತ್ತು ಆಧ್ಯಾತ್ಮಿಕ ಜೀವನದ ಏಳಿಗೆಯ ಏರ್ಪಾಟು ಮಾಡುವುದಾ ದೈಹಿಕ ಜೀವನಕ್ಕೆ ಸಂಬಂಧಿಸಿದಂತೆ ಜನರಲ್ಲಿ ಅಲಕ್ಷ್ಯ ಕಾಣಿಸುವುದು ಬಹಳ ವಿರಳ. ಇ ಅಲಕ್ಷ್ಯವನ್ನು ಪ್ರಾಣಿಗಳೂ ತಮ್ಮ ಸಂತತಿಯೊಂದಿಗೆ ತೋರುತ್ತವೆ. ತಮ್ಮ ಮಕ್ಕ ವಧಿಸುವಂತಹ ಅಕ್ರಮಿಗಳು ಬಹಳ ಕಡಿಮೆ. ಆದರೆ ಮಕ್ಕಳ ಜನನವನ್ನು ತಡೆಗಟ್ಟು ಅತ್ಯಧಿಕ ಬುದ್ಧಿವಂತಿಕೆಯ ಕೆಲಸವೆಂದು ತಿಳಿಯುವವರು ಬಹಳ ಹೆಚ್ಚು ಸಂಖ್ಯೆಯಲ್ಲಿ ಇಸ್ಲಾಮಿನ ದೃಷ್ಟಿಯಲ್ಲಿ ಇದು ಅತ್ಯಂತ ಹೇಯವಾದ ಪಾಪ ಕಾರ್ಯವಾಗಿದೆ.

ಸಾಮಾನ್ಯವಾಗಿ ಮಕ್ಕಳ ಆಧ್ಯಾತ್ಮಿಕ ಜೀವನದ ಬಗ್ಗೆ ಶ್ರದ್ಧೆ ವಹಿಸುವ ಕರ್ತವ್ಯ ಬಹಳ ಅಶ್ರದ್ಧೆ ತೋರಲಾಗುತ್ತದೆ. ಮಕ್ಕಳಿಗೆ ಧಾರ್ಮಿಕ ಜ್ಞಾನ ನೀಡುವುದನ್ನು ಅಲ್ಲಾ ಮುಸ್ಲಿಮರ ಮೇಲೆ ಕಡ್ಡಾಯಗೊಳಿಸಿದ್ದಾನೆ. ಪರಲೋಕದಲ್ಲಿ ದೇವಧಿಕ್ಕಾರಕ್ಕಾಗಿ ಅವ ನರಕಾಗ್ನಿಯ ಇಂಧನವನ್ನಾಗಿಸದಿರುವಂತಹ ರೀತಿಯಲ್ಲಿ ಅವರಿಗೆ ತರಬೇತಿ ನೀಡಬೇಕ ಅಲ್ಲಾಹನು ಆದೇಶಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ,

يٰۤاَيُّهَا الَّذِيْنَ اٰمَنُوْا قُوْۤا اَنْفُسَكُمْ وَاَهْلِيْكُمْ نَارًا۔

"ಸತ್ಯ ವಿಶ್ವಾಸಿಗಳೇ, ಮಾನವರೂ
ಗಳೂ ಇಂಧನವಾಗಲಿರುವ ಅಗ್ನಿಯಿಂದ
ನ್ನೂ ನಿಮ್ಮ ಕುಟುಂಬದವರನ್ನೂ
ಕೊಳ್ಳಿರಿ." (ಸೂರಃ ಅತ್ತಹ್ರೀಮ್-6)

ಅಂತ್ಯ ದಿನವು ಬರಲಿದೆ, ಅಲ್ಲಿ ಒಳಿತು ಮತ್ತು ಕೆಡುಕಿನ ವಿಚಾರಣೆ ನಡೆಯಲಿದೆ, ನರಿಗೆ ಸ್ವರ್ಗ ಸಿಗಲಿದೆ ಮತ್ತು ದುಷ್ಕರ್ಮಿಗಳಿಗೆ ನರಕಾಗ್ನಿಯಲ್ಲಿ ಉರಿಯಬೇಕಾಗುತ್ತದೆ ು ಮುಂತಾದವುಗಳ ಬಗ್ಗೆ ಕಿಂಚಿತ್ತಾದರೂ ವಿಶ್ವಾಸವಿರುವವರು ತಮ್ಮ ಕರುಳ ಗಳಾದ ಪ್ರೀತಿಯ ಮಕ್ಕಳು ನರಕಾಗ್ನಿಯಲ್ಲಿ ಎಸೆಯಲ್ಪಡುವುದನ್ನು ಹೇಗೆ ತಾನೆ ಬಲ್ಲರು? ಮುಂದೆ ಬರಲಿರುವ ಯಾವುದೇ ಸಂಕಷ್ಟದಿಂದ ತಮ್ಮ ಮಕ್ಕಳನ್ನು ಗೊಳಿಸಲು ಪ್ರಯತ್ನಿಸದ ತಂದೆ ತಾಯಿಗಳು ಇದ್ದಾರೆಯೇ? ಸಂಕಷ್ಟವಂತಿರಲಿ, ಅದರ ಯಿಂದಲೇ ಜನರು ತಮ್ಮ ಮಕ್ಕಳನ್ನು ಜೋಪಾನವಾಗಿರಿಸಲು ಸರ್ವ ಪ್ರಯತ್ನ ತ್ತಾರೆ. ಆದುದರಿಂದಲೇ ಅಲ್ಲಾಹನ ಆಜ್ಞೋಲ್ಲಂಘನೆಯ ಅಂತಿಮ ಫಲಿತಾಂಶವೇನೆಂದು ು ಸತ್ಯವಿಶ್ವಾಸಿಯು ತಮ್ಮ ಮಕ್ಕಳು ದೇವ ಧಿಕ್ಕಾರಿಗಳಾಗಿ ಮಾರ್ಪಡದೆ ಇರಲು ಪ್ರಯತ್ನ ಮಾಡುತ್ತಾನೆ. ಇಂದು ತನಗೆ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿ ಪಾತ್ರರಾಗಿರುವ ಳು ನಾಳೆ ಅಲ್ಲಾಹನ ಧಗಧಗಿಸುವ ಅಗ್ನಿಯಲ್ಲಿ ಹೊತ್ತಿ ಉರಿಯಲ್ಪಡುವ ಕಲ್ಪನೆಯಿಂದಲೇ ು ಕಂಪಿಸುತ್ತಾನೆ. ಅಷ್ಟು ಮಾತ್ರವಲ್ಲ, ತಾನು ಮಕ್ಕಳ ಈ ಬಾಧ್ಯತೆಯನ್ನು ಸರಿಯಾಗಿ ಯಿಸದೆ ಇದ್ದು ಈ ಅಸಡ್ಡೆಯಿಂದಲೇ ಮಕ್ಕಳು ಶಿಕ್ಷಾರ್ಹರಾದರೆ, ಆ ತಪ್ಪಿಗೆ ತಾನು ಗಾರನಾಗುತ್ತೇನೆಂಬುದನ್ನೂ ಸತ್ಯ ವಿಶ್ವಾಸಿಯು ಅರಿತಿರುತ್ತಾನೆ.

ಮಕ್ಕಳು ನಮ್ಮ ಬಳಿ ಅಲ್ಲಾಹನ ಅಮಾನತ್ತಾಗಿರುತ್ತಾರೆ. ಅವರು ನಮ್ಮ ಪರೀಕ್ಷೆಯ ನವಾಗಿದ್ದಾರೆ. ಪರಲೋಕದಲ್ಲಿ ನಾವು ಈ ಅಮಾನತ್ತನ್ನು ಹೇಗೆ ನಿಭಾಯಿಸಿದ್ದೇವೆಂಬ ಅಲ್ಲಾಹನ ಮುಂದೆ ಉತ್ತರ ನೀಡಬೇಕಾಗುತ್ತದೆ. ನಮ್ಮ ವಶಕ್ಕೊಪ್ಪಿಸಲಾಗಿದ್ದ ಆತನ ಯನ್ನು ಆತನ ನೈಜ ದಾಸನನ್ನಾಗಿ ಮಾಡಲು ನಾವೆಷ್ಟು ಪ್ರಯತ್ನ ಪಟ್ಟಿದ್ದೇವೆಂದು ಸಮರ್ಪಿಸಬೇಕಾಗುತ್ತದೆ. ನಮ್ಮ ನಿರ್ಲಕ್ಷ್ಯತೆ ಮತ್ತು ಅನುಚಿತ ತರಬೇತಿಯಿಂದಾಗಿ ಳು ಅಲ್ಲಾಹನನ್ನು ಮರೆತರೆ, ಆತನ ಧರ್ಮ ತೊರೆದು ಕೆಟ್ಟ ಮಾರ್ಗದಲ್ಲಿ ನಡೆದರೆ ಗ್ಗೆಯಿರುವ ನಮ್ಮ ಕರ್ತವ್ಯಚ್ಯುತಿಯ ಫಲಿತಾಂಶವನ್ನು ಅನುಭವಿಸಿಯೇ ತೀರಬೇಕಾಗುತ್ತದೆ. ಹ ತಪ್ಪಿನಿಂದಾಗಿ ಲೋಕದಲ್ಲಿ ಹರಡುವ ಕೇಡಿನಲ್ಲಿ ನಮ್ಮ ಪಾಲೂ ಇರುತ್ತದೆ. ದಿವರ್ಯರು(ಸ) ಹೇಳಿದ್ದಾರೆ,

"ತಂದೆ ತಾಯಿಗಳು ತಮ್ಮ ಮಕ್ಕಳಿಗೆ ನೀಡುವ ಅತ್ಯುತ್ತಮ ಕೊಡುಗೆ ಅವರ ಉತ್ತಮ ತಿಯಾಗಿದೆ."

ತ್ನಿಯರ ಹಕ್ಕುಗಳು: ಇಸ್ಲಾಮಿನ ದೃಷ್ಟಿಯಲ್ಲಿ ಪತಿ- ಪತ್ನಿಯರ ಸಂಬಂಧವು ಅತ್ಯಂತ ುಖ ಮತ್ತು ಪರಿಶುದ್ಧವಾದ ಸಂಬಂಧವಾಗಿದೆ. ಇಸ್ಲಾಮಿನ ಸಾಮಾಜಿಕ ವ್ಯವಸ್ಥೆಯು

ಕುಟುಂಬದ ಆಧಾರದಲ್ಲಿ ನೆಲೆ ನಿಂತಿದೆ ಮತ್ತು ಕುಟುಂಬವು ಪತಿ-ಪತ್ನಿಯರ ಸಂಬಂಧದಿ ಹುಟ್ಟುತ್ತದೆ. ಕೌಟುಂಬಿಕ ವ್ಯವಸ್ಥೆಯು ಉತ್ತಮವಾಗಿರುವಷ್ಟೇ ಸಾಮಾಜಿಕ ವ್ಯವಸ್ಥೆ ಸುದೃಢವಾಗಿರುತ್ತದೆ. ಕುಟುಂಬದ ಸುಧಾರಣೆ ಮತ್ತು ಸುದೃಢತೆಗಾಗಿ ಇಸ್ಲಾಮ್ ವಿವರ ಆಜ್ಞೆಗಳನ್ನು ನೀಡಿದೆ. ಪ್ರತಿಯೊಂದು ಕುಟುಂಬದಲ್ಲಿ ಪ್ರೀತ್ಯಾದರ ಮತ್ತು ಸಹಾನುಭೂತಿ ತುಂಬಿ ತುಳುಕಬೇಕು ಮತ್ತು ಅವರ ನಡುವಿನ ಪರಸ್ಪರ ಸಂಬಂಧ ಸುಖಮಯವಾಗಿರಬೇಕೆ ಇಸ್ಲಾಮ್ ಬಯಸುತ್ತದೆ. ಇದರ ಬಗ್ಗೆ ಇಸ್ಲಾಮಿನ ಬೋಧನೆಗಳು ಬಹಳ ವಿವರ ಇದೆ. ಅದನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು-

1. ಕುಟುಂಬದ ಅವಶ್ಯಕತೆಗಳಿಗಾಗಿ ಜೀವನಾಧಾರವನ್ನು ಒದಗಿಸುವ ವ್ಯ ಮಾಡುವುದು ಪತಿಯ ಕರ್ತವ್ಯವಾಗಿದೆ. ಹಾಗೆಯೇ ಕುಟುಂಬದ ನೈತಿಕ ಶಿಕ್ಷಣ ವ ತರಬೇತಿಯ ವ್ಯವಸ್ಥೆ ಮಾಡಬೇಕಾಗಿದೆ. ಅಲ್ಲಾಹನು ವಿಧಿಸಿದ ಮೇರೆಯೊಳಗಿದ್ದುಕೊ ಪತ್ನಿ ಮತ್ತು ಮಕ್ಕಳ ಎಲ್ಲ ಹಕ್ಕುಗಳನ್ನು ಪಾಲಿಸಬೇಕಾಗಿದೆ. ಪತ್ನಿಯರೊಂದಿಗೆ ವಾತ್ಸಲ್ಯದಿಂದಿರಬೇಕು ಮತ್ತು ಅವರೊಂದಿಗೆ ಅತ್ಯಧಿಕ ಸೌಜನ್ಯ ಮತ್ತು ಸದ್ವ ತೋರಬೇಕಾಗಿದೆ. ಅಲ್ಲಾಹನು ಹೇಳುತ್ತಾನೆ,

"ನೀವು ಅವರೊಂದಿಗೆ ಉತ್ತಮ ರೀತಿ ಯಿಂದ ಜೀವನ ನಡೆಸಿರಿ." (ಸೂರಃ ಅನ್ನಿಸಾ- 19)

شِرُوهُنَّ بِالْمَعْرُوفِ-

ತಮ್ಮ ವಿದಾಯ ಹಜ್ಜ್‌ನ ಸಂದರ್ಭದಲ್ಲಿ ಪ್ರವಾದಿ(ಸ) ಭಾಷಣ ಮಾಡುತ್ತಾ ರೀತಿ ಆದೇಶಿಸಿದರು,

"ನಾನು ನಿಮಗೆ ಮಹಿಳೆಯರೊಂದಿಗೆ ಅತ್ಯುತ್ತಮವಾಗಿ ವ್ಯವಹರಿಸುವಂತೆ ವಿಶೇಷ ತಾಕೀತು ಮಾಡುತ್ತೇನೆ. ನನ್ನ ಈ ಉಪದೇಶವನ್ನು ನೆನಪಿನಲ್ಲಿಡಿರಿ, ಅವರು ನಿಮ್ಮ ಅ ಮತ್ತು ನಿಯಂತ್ರಣದಲ್ಲಿರುವವರಾಗಿದ್ದಾರೆ."

2. ಸದಾ ಪತಿಯ ಹಿತಾಕಾಂಕ್ಷಿಯಾಗಿರುವುದು ಪತ್ನಿಯ ಕರ್ತವ್ಯವಾಗಿದೆ. ಆಕೆ ಪ ಧರ್ಮ ಸಮ್ಮತವಾದ ಎಲ್ಲಾ ಆದೇಶಗಳನ್ನು ಪಾಲಿಸಬೇಕು. ಅವರ ಯಾವುದೇ ಅಮಾನತಿ ವಂಚನೆ ಮಾಡಬಾರದು. ಅಲ್ಲಾಹನು ಹೇಳುತ್ತಾನೆ,

"ಸುಶೀಲೆಯರಾದ ಸ್ತ್ರೀಯರು ಅನುಸರಣ ಶೀಲರಾಗಿರುತ್ತಾರೆ ಮತ್ತು ಅವರು ಪುರುಷರ ಅನುಪಸ್ಥಿತಿಯಲ್ಲಿ ಅಲ್ಲಾಹನ ರಕ್ಷಣೆಯಲ್ಲಿ ಅವರ ಹಕ್ಕು ಬಾಧ್ಯತೆಗಳ ರಕ್ಷಣೆ ಮಾಡುತ್ತಾರೆ."

(ಸೂರಃ ಅನ್ನಿಸಾ- 34)

صّٰلِحٰتُ قٰنِتٰتٌ
ظٰتٌ لِّلْغَيْبِ-

ಪ್ರವಾದಿವರ್ಯರು(ಸ) ಮಹಿಳೆಯರೊಂದಿಗೆ ತಮ್ಮ ಪತಿಯೊಂದಿಗಿರುವ ಕರ್ತವ್ಯ ಸರಿಯಾಗಿ ನಿಭಾಯಿಸುವಂತೆ ಪದೇ ಪದೇ ತಾಕೀತು ಮಾಡಿದ್ದಾರೆ.

"ಮುಹಮ್ಮದ್‌ನ ಆತ್ಮವು ಯಾರ ವಶದಲ್ಲಿದೆಯೋ ಅವನಾಣೆ, ತನ್ನ ಪ

ಕ್ಕುಗಳನ್ನು ನೀಡುವ ವರೆಗೂ ಯಾವುದೇ ಮಹಿಳೆ ಅಲ್ಲಾಹನ ಹಕ್ಕುಗಳನ್ನು ನೀಡಲಾರಳು."

ಂಬಂಧಿಕರ ಹಕ್ಕುಗಳು: ಸಂಬಂಧಿಕರೊಡನೆ ಸದ್ವರ್ತನೆ ಕೈಗೊಳ್ಳುವಂತೆ, ಅವರ ಬಾಧ್ಯತೆಗಳನ್ನು ರಿಯಾಗಿ ನೆರವೇರಿಸುವಂತೆ ಇಸ್ಲಾಮ್ ತಾಕೀತು ಮಾಡಿದೆ. ಪವಿತ್ರ ಕುರ್‌ಆನಿನಲ್ಲಿ ಂಬಂಧಿಕರ ಹಕ್ಕನ್ನು ನೀಡುವಂತೆ ಅನೇಕ ಬಾರಿ ಆದೇಶಿಸಲಾಗಿದೆ. ಪ್ರವಾದಿವರ್ಯರು(ಸ) ೇಳಿದ್ದಾರೆ,

"ತಮ್ಮ ಜೀವನಾಧಾರದಲ್ಲಿ ವೃದ್ಧಿ ಮತ್ತು ಆಯುಷ್ಯದಲ್ಲಿ ಸಮೃದ್ಧಿಯನ್ನು ಬಯಸುವವರು ಂಬಂಧಿಕರೊಂದಿಗೆ ಸದ್ವರ್ತನೆ ತೋರಬೇಕು."

ಬಂಧು ಬಳಗದವರಲ್ಲಿ ಯಾರಾದರೂ ನಮ್ಮ ಹಕ್ಕುಗಳನ್ನು ನೀಡದಿದ್ದರೂ ಕೂಡಾ ಾವು ಅವರೊಂದಿಗೆ ಕರ್ತವ್ಯದಲ್ಲಿ ಚ್ಯುತಿ ಮಾಡಬಾರದೆಂದು ಪ್ರವಾದಿ(ಸ) ತಾಕೀತು ಾಡಿದ್ದಾರೆ.

"ನಿಮ್ಮ ಆಪ್ತ ಸಂಬಂಧಿಕರಲ್ಲಿ ಯಾರಾದರೂ ನಿಮ್ಮೊಂದಿಗಿನ ಸಂಬಂಧವನ್ನು ಡಿದುಕೊಂಡು ನಿಮ್ಮೊಂದಿಗೆ ಅಸಡ್ಡೆ ತೋರಿದರೆ ಹಾಗೂ ಸಂಬಂಧದ ಹಕ್ಕನ್ನು ೀಡದಿದ್ದರೆ, ನೀವೂ ಅವರೊಡನೆ ಸಂಬಂಧವನ್ನು ಮುರಿಯಬೇಡಿರಿ, ನೀವು ನಿಮ್ಮ ಡೆಯಿಂದ ಅವರ ಮೇಲಿರುವ ಕರ್ತವ್ಯವನ್ನು ನೆರವೇರಿಸಿರಿ."

ಕ್ಕು ಬಾಧ್ಯತೆಗಳ ಪ್ರಾಮುಖ್ಯತೆ: ಇಸ್ಲಾಮ್ ಮಾನವರಿಗೆ ಕೇವಲ ವೈಯಕ್ತಿಕ ಸುಧಾರಣೆಯ ರಬೇತಿಯನ್ನು ಮಾತ್ರ ನೀಡುವುದಿಲ್ಲ. ಬದಲಾಗಿ ಸಂಪೂರ್ಣ ಮುಸ್ಲಿಮ್ ಸಮುದಾಯವನ್ನೇ ಳಿತಿನ ಮಾದರಿಯನ್ನಾಗಿ ಮಾಡಬಯಸುತ್ತದೆ. ಇದು ಸಾಧ್ಯವಾಗಬೇಕಾದರೆ ಇಸ್ಲಾಮಿ ಮಾಜದ ಎಲ್ಲಾ ವ್ಯಕ್ತಿಗಳ ಮನಸ್ಸು ಪರಸ್ಪರ ಒಂದಾಗಿರಬೇಕು. ಪರಸ್ಪರ ಪ್ರೀತಿ, ವಾತ್ಸಲ್ಯ ುತ್ತು ಪರಸ್ಪರ ಆಪ್ತತೆ ಇಲ್ಲದಿದ್ದರೆ ಆ ಸಮುದಾಯವು ಒಂದಾಗಿ ಯಾವ ಒಳಿತನ್ನೂ ಾಡಲಾರದು ಹಾಗೂ ಇತರರ ಪಾಲಿಗೆ ಒಳಿತಿನ ಮಾದರಿಯಾಗಿ ಮಾರ್ಪಡಲಾರದು. ಆದುದರಿಂದಲೇ ಇಸ್ಲಾಮ್ ಮೊಟ್ಟ ಮೊದಲು ಪರಸ್ಪರ ರಕ್ತ ಸಂಬಂಧಿಗಳ ಸಂಬಂಧವನ್ನು ೃಢಗೊಳಿಸುತ್ತದೆ. ಆದರೆ ಆ ಸಂಬಂಧದ ದೃಢತೆಗಾಗಿ ಅದು ರಕ್ತ, ಕುಟುಂಬ ಮತ್ತು ಂಶಾವಳಿಯನ್ನು ಹೇತುವಾಗಿಸುವ ಬದಲು ಅಲ್ಲಾಹನ ಸಂಪ್ರೀತಿ ಮತ್ತು ಆತನ ಆಜ್ಞಾಪಾಲನೆ ುನ್ನು ಮೂಲವಾಗಿರಿಸುತ್ತದೆ. ಉದಾಹರಣೆಗೆ ತಂದೆ ತಾಯಿಗಳ ಸೇವೆ, ಮಕ್ಕಳ ತರಬೇತಿ, ತಿ ಪತ್ನಿಯ ಹಕ್ಕು ಬಾಧ್ಯತೆಗಳು, ಬಂಧು ಬಳಗದವರೊಂದಿಗಿನ ಸಂಬಂಧ ಇವೆಲ್ಲವೂ ಅಲ್ಲಾಹನ ಸಂಪ್ರೀತಿಗಾಗಿದೆ ಮತ್ತು ಕೇವಲ ಆತನ ಸಂತುಷ್ಟಿಗಾಗಿಯೇ ಈ ಹಕ್ಕುಗಳನ್ನೆಲ್ಲಾ ೀಡಬೇಕೆಂದು ಇಸ್ಲಾಮ್ ಒತ್ತಿ ಹೇಳುತ್ತದೆ. ಈ ಎಲ್ಲಾ ಕರ್ತವ್ಯಗಳನ್ನು ನೆರವೇರಿಸುವಾಗ ಅಲ್ಲಾಹನ ಆಜ್ಞೋಲ್ಲಂಘನೆಯನ್ನು ಮಾಡಬೇಕಾದ ಸಂದರ್ಭ ಬಂದರೆ ಖಂಡಿತವಾಗಿಯೂ ಆ ಕರ್ತವ್ಯಗಳನ್ನು ನೆರವೇರಿಸಬಾರದೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಅಂತಹ ಸಂದರ್ಭದಲ್ಲಿ ತಂದೆ ತಾಯಿಗಳ ಅಥವಾ ಸಂತಾನದ ಸೇವೆ ಮಾಡಬೇಕಾಗಿಲ್ಲ, ಪತಿಯು ಪತ್ನಿಯೊಡನೆ ಸಹಕರಿಸಬೇಕಾಗಿಲ್ಲ ಮತ್ತು ಪತ್ನಿಯು ಪತಿಯನ್ನು ಅನುಸರಿಸಬೇಕಾಗಿಲ್ಲ. ಒಟ್ಟಿನಲ್ಲಿ ಯಾವುದೇ ಸಂಬಂಧ ಅಥವಾ ನೆಂಟಸ್ತಿಕೆ ಸತ್ಯವಿಶ್ವಾಸಿಯನ್ನು ಸನ್ಮಾರ್ಗದಿಂದ ತಡೆಯಬಾರದು.

ಹಕ್ಕು ಬಾಧ್ಯತೆಗಳ ವರ್ತುಲದ ವೈಶಾಲ್ಯ: ಹಕ್ಕು ಬಾಧ್ಯತೆಗಳ ಈ ವರ್ತುಲವು ಬಂಧ ಬಳಗದವರನ್ನು ದಾಟಿ ನೆರೆಹೊರೆಯವರು, ಅತಿಥಿಗಳು, ಅಪೇಕ್ಷಿತರು, ದುರ್ಬಲರು ರೋಗಿಗಳು ಮತ್ತು ಇತರೆಲ್ಲಾ ಮುಸ್ಲಿಮರ ವರೆಗೆ ಹರಡಿದೆ. ಇವರಲ್ಲಿ ಪ್ರತಿಯೊಬ್ಬ ಹಕ್ಕುಗಳ ವಿವರಣೆಯು ಶರೀಯತ್‌ನಲ್ಲಿ ದೊರೆಯುತ್ತದೆ. ನೆರೆಹೊರೆಯವರ ಮೇಲಿರು ಕರ್ತವ್ಯಗಳ ಬಗ್ಗೆ ವಿಶೇಷವಾಗಿ ಒತ್ತಿ ಹೇಳಲಾಗಿದೆ. ಪವಿತ್ರ ಕುರ್‌ಆನ್ ಮತ್ತು ಪ್ರವಾ ವಚನಗಳಲ್ಲಿ ಈ ಹಕ್ಕುಗಳ ಬಗ್ಗೆ ಸುಸ್ಪಷ್ಟ ಆದೇಶಗಳು ಕಾಣಸಿಗುತ್ತವೆ. ಈ ಬಗ್ಗೆ ಇರು ಅನೇಕ ಪ್ರವಾದಿ ವಚನಗಳಲ್ಲಿ ಕೆಲವು ಇಂತಿವೆ-

"ಅಲ್ಲಾಹನ ಮೇಲೆ ಮತ್ತು ಅಂತ್ಯ ದಿನದ ಮೇಲೆ ವಿಶ್ವಾಸವಿರಿಸುವವರು ತಮ್ ನೆರೆಹೊರೆಯವರಿಗೆ ಯಾವುದೇ ಹಿಂಸೆ ಅಥವಾ ತೊಂದರೆಯನ್ನು ನೀಡದಿರಲಿ."

"ನೆರೆಯವನು ಹಸಿವಿನಿಂದಿರುವಾಗ ಹೊಟ್ಟೆ ತುಂಬಾ ಉಣ್ಣುವವನು ಮುಸ್ಲಿಮನಲ್ಲ."

"ಯಾರ ನೆರೆಯವನು ಅವನ ಕುತಂತ್ರದಿಂದ ಮುಕ್ತನಲ್ಲವೋ ಅವನು ಸತ್ಯ ವಿಶ್ವಾಸಿಯಲ್ಲ."

ಪರಸ್ಪರರ ಹಕ್ಕುಗಳ ಸಂರಕ್ಷಣೆಯ ಈ ವ್ಯವಸ್ಥೆಯು ವಾಸ್ತವದಲ್ಲಿ ಸಂಪೂರ್ಣ ಇಸ್ಲಾಮೀ ಸಮುದಾಯದ ಜೀವಾಳವಾಗಿದೆ. ಇದರ ವಿನಾ ಸಮುದಾಯವು ಒಂದಾ ಯಾವುದೇ ಮಹತ್ತರ ಕಾರ್ಯವನ್ನು ನೆರವೇರಿಸಲಾರದು. ಇಸ್ಲಾಮ್ ಅಲ್ಲಾಹನ ವಚನವನ್ನು ಎತ್ತಿ ಹಿಡಿಯುವ ಮತ್ತು ಲೋಕದಿಂದ ಪಥಭ್ರಷ್ಟತೆ, ಕ್ಷೋಭೆ ಮತ್ತು ಕೆಡುಕನ್ನು ಅಳಿಸುವಂತಹ ಸಮುದಾಯವನ್ನು ಸಿದ್ಧಗೊಳಿಸ ಬಯಸುತ್ತದೆ. ಆದ್ದರಿಂದ ಸಮುದಾಯವ ಹೆಚ್ಚು ಸುದೃಢವಾಗಿರಬೇಕು. ಸುದೃಢವಾದ ಗೋಡೆಯ ಇಟ್ಟಿಗೆಗಳು ಪರಸ್ಪರ ಕೂಡಿರುವಂತೆಯೇ ಸಮುದಾಯದ ಜನರು ಪರಸ್ಪರ ಒಂದಾಗಿರಬೇಕಾಗಿದೆ.

ಜನಸಾಮಾನ್ಯರ ಹಕ್ಕುಗಳು: ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದಂತೆ ಇಸ್ಲಾಮ್ ಸಂಕುಚಿತ ಮನೋಭಾವವನ್ನಿರಿಸಿಕೊಂಡಿಲ್ಲ. ಬಂಧುಬಳಗದವರು, ನೆರೆಹೊರೆಯವರು ಮತ್ತು ಇತರ ಮುಸ್ಲಿಮರ ಹಕ್ಕುಗಳ ಬಗ್ಗೆ ವಿವರಿಸುವಂತೆಯೇ ಅದು ಜನಸಾಮಾನ್ಯರ ಹಕ್ಕುಗಳನ್ನು ಕಡೆಗಣಿಸುವುದಿಲ್ಲ. ಮಾನವರೆಲ್ಲರೂ ಪ್ರವಾದಿ ಆದಮ್‌ರವರ(ಅ) ಸಂತತಿ ಎಂದು ಇಸ್ಲಾಮ್ ಬೋಧಿಸುತ್ತದೆ. ಈ ಸಂಬಂಧದ ಆಧಾರದಲ್ಲಿ ಎಲ್ಲರೂ ಮಾನವ ಭ್ರಾತೃತ್ವದ ಸದಸ್ಯರಾಗಿದ್ದಾರೆ ಮತ್ತು ಅವರ ನಡುವೆ ಪರಸ್ಪರ ಹಕ್ಕು ಬಾಧ್ಯತೆಗಳಿವೆ. ಈ ಮಾನವ ಸಮುದಾಯವನ್ನು ಅಲ್ಲಾಹನ ಕ್ರೋಧ ಮತ್ತು ಪರಲೋಕದ ಶಿಕ್ಷೆಯಿಂದ ರಕ್ಷಿಸಲು ಸರ್ವ ಪ್ರಯತ್ನ ಮಾಡುವುದೇ ಅವರ ಮೇಲೆ ಒಬ್ಬ ಮುಸ್ಲಿಮನಿಗಿರುವ ಮೊದಲ ಕರ್ತವ್ಯವಾಗಿದೆ. ತನ್ನ ಸಹೋದರನು ಅವನ ಅಶ್ರದ್ಧೆಯಿಂದಾಗಿ ಅಥವಾ ತನ್ನಿಂದ ನಡೆದ ಚ್ಯುತಿಯಿಂದಾಗಿ ಹಲವಾರು ವಿಷಯಗಳ ಬಗ್ಗೆ ಅಜ್ಞಾನಿಯಾಗಿರುವ ಬಗ್ಗೆ ಮುಸ್ಲಿಮನು ದುಃಖಿತನಾಗಬೇಕು. ಆ ವಿಷಯಗಳನ್ನು ತಿಳಿಯದ ಕಾರಣ ಈ ಅಜ್ಞಾನದಿಂದಾಗಿ ತನ್ನ ಸಹೋದರನ ಶಾಶ್ವತ ಜೀವನವು ನಷ್ಟವಾಗುತ್ತದೆ ಮತ್ತು ಅವನು ಅಲ್ಲಾಹನ ಅನುಗ್ರಹದಿಂದ ವಂಚಿತನಾಗುತ್ತಾನೆಂದು ಒಬ್ಬ ಮುಸ್ಲಿಮನು ಅರಿತಿರಬೇಕು. ಇದು ಮಾನವ ಹಿತಾಕಾಂಕ್ಷೆಯ ಪ್ರಥಮ ಹೆಜ್ಜೆಯಾಗಿದೆ.

ಈ ನೈಜ ಹಿತಾಕಾಂಕ್ಷೆಯನ್ನು ತೋರಿದ ಮೇಲೂ ಜನರು ಆ ಹಿತಾಕಾಂಕ್ಷೆಯ

ತುಗಳನ್ನು ಕೇಳದೆ ತಮ್ಮ ನಾಶದಲ್ಲಿ ತಾವೇ ತೊಡಗಿಕೊಂಡಿದ್ದರೆ ಅಂತಹ ತಿಳಿಗೇಡಿಗಳ ಗಳನ್ನು ಇಸ್ಲಾಮ್ ಕಾದಿರಿಸುತ್ತದೆ. ಅಂತಹ ಜನರು ಯಾವುದೇ ಇಸ್ಲಾಮಿೂ ಆಡಳಿತದ ನದಲ್ಲಿದ್ದರೆ ಅವರು ತಮ್ಮ ವಿಶ್ವಾಸವನ್ನಿರಿಸಿಕೊಳ್ಳಲು ಸ್ವತಂತ್ರರಾಗಿದ್ದಾರೆ, ಅವರು ಆರಾಧ್ಯರ ಆರಾಧನೆಯನ್ನು ಮಾಡಬಹುದು. ತಮ್ಮ ಮಕ್ಕಳಿಗೆ ಅವರಿಗಿಷ್ಟ ಬಂದ ಯಲ್ಲಿ ಶಿಕ್ಷಣ ನೀಡಬಹುದು ಮತ್ತು ವೈಯಕ್ತಿಕ ಜೀವನವನ್ನು ತಮ್ಮಿಷ್ಟದಂತೆ ಸಬಹುದು. ಇಸ್ಲಾಮಿೂ ಆಡಳಿತದಲ್ಲಿ ಪ್ರಸ್ತುತ ಮುಸ್ಲಿಮೇತರರ ಪ್ರಾಣ, ಸೊತ್ತು ಮತ್ತು ನವು ಮುಸ್ಲಿಮರ ಪ್ರಾಣ, ಸೊತ್ತು ಮತ್ತು ಮಾನದಂತೆಯೇ ಸುರಕ್ಷಿತವಾಗುಳಿಯುತ್ತದೆ.

ಇಸ್ಲಾಮ್ ಅವರಿಗೆ ನಿಗದಿಪಡಿಸಿದಂತಹ ಹಕ್ಕುಗಳು ಪೂರ್ಣವಾಗಿ ದೊರೆಯುತ್ತಿರುವಂತೆ ಡಿಕೊಳ್ಳುವುದು ಇಸ್ಲಾಮಿೂ ಆಡಳಿತದ ಹೊಣೆಗಾರಿಕೆಯಾಗಿದೆ. ಈ ಹಕ್ಕುಗಳನ್ನು ತುವಾಗ ಯಾರಿಗೂ ಅದನ್ನು ತಡೆಯುವ ಅಥವಾ ಕುಂಠಿತಗೊಳಿಸುವ ಅಧಿಕಾರವಿಲ್ಲ.

ಇಸ್ಲಾಮಿೂ ಆಡಳಿತವಿಲ್ಲದಿದ್ದರೂ ಮಾನವ ಸಮುದಾಯದ ಮೇಲೆ ಪ್ರತಿಯೊಬ್ಬ ಸ್ಲಿಮನಿಗಿರುವ ಬಾಧ್ಯತೆಗಳನ್ನು ಅವರಲ್ಲಿ ಪ್ರತಿಯೊಬ್ಬರೂ ನಿಭಾಯಿಸಬೇಕಾಗುತ್ತದೆ. ಆ ಧ್ಯತೆಗಳಲ್ಲಿ ಕೆಲವು ಈ ಕೆಳಗಿನಂತಿವೆ-

1. ಯಾವ ಮುಸ್ಲಿಮನೂ ಮಾನವ ಸಮಾಜದ ಯಾವುದೇ ವ್ಯಕ್ತಿಯ ಧರ್ಮ ಮತ್ತು ಾರಗಳ ಅವಹೇಳನ ಮಾಡಿ ಅವರ ಮನ ನೋಯಿಸುವಂತಿಲ್ಲ ಮತ್ತು ತಮ್ಮ ದ್ಧಟತನಕ್ಕಾಗಿ ಅವರೊಂದಿಗೆ ನ್ಯಾಯಕ್ಕೆ ವಿರುದ್ಧವಾದ ರೀತಿಯಲ್ಲಿ ವರ್ತಿಸುವಂತಿಲ್ಲ. ಲ್ಲಾಹನು ಹೇಳುತ್ತಾನೆ,

وَلَا يَجْرِمَنَّكُمْ شَنَآنُ قَوْمٍ عَلَىٰ أَلَّا تَعْدِلُوا ۚ اعْدِلُوا هُوَ أَقْرَبُ لِلتَّقْوَىٰ

"ಒಂದು ವಿಭಾಗದ ಮೇಲಿನ ದ್ವೇಷವು ಮ್ಮನ್ನು ನ್ಯಾಯದಿಂದ ವಿಮುಖರಾಗುವಷ್ಟು ಗಿಸದಿರಲಿ. ಅದ್ಲ್ (ನ್ಯಾಯ) ಪಾಲಿಸಿರಿ. ದು ದೇವಭಯಕ್ಕೆ ಹೆಚ್ಚು ಅನುಗುಣ ಗಿರುತ್ತದೆ." (ಸೂರಃ ಅಲ್ ಮಾಇದಃ -8)

2. ಮಾನವ ಸಮಾಜದ ಯಾವುದೇ ವ್ಯಕ್ತಿಯು ನೆರೆಯವನಾಗಿದ್ದರೆ, ಮುಸ್ಲಿಮ್ ರೆಯವನೊಂದಿಗಿರುವ ಹಕ್ಕುಗಳೆಲ್ಲವೂ ಅವನಿಗೂ ಅನ್ವಯವಾಗುತ್ತವೆ.

3. ಮನುಷ್ಯರೆಲ್ಲರೂ, ಸಹಾನುಭೂತಿ ಮತ್ತು ಕರುಣೆಗೆ ಅರ್ಹರಾಗಿದ್ದಾರೆ. ವಾದಿವರ್ಯರು(ಸ) ಹೇಳುತ್ತಾರೆ,

"ನೀವು ಭೂಮಿಯವರೊಂದಿಗೆ ಕರುಣೆ ತೋರಿದರೆ, ಆಕಾಶದಲ್ಲಿರುವವನು ನಿಮ್ಮ ಮೇಲೆ ಕರುಣೆ ತೋರುವನು."

4. ದಾನ ಧರ್ಮಗಳಲ್ಲಿ (ಝಕಾತ್‌ನ ಹೊರತು) ಮುಸ್ಲಿಮರಂತೆಯೇ ಸಹಾಯಕ್ಕೆ ರ್ಹರಾಗಿರುವ ಮಾನವ ಸಮುದಾಯದ ಪ್ರತಿಯೊಬ್ಬರೂ ಪಾಲುಗಾರರಾಗಿದ್ದಾರೆ.

* * *

ರಾಜಕೀಯ

ಅಲ್ಲಾಹನ ಅನುಸರಣೆಗಾಗಿ ಸಂಪೂರ್ಣ ಜೀವನವನ್ನು ಮುಡಿಪಾಗಿಡುವುದರ ಹೆ
ಇಸ್ಲಾಮ್. ಇಸ್ಲಾಮಿನ ಪ್ರಕಾರ ಧರ್ಮ ಮತ್ತು ಲೌಕಿಕ ಜೀವನವು ಬೇರೆ ಬೇರೆಯ
ಜೀವನದ ಒಂದು ಸ್ತರದಲ್ಲಿ ಅಲ್ಲಾಹನನ್ನು ಅನುಸರಿಸಿ ಮತ್ತೊಂದರಲ್ಲಿ ಅಲ್ಲಾಹೇತರ
ಮತ್ತು ಸ್ವೇಚ್ಛೆಯನ್ನು ಅನುಸರಿಸುವಂತಿಲ್ಲ. ಆದುದರಿಂದಲೇ ಇಸ್ಲಾಮಿನಲ್ಲಿ ರಾಜಕೀಯ
ಧರ್ಮದ ಭಾಗವೇ ಆಗಿದೆ. ಇಸ್ಲಾಮಿನ ಉಪದೇಶಗಳಿಂದ ಮುಕ್ತವಾದ ರಾಜಕೀಯ
ಮಸ್ಲಿಮರ ದೃಷ್ಟಿಯಲ್ಲಿ ಧರ್ಮೇತರ ಕೆಲಸವಾಗಿದೆ.

ಧರ್ಮದ ಸಂಪೂರ್ಣ ಅನುಸರಣೆಗಾಗಿ ಇಸ್ಲಾಮೀ ರಾಜಕೀಯವನ್ನು ಸರಿಯ
ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ. ಏಕೆಂದರೆ ಇದರಿಂದ ಇಸ್ಲಾಮಿನ ಹೊರತ
ಇತರೆಲ್ಲ ರಾಜಕೀಯದಿಂದ ದೂರವಿರಬಹುದಾಗಿದೆ.

ಇಸ್ಲಾಮೀ ರಾಜಕೀಯದ ಬುನಾದಿ: ಆದೇಶ ಹೊರಡಿಸುವ ಅಥವಾ ಕಾನೂನನ್ನು ರೂಪಿಸ
ಅಧಿಕಾರವು ಯಾವುದೇ ವ್ಯಕ್ತಿ, ರಾಷ್ಟ್ರ ಅಥವಾ ಸಮುದಾಯದ ಸಕಲ ಮಾನವ
ಪ್ರಾಪ್ತವಲ್ಲವೆಂಬುದು ಇಸ್ಲಾಮೀ ರಾಜಕೀಯದ ಮೊದಲ ತತ್ವವಾಗಿದೆ. ಲೋಕದ ಜನ
ಒಟ್ಟು ಸೇರಿದರೂ ತಮಗಾಗಿ ಅಥವಾ ಇತರರಿಗಾಗಿ ಕಾನೂನುಗಳನ್ನು ರೂಪಿಸುವ ಅಥ
ಅಧಿಕಾರ ಚಲಾಯಿಸುವ ಹಕ್ಕು ಅವರಿಗೆ ಪ್ರಾಪ್ತವಾಗುವುದಿಲ್ಲ. ಆದೇಶಗಳನ್ನು ನೀಡಿ ಇತ
ಅದನ್ನು ಅನುಸರಿಸುವಂತೆ ಮಾಡುವ ಮತ್ತು ಕಾನೂನು ರಚಿಸಿ ಇತರರು ಅದ
ಅನುಸರಿಸುವಂತೆ ಒತ್ತಾಯಿಸುವ ಅಧಿಕಾರ ಈ ಭೂಲೋಕದಲ್ಲಿ ಯಾರಿಗೂ ಪ್ರಾಪ್ತವಿ
ಈ ಅಧಿಕಾರವು ಕೇವಲ ಅಲ್ಲಾಹನಿಗಿದೆ.

"ಈ ಕಾರ್ಯ ವೆಸಗುವುದರಲ್ಲಿ ನಮ್ಮ ಪಾಲೇನಾದರೂ ಇದೆಯೇ? ಎಂದು ಈಗವರು ಕೇಳುತ್ತಾರೆ. ಅವರೊಡನೆ, (ಯಾರದೂ ಯಾವ ಪಾಲೂ ಇಲ್ಲ) ಈ ಕಾರ್ಯ ಸಂಪೂರ್ಣವಾಗಿ ಅಲ್ಲಾಹನ ಅಧೀನದಲ್ಲಿದೆ ಎಂದು ಹೇಳಿರಿ."

(ಸೂರಃ ಆಲಿ ಇಮ್ರಾನ್- 154)

وْنَ هَلْ لَنَا مِنَ الْأَمْرِ
شَيْءٍ قُلْ إِنَّ الْأَمْرَ
لِلّٰهِ -

"ಇದು ಹಲಾಲ್, ಇದು ಹರಾಮ್ ಎಂದು ನಾಲಿಗೆಗಳಿಂದ ಸುಳ್ಳು ವಿಧಿಗಳನ್ನು ವೇಡಿರಿ." (ಸೂರಃ ಅನ್ನಹ್ಲ್- 116)

وَلَا تَقُولُوا لِمَا تَصِفُ أَلْسِنَتُكُمُ الْكَذِبَ هَٰذَا حَلَالٌ وَهَٰذَا حَرَامٌ

ಇಸ್ಲಾಮಿೂ ರಾಜಕೀಯದಲ್ಲಿ ಆಡಳಿತಾಧಿಕಾರವು ಅಲ್ಲಾಹನಿಗೆ ಮಾತ್ರವಿದೆ. ಕಾನೂನು ಕೇವಲ ಆತನ ಕೆಲಸವಾಗಿದೆ. ಯಾವುದೇ ಮಹಾವ್ಯಕ್ತಿಗಳು ಅವರು ಪ್ರವಾದಿಗಳೇ ಲಿ, ತಮ್ಮ ಅಧಿಕಾರ ಮತ್ತು ಅಭಿಮತದಿಂದ ಯಾವುದೇ ಆದೇಶವನ್ನು ಹೊರಡಿಸಲು ಾ ಯಾವುದೇ ಕೆಲಸದಿಂದ ಜನರನ್ನು ತಡೆಯಲು ಸಾಧ್ಯವಿಲ್ಲ. ಪ್ರವಾದಿಗಳೇ ಸ್ವತಃ ಹನ ಆದೇಶಗಳನ್ನು ಅನುಸರಿಸುತ್ತಾರೆ. ಪ್ರವಾದಿಗಳು ಅಲ್ಲಾಹನಿಂದ ಬಂದ ಆದೇಶಗಳನ್ನೇ ಗೆ ನೀಡುವುದರಿಂದ ಜನರಿಗೆ ಪ್ರವಾದಿಗಳನ್ನು ಅನುಸರಿಸುವ ಆದೇಶವನ್ನು ನೀಡಲಾಗಿದೆ.

ಇಸ್ಲಾಮಿನಲ್ಲಿ ಅಲ್ಲಾಹೇತರರ ಆಜ್ಞಾಧಿಕಾರ ಮತ್ತು ಪ್ರಭುತ್ವವು ಸಿಂಧುವಲ್ಲ. ವುದೇ ವ್ಯಕ್ತಿಯ ಅಥವಾ ಮನೆತನದ ಆಳ್ವಿಕೆ ಇಸ್ಲಾಮಿನಲ್ಲಿಲ್ಲ. ಅದೇ ರೀತಿ ಇಸ್ಲಾಮ್ ಷ್ಟ ವರ್ಗ, ಗುಂಪು ಅಥವಾ ರಾಷ್ಟ್ರದ ಸಮಸ್ತ ಪೌರರ ಆಡಳಿತಾಧಿಕಾರವನ್ನು ೀಕರಿಸುವುದಿಲ್ಲ.

ಇಸ್ಲಾಮಿೂ ರಾಜಕೀಯದ ಎರಡನೆಯ ತತ್ವವೇನೆಂದರೆ ಅಲ್ಲಾಹನ ನಿಯಮಗಳನ್ನು ದಿಗಳ ಮೂಲಕ ಜನರಿಗೆ ತಲುಪಿಸಲಾಗುತ್ತದೆ. ಪ್ರವಾದಿ ಮುಹಮ್ಮದ್‌ರವರು(ಸ) ್ರ ಕುರ್‌ಆನಿನ ರೂಪದಲ್ಲಿ ತಂದ ಕಾನೂನಿನಲ್ಲಿ ಅಲ್ಲಾಹನು ಸ್ವತಃ ನಿಯಮಗಳನ್ನು ರ ಪಡಿಸಿದ್ದಾನೆ. ಇದುವೇ ಇಸ್ಲಾಮಿೂ ರಾಜಕೀಯದ ಬುನಾದಿಯಾಗಿದೆ. ಅಲ್ಲಾಹನ ೇಶವಾಹಕರು ತಮ್ಮ ಜೀವನದಲ್ಲೇ ಅವುಗಳನ್ನು ಅನುಸರಿಸಿ ತೋರಿಸಿದರು. ಆದ್ದರಿಂದ ್ಲಹನು ಅವತೀರ್ಣಗೊಳಿಸಿದ ನಿಯಮಗಳು, ಆತನ ಪ್ರವಾದಿಯ ಬೋಧನೆಗಳು ಮತ್ತು ದಿಯವರ(ಸ) ಜೀವನದ ಮಾದರಿಯ ಆಧಾರದಲ್ಲೇ ಇಸ್ಲಾಮಿೂ ರಾಜಕೀಯದ ಮೂಲ ಧಾನವು ಸ್ಥಾಪಿತವಾಗಿದೆ. ಇದನ್ನು ಇಸ್ಲಾಮಿೂ ಪಾರಿಭಾಷಿಕದಲ್ಲಿ 'ಶರೀಅತ್' ಎಂದು ುಲಾಗುತ್ತದೆ. ಆದುದರಿಂದಲೇ ಶರೀಅತ್‌ನ ಆಧಾರದಲ್ಲಿಲ್ಲದ ರಾಜಕೀಯವು ಇಸ್ಲಾಮೇತರ ಕೀಯವಾಗಿದೆ. ಅದನ್ನು ಚಲಾಯಿಸುವವರು ಮತ್ತು ಅದರಲ್ಲಿ ಭಾಗವಹಿಸುವವರು ್ಲಿಮರಾಗಿದ್ದರೂ ಸರಿ.

ಇಸ್ಲಾಮಿೂ ರಾಜಕೀಯದ ಮೂರನೆಯ ತತ್ವವು 'ಖಿಲಾಫತ್' ಆಗಿದೆ. ಅರಬಿ ಷೆಯಲ್ಲಿ ಪ್ರತಿನಿಧಿಯನ್ನು 'ಖಲೀಫ' ಎಂದು ಹೇಳಲಾಗುತ್ತದೆ. ಅರ್ಥಾತ್ ನೈಜ ಾಧಿಕಾರಿಯು ಅಲ್ಲಾಹನಾಗಿದ್ದಾನೆ ಮತ್ತು ಮಾನವರು ಲೋಕದಲ್ಲಿ ಅವನ ನಿಧಿಗಳಾಗಿದ್ದಾರೆ. ಅಂದರೆ ಆತನು ಅಲ್ಲಾಹನ ಸಾಮ್ರಾಜ್ಯದಲ್ಲಿ ಅಲ್ಲಾಹನು ನೀಡಿದ ಕಾರವನ್ನು ಚಲಾಯಿಸುತ್ತಾನೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ಸಾಮ್ರಾಜ್ಯವು ಕೇವಲ ್ಲಹನದ್ದಾಗಿದ್ದು ಯಾವುದೇ ಮನುಷ್ಯರಿಗೆ ಅಥವಾ ಗುಂಪಿಗೆ ಸೇರಿದ್ದಲ್ಲ. ಸಾಮ್ರಾಜ್ಯದ ಯನು ಕೇವಲ ಅಲ್ಲಾಹನಾಗಿದ್ದಾನೆಯೇ ವಿನಾ ಮಾನವನಲ್ಲ. ಮಾನವನು ಅಲ್ಲಾಹನ

ಪ್ರತಿನಿಧಿಯಾಗಿದ್ದಾನೆ, ಆದ್ದರಿಂದ ಪ್ರತಿನಿಧಿ ಎಂಬ ನೆಲೆಯಲ್ಲಿ ಅವನು ಪ್ರತಿಯೊ ಕೆಲಸವನ್ನೂ ನೈಜ ಒಡೆಯನ ಇಷ್ಟದಂತೆಯೇ ನಿಭಾಯಿಸಬೇಕಾಗಿದೆ. ಪ್ರತಿನಿ ಸ್ವತಂತ್ರನಾಗಿ ತನ್ನಿಷ್ಟದಂತೆ ಅಧಿಕಾರವನ್ನು ಚಲಾಯಿಸುವಂತಿಲ್ಲ. ಬದಲಾಗಿ ನೈಜ ಒಡ ಇಚ್ಛೆಯಂತೆ ಕೆಲಸ ಮಾಡಬೇಕಾಗಿದೆ. ನೈಜ ಒಡೆಯನು ತನ್ನ ಈ ಪ್ರತಿನಿಧಿಗೆ ಅಧಿಕಾರಗಳನ್ನು ನೀಡಿದ್ದಾನೆ ಮತ್ತು ಆ ಅಧಿಕಾರಗಳನ್ನು ಚಲಾಯಿಸಲು ಕೆಲವು ಮೇರೆ ನಿಗದಿಪಡಿಸಿದ್ದಾನೆ. ಯಾವ ಪ್ರತಿನಿಧಿಯು ನೈಜ ಒಡೆಯನನ್ನು ಒಡೆಯನೆಂದು ಒಪ್ಪಿಕೊ ಕೇವಲ ಆತನು ನಿಗದಿಪಡಿಸಿದ ಮೇರೆಯೊಳಗಿದ್ದುಕೊಂಡು ಕಾರ್ಯನಿರ್ವಹಿಸುತ್ತಾ ಅವನೇ ನಿಜಾರ್ಥದಲ್ಲಿ ಅಲ್ಲಾಹನ ಪ್ರತಿನಿಧಿಯಾಗಿದ್ದಾನೆ. ಆ ವ್ಯಕ್ತಿಯೇ ಪ್ರತಿನಿ ಹಕ್ಕುಗಳನ್ನು ಪಡೆಯಲು ಅರ್ಹನಾಗಿದ್ದಾನೆ. ಯಾವ ವ್ಯಕ್ತಿಯು ನೈಜ ಒಡೆಯ ಒಡೆಯನೆಂದು ಸಮ್ಮತಿಸದೆ ಆತನು ನಿಗದಿಪಡಿಸಿದ ಮೇರೆಗಳ ಬಗ್ಗೆ ಗಮನವಿರಿಸುವುದಿಲ್ಲ ಅವನು ಪ್ರತಿನಿಧಿಯಲ್ಲ. ಬದಲಾಗಿ ಬಂಡುಕೋರ ಎನಿಸಿಕೊಳ್ಳುವನು. ಆದುದರಿಂದಲೇ ಒಡೆಯನನ್ನು ಒಡೆಯನೆಂದು ಒಪ್ಪಿಕೊಳ್ಳದೆ ಆತನು ನೀಡಿದ ಅಧಿಕಾರ ವ ಅವತೀರ್ಣಗೊಳಿಸಿದ ಬೋಧನೆಗಳ ಪ್ರಕಾರ ಕೆಲಸ ಮಾಡದವರು ವಾಸ್ತವದಲ್ಲಿ ಇಸ್ಲಾ ರಾಜಕೀಯವನ್ನು ನಡೆಸುವ ಆಜ್ಞಾಧಿಕಾರಿಗಳ ಬದಲಾಗಿ ಸರ್ವಲೋಕಗಳ ಸಾಮ್ರಾ ಬಂಡುಕೋರರು ಮತ್ತು ಅಪರಾಧಿಗಳಾಗಿದ್ದಾರೆ. ಅವರು ತಮ್ಮನ್ನು ತಾವು ಮುಸ್ಲಿಮರ ಕರೆಯುತ್ತಿದ್ದರೂ ಸರಿ.

ಇಸ್ಲಾಮೀ ರಾಜಕೀಯದಲ್ಲಿ ಆಡಳಿತಾಧಿಕಾರ ಮತ್ತು ದೇಶದ ವ್ಯವಸ್ಥೆ ನಿರ್ವಹಿಸುವ ಅಧಿಕಾರ ಯಾವುದೇ ಒಂದು ವ್ಯಕ್ತಿ, ಕುಟುಂಬ ಮತ್ತು ಗುಂಪಿನದ್ದ ಬದಲಾಗಿ ಇಸ್ಲಾಮೀ ರಾಜಕೀಯದ ಪೂರ್ವೋಕ್ತ ತತ್ವಗಳನ್ನು ಸರಿಯೆಂದು ಒಪ್ಪಿಕೊ ಅದರ ಪ್ರಕಾರವೇ ಆಡಳಿತವನ್ನು ನಡೆಸಲು ಸಿದ್ಧರಿರುವ ಸಕಲ ಮಾನವರಿಗಿದೆ ಎಂದು ತಿ ಬರುತ್ತದೆ. ಈ ಅಧಿಕಾರದಲ್ಲಿ ಮನುಷ್ಯರೆಲ್ಲರಿಗೂ ಸರಿಯಾದ ಪಾಲಿದೆ. ಯಾರೂ ನಿಟ್ಟಿನಲ್ಲಿ ಒಬ್ಬರಿಗಿಂತ ಒಬ್ಬರು ಮೇಲಲ್ಲ. ಆದುದರಿಂದ ದೇಶದ ಸರಕಾರವನ್ನು ರಚಿಸು ಇಂತಹ ಸಕಲ ಮಾನವರ ಅಭಿಪ್ರಾಯವನ್ನು ಪರಿಗಣಿಸಲಾಗುತ್ತದೆ. ಹಾಗೆಯೇ ಯಾ ಹೆಚ್ಚಿನ ಜನರ ಬೆಂಬಲ ಮತ್ತು ವಿಶ್ವಾಸವಿರುತ್ತದೋ ಅವರೇ ಅಧಿಕಾರದ ಹೊ ವಹಿಸುತ್ತಾರೆ. ಜನರೆಲ್ಲರೂ ಸೇರಿ ಇಸ್ಲಾಮ್ ಬಯಸುವಂತಹ ಗುಣ ವಿಶೇಷತೆಗ ವ್ಯಕ್ತಿಯನ್ನು ಆಡಳಿತಗಾರನಾಗಿ ಚುನಾಯಿಸುತ್ತಾರೆ. ಆ ವ್ಯಕ್ತಿಯು ಎಲ್ಲರಿಗಿಂತ ಹೆ ಸದ್ಗುಣಿ, ಅಲ್ಲಾಹನ ಭಯವುಳ್ಳವನು, ಆತನ ನಿಯಮಗಳನ್ನು ಅರಿಯುವವನು ಮ ಅದರಂತೆ ನಡೆಯಲು ಸಿದ್ಧವಿರುವವನಾಗಿರಬೇಕು. ಹಾಗೆಯೇ ಅವನು ಈ ಹೊಣೆಗಾರಿಕೆಯ ನಿರ್ವಹಿಸುವ ಅರ್ಹತೆ ಇರುವವನಾಗಿರಬೇಕು ಮತ್ತು ಸ್ವಯಂ ಆ ಸ್ಥಾ ಅಭ್ಯರ್ಥಿಯಾಗಿರಬಾರದು. ಅವನು ಆ ಸೇವೆಗಾಗಿ ದುರಾಸೆ, ಸ್ವಾರ್ಥ ಮತ್ತು ಲಾಭ ಗಳಿ ವಿಚಾರವನ್ನು ಬಿಟ್ಟು ಕೇವಲ ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕದ ಯಶಸ್ಸಿ ಸಿದ್ಧನಾದವನಾಗಿರಬೇಕು.

ತ ಇಸ್ಲಾಮೇತರ ರಾಜಕೀಯ: ಪ್ರಚಲಿತ ರಾಜಕೀಯದಲ್ಲಿ ಯಾವುದೇ ವ್ಯಕ್ತಿ ಅಥವಾ ಂಬದ ಆಡಳಿತವು ಬಹುಮಟ್ಟಿಗೆ ಅಂತ್ಯಗೊಂಡಿದೆ. ಲೋಕದಲ್ಲಿ ಒಬ್ಬ ವ್ಯಕ್ತಿ ಅಥವಾ ಬವನ್ನು ಆಡಳಿತಗಾರನೆಂದು ಮತ್ತು ಅವರ ಇಚ್ಛೆಗಳನ್ನು ಕಾನೂನೆಂದು ಒಪ್ಪಿಕೊಳ್ಳುವಂತಹ ಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಇಂದು ಲೋಕದಲ್ಲಿ ದೇಶದ ಪ್ರಜೆಗಳು ಅಥವಾ ಷ್ಟ ಜನಾಂಗದ ಜನರನ್ನು ನೈಜ ಆಡಳಿತಗಾರನೆಂದು ಒಪ್ಪಿಕೊಳ್ಳುವಂತಹ ಪಥಭ್ರಷ್ಟತೆಯು ಯಲ್ಲಿದೆ. ಕಾನೂನು ಅವರ ಇಚ್ಛೆ ಮತ್ತು ಅಭಿಲಾಷೆಗೆ ಅನುಸಾರವಾಗಿರುತ್ತದೆ ಮತ್ತು ರಲ್ಲಿ ಈ ಜನರು ಬಹುಸಂಖ್ಯಾತರು ಇಷ್ಟಪಟ್ಟು ಅಂಗೀಕರಿಸಿದ ನಿಯಮಗಳನ್ನೇ ಯಿಸುತ್ತಾರೆ. ಈ ಕೆಲಸಕ್ಕಾಗಿ ಸಾಮಾನ್ಯ ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡಿ ಆಡಳಿತಾಧಿಕಾರ, ಒಡೆತನ ಮತ್ತು ಕಾನೂನನ್ನು ರೂಪೀಕರಿಸುವ ಅಧಿಕಾರವನ್ನು ಅವರ ಒಪ್ಪಿಸುತ್ತಾರೆ. ಇವರು ದೇಶದ, ಸರಕಾರದ ಹೊಣೆಗಾರರಾಗಿದ್ದಾರೆ ಮತ್ತು ಇವರೇ ಇಚ್ಛಾನುಸಾರ ದೇಶದ ಕಾನೂನನ್ನು ರೂಪೀಕರಿಸುತ್ತಾರೆ ಮತ್ತು ಅಂಗೀಕರಿಸುತ್ತಾರೆ. ೀತಿಯ ಆಡಳಿತವನ್ನು ಪ್ರಜಾಪ್ರಭುತ್ವ ಎಂದು ಕರೆಯಲಾಗುತ್ತದೆ. ಈ ವ್ಯವಸ್ಥೆಯಲ್ಲಿರುವ ಂಗಳು ಮತ್ತು ಈ ವ್ಯವಸ್ಥೆಯ ವೈಫಲ್ಯಗಳು ಈಗ ನಿಚ್ಚಳಗೊಂಡಿವೆ. ಈ ಪದ್ಧತಿಯಲ್ಲಿ ಯಿತರಾಗುವ ವ್ಯಕ್ತಿಗಳು ನಿಜವಾಗಿ ಪ್ರಜೆಗಳ ಪ್ರತಿನಿಧಿಗಳಾಗಿರುವುದಿಲ್ಲ. ಬದಲಾಗಿ ು ತಮ್ಮ ಸಂಪತ್ತಿನ ಬಲದಿಂದ ಅಥವಾ ಇನ್ನಾವುದಾದರೂ ರೀತಿಯಲ್ಲಿ ಜನಮತವನ್ನು ಡೆಗೆ ಸೆಳೆದು ಆಡಳಿತ ನಡೆಸುವ ಜಾಣರು ಮತ್ತು ಚತುರರಾಗಿರುತ್ತಾರೆ. ಸಾರ್ವಜನಿಕರಿಗೆ ತುನಾವಣೆಯೆಂದರೇನು, ಅದು ಹೇಗಿರಬೇಕು ಎಂಬ ಅರಿವಾಗಲೀ ಅಥವಾ ದೇಶದ ತವನ್ನು ಯೋಗ್ಯರಿಗೆ ಮಾತ್ರ ನೀಡಬೇಕೆಂಬ ಚಿಂತೆಯಾಗಲೀ ಇರುವುದಿಲ್ಲ. ಒಟ್ಟಿನಲ್ಲಿ ಹ ವ್ಯವಸ್ಥೆಯು ಸಂಪೂರ್ಣವಾಗಿ ಇಸ್ಲಾಮಿಗೆ ವಿರುದ್ಧವಾಗಿದ್ದು ಮೂಲಭೂತವಾಗಿ ಮಿನ ತತ್ವ ಮತ್ತು ಮುಸ್ಲಿಮರ ವಿಶ್ವಾಸಕ್ಕೆ ವಿರುದ್ಧವಾದುದಾಗಿದೆ ಎಂಬುದು ಬಹಳ ವಿದೆ. ನೈಜ ಒಡೆಯನು ಅಲ್ಲಾಹನಾಗಿದ್ದಾನೆಂಬುದೇ ಮುಸ್ಲಿಮರ ವಿಶ್ವಾಸವಾದರೆ, ಪ್ರಭುತ್ವವು ಪ್ರಜೆಗಳೇ ದೇಶದ ಮಾಲಕರು ಎಂಬ ತತ್ವದ ಮೇಲೆ ಸ್ಥಾಪಿತವಾಗಿದೆ. ಆಡಳಿತಾಧಿಕಾರವು ಕೇವಲ ಅಲ್ಲಾಹನ ಕೈಯಲ್ಲಿದೆ ಎಂಬುದು ಮುಸ್ಲಿಮರ ವಿಶ್ವಾಸವಾದರೆ, ಳಿತಾಧಿಕಾರವು ಪೌರರ ಹಕ್ಕಾಗಿದೆ ಎಂಬುದು ಪ್ರಜಾಪ್ರಭುತ್ವದ ಬೋಧನೆಯಾಗಿದೆ. ಕಾನೂನನ್ನು ರೂಪೀಕರಿಸುವುದು ಅಲ್ಲಾಹ್ ಮತ್ತು ಆ ಕಾನೂನನ್ನು ಆತನು ತನ್ನ ಂದೇಶವಾಹಕರ ಮೂಲಕ ಕಳುಹಿಸಿದ್ದಾನೆಂಬುದು ಮುಸ್ಲಿಮರ ವಿಶ್ವಾಸವಾದರೆ, ಕಾನೂನನ್ನು ಪೀಕರಿಸುವುದು ಸಾರ್ವಜನಿಕರ, ಪ್ರತಿನಿಧಿಗಳ ಕೆಲಸವಾಗಿದೆ ಎಂಬುದು ಪ್ರಜಾಪ್ರಭುತ್ವದ ವಾಗಿದೆ.

ಅಲ್ಲಾಹನ ನಿಯಮಗಳಲ್ಲಿ ಬದಲಾವಣೆ ಮಾಡುವ ಅಥವಾ ಅದರಲ್ಲಿ ಏರುಪೇರು ಡುವ ಅಧಿಕಾರ ಈ ಲೋಕದಲ್ಲಿ ಯಾರಿಗೂ ಇಲ್ಲವೆಂಬುದು ಮುಸ್ಲಿಮರ ವಿಶ್ವಾಸವಾಗಿದೆ. ರೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಬಹುಸಂಖ್ಯಾತರ ಇಷ್ಟಾನಿಷ್ಟಗಳಿಗನುಸಾರವಾಗಿ, ಎಲ್ಲಾ

ನಿಯಮಗಳನ್ನು ಬದಲಿಸಬಹುದು ಮತ್ತು ಅದರಲ್ಲಿ ಬದಲಾವಣೆ ಮಾಡಬಹುದು ಎ
ಸಾರುತ್ತದೆ.

ಇಂತಹ ಇನ್ನೂ ಅನೇಕ ಮೂಲಭೂತ ಅಂಶಗಳ ಆಧಾರದಲ್ಲಿ ಇಂದು ಪ್ರಚಲಿತವಿ
ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಇಸ್ಲಾಮೀ ರಾಜಕೀಯ, ಇವೆರಡೂ ವಿಭಿನ್ನವಾಗಿವೆಯೆ
ಸತ್ಯ ತಿಳಿದು ಬರುತ್ತದೆ. ಇವೆರಡರ ನಡುವೆ ಪರಸ್ಪರ ಸಂಬಂಧವಿಲ್ಲ, ಬದಲಾಗಿ ವೈರುಧ್ಯ

ಇಂದು ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವದ ಒಂದು ವಿಧವು ಬಂಡವಾಳಶ
ಪ್ರಜಾಪ್ರಭುತ್ವವೆಂದು ಅರಿಯಲ್ಪಡುತ್ತದೆ. ಈ ಪದ್ಧತಿಯು ಅಮೇರಿಕ, ಬ್ರಿಟನ್ ಫ
ಅದೇ ಶ್ರೇಣಿಯ ಇತರ ದೇಶಗಳಲ್ಲಿ ರೂಢಿಯಲ್ಲಿದೆ. ಇದು ನಮ್ಮ ಭಾರತ ದೆ
ಪದ್ಧತಿಯೂ ಆಗಿದೆ. ಇನ್ನೊಂದು ವಿಧವನ್ನು ಸಮತಾವಾದಿ ಪ್ರಜಾಪ್ರಭುತ್ವ ಎ
ಕರೆಯಲಾಗುತ್ತದೆ. ಇದು ರಶ್ಯಾ ದೇಶದಲ್ಲಿ ಜಾರಿಯಲ್ಲಿದೆ.

ಮೂಲದಲ್ಲಿ ಆಡಳಿತಾಧಿಕಾರ ಮತ್ತು ಕಾನೂನು ರಚನೆಗೆ ಸಂಬಂಧಿಸಿದಂತೆ ಇವೆ
ಒಂದಕ್ಕೊಂದು ಹೋಲುತ್ತವೆ. ಆದರೆ ಸಂಪತ್ತಿನ ವಿತರಣೆಗೆ ಸಂಬಂಧಿಸಿದಂತೆ ಇವೆ
ಧೋರಣೆ ಭಿನ್ನವಾಗಿವೆ. ಆ ಪೈಕಿ ಒಂದು ಅಭಿಪ್ರಾಯವು, ಪ್ರತಿಯೊಂದು ವ್ಯಕ್ತಿಯು ತ
ಗಳಿಸಿದ ಸಂಪತ್ತಿನ ಸಂಪೂರ್ಣ ಹಕ್ಕುದಾರನಾಗಿದ್ದು ಅವನು ತನ್ನ ಗಳಿಕೆಯನ್ನು ತನ್ನಿಷ್ಟ
ಉಪಯೋಗಿಸಬಹುದು ಎಂದಾಗಿದೆ. ಇನ್ನೊಂದು ಗುಂಪಿನ ಅಭಿಪ್ರಾಯವು ಪ್ರತಿಯೆ
ವ್ಯಕ್ತಿಯ ಸಂಪಾದನೆಯು ರಾಷ್ಟ್ರದ ಸೊತ್ತಾಗಿದ್ದು ಪ್ರತಿಯೊಬ್ಬರಿಗೂ ನೆಮ್ಮದಿಯಿಂದ ಜೀ
ನಡೆಸಲು ಬೇಕಾದಷ್ಟು ಸಂಪತ್ತನ್ನು ನೀಡಲಾಗುವುದು ಎಂದಾಗಿದೆ. ಇಲ್ಲಿ ನಾವು ಈ ಎ
ವ್ಯವಸ್ಥೆಗಳ ಒಳಿತು ಮತ್ತು ಕೆಡುಕುಗಳ ಬಗ್ಗೆ ಚರ್ಚಿಸುವುದಿಲ್ಲ. ಆದರೆ ತಮ್ಮ ರಾಜಕೀ
ಮತ್ತು ತಮ್ಮ ತತ್ವಗಳಲ್ಲಿ ಉಭಯ ಬಣಕ್ಕೆ ಸೇರಿದವರು ಸಮಾನರಾಗಿದ್ದಾರೆ ಮತ್ತು ಎ
ರೀತಿಯಲ್ಲೂ ಈ ಎರಡು ವ್ಯವಸ್ಥೆಗಳು ಇಸ್ಲಾಮೇತರ ವ್ಯವಸ್ಥೆಗಳಾಗಿವೆ.

ಇಸ್ಲಾಮೇತರ ರಾಜಕೀಯದಲ್ಲಿ ಭಾಗಿಯಾಗುವುದು ಮುಸ್ಲಿಮರ ಕೆಲಸವಲ್ಲ.

ತಮ್ಮ ಸಂಪೂರ್ಣ ಜೀವನದಲ್ಲಿ ಅಲ್ಲಾಹನ ಧರ್ಮವನ್ನು ಅನುಸರಿಸುವ ಪಣತೊಟ್ಟಿ
ಮುಸ್ಲಿಮರು ಯಾವುದೇ ಇಸ್ಲಾಮೇತರ ರಾಜಕೀಯದಲ್ಲಿ ಭಾಗಿಯಾಗುವುದು ಖಂಡಿತವಾಗಿ
ಸರಿಯಲ್ಲ. ಇಂದಿನ ಈ ಅಧಾರ್ಮಿಕ ರಾಜಕೀಯದಲ್ಲಿ ಮುಸ್ಲಿಮನು ಯಾವುದೇ ಸ್ಥಾ
ಅಭ್ಯರ್ಥಿಯಾಗಬಾರದು, ಅಂತೆಯೇ ಇನ್ನಾವುದೇ ಅಭ್ಯರ್ಥಿಯ ವಿಜಯಕ
ಪ್ರಯತ್ನಿಸಬಾರದು ಮತ್ತು ಯಾರಿಗೂ ತನ್ನ ಮತವನ್ನು ನೀಡಬಾರದು. ಏಕೆಂದರೆ ಅ
ತನ್ನನ್ನು ದೇಶದ ಒಡೆಯನೆಂದು ಒಪ್ಪಿಕೊಂಡು ಆಡಳಿತದ ಅಧಿಕಾರವನ್ನು ಇನ್ನೊಬ್ಬ
ವರ್ಗಾಯಿಸುವುದಿಲ್ಲ ಮತ್ತು ತನ್ನನ್ನು ಶಾಸನ ರಚಿಸುವವನೆಂದು ತಿಳಿದು ಕಾನೂನ
ರೂಪೀಕರಿಸುವ ತನ್ನ ಅಧಿಕಾರವನ್ನು ಇನ್ನೊಬ್ಬನ ವಶಕ್ಕೆ ಒಪ್ಪಿಸುವುದಿಲ್ಲ. ಇಸ್ಲಾ
ದೃಷ್ಟಿಕೋನದಲ್ಲಿ ಈ ಕೆಲಸಗಳೆಲ್ಲವೂ ಸಂಪೂರ್ಣವಾಗಿ ಧರ್ಮಕ್ಕೆ ವಿರುದ್ಧವಾಗಿದ್ದು ಯ
ನೈಜ ಮುಸ್ಲಿಮನಿಗೂ ಶೋಭಿಸುವಂತದ್ದಲ್ಲ.

ಮುಸ್ಲಿಮರು ಯಾವುದೇ ರಾಜಕೀಯದಲ್ಲಿ ಭಾಗವಹಿಸಬೇಕಾದರೆ ಕನಿಷ್ಠ ಪಕ್ಷ

ಕೀಯ ವ್ಯವಸ್ಥೆಯು ಅಲ್ಲಾಹನನ್ನು ಆಡಳಿತಾಧಿಕಾರಿಯೆಂದು ಸಮ್ಮತಿಸಬೇಕು ಮತ್ತು ರಿಅತ್'ನ್ನು ಕಾನೂನಿನ ಆಧಾರವೆಂದು ಪರಿಗಣಿಸಬೇಕು. ಈ ಕನಿಷ್ಟ ಶರ್ತವನ್ನು ೀಕರಿಸದೆ ಮುಸ್ಲಿಮನು ರಾಜಕೀಯದಲ್ಲಿ ಭಾಗವಹಿಸುವಂತಿಲ್ಲ.

ಮುಸ್ಲಿಮರು ಮಾಡಬೇಕಾದ ಇತರ ಕೆಲಸಗಳಿವೆ, ಅವುಗಳ ಸಂಕ್ಷಿಪ್ತ ವಿವರಣೆಯನ್ನು ದೆ ಕೊಡಲಾಗಿದೆ -

ು ಅಪಾಯಗಳು: ಇಂದು ಮುಸ್ಲಿಮರಿಗೆ ಧರ್ಮಕ್ಕೆ ಸಂಬಂಧಿಸಿದಂತೆ ಎರಡು ದೊಡ್ಡ ಯಗಳಿವೆ. ಮೊದಲ ಅಪಾಯವು ರಾಜಕೀಯ ವ್ಯವಹಾರಗಳು ಧರ್ಮ ಮತ್ತು ರೊಂದಿಗೆ ಸಂಬಂಧವಿರಿಸಬಾರದೆಂದು ವಾದಿಸುವ ಧರ್ಮರಹಿತ ಪ್ರಜಾಪ್ರಭುತ್ವದ್ದಾಗಿದೆ. ಿ ವಾದವೇನೆಂದರೆ ಧರ್ಮವು ಪ್ರತಿಯೊಬ್ಬರ ವೈಯಕ್ತಿಕ ವಿಷಯವಾಗಿದೆ ಮತ್ತು ಾಜಿಕ ವ್ಯವಹಾರಗಳು ಸ್ವತಃ ಮಾನವನೇ ಮಾಡಿದ ಕಾನೂನಿಗನುಸಾರವಾಗಿರಬೇಕು. ್ಮಿನ ಪ್ರಕಾರ ಇದು ಕ್ಷೋಭೆಯ ಮೂಲ ಕಾರಣವಾಗಿದೆ. ಸಂಪೂರ್ಣ ಜೀವನವನ್ನೇ ್ಮಿಗನುಸಾರವಾಗಿ ನಡೆಸಬೇಕಾಗಿದೆ. ಎರಡನೆಯ ಗಂಡಾಂತರವು ಸಮಾಜವಾದದ ಸ್ಥೆಯಾಗಿದೆ, ದೇವ ಧಿಕ್ಕಾರವೇ ಸಮಾಜವಾದದ ಆಧಾರವಾಗಿದೆ. ಸಮಾಜವಾದದಲ್ಲಿ ೋಕದ ಕಲ್ಪನೆ, ಅಲ್ಲಾಹನ ಮಾರ್ಗದರ್ಶನದ ಶೋಧನೆ, ಚಾರಿತ್ರ್ಯ ಮತ್ತು ನವೀಯತೆಯ ಶಿಕ್ಷಣ ಇವೆಲ್ಲವೂ ವಂಚನೆಯಾಗಿದೆ. ಅವರು ಎಲ್ಲಾ ಧಾರ್ಮಿಕ ನೋಲನಗಳನ್ನು ಬಂಡವಾಳಶಾಹಿಗಳು ಸೃಷ್ಟಿಸಿದ ಮೋಸವೆಂದು ಬಗೆಯುತ್ತಾರೆ. ಟ್ಟೆಯ ಸಮಸ್ಯೆಯ ಹೊರತು ಮನುಷ್ಯರಿಗೆ ಯಾವ ಸಮಸ್ಯೆಯೂ ಇಲ್ಲ, ಅವನು ವನ್ನೂ ಹೊಟ್ಟೆಗಾಗಿಯೇ ಮಾಡುತ್ತಾನೆಂಬುದು ಅವರ ವಾದವಾಗಿದೆ.

ಈ ಎರಡೂ ವಿಷಯಗಳು ಇಸ್ಲಾಮಿಗೆ ವಿರುದ್ಧವಾಗಿವೆ. ಜೀವನದ ಯಾವುದೇ ಹಾರದಲ್ಲಿ ನಾವು ಅಧಾರ್ಮಿಕ ಪ್ರಜಾಪ್ರಭುತ್ವ ಮತ್ತು ಸಮಾಜವಾದದಿಂದ ಯಾವ ಯವನ್ನಾದರೂ ಒಪ್ಪಿಕೊಂಡರೆ ಅಲ್ಲಿ ಇಸ್ಲಾಮ್ ನಾಸ್ತಿಯಾಗುತ್ತದೆ. ಇಸ್ಲಾಮ್ ಇದ್ದಲ್ಲಿ ರಡರಲ್ಲಿ ಒಂದು ನಿಲ್ಲಲಾಗದು. ಮುಸ್ಲಿಮರು ಧರ್ಮರಹಿತ ಪ್ರಜಾಪ್ರಭುತ್ವವನ್ನು ಡಾಡಿದರೆ ಅಥವಾ ಸಮತಾವಾದದ ವಾಹಕರಾಗಿದ್ದರೆ ಅವರ ಧರ್ಮಕ್ಕೆ ಯಾವುದೇ ತಿಯಿಲ್ಲವೆಂದು ಹೇಳಿ ಕೆಲವರು ಮುಸ್ಲಿಮರನ್ನು ಮೋಸಗೊಳಿಸುತ್ತಾರೆ. ಇಂತಹ ಜನರು ಯಶಃ ಅಜ್ಞಾನದಲ್ಲಿದ್ದಾರೆ ಅಥವಾ ಉದ್ದೇಶಪೂರ್ವಕವಾಗಿ ಮುಸ್ಲಿಮರನ್ನು ವಂಚಿಸುತ್ತಿದ್ದಾರೆ.

❋ ❋ ❋

ಧರ್ಮದ ಸೇವೆ

ಅಲ್ಲಾಹನು ಎಲ್ಲಾ ಮನುಷ್ಯರಿಗೂ ಬುದ್ಧಿ ಮತ್ತು ವಿವೇಕವನ್ನು ನೀಡಿ ಮಾನವನು ತನ್ನ ವಿವೇಕವನ್ನು ಸರಿಯಾಗಿ ಉಪಯೋಗಿಸಿದರೆ ಈ ವಿಶ್ವವನ್ನು ಸ ವ್ಯವಸ್ಥಿತವಾಗಿ ನಿಯಂತ್ರಿಸಿದವನು ಒಬ್ಬನಿದ್ದಾನೆಂದು ಖಂಡಿತವಾಗಿಯೂ ತಿಳಿಯಬ ಅವನೇ ಮಾನವನನ್ನು ಸೃಷ್ಟಿಸಿದ್ದಾನೆ. ಆದುದರಿಂದ ಮಾನವನು ಆಜ್ಞಾನುಸಾರಿಯಾಗಿರಬೇಕಾಗಿದೆ. ಆದರೆ ಅಲ್ಲಾಹನು ತನ್ನ ಕರುಣೆಯಿಂದ ಮಾನವ ಭಾರವನ್ನು ಕಡಿಮೆಗೊಳಿಸಿದ್ದಾನೆ. ಆತನು ಮಾನವನನ್ನು ಕೇವಲ ಅವನ ವಿ ಒಪ್ಪಿಸಲಿಲ್ಲ, ಬದಲಾಗಿ ಎಲ್ಲಾ ಕಾಲದಲ್ಲೂ ಆತನು ತನ್ನ ಪ್ರವಾದಿಗಳನ್ನು ಕಳುಹಿಸಿ ಆ ಪ್ರವಾದಿಗಳು ಮಾನವನಿಗೆ ಅಲ್ಲಾಹನ ಮಾರ್ಗವನ್ನು ತೋರಿಸಿದರು. ಅಲ್ಲಾಹನು (ಕಾರ್ಯಗಳನ್ನು ಇಷ್ಟಪಡುತ್ತಾನೆ ಮತ್ತು ಯಾವುದನ್ನು ಇಷ್ಟಪಡುವುದಿಲ್ಲವೆಂದೂ (ಸ್ಪಷ್ಟವಾಗಿ ತಿಳಿಸಿದರು. ಅಲ್ಲಾಹನು ಹೇಳುತ್ತಾನೆ,

"ಅವನು ಈ ಸಂದೇಶವಾಹಕರೆಲ್ಲರನ್ನು ನಿಯೋಗಿಸಿದ ಬಳಿಕ ಜನರ ಬಳಿ ಅಲ್ಲಾಹನಿಗೆದುರು ವಾದವುಳಿಯದಂತಾಗಲು ಅವರನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರನ್ನಾಗಿ ಮಾಡಿ ಕಳುಹಿಸಿದ್ದನು. ಅಲ್ಲಾಹ್ ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ." (ಸೂರಃ ಅನ್ನಿಸಾ - 165)

لًا مُّبَشِّرِيۡنَ وَمُنۡذِرِيۡنَ
يَكُوۡنَ لِلنَّاسِ عَلَى اللّٰهِ
بَعۡدَ الرُّسُلِ وَكَانَ اللّٰهُ
زًا حَكِيۡمًا ○

ಎಲ್ಲಾ ಪ್ರವಾದಿಗಳ ನಂತರ ಪ್ರವಾದಿ ಮುಹಮ್ಮದ್(ಸ) ಆಗಮಿಸಿದರು. ಆಗ ಲೋಕಕ್ಕೆ ಒಂದೇ ಧರ್ಮವನ್ನು ಕಳುಹಿಸಿದರೆ ಇಡೀ ಲೋಕವು ಅದರಿಂದ ಲಾಭ ಪ ಬಹುದಾಗಿತ್ತು. ಆದುದರಿಂದಲೇ ಅಲ್ಲಾಹನು ತನ್ನ ಧರ್ಮವನ್ನು ಅಂತಿಮ ಪರಿಪೂರ್ಣ ರೂಪದಲ್ಲಿ ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ಕಳುಹಿಸಿದನು. ಧರ್ಮವು ಲೋಕಾಂತ್ಯದ ವರೆಗೆ, ಸರ್ವ ಮಾನವ ಕುಲದ ಜೀವನ ವ್ಯವಸ್ಥೆಗಾಗಿರುವ ಸ

ುವಾಗಿದೆ. ಪ್ರತಿಯೊಬ್ಬನೂ ಅಲ್ಲಾಹನನ್ನು ಸಂತುಷ್ಟಗೊಳಿಸಲು ಈ ಮಾರ್ಗದಲ್ಲಿ ವೇ ನಡೆಯಬೇಕಾಗಿದೆ. ಇದು ಮಾತ್ರವೇ ಮನುಷ್ಯನು ಜೀವನ ನಡೆಸಿ ಸಫಲನಾಗಲು ರಿಸಬೇಕಾದ ಸಂವಿಧಾನವಾಗಿದೆ. ಈ ಮಾರ್ಗದ ಅನುಸರಣೆ ಮಾತ್ರವೇ ಮನುಷ್ಯನನ್ನು ೋಕದ ಶಾಶ್ವತ ಸುಖದೆಡೆಗೆ ಕೊಂಡೊಯ್ಯುತ್ತದೆ. ಇದಕ್ಕೆ ಹೊರತಾದ ಮಾರ್ಗಗಳೆಲ್ಲವೂ ಿದೆ ಮತ್ತು ಬೇರೆ ಧರ್ಮಗಳೆಲ್ಲವೂ ಮಿಥ್ಯವಾಗಿದೆ. ಅಲ್ಲಾಹನು ಹೇಳುತ್ತಾನೆ,

وَمَآ أَرْسَلْنَٰكَ إِلَّا كَآفَّةً لِّلنَّاسِ بَشِيرًا وَنَذِيرًا وَلَٰكِنَّ أَكْثَرَ ٱلنَّاسِ لَا يَعْلَمُونَ ○

"(ಪೈಗಂಬರರೇ) ನಾವು ನಿಮ್ಮನ್ನು ಸಕಲ ವರಿಗೆ ಸುವಾರ್ತೆ ಕೊಡುವವರಾಗಿಯೂ ುಕೆ ನೀಡುವವರಾಗಿಯೂ ಮಾಡಿ ಸಿರುತ್ತೇವೆ. ಆದರೆ ಹೆಚ್ಚಿನವರು ುವುದಿಲ್ಲ."

(ಸೂರಃ ಸಬಾ - 28)

ಅಲ್ಲಾಹನ ಧರ್ಮವು ಸರ್ವ ಮಾನವರಿಗೂ ತಲುಪುವುದು ಹೇಗೆ? ಅಲ್ಲಾಹನು ಷ್ಯರ ಮಾರ್ಗದರ್ಶನಕ್ಕಾಗಿ ಯಾವ ನಿಯಮಗಳನ್ನು ಅವತರಿಸಿದ್ದಾನೆಂದು ಜನರಿಗೆ ುವುದು ಹೇಗೆ? ಈ ಹೊಣೆಗಾರಿಕೆಯನ್ನು ಪ್ರವಾದಿ ಮುಹಮ್ಮದ್‌ರ(ಸ) ಸಮುದಾಯಕ್ಕೆ ಾಗಿದೆ. ಪ್ರವಾದಿಯವರ(ಸ) ನಿಧನಾನಂತರ ಅವರು ತಂದ ಸಂದೇಶವನ್ನು ಜನರಿಗೆ ಸುವುದು ಮತ್ತು ಅವರಿಗೆ ಅಲ್ಲಾಹನ ಆಜ್ಞೆ ಮತ್ತು ಇಚ್ಛೆ ಏನೆಂದು ತಿಳಿಸುವುದು, ಮ್ ಸಮುದಾಯದ ಕರ್ತವ್ಯವಾಗಿದೆ. ಇದರಿಂದಾಗಿ ಪರಲೋಕದಲ್ಲಿ ಅಲ್ಲಾಹನ ದೆ ಜನರು ನಮಗೇನೂ ತಿಳಿದಿರಲಿಲ್ಲ ಎಂಬ ಕಾರಣ ಕೊಡಲು ಸಾಧ್ಯವಿಲ್ಲ. ಅಲ್ಲಾಹನು ; ಕುರ್‌ಆನಿನಲ್ಲಿ ಹೇಳುತ್ತಾನೆ,

وَكَذَٰلِكَ جَعَلْنَٰكُمْ أُمَّةً وَسَطًا لِّتَكُونُوا۟ شُهَدَآءَ عَلَى ٱلنَّاسِ وَيَكُونَ ٱلرَّسُولُ عَلَيْكُمْ شَهِيدًا

"ಮತ್ತು ಇದೇ ರೀತಿ ನೀವು ಜಗತ್ತಿನ ವರ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ದಿಯು ನಿಮ್ಮ ಮೇಲೆ (ಅಲ್ಲಾಹನ ದ) ಸಾಕ್ಷಿಯಾಗಿರಲಿಕ್ಕೂ ನಾವು ನ್ನೊಂದು ಸುಮಧ್ಯ ಸಮುದಾಯವನ್ನಾಗಿ ದ್ದೇವೆ." (ಸೂರಃ ಅಲ್‌ಬಕರ - 143)

ಈ ಮಾತುಗಳನ್ನು ಪವಿತ್ರ ಕುರ್‌ಆನ್ ಪದೇ ಪದೇ ಹೇಳುತ್ತದೆ ಮತ್ತು ದಿಯವರ(ಸ) ನಂತರ ಮಾನವ ಕುಲವನ್ನು ಅಲ್ಲಾಹನ ಧರ್ಮದೆಡೆಗೆ ಆಹ್ವಾನಿಸಿ ಗೆ ನೈಜ ವಿಜಯದ ಸನ್ಮಾರ್ಗವನ್ನು ತೋರಿಸುವುದು ಮುಸ್ಲಿಮ್ ಸಮುದಾಯದ ವ್ಯವಾಗಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಈ ವಿಷಯ ಎಷ್ಟು ಸ್ಪಷ್ಟವಾಗಿದೆಯೆಂದರೆ ಯಾವ ಮುಸ್ಲಿಮರೂ ಇದನ್ನು ರಿಸುವುದಿಲ್ಲ. ಆದರೆ ಇಂದು ಜನರು ಇದರ ಪ್ರಾಮುಖ್ಯತೆಯನ್ನು ಮರೆತಿದ್ದಾರೆ.

ಹೆಚ್ಚೆಂದರೆ ಇದು ಒಂದು ಪುಣ್ಯಕಾರ್ಯವಾಗಿದ್ದು ಅದನ್ನು ಮಾಡಿದರೆ ಪುಣ್ಯ ಗಳಿಸಬಹು
ಎಂದು ಮಾತ್ರವೇ ಜನರು ಬಗೆಯುತ್ತಾರೆ. ಆದರೆ ಇಸ್ಲಾಮಿನ ದೃಷ್ಟಿಯಲ್ಲಿ ಈ
ಬಹಳ ಪ್ರಧಾನವಾದುದಾಗಿದೆ. ಕುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ,

"ಮತ್ತು ಈ ಕುರ್‌ಆನ್ ನಿಮಗೂ ಇನ್ನು ಇದು ಯಾರಿಗೆಲ್ಲ ತಲುಪುವುದೋ ಅವರೆಲ್ಲರಿಗೂ ಎಚ್ಚರಿಕೆ ನೀಡಲಿಕ್ಕಾಗಿ ನನ್ನ ಕಡೆಗೆ ವಹ್ಯ್ (ದಿವ್ಯವಾಣಿ) ಮೂಲಕ ಕಳುಹಿಸಲ್ಪಟ್ಟಿದೆ."

يَ إِلَيَّ هَٰذَا الْقُرْآنُ
نذِرَكُم بِهِ وَمَن
بَلَغَ -

(ಸೂರಃ ಅಲ್ ಅನ್‌ಆಮ್ - 19)

ಅಲ್ಲಾಹನ ಧರ್ಮದೆಡೆಗೆ ಆಹ್ವಾನಿಸುವುದು ಮುಸ್ಲಿಮರ ಕಡ್ಡಾಯ ಕರ್ತವ್ಯವಾ
ಅಲ್ಲಾಹನನ್ನು ಅನುಸರಿಸಿ ಆತನ ಧರ್ಮದಂತೆ ಜೀವನ ನಡೆಸುವುದು ಮುಸ್ಲಿ
ಕರ್ತವ್ಯವಾಗಿರುವಂತೆಯೇ ಅಲ್ಲಾಹನ ಇತರ ದಾಸರಿಗೆ ಆತನ ಧರ್ಮವನ್ನು ತಲುಪಿ
ಪ್ರಯತ್ನ ಮಾಡುವುದು ಕೂಡಾ ಅವರ ಕರ್ತವ್ಯವಾಗಿದೆ. ಇದನ್ನೇ ಧರ್ಮದ
ಎನ್ನಲಾಗುತ್ತದೆ. ಈ ಸೇವೆಯನ್ನು ಎರಡು ರೀತಿಯಲ್ಲಿ ಮಾಡಬಹುದಾಗಿದೆ-

1. ಇಸ್ಲಾಮೀ ಆಡಳಿತ ವ್ಯವಸ್ಥೆಯು ಜಾರಿಯಲ್ಲಿದ್ದರೆ ಮುಸ್ಲಿಮನ ಕೆಲಸವು ಲೋ
ಜನರ ಮುಂದೆ ಇಸ್ಲಾಮೀ ಬೋಧನೆಗಳನ್ನಿರಿಸುವುದಾಗಿದೆ. ಅದರ ಜತೆಗೆ ತನ್ನ ಆ
ವ್ಯವಸ್ಥೆಯ ಮೂಲಕ ಇಸ್ಲಾಮನ್ನು ಸ್ಥಾಪಿಸ ಬಯಸುವ ಆಡಳಿತ ವ್ಯವಸ್ಥೆಯು
ಉತ್ತಮವೆಂದು ಅವರಿಗೆ ತಿಳಿಯುವಂತೆ ಮಾಡಬೇಕಾಗಿದೆ. ಈ ವ್ಯವಸ್ಥೆಯ ವಿವರಣ
ಪ್ರವಾದಿಯವರ(ಸ) ಮದೀನಾ ಜೀವನ ಮತ್ತು ನಾಲ್ಕು ಖಲೀಫರುಗಳ ಕಾಲದ ಚರಿತ್ರೆ
ಕಾಣ ಸಿಗುತ್ತದೆ.

2. ಇಸ್ಲಾಮೀ ವ್ಯವಸ್ಥೆಯು ಸ್ಥಾಪಿತವಿರದಿದ್ದರೆ ಈ ಸೇವೆಯನ್ನು ಮಾಡುವ
ಮಾರ್ಗಗಳನ್ನು ಕಂಡು ಹಿಡಿಯುವುದು ಮುಸ್ಲಿಮ್ ಸಮುದಾಯದ ಪ್ರತಿಯೊಬ್ಬ ಸದ
ಕರ್ತವ್ಯವಾಗಿದೆ. ತಾನು ಒಬ್ಬಂಟಿಯಾಗಿದ್ದರೆ ಒಬ್ಬಂಟಿಯಾಗಿಯೇ ಈ ಕೆಲಸ
ಮಾಡಬೇಕು, ಇಲ್ಲದಿದ್ದರೆ ಈ ಕೆಲಸಕ್ಕಾಗಿ ಯಾರು, ಎಲ್ಲೇ ಸಂಘಟಿತರಾದರೂ ಒಟ್ಟು
ಈ ಕರ್ತವ್ಯವನ್ನು ನೆರವೇರಿಸಬೇಕಾಗಿದೆ. ಈ ರೀತಿಯಲ್ಲಿ ಧರ್ಮದ ಸೇವೆಯನ್ನು ಮಾ
ಯಾವ ಮಾರ್ಗದಲ್ಲಿ ನಡೆಯಬೇಕೆಂಬುದನ್ನು ನಾವು ಪ್ರವಾದಿವರ್ಯರ(ಸ) ಮತ್ತು
ಅನುಯಾಯಿಗಳ ಮಕ್ಕಾ ಜೀವನದಿಂದ ತಿಳಿಯಬಹುದಾಗಿದೆ. ಇತರರನ್ನು ಧರ್ಮ
ಆಹ್ವಾನಿಸುವ ಎರಡು ಸ್ವರೂಪಗಳಿವೆ-

1) ಜನರನ್ನು ಯೋಚಿಸುವಂತೆ ಮಾಡಲು ನಾಲಗೆ ಅಥವಾ ಲೇಖನಿಯ ಮ
ಇಸ್ಲಾಮಿನ ಕುರಿತು ತಿಳಿಯಪಡಿಸಬಹುದು. ಇದರಿಂದಾಗಿ ಅವರ ಮನಸ್ಸಿಗೆ ತೃಪ್ತಿಯ
ಅವರು ಅದನ್ನು ಸ್ವೀಕರಿಸಬಹುದು.

2) ಮುಸ್ಲಿಮರು ತಮ್ಮೆಲ್ಲಾ ಕೆಲಸದಲ್ಲಿ ಇಸ್ಲಾಮಿನ ನೈಜ ಮಾದರಿಯನ್ನು ಪ್ರದರ್ಶಿಸಬ

ಂದಾಗಿ ಜನರಿಗೆ ಅವರನ್ನು ನೋಡಿದಾಗಲೆಲ್ಲ ಇಷ್ಟೊಂದು ಒಳ್ಳೆಯ ಜನರು ಸರಿಸಿರುವ ಈ ತತ್ವವು ನಿಜವಾಗಿಯೂ ಪರಿಶುದ್ಧವಾದ ತತ್ವವಾಗಿದೆ ಎಂದು ಚಿಸಲು ನಿರ್ಬಂಧಿತರಾಗುತ್ತಾರೆ. ಆಗ ಅವರು ಆ ನಿಯಮಗಳ ಬಗ್ಗೆ ಶೋಧಿಸಲು, ೀಕರಿಸಲು ನಿರ್ಬಂಧಿತರಾಗುತ್ತಾರೆ. ಅವರು ಒಂದು ವೇಳೆ ತಮ್ಮ ಹಠ-ದುರಹಂಕಾರ ತ್ತು ಮೊಂಡುತನದಿಂದ ಅಲ್ಲಾಹನ ಮಾರ್ಗದರ್ಶನವನ್ನು ಸ್ವೀಕರಿಸದೇ ಇದ್ದರೂ ಸ್ಲಿಮರು ತಮ್ಮ ಹೊಣೆಗಾರಿಕೆಯಿಂದ ಮುಕ್ತರಾಗಬಹುದು. ಆಗ ಪರಲೋಕದಲ್ಲಿ ಜನರು ಗೆ ಅಲ್ಲಾಹನ ಧರ್ಮದ ಬಗ್ಗೆ ತಿಳಿದೇ ಇರಲಿಲ್ಲ, ಆತನ ಸಂಪ್ರೀತಿ ಯಾವುದರಲ್ಲಿದೆ ು ಅರಿವಿರಲಿಲ್ಲವೆಂಬ ನೆಪ ನೀಡಲು ಸಾಧ್ಯವಿಲ್ಲ.

ಮುಸ್ಲಿಮರನ್ನು ಈ ಪ್ರಮುಖ ಕರ್ತವ್ಯಕ್ಕಾಗಿ ನೇಮಿಸಲಾಗಿದೆ. ಇಸ್ಲಾಮ್ ಮುಸ್ಲಿಮರನ್ನು ್ತಮ ಮನುಷ್ಯರನ್ನಾಗಿ ಮಾಡಬಯಸುವುದರ ಹಿಂದಿರುವ ಉದ್ದೇಶವೇನೆಂಬುದನ್ನು ರ್ವಾಗಿ ಆಲೋಚಿಸಿದರೆ ನಮಗೆ ತಿಳಿಯಬಹುದು. ಸತ್ಯವಿಶ್ವಾಸದ ಬೆಳಕಿನಿಂದ ಮುಸ್ಲಿಮರನ್ನು ಶಮಾನರಾಗಿಸಿ ಅವರ ಮನಸ್ಸಿನಿಂದ ಎಲ್ಲಾ ಕಳಂಕವನ್ನು ಹೋಗಲಾಡಿಸುವುದು, ಎಝ್, ಝಕಾತ್, ಉಪವಾಸ ವ್ರತ ಮತ್ತು ಹಜ್ಜ್‌ನಂತಹ ಆರಾಧನಾ ಕರ್ಮಗಳ ಲಕ ಅವರನ್ನು ಹೊಣೆಗಾರ, ಕರ್ತವ್ಯನಿಷ್ಠ ಮತ್ತು ಆಜ್ಞಾನುಸಾರಿಗಳನ್ನಾಗಿ ಮಾರ್ಪಡಿಸುವುದು ೂ ಯಾವುದೇ ಕಷ್ಟ, ಸುಖ ಬಂದರೂ ಸನ್ಮಾರ್ಗದಲ್ಲಿ ದೃಢವಾಗಿ ನಿಲ್ಲುವಂತೆ ಡುವುದು, ಸಚ್ಚಾರಿತ್ರ್ಯ ಮತ್ತು ಸನ್ನಡತೆಗೆ ಬದ್ಧನಾಗಿ ಅವರನ್ನು ಜನರ ಕಣ್ಮಣಿಯಾಗಿ ರ್ಪಡಿಸುವುದು, ಸಕಲ ಮಾನವರ ಹಕ್ಕುಗಳ ರಕ್ಷಕರನ್ನಾಗಿ ಮಾಡಿ ಅವರನ್ನು ಮನುಷ್ಯ ಸ್ಸುಗಳ ಮೇಲೆ ಪ್ರಭಾವ ಬೀರುವಷ್ಟು ಅರ್ಹರನ್ನಾಗಿ ಮಾಡುವುದು- ಈ ಎಲ್ಲಾ ಗಳು ಇರುವುದು ಯಾಕಾಗಿ? ಈ ತರಬೇತಿಗಳೆಲ್ಲಾ ಅವರನ್ನು ಯಾವ ಕಾರ್ಯಕ್ಕಾಗಿ ಗೊಳಿಸುತ್ತವೆ? ಅಲ್ಲಾಹನ ಈ ಸೈನಿಕರನ್ನು ಈ ರೀತಿ ಸಿದ್ಧಗೊಳಿಸಿ ಅವರಿಂದ ಯಾವ ವನ್ನು ಮಾಡಿಸಬೇಕಾಗಿದೆ? ಆ ಕೆಲಸವು ಧರ್ಮದ ಸೇವೆಯ ಕೆಲಸವೇ ಆಗಿದೆ. ್ಲಾಹನು ಹೇಳುತ್ತಾನೆ,

يَا أَيُّهَا الَّذِينَ آمَنُوا كُونُوا قَوَّامِينَ لِلَّهِ شُهَدَاءَ بِالْقِسْطِ

"ಓ ಸತ್ಯ ವಿಶ್ವಾಸಿಗಳೇ, ನೀವು ್ಲಾಹನಿಗಾಗಿ ಸತ್ಯದಲ್ಲೇ ನೆಲೆ ನಿಲ್ಲುವವರೂ ಯದ ಸಾಕ್ಷ್ಯವಹಿಸುವವರೂ ಆಗಿರಿ".

(ಸೂರಃ ಅಲ್ ಮಾಇದಃ - 8)

ಇದು ಲೋಕದ ಅತ್ಯುತ್ತಮ ಕೆಲಸವಾಗಿದೆ. ಇದು ಅಲ್ಲಾಹನು ಎಲ್ಲಾ ಕಾಲಗಳಲ್ಲಿಯೂ ಪ್ರವಾದಿಗಳಿಗೆ ನೀಡಿದ ಕೆಲಸವಾಗಿದೆ. ಅಲ್ಲಾಹನು ಲೋಕಾಂತ್ಯದ ವರೆಗೂ ಈ ರ್ಯವನ್ನು ನೆರವೇರಿಸಲು ಪ್ರವಾದಿ ಮುಹಮ್ಮದರ ಅನುಯಾಯಿಗಳನ್ನು ನಿಯುಕ್ತಗೊಳಿಸಿರು ು ಒಂದು ದೊಡ್ಡ ಅನುಗ್ರಹವಾಗಿದೆ. ಇದು ಯಾವುದಕ್ಕೂ ಹೋಲಿಸಲಾಗದ ಘನತೆಯ

ಸ್ಥಾನವಾಗಿದೆ. ಅಲ್ಲಾಹನು ಹೇಳುತ್ತಾನೆ,

"ಮಾನವರ ಸನ್ಮಾರ್ಗದರ್ಶನ ಮತ್ತು ಸಂಸ್ಕಾರಗಳಿಗಾಗಿ ನಿಯೋಗಿಸಲಾಗಿರುವ ಅತ್ಯುತ್ತಮ ಜನಕೂಟವು ನಿಮ್ಮದಾಗಿರುತ್ತದೆ. ನೀವು ಒಳಿತಿನ ಆದೇಶವನ್ನೀಯುತ್ತೀರಿ, ಪಾಪಕಾರ್ಯಗಳಿಂದ ತಡೆಯುತ್ತೀರಿ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಿ."

(ಸೂರಃ ಆಲಿ ಇಮ್‌ರಾನ್ - 110)

تُمْ خَيْرَ أُمَّةٍ أُخْرِجَتْ
اسِ تَأْمُرُونَ بِالْمَعْرُوفِ
نْهَوْنَ عَنِ الْمُنكَرِ
ؤْمِنُونَ بِاللَّهِ ۗ

ಆದರೆ ಗೌರವಾನ್ವಿತ ಸ್ಥಾನಮಾನವು ಮಾನವನಿಗೆ ಹೀಗೆಯೇ ಸಿಗುವುದಿಲ್ಲವೆ ನಮಗೆ ತಿಳಿದಿದೆ. ಅದಕ್ಕಾಗಿ ಅವರು ಕೆಲವು ಸಂಕಷ್ಟಗಳನ್ನು ಸಹಿಸಬೇಕಾಗುತ್ತದೆ. ಅ ಈ ಜವಾಬ್ದಾರಿಕೆಯಿಂದ ನುಣುಚಿಕೊಳ್ಳಲು ಅಥವಾ ಏನಾದರೂ ನೆಪ ಹೂಡಿ ಕೆಲಸದಿಂದ ಮುಕ್ತನಾಗುವ ಪ್ರಯತ್ನ ಮಾಡಿದರೆ ಖಂಡಿತವಾಗಿಯೂ ಅವರು ಕಠಿಣ ಶಿ ಅರ್ಹರಾಗುತ್ತಾರೆ.

ಇಂದು ಮುಸ್ಲಿಮರ ಸ್ಥಿತಿ ಹೇಗಿದೆ ಮತ್ತು ಈ ಕೆಲಸವನ್ನು ಅವರು ಕ ನಿಭಾಯಿಸುತ್ತಿದ್ದಾರೆಂದು ನೋಡೋಣ. ಇಂದು ಕೂಡ ಬೆರಳೆಣಿಕೆಯಷ್ಟು ಮುಸ್ಲಿವ ಒಟ್ಟುಗೂಡಿ ಒಂದು ಹಂತದ ವರೆಗೆ ಈ ಹೊಣೆಗಾರಿಕೆಯನ್ನು ಅರಿತು ಅದನ್ನು ನಿಭಾಯಿ ಪ್ರಯತ್ನವನ್ನು ಮಾಡುತ್ತಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಆದರೆ ಸಾರ್ವಜನಿಕವಾಗಿ ಸಮುದಾಯದ ಅವಸ್ಥೆಯೇನು? ಇಂದು ನಮ್ಮ ಪೈಕಿ ಅನೇಕರು ತಮ್ಮ ಕರ್ಮಗಳ ಮೂ ಇಸ್ಲಾಮಿನ ಬದಲು ಇಸ್ಲಾಮಿಗೆ ವಿರುದ್ಧವಾದುದನ್ನೇ ಜನರ ಮುಂದಿಡುತ್ತಿದ್ದಾರೆ.

ಅವರು ತಮ್ಮ ಸಂಪತ್ತು ಮತ್ತು ಸೊತ್ತುಗಳನ್ನು ಇಸ್ಲಾಮೀ ಕಾನೂನಿಗೆ ಪ್ರತಿಯ ತಮ್ಮ ಸಮುದಾಯದಲ್ಲಿ ಪ್ರಚಲಿತವಿರುವ ರೀತಿಯಂತೆ ವಿತರಿಸಿ ಇಸ್ಲಾಮಿನ ವಾರಿ ನಿಯಮಗಳು ತಮಗಿಷ್ಟವಿಲ್ಲವೆಂದು ಸಾಬೀತು ಪಡಿಸುತ್ತಾರೆ. ಅವರು ಸ್ವತಃ ವಕೀಲ ಮ ನ್ಯಾಯಾಧೀಶರಾಗಿ ಮಾರ್ಪಟ್ಟು ಅಲ್ಲಾಹನ ಕಾನೂನನ್ನು ಬಿಟ್ಟು ಇತರ ಕಾನೂನಿನ ಪ್ರ ತೀರ್ಪು ನೀಡುತ್ತಾರೆ. ಅವರು ಶಿಕ್ಷಕರು ಮತ್ತು ಪ್ರಾಧ್ಯಾಪಕರಾಗಿ ಇಸ್ಲಾಮಿಗೆ ವಿರುದ್ಧವ ತತ್ವಶಾಸ್ತ್ರ, ಇತಿಹಾಸ ಮತ್ತು ಇತರ ಶಾಸ್ತ್ರಗಳನ್ನು ಕಲಿಸುತ್ತಾರೆ. ಅವರು ಕವಿಗಳು ಮ ಸಾಹಿತಿಗಳಾಗಿ ಇಸ್ಲಾಮಿನ ಪರಿಹಾಸ್ಯ ಮಾಡುತ್ತಾರೆ. ಅವರು ವ್ಯಾಪಾರಿಗಳು ಮ ಉದ್ಯಮಿಗಳಾಗಿ ಇಸ್ಲಾಮಿನ ತತ್ವಗಳ ವಿರುದ್ಧವಾಗಿ ವ್ಯವಹರಿಸುತ್ತಾರೆ. ಅವರು ರಾಜಕೀಯದ ಭಾಗವಹಿಸಿ ಇಸ್ಲಾಮಿಗೆ ವಿರುದ್ಧವಾದ ರಾಜಕೀಯ ಕಾರ್ಯಕ್ರಮಗಳನ್ನು ನಡೆಸುತ್ತಾರೆ, ಅ ನಾಯಕರಾಗಿ ಮಾರ್ಪಟ್ಟು ಇಸ್ಲಾಮಿಗೆ ವಿರುದ್ಧವಾಗಿ ಘೋಷಣೆಗಳನ್ನು ಕೂಗಿಸುತ್ತಾ ಅವರು ಸುಳ್ಳು ಹೇಳುತ್ತಾರೆ, ಕದಿಯುತ್ತಾರೆ, ದರೋಡೆ ಮಾಡುತ್ತಾರೆ, ಕ್ಷೋಭೆಯ ಹರಡುತ್ತಾರೆ, ಅಶ್ಲೀಲ ಮತ್ತು ನಿರ್ಲಜ್ಜೆಯ ಎಲ್ಲಾ ಕೆಲಸದಲ್ಲೂ ಭಾಗವಹಿಸುತ್ತಾರೆ. ಅ

ಕ್ರಿ ಮತ್ತು ಮೇಳಗಳಲ್ಲಿ, ಅವರ ಸಭೆ ಸಮಾರಂಭಗಳಲ್ಲಿ ಇಸ್ಲಾಮಿ ಆದೇಶಗಳನ್ನು ರಂಗವಾಗಿ ಪರಿಹಾಸ್ಯ ಮಾಡಲಾಗುತ್ತದೆ. ಅವರ ಭಾಷಣಗಳು, ಅವರ ಹೇಳಿಕೆಗಳು, ರ ಕುತಂತ್ರಗಳು ಇತ್ಯಾದಿ ಎಲ್ಲಾ ತರಹದ ಕೆಡುಕಿನಲ್ಲಿ ಅವರು ಸತ್ಯ ನಿಷೇಧಿಗಳಿಗಿಂತ ನೆಯೇನೂ ಇಲ್ಲ. ಎಲ್ಲಿಯವರೆಗೆಂದರೆ ಅವರು ಬಹುದೇವಾರಾಧನೆ ಮತ್ತು ರ್ತಿಪೂಜೆಯಲ್ಲೂ ಇತರರಿಗಿಂತ ಹಿಂದೆ ಬೀಳುವವರಲ್ಲ. ಸತ್ಯ ನಿಷೇಧಿಗಳು ಮತ್ತು ುದೇವಾರಾಧಕರು ತಮ್ಮ ಮೂರ್ತಿಗಳೊಂದಿಗೆ ಮಾಡುವ ಕೆಲಸವನ್ನೇ ಇವರು ತಮ್ಮ ಾ ಪುರುಷರ ಗೋರಿಗಳಲ್ಲಿ ಮಾಡುತ್ತಾರೆ.

ಇದು ಮುಸ್ಲಿಮರು ಇತರರ ಮುಂದೆ ತಮ್ಮ ಮಾತು ಕೃತಿಗಳ ಮೂಲಕ ಸಮರ್ಪಿಸುವ ಣವಾಗಿದೆ. ಮುಸ್ಲಿಮರ ಈ ಕೆಲಸವನ್ನು ನೋಡಿ ಮುಸ್ಲಿಮೇತರರು ಇಸ್ಲಾಮಿನ ಬಗ್ಗೆ ುಲು ಅಥವಾ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ತಾಳಲು ಸಾಧ್ಯವೇ? ಈ ಯಲ್ಲಿ ಅಲ್ಲಾಹನ ಪ್ರಕಾಶವು ಅವನ ದಾಸರ ಬಳಿ ತಲುಪಲು ಸಾಧ್ಯವಿದೆಯೇ? ಡಿತವಾಗಿಯೂ ಇಲ್ಲ.

ವಾಸ್ತವದಲ್ಲಿ ಮುಸ್ಲಿಮರು ಈ ಕರ್ತವ್ಯವನ್ನು ನಿಭಾಯಿಸುವುದರ ಬಗ್ಗೆ ಅಶ್ರದ್ಧರಾಗಿದ್ದಾರೆ. ಲ್ಲಾಹನ ಈ ಸೈನಿಕರು ತಮ್ಮ ಕರ್ತವ್ಯವನ್ನು ದೀರ್ಘಕಾಲದಿಂದ ಮರೆತು ಬಿಟ್ಟಿದ್ದಾರೆ. ುದರಿಂದಲೇ ಇಂದು ಮುಸ್ಲಿಮರು ಕೇವಲ ಭಾರತದಲ್ಲಿ ಮಾತ್ರವಲ್ಲ ಲೋಕದೆಲ್ಲೆಡೆಯೂ ಮಾನಿತರಾಗಿದ್ದಾರೆ. ಇದು ಅವರಿಗೆ ಇಹಲೋಕದಲ್ಲಿ ಸಿಗುತ್ತಿರುವ ಅವರ ಪಾಪದ ಯಾಗಿದೆ. ಆದರೆ ಪರಲೋಕದಲ್ಲಿ ಇದಕ್ಕಿಂತ ಹೆಚ್ಚಿನ ಶಿಕ್ಷೆ ಸಿಗುವ ಭಯವಿದೆ. ಾದಿಯವರು(ಸ) ಹೇಳಿರುತ್ತಾರೆ,

"ನನ್ನ ಪ್ರಾಣವು ಯಾರ ಕೈಯಲ್ಲಿದೆಯೋ ಅವನಾಣೆ, ಜನರಿಗೆ ನೀವು ಖಂಡಿತವಾಗಿಯೂ ತಿನ ಆದೇಶವನ್ನು ನೀಡುತ್ತಿರಬೇಕು ಮತ್ತು ಕೆಡುಕಿನಿಂದ ಅವರನ್ನು ತಡೆಯುತ್ತಿರಬೇಕು. ಪಿಡಿರಿ ನೀವು ಹಾಗೆ ಮಾಡದಿದ್ದಲ್ಲಿ ಅಲ್ಲಾಹನು ನಿಮ್ಮ ಮೇಲೆ ಕಠಿಣ ಶಿಕ್ಷೆಯನ್ನಿಳಿಸುವನು, ತರ ನೀವು ಅವನಲ್ಲಿ ಪ್ರಾರ್ಥಿಸಿದರೂ, ಆ ಸಮಯದಲ್ಲಿ ಅದನ್ನು ಸ್ವೀಕರಿಸಲಾಗುವುದಿಲ್ಲ".

ಧರ್ಮದ ಈ ಸೇವೆಯನ್ನೇ ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಲ್ಲಿ ಾದ್" ಎಂದು ಕರೆಯಲಾಗಿದೆ. ಅರಬಿ ಭಾಷೆಯಲ್ಲಿ 'ಜಿಹಾದ್' ಎಂದರೆ ಕಠಿಣ ಹೋರಾಟ ದಾಗಿದೆ. ಧರ್ಮದ ಸೇವೆಗಾಗಿ ಮಾಡುವ ಎಲ್ಲಾ ಪ್ರಯತ್ನಗಳೂ ಅದರಲ್ಲಿ ಸೇರಿವೆ. ರಿಗೆ ಧರ್ಮದ ಬಗ್ಗೆ ತಿಳಿಸುವುದು, ಅವರನ್ನು ಅದರೆಡೆಗೆ ಆಹ್ವಾನಿಸುವುದು, ಈ ಸದಲ್ಲಿ ತನು- ಮನ- ಧನದೊಂದಿಗೆ ಸಹಕರಿಸುವುದು, ಅಗತ್ಯವಿದ್ದರೆ ಧರ್ಮಕ್ಕಾಗಿ ಶವನ್ನೇ ತೊರೆಯುವುದು ಮತ್ತು ಸಮಯ ಬಂದಾಗ ಈ ಕೆಲಸಕ್ಕಾಗಿ ತಮ್ಮ ಪ್ರಾಣವನ್ನೇ ಗ ಮಾಡುವುದು ಇವೆಲ್ಲವೂ 'ಜಿಹಾದ್'ನಲ್ಲೇ ಸೇರಿದೆ.

ಅಲ್ಲಾಹನ ಬಳಿ 'ಜಿಹಾದ್' ಅತ್ಯಂತ ಹಿರಿಯ ಆರಾಧನೆಯಾಗಿದೆ. ಹ. ಅಬೂಬಕರ್ ್ದೀಕ್‌ರ(ರ) ಹೇಳಿಕೆಯಂತೆ, "ಜಿಹಾದ್ ಸತ್ಯವಿಶ್ವಾದ ಪರಿಪೂರ್ಣತೆಯಾಗಿದೆ." ಅಲ್ಲಾಹನು ಳುತ್ತಾನೆ,

"ಸತ್ಯ ವಿಶ್ವಾಸಿಗಳೇ, ರುಕೂಲ್ ಮಾಡಿರಿ (ಬಾಗಿರಿ) ಮತ್ತು ಸಜ್ದಃ ಮಾಡಿರಿ (ಸಾಷ್ಟಾಂಗವೆರಗಿರಿ) ಮತ್ತು ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡಿರಿ- ಸತ್ಕರ್ಮಗಳನ್ನೆಸಗಿರಿ. ಇದರಿಂದಲೇ ನಿಮಗೆ ಯಶಸ್ಸು ಸಿಗುವುದೆಂದು ನಿರೀಕ್ಷಿಸಬಹುದು. ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದ ರೀತಿಯಲ್ಲಿ ಹೋರಾಡಿರಿ. ಅವನು ತನ್ನ ಕಾರ್ಯಕ್ಕಾಗಿ ನಿಮ್ಮನ್ನು ಆರಿಸಿಕೊಂಡಿರುತ್ತಾನೆ ಮತ್ತು ಧರ್ಮದಲ್ಲಿ ನಿಮಗೇನೂ ಸಂಕೀರ್ಣತೆಯನ್ನಿರಿಸಿಲ್ಲ. ನಿಮ್ಮ ಪಿತಾಮಹರಾದ ಇಬ್ರಾಹೀಮರ ಸಮುದಾಯ ದಲ್ಲಿ ಸ್ಥಿರವಾಗಿರಿ. ಅಲ್ಲಾಹನು ಮೊದಲೂ ನಿಮ್ಮ ಹೆಸರನ್ನು 'ಮುಸ್ಲಿಮ್' ಎಂದಿಟ್ಟಿದ್ದನು ಮತ್ತು ಇದರಲ್ಲೂ (ಕುರ್‌ಆನಿನಲ್ಲೂ ನಿಮಗೆ ಇದೇ ಹೆಸರಿದೆ). ಇದು ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿಗಳಾಗಲಿಕ್ಕಾಗಿ ಮತ್ತು ನೀವು ಜನರ ಬಗ್ಗೆ ಸಾಕ್ಷಿಗಳಾಗಲಿಕ್ಕಾಗಿ (ಆಗಿರುತ್ತದೆ). ಆದುದರಿಂದ ನಮಾಝನ್ನು ಸಂಸ್ಥಾಪಿಸಿರಿ, ಝಕಾತ್ ಕೊಡಿರಿ ಮತ್ತು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿರಿ. ಅವನೇ ನಿಮ್ಮ ರಕ್ಷಕ ಮಿತ್ರ. ಅತ್ಯಂತ ಶ್ರೇಷ್ಠ ರಕ್ಷಕ ಮಿತ್ರನವನು ಮತ್ತು ಅತ್ಯುತ್ತಮ ಸಹಾಯಕನವನು".

(ಸೂರಃ ಅಲ್‌ಹಜ್ಜ್- 77, 78)

ـبُّهَا الَّذِيْنَ اٰمَنُوا ارْكَعُوْا
ـسْجُدُوْا وَاعْبُدُوْا
ـكُمْ وَافْعَلُوا الْخَيْرَ
ـكُمْ تُفْلِحُوْنَ ۩
ـاهِدُوْا فِي اللّٰهِ حَقَّ
ـادِهٖ ۭ هُوَ اجْتَبٰىكُمْ
ـاجَعَلَ عَلَيْكُمْ فِي الدِّيْنِ
ـنْ حَرَجٍ ۭ مِلَّةَ اَبِيْكُمْ
ـهِيْمَ ۭ هُوَ سَمّٰىكُمُ
ـلِمِيْنَ ڏ مِنْ قَبْلُ وَ
ـهٰذَا لِيَكُوْنَ
ـسُوْلُ شَهِيْدًا
ـيْكُمْ وَتَكُوْنُوْا شُهَدَاۗءَ
ـالنَّاسِ ښ فَاَقِيْمُوا
ـلٰوةَ وَاٰتُوا الزَّكٰوةَ
ـتَصِمُوْا بِاللّٰهِ ۭ هُوَ
ـلٰىكُمْ ۚ فَنِعْمَ الْمَوْلٰى وَ
ـمَ النَّصِيْرُ ۝

ಸೂರಃ ಹಜ್ಜ್‌ನ ಈ ವಚನಗಳನ್ನು ಮುಂದಿರಿಸಿ ಮುಸ್ಲಿಮರಿಗೆ ಎಂತಹ ಆದೇಶಗ
ನೀಡಲಾಗಿದೆ ಎಂದು ನೋಡೋಣ. ಪ್ರಥಮವಾಗಿ ನಮಾಝಿನ ಆದೇಶ ಬಂದಿದೆ. ನ

ೂರ್ಣ ಜೀವನವನ್ನು ಅಲ್ಲಾಹನ ಆಜ್ಞಾನುಸರಣೆಯಲ್ಲೇ ಕಳೆಯಬೇಕೆಂದು ತಾಕೀತು ಲಾಗಿದೆ. ನಂತರ ಸಚ್ಚಾರಿತ್ರ್ಯ ಮತ್ತು ಒಳಿತಿನ ಆದೇಶ ನೀಡಲಾಗಿದೆ. ಅದರ ನಂತರ ದ ಸೇವೆಗಾಗಿ ಪೂರ್ಣ ಶ್ರದ್ಧೆಯೊಂದಿಗೆ ಕಠಿಣ ಪ್ರಯತ್ನ ಮಾಡಬೇಕೆಂದು ಾಗಿದೆ. ನಂತರ ಮುಸ್ಲಿಮರನ್ನು ಅಭಿಸಂಬೋಧಿಸಿ ಹೀಗೆನ್ನಲಾಗಿದೆ. "ನಿಮ್ಮನ್ನು ಈ ್ಯಗಿಯೇ ಆಯ್ಕೆ ಮಾಡಲಾಗಿದೆ. ಧರ್ಮದ ಸೇವೆಯ ಈ ಕೆಲಸದಲ್ಲಿ ನಿಮಗೆ ಾರದ ಕಾಠಿಣ್ಯತೆಯನ್ನು ಇರಿಸಲಾಗಿಲ್ಲ. ಇದು ಹ. ಇಬ್ರಾಹೀಮ್‌ರವರು(ಅ) ತಂದ ವೇ ಆಗಿದೆ. ನೀವು ಅಲ್ಲಾಹನ ಆಜ್ಞಾನುಸರಣೆಯನ್ನು ಮಾಡಿ ಅವನ ಆದೇಶಗಳಂತೆ ುವ ಪಣ ತೊಟ್ಟಿರುವುದರಿಂದ ನಿಮ್ಮನ್ನು ಮುಸ್ಲಿಮ್ (ವಿಧೇಯ) ಎಂದು ಕರೆಯಲಾಗಿದೆ ನಿಮಗಿಂತ ಮುಂಚೆ ಬಂದ ಎಲ್ಲಾ ಆಜ್ಞಾನುಸಾರಿಯಾದ ದಾಸರನ್ನು 'ಮುಸ್ಲಿಮ್' ಕರೆಯಲಾಗಿತ್ತು ಮತ್ತು ಈಗ ಪವಿತ್ರ ಕುರ್‌ಆನಿನಲ್ಲೂ ಅವರನ್ನು 'ಮುಸ್ಲಿಮ್' ಕರೆಯಲಾಗಿದೆ. ಈ ಸಂದೇಶವಾಹಕರನ್ನು (ಪ್ರವಾದಿ ಮುಹಮ್ಮದ್) ನಿಮ್ಮ ಮೇಲೆ ರ್ಮದ ಸಾಕ್ಷಿಯಾಗಿ ಅಂದರೆ ಅಲ್ಲಾಹನ ಸತ್ಯಧರ್ಮವನ್ನು ನಿಮ್ಮೆಡೆಗೆ ಸರಿಯಾಗಿ ಸುವವರಾಗಿ ಕಳುಹಿಸಲಾಗಿದೆ, ಈ ರೀತಿ ನೀವು ಅವರ ನಂತರ ಜನರಿಗೆ ಈ ರ್ಮವನ್ನು ತಲುಪಿಸುತ್ತಿರಬೇಕಾಗಿದೆ. ಇದೇ ನಿಮ್ಮ ಕರ್ತವ್ಯ ಮತ್ತು ನಿಮ್ಮ ೋದ್ದೇಶವಾಗಿದೆ. ಆದರೆ ಈ ಕೆಲಸವನ್ನು ಪೂರ್ತೀಕರಿಸಲು ನೀವು ನಮಾಝ್ ಪಿಸಿರಿ, ಝಕಾತ್ ನೀಡಿರಿ, ಅಲ್ಲಾಹನೊಂದಿಗೆ ಸಂಬಂಧವನ್ನು ಸುದೃಢಗೊಳಿಸಿಕೊಳ್ಳಿರಿ. ಂದಲೇ ನಿಮಗೆ ಈ ಕೆಲಸ ಮಾಡುವ ಶಕ್ತಿ ದೊರೆಯುವುದು. ನಿಮ್ಮ ಕೆಲಸವನ್ನು ುವವನು ಮತ್ತು ನಿಮ್ಮ ಒಡೆಯನು ಕೇವಲ ಅಲ್ಲಾಹನಾಗಿದ್ದಾನೆ. ನೀವು ಅವನ ೆಯಿಂದಲೇ ಈ ಕೆಲಸವನ್ನು ಮಾಡಬೇಕು ಮತ್ತು ಆತನು ಅತ್ಯಂತ ಉತ್ತಮ ಲ್ಲಿ ಕೆಲಸ ನಿರ್ವಹಿಸುವವನು ಮತ್ತು ಅತ್ಯಂತ ಉತ್ತಮ ಸಹಾಯಕನಾಗಿದ್ದಾನೆಂದು ತಿಳಿದಿದೆ."

ಧಾರ್ಮಿಕ ಆದೇಶಗಳೆಂದು ನಮಾಝ್, ಝಕಾತ್ ಮತ್ತು ಧರ್ಮದ ಇತರೆಲ್ಲ ಗಳು 'ಜಿಹಾದ್'ನ ಸಿದ್ಧತೆಗಾಗಿ ಹೀಗೆ ಮನುಷ್ಯರನ್ನು ಸಿದ್ಧಗೊಳಿಸುತ್ತದೆಂದು ದ ನಮಗೆ ತಿಳಿದು ಬರುತ್ತದೆ. ಇಸ್ಲಾಮೀ ಜೀವನವನ್ನು ಅನುಸರಿಸದ ಮನುಷ್ಯನು ್ನಂತಹ ಪವಿತ್ರವಾದ ಆರಾಧನೆಯಲ್ಲಿ ಭಾಗವಹಿಸಲಾರನು. ಹಾಗೆಯೇ ನಮಾಝ್, ್ ಇತ್ಯಾದಿ ಆರಾಧನಾ ಕರ್ಮಗಳನ್ನು ನಿರ್ವಹಿಸಿ ಅಲ್ಲಾಹನೊಂದಿಗಿನ ಸಂಬಂಧವನ್ನು ಿಸದೆ ಅವನು ಅಲ್ಲಾಹನ ಧರ್ಮದ ಸೇವೆಗಾಗಿ ಕಠಿಣ ಪ್ರಯತ್ನವನ್ನು ಮಾಡಲಾರನು.

❋ ❋ ❋

ಧರ್ಮದ ಸೇವೆ ಮಾಡುವುದು ಹೇಗೆ

1. ಸಂಘಟನೆ

ಧರ್ಮದಲ್ಲಿ ವೈಯಕ್ತಿಕ ಒಳಿತು ಮತ್ತು ವೈಯಕ್ತಿಕ ಧರ್ಮನಿಷ್ಠೆಗೆ ಬಹಳ ಪ್ರಾಮ ಎಂಬುದರಲ್ಲಿ ಸಂದೇಹವಿಲ್ಲ. ವಾಸ್ತವದಲ್ಲಿ ಇವುಗಳ ವಿನಾ ಯಾವುದೇ ಧ ಕಾರ್ಯವೂ ನೆರವೇರದು. ಆದರೆ ವ್ಯಕ್ತಿಯ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿರುವ ಧ ಸ್ತರ, ಧರ್ಮದ ಬಹಳ ಸಣ್ಣ ಭಾಗವಾಗಿದೆ. ಧರ್ಮದ ದೊಡ್ಡ ಭಾಗವು ಸಂಘಟಿತ ಜ ಸಂಬಂಧಿಸಿದ್ದಾಗಿದೆ. ಸಂಘಟಿತ ಜೀವನದಲ್ಲಿ ಇಸ್ಲಾಮೀ ಸಿದ್ಧಾಂತಗಳು ಜಾರಿಯಾ ಜನರಿಗೆ ಅಲ್ಲಾಹನ ಧರ್ಮದ ಸರಿಯಾದ ಮೌಲ್ಯ ತಿಳಿಯಲಾರದು. ಸಂಘಟಿತ ಜಿ ಇಸ್ಲಾಮೀ ತತ್ವಗಳಿಗೆ ವಿರುದ್ಧವಾಗಿ ನೆಲೆಗೊಂಡಿದ್ದರೆ, ಅಲ್ಲಿ ವೈಯಕ್ತಿಕ ಜೀವನ ಇಸ್ಲಾಮೀ ಸಿದ್ಧಾಂತಗಳ ಪಾಲನೆ ಕಷ್ಟಸಾಧ್ಯ. ಇದರ ಉದಾಹರಣೆಗಳು ನಿಮ್ಮ ಮ ಅಲ್ಲಾಹನ ಧರ್ಮವು ಮಾನವನ ಜೀವನದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತ ನಾವು ವಾದಿಸುತ್ತೇವೆ. ಆದರೆ ಆ ವಾದಕ್ಕೆ ಸಾಕ್ಷಿಯಾಗಿ ಕೇವಲ ನಮ್ಮ ವೈಯಕ್ತಿಕ ಮತ್ತು ಧರ್ಮನಿಷ್ಠೆಯನ್ನು ಮುಂದಿರಿಸುವುದು ಪರ್ಯಾಪ್ತವಲ್ಲ. ಬದಲಾಗಿ ವ ಧರ್ಮನಿಷ್ಠೆಯ ಆಧಾರದಲ್ಲಿ ಇಂದು ಲೋಕದಲ್ಲಿ ಪ್ರಚಲಿತವಿರುವ ಎಲ್ಲ ಸಮಸ್ಯೆ ಪರಿಹಾರ ಸಿಗುವಂತಹ ಸಂಘಟಿತ ವ್ಯವಸ್ಥೆಯನ್ನು ಕಟ್ಟಿ ಅವರ ಮುಂದಿರಿಸಬೇಕಾಗ ಆದರೆ ಇದಕ್ಕೆ ಪ್ರತಿಯಾಗಿ ಸಾಮೂಹಿಕ ವ್ಯವಹಾರಗಳು ಇಸ್ಲಾಮೀ ತತ್ವಗಳಿಗೆ ವಿರುದ್ಧ ತಮಗೆ ಒಳಿತು ಮತ್ತು ಧರ್ಮನಿಷ್ಠೆಯ ಮಾರ್ಗದಲ್ಲಿ ಹೆಜ್ಜೆ ಹೆಜ್ಜೆಗೂ ಸಮಸ ಎದುರಿಸಬೇಕಾಗುತ್ತದೆ. ಇಂದಿನ ಸ್ಥಿತಿಗತಿಗಳೆಡೆಗೆ ಸ್ವಲ್ಪ ಗಮನ ಹರಿಸಿ ನೋಡಿ ವ್ಯಕ್ತಿಯು ವ್ಯಾಪಾರದಲ್ಲಿ ಧರ್ಮನಿಷ್ಠೆಯೊಂದಿಗೆ ವ್ಯವಹರಿಸಬಯಸಿದರೆ ಅವನಿಗೆ ಅಡಚಣೆಗಳನ್ನು ಎದುರಿಸಬೇಕಾಗುತ್ತದೆ. ಜೀವನದ ಇತರೆಲ್ಲಾ ವ್ಯವಹಾರಗಳ ಸ್ಥಿ ಇದುವೇ ಆಗಿದೆ ಎಂಬುದು ಸರ್ವವಿಧಿತ. ಆದ್ದರಿಂದ ಧರ್ಮವನ್ನು ಪರಿಪೂ ರೀತಿಯಲ್ಲಿ ಸಂಸ್ಥಾಪಿಸಿ ಸಂಪೂರ್ಣ ಜೀವನದಲ್ಲಿ ಅದರ ಸರಿಯಾದ ಮಾದ ತೋರಿಸಬೇಕಾದರೆ, ಸಾಮೂಹಿಕ ವ್ಯವಹಾರಗಳಲ್ಲಿ ಇಸ್ಲಾಮೀ ತತ್ವಗಳಿಗನುಸ

ಸುವುದು ಅತ್ಯವಶ್ಯಕವಾಗಿದೆ. ಅಪ್ಪಟ ಇಸ್ಲಾಮಿ ತತ್ವಗಳ ಆಧಾರದಲ್ಲಿ ಒಂದು ಉತ್ತಮ ಸ್ಥೆ ಸ್ಥಾಪಿತವಾಗಿ ಜನರಿಗೆ ಇಸ್ಲಾಮ್ ಯಥಾರ್ಥವಾಗಿ ಅಲ್ಲಾಹನ ಅನುಗ್ರಹವಾಗಿದೆ ಪು ಮನದಟ್ಟಾದರೆ ಮಾತ್ರ ಧರ್ಮದ ಸೇವೆಯ ಹಕ್ಕನ್ನು ಸಂಪೂರ್ಣವಾಗಿ ೇಕರಿಸಿದಂತಾಗುತ್ತದೆ. ಪ್ರವಾದಿಯವರ(ಸ) ನಿಧನಾ ನಂತರ ಕೇವಲ ಐವತ್ತು ಗಳೊಳಗೆ ಜಗತ್ತಿನೆಲ್ಲೆಡೆ ಇಸ್ಲಾಮಿ ತತ್ವಗಳನ್ನು ಅಂಗೀಕರಿಸಲಾಯಿತು. ಜಗತ್ತಿನ ಕ್ಕಿಂತ ಹೆಚ್ಚಿನ ಭಾಗವು ಈ ಸಿದ್ಧಾಂತಗಳನ್ನು ಕಾರ್ಯತಃ ಸ್ವೀಕರಿಸಿತು ಮತ್ತು ಉಳಿದ ವೃ ಈ ಸಿದ್ಧಾಂತಕ್ಕಿಂತ ಉತ್ತಮವಾದ ಸಿದ್ಧಾಂತವು ಬೇರೊಂದಿಲ್ಲವೆಂಬ ವಾಸ್ತವಿಕತೆಯನ್ನು ಕೊಂಡಿತು. ಈ ಎಲ್ಲಾ ಅನುಗ್ರಹಗಳಿಗೆ ಕಾರಣವೇನು? ಇದಕ್ಕಿರುವ ಒಂದೇ ಏವೆಂದರೆ ಅಂದು ಜಗತ್ತಿನ ಮುಂದೆ ಧರ್ಮನಿಷ್ಠೆ ಮತ್ತು ದೇವಭಯದ ಆಧಾರದಲ್ಲಿರುವ ರ್ಣ ಇಸ್ಲಾಮಿ ತತ್ವಗಳ ಮಾದರಿಯಿರುವ ಒಂದು ಸತ್ಯ ವ್ಯವಸ್ಥೆಯು ಅಸ್ತಿತ್ವದಲ್ಲಿತ್ತು.

ಯಾವ ವ್ಯವಸ್ಥೆಯನ್ನು ಸ್ಥಾಪಿಸಬೇಕಾದರೂ ಸಂಘಟಿತ ಪ್ರಯತ್ನವು ಅತ್ಯಗತ್ಯವಾಗಿದೆ. ಪ ಅಸಂಘಟಿತವಾಗಿ ಎಷ್ಟೇ ಕೆಲಸ ಮಾಡಿದರೂ ಯಾವ ವ್ಯವಸ್ಥೆಯಲ್ಲೂ ಬದಲಾವಣೆ ಂ ಸಾಧ್ಯವಿಲ್ಲ. ಒಂದು ವ್ಯವಸ್ಥೆಯನ್ನು ಬದಲಿಸಲು ಒಟ್ಟು ಸೇರಿ ಕೆಲಸ ಮಾಡುವುದು ್ಯಕವಾಗಿದೆ. ಕೆಡುಕನ್ನು ಹರಡುವವರು ಸಂಘಟಿತರಾಗಿ ಅದನ್ನು ಹರಡಲು ಪ್ರಯತ್ನಿಸುತ್ತಾರೆ. ಚಿತ ತತ್ವಗಳನ್ನು ಸ್ಥಾಪಿಸಲು ಸಂಘಟನೆಗಳು ತಲೆ ಎತ್ತಿ ಅದನ್ನು ಹರಡುತ್ತವೆ. ಅದೇ ಸತ್ಯವನ್ನು ಹರಡುವ ಕೆಲಸವು ಸಂಘಟನೆಯ ವಿನಾ ಸಾಧ್ಯವಿಲ್ಲ. ಸತ್ಯವಾದ ತತ್ವಗಳನ್ನು ಲಗೊಳಿಸಬೇಕಾದರೂ ಆ ತತ್ವಗಳನ್ನು ನಂಬುವವರು ಸಂಘಟಿತರಾಗಿ ಕೆಲಸ ತಬೇಕಾಗುತ್ತದೆ. ಈ ಕಾರಣದಿಂದಲೇ ಇಸ್ಲಾಮಿನಲ್ಲಿ ಸಂಘಟನೆಯನ್ನು ಕಡ್ಡಾಯವೆಂದು ಾಗಿದೆ. ಇಸ್ಲಾಮಿನ ಪ್ರಕಾರ ಸಂಘಟನೆ ಇಲ್ಲದ ಜೀವನವು ಇಸ್ಲಾಮೇತರ (ಅಜ್ಞಾನದಿಂದ ದ) ಜೀವನವಾಗಿದೆ ಮತ್ತು ಸಂಘಟನೆಯಿಂದ ಹೊರಗಿರುವವನು ಇಸ್ಲಾಮಿನಿಂದಲೇ ರಗಿರುವರೆಂದು ಹೇಳಲಾಗುತ್ತದೆ. ಪ್ರವಾದಿವರ್ಯರು(ಸ) ಸುಸ್ಪಷ್ಟವಾಗಿ ಹೇಳಿರುವರು,

"ನಾನು ನಿಮಗೆ ಐದು ವಿಷಯಗಳ ಆದೇಶ ನೀಡುತ್ತೇನೆ: ಸಂಘಟನೆ, ಆದೇಶವನ್ನು ಪುವುದು, ಆದೇಶ ಪಾಲನೆ, ವಲಸೆ (ಅಗತ್ಯ ಬಂದಾಗ ಅಲ್ಲಾಹನ ಧರ್ಮಕ್ಕಾಗಿ ವನ್ನು ತೊರೆಯುವುದು) ಮತ್ತು ಜಿಹಾದ್ (ಅಲ್ಲಾಹನ ಧರ್ಮಕ್ಕಾಗಿ ಕಠಿಣ ಪ್ರಯತ್ನ ತುವುದು ಮತ್ತು ಅಗತ್ಯ ಬಿದ್ದಾಗ ಪ್ರಾಣತ್ಯಾಗ ಮಾಡಲೂ ಸನ್ನದ್ಧನಾಗುವುದು). ವನು ಸಂಘಟನೆಯಿಂದ ಒಂದು ಗೇಣು ದೂರ ಉಳಿದನೋ ಅವನು ಇಸ್ಲಾಮಿನ ಲದಿಂದಲೇ ದೂರ ಸರಿದಂತಾಗುತ್ತದೆ. ಪುನಃ ಸಂಘಟನೆಗೆ ಮರಳುವವನು ಮಾತ್ರವೇ ರತಾಗಿದ್ದಾನೆ. ಯಾರು ಅಜ್ಞಾನದೆಡೆಗೆ (ಇಸ್ಲಾಮಿ ತತ್ವಗಳಿಗೆ ವಿರುದ್ಧವಾದ ಕೆಲಸಗಳೆಡೆಗೆ) ್ವನಿಸಿದನೋ ಅವನು ನರಕವಾಸಿಯಾಗಿದ್ದಾನೆ." ಅನುಯಾಯಿಗಳು ಕೇಳಿದರು, ಾದಿವರ್ಯರೇ(ಸ), ಅವನು ಉಪವಾಸ ವ್ರತವನ್ನಾಚರಿಸುವವನು ಮತ್ತು ನಮಾಝ್ ಹಿಸುವವನಾಗಿದ್ದರೂ ಕೂಡಾ?" ಪ್ರವಾದಿಯವರು(ಸ) ಹೇಳಿದರು, "ಹೌದು, ಅವನು

ನಮಾಝ್ ನಿರ್ವಹಿಸುವ, ಉಪವಾಸ ವ್ರತವನ್ನಾಚರಿಸುವ ಮತ್ತು ತನ್ನನ್ನು
ಮುಸ್ಲಿಮನೆಂದು ಹೇಳಿಕೊಂಡರೂ ಕೂಡ." (ಅಹ್ಮದ್, ಹಾ

ಈ ಹದೀಸ್‌ನಿಂದ ಮೂರು ವಿಷಯಗಳು ರುಜುವಾಗುತ್ತವೆ-

1) ಧರ್ಮದ ಸೇವೆ ಮಾಡಬೇಕಾದರೆ ಮೊಟ್ಟ ಮೊದಲು ಒಂದು ಸಂಘಟ ಅಗತ್ಯವಿದೆ. ಅದು ವ್ಯವಸ್ಥಿತವಾದ ಸಂಘಟನೆಯಾಗಿರಬೇಕು. ಜನರು ಒಬ್ಬರ ಮಾ ಕೇಳಿ ಅದನ್ನು ಪಾಲಿಸುವಂತಿರಬೇಕು. ಯಾವುದೇ ಸಂದರ್ಭದಲ್ಲಿ ಅಗತ್ಯ ಬಿದ್ದರೆ ಧ ಸೇವೆ ಮಾಡುವವರು ತಮ್ಮ ಮನೆಗಳನ್ನು ಬಿಟ್ಟು ಒಂದೆಡೆ ಸೇರಬೇಕಾಗಿ ಬಂದರೆ ಸಾಧ್ಯವಾಗಬೇಕು. ನಂತರ ಸಮಯ ಬಂದಾಗ ಈ ವ್ಯವಸ್ಥಿತ ಸಂಘಟನೆಯು ಸತ್ಯ ಹರಡಿ ಅಲ್ಲಾಹನ ವಚನವನ್ನು ಪ್ರಬಲಗೊಳಿಸಲಿಕ್ಕಾಗಿ ಅಲ್ಲಾಹನ ವಿರುದ್ಧ ಎದ್ದವರೊಂದಿಗೆ ಜಿಹಾದ್ (ಹೋರಾಟ) ಮಾಡಬೇಕಾಗಿ ಬಂದರೆ ಅದಕ್ಕೂ ಅಣಿಯಾಗ ಯಾವ ಸತ್ಯವನ್ನು ಅವರು ಸ್ವೀಕರಿಸಿರುವರೋ ಆ ಸತ್ಯವನ್ನು ಪ್ರಬಲಗೊಳಿಸಲಿ ಪ್ರಾಣತ್ಯಾಗವನ್ನೂ ಮಾಡಿ ತನ್ನನ್ನು ಸತ್ಯದ ನೈಜ ಸಾಕ್ಷ್ಯ ನೀಡುವವನೆಂದು ಸಾ ಪಡಿಸಬೇಕು.

2) ಸಂಘಟನೆಯಿಂದ ಹೊರಗಿರುವುದು ಇಸ್ಲಾಮಿನಿಂದ ಹೊರಗಿರುವುದಕ್ಕೆ ಸಮಾನವ

3) ಇಸ್ಲಾಮಿನ ಅನೇಕ ಕೆಲಸಗಳು ಸಂಘಟನೆಯೊಂದಿಗಿದ್ದರೆ ಮಾತ್ರ ನೆರವೇರು ಯಾರಾದರೂ ಈ ಕೆಲಸವನ್ನು ಮಾಡದಿದ್ದರೆ ಅವರು ನಮಾಝ್ ನಿರ್ವಹಿಸುವುದು ಉಪವಾಸ ವ್ರತವನ್ನಾಚರಿಸುವುದು ಕೂಡ ಅಲ್ಲಾಹನ ದೃಷ್ಟಿಯಲ್ಲಿ ಸ್ವೀಕಾರಾರ್ಹವಾಗಲಾ ಆದುದರಿಂದಲೇ ಪ್ರವಾದಿವರ್ಯರು(ಸ) ಸಂಘಟನೆಯಿಂದ ಹೊರಗೆ ಹೋದ ವ್ಯಕ್ತಿ ಇಸ್ಲಾಮಿನಿಂದ ಹೊರಗೆ ಹೋದಂತಾಗುತ್ತದೆ ಮತ್ತು ಅವನ ನಮಾಝ್, ಉಪವಾಸ ಹಾಗೂ ವಿಶ್ವಾಸದ ಪ್ರಕಟನೆಗಳೆಲ್ಲವೂ ನಿಷ್ಫಲವಾಗುತ್ತದೆ.

"ಸಂಘಟನೆಯನ್ನು ತೊರೆದರೆ ಇಸ್ಲಾಮನ್ನೇ ತೊರೆದಂತೆ" ಎಂದು ಹೇಳಲಾ ಹಾಗಾದರೆ ಈ 'ಸಂಘಟನೆ' ಎಂಬುದರ ತಾತ್ಪರ್ಯವೇನು? ದುರದೃಷ್ಟವಶಾತ್ ಇ ಅಂತಹ 'ಸಂಘಟನೆ' ಅಸ್ತಿತ್ವದಲ್ಲಿಲ್ಲ. 'ಅಲ್ ಜಮಾಅತ್' ಅಥವಾ 'ಸಂಘಟನೆ'ಯೆ ನೈಜ ಇಸ್ಲಾಮೀ ಆಡಳಿತ ವ್ಯವಸ್ಥೆಯಿದ್ದು ಎಲ್ಲಾ ಮುಸ್ಲಿಮರ ಖಲೀಫರಾಗಿರುವ ಆಡಳಿತಗಾರನಿರಬೇಕು. ಅವರು ಕೇವಲ ಅಲ್ಲಾಹನ ಆದೇಶಗಳ ಆಧಾರದಲ್ಲಿ ಆಡಳಿತ ನಡೆಸುತ್ತಿರಬೇಕು. ಇಂದು ಜಗತ್ತಿನಲ್ಲಿ ಕೋಟಿಗಟ್ಟಲೆ ಮುಸ್ಲಿಮರಿದ್ದಾರೆ. ಆದರೆ ಯಾ ದೇಶದಲ್ಲಿ ಇಂದು ಇಸ್ಲಾಮೀ ಆಡಳಿತ ವ್ಯವಸ್ಥೆ ಸ್ಥಾಪಿತವಾಗಿಲ್ಲ. ನಮ್ಮ ದೇಶ ನೋಡೋಣ- ಇದರ ಒಂದು ಭಾಗವಾದ ಪಾಕಿಸ್ತಾನದಲ್ಲಿ ಮುಸ್ಲಿಮರು ಬಹುಸಂಖ್ಯೆಯಲ್ಲಿ ದೇಶದ ಆಡಳಿತ ಅವರ ಕೈಯಲ್ಲಿದೆ. ಅವರು ಸ್ವತಂತ್ರವಾಗಿ ವ್ಯವಹರಿಸಬಲ್ಲರು. ಈ ವರೆಗೂ ಅಲ್ಲಿ ಇಸ್ಲಾಮೀ ಆಡಳಿತ ವ್ಯವಸ್ಥೆಯು ಜಾರಿಯಾಗಿಲ್ಲ. ಇನ್ನು ಭಾರತವೆ ಕರೆಯಲ್ಪಡುವ ಈ ಭಾಗದಲ್ಲಿ ಇಸ್ಲಾಮೀ ವ್ಯವಸ್ಥೆಯ ಹೆಸರನ್ನೂ ಕೇಳಿರದ ಮುಸ್ಲಿಮರಿ

ುವಾಗ ಅಲ್ಲಾಹನು ಮತ್ತು ಆತನ ಸಂದೇಶವಾಹಕರು ಯಾವ ಸಂಘಟನೆಯನ್ನು
ನರೆ ನೀವು ಇಸ್ಲಾಮನ್ನು ತೊರೆದಂತಾಗುತ್ತದೆಂದು ಹೇಳಿದ್ದಾರೋ ಅಂತಹ ಸಂಘಟನೆಯು
ದು ಎಂದು ಹೇಳಿಕೊಳ್ಳುವ ಹಕ್ಕು ಯಾವ ಸಂಘಟನೆಗೂ ಇಲ್ಲ. ಆದರೆ ಇಂತಹ
ಟನೆಯು ಅಸ್ತಿತ್ವದಲ್ಲಿಲ್ಲದಿದ್ದರೆ ಮುಸ್ಲಿಮರ ಜವಾಬ್ದಾರಿಕೆಗಳು ಇನ್ನಷ್ಟು ಹೆಚ್ಚಾಗುತ್ತದೆ.
ದ ಸೇವೆಯ ಕರ್ತವ್ಯವು ಅವರ ಮೇಲೆ ಇನ್ನಷ್ಟು ತೀವ್ರವಾಗಿ ಅನ್ವಯವಾಗುತ್ತದೆ.
ಇಂತಹ ಸ್ಥಿತಿಯಲ್ಲಿ ಮಾಡಬೇಕಾದುದೇನು? ಇದಕ್ಕೆ ಇರುವುದು ಒಂದೇ ಮಾರ್ಗ.
ದ ಸೇವೆಯ ಕರ್ತವ್ಯ ನಿಭಾಯಿಸ ಬಯಸುವ ಅಲ್ಲಾಹನ ದಾಸರು, ಪ್ರಥಮವಾಗಿ
ಲಸವನ್ನು ಯಾವುದಾದರೂ ವ್ಯವಸ್ಥಿತ ಸಂಘಟನೆಯು ಮೊದಲೇ ಮಾಡುತ್ತಿದೆಯೇ
ಕಂಡು ಹಿಡಿಯಬೇಕು. ಅಂತಹ ಸಂಘಟನೆ ಕಂಡು ಬಂದರೆ ಅದರ ಕಾರ್ಯ
ಹಣೆಯ ರೀತಿ, ಅದರ ವ್ಯವಸ್ಥೆ ಮತ್ತದರ ತತ್ವಗಳನ್ನು ಶೋಧಿಸಿ ನೋಡಬೇಕು. ಈ
ಕಾರ್ಯಗಳು ಇಸ್ಲಾಮಿ ಬೋಧನೆಯ ಪ್ರಕಾರವಾಗಿದ್ದರೆ ಆ ಸಂಘಟನೆಯೊಂದಿಗೆ
ಕೆಲಸವನ್ನು ಮಾಡಬೇಕು ಮತ್ತು ತನ್ನನ್ನು ಸಂಘಟನೆಯ ವ್ಯವಸ್ಥೆಗೆ ಒಪ್ಪಿಸಿ ಬಿಡಬೇಕು.
ಂತರ ಅಲ್ಲಾಹನ ಗ್ರಂಥ ಮತ್ತು ಆತನ ಸಂದೇಶವಾಹಕರ ಚರ್ಯೆಗೆ ಬದ್ಧವಾದ
ಹೊಂದು ಕೆಲಸದಲ್ಲೂ ಆ ಸಂಘಟನೆಯೊಂದಿಗೆ ಸಹಕರಿಸಬೇಕು. ಒಂದು ವೇಳೆ
ಹ ಒಂದು ಸಂಘಟನೆಯು ಕಂಡು ಬರದಿದ್ದರೆ ಧರ್ಮದ ಸೇವೆ ಮಾಡಬಯಸುವ
ಹನ ದಾಸರೆಲ್ಲರೂ ಪರಸ್ಪರ ಒಟ್ಟು ಸೇರಿ, ಒಂದು ವ್ಯವಸ್ಥಿತ ಸಂಘಟನೆಯನ್ನು ಸ್ಥಾಪಿಸಿ
ಮಾಡಬೇಕಾಗಿದೆ.

ಧರ್ಮದ ಸೇವೆಗಾಗಿ ಸ್ಥಾಪಿಸಲ್ಪಟ್ಟ ಸಂಘಟನೆಗಳಲ್ಲಿ ಕೆಲವು ವಿಶೇಷತೆಗಳಿರಬೇಕು.
ಇಂದು ದಿನಕ್ಕೊಂದರಂತೆ ತಲೆ ಎತ್ತುವಂತಹ ಸಂಘಟನೆಗಳ ಸ್ವರೂಪದಲ್ಲಿರಬಾರದು-

1) ಪ್ರಪ್ರಥಮವಾಗಿ ಇಂತಹ ಇಸ್ಲಾಮಿ ಸಂಘಟನೆಯ ಬುನಾದಿಯು ಯಾವುದೇ
ಂಗ ಅಥವಾ ರಾಷ್ಟ್ರದ ಆಧಾರದಲ್ಲಿರುವ ಬದಲಾಗಿ ಕೇವಲ ಪರಿಶುದ್ಧವಾದ ತತ್ವಗಳ
ದಲ್ಲಿರಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ ಇದು ಯಾವುದಾದರೊಂದು
ಷ್ಟ ಜನಾಂಗದ ಅಥವಾ ರಾಷ್ಟ್ರದ ಜನರ ಸಂಘಟನೆಯಾಗಿರಬಾರದು. ಉದಾಹರಣೆಗೆ
ಮಿ ಸಂಘಟನೆ ಎಂದ ಮಾತ್ರಕ್ಕೆ ಮುಸ್ಲಿಮ್ ಸಮುದಾಯದ ಪ್ರತಿಯೊಬ್ಬನೂ ಈ
ಟನೆಯಲ್ಲಿ ಶಾಮಿಲಾಗಿರುವನು ಎಂದು ಭಾವಿಸಲಾಗುವುದಿಲ್ಲ. ವಾಸ್ತವದಲ್ಲಿ ಎಲ್ಲಾ
ಮರನ್ನೊಳಗೊಂಡ ಸಂಘಟನೆಯೇ ಇಸ್ಲಾಮಿ ಸಂಘಟನೆಯಾಗಿರಬೇಕು. ಆದರೆ
ಎಲ್ಲ ಮುಸ್ಲಿಮರ ಜೀವನವು ಇಸ್ಲಾಮಿ ತತ್ವಗಳಿಗನುಸಾರವಾಗಿಲ್ಲ ಎಂಬುದು
ಷ್ಟಕರ. ಆದುದರಿಂದ ಯಾವುದೇ ವ್ಯಕ್ತಿ ಅವನು ಮುಸ್ಲಿಮನೇ ಆಗಿದ್ದರೂ, ಧರ್ಮದ
ನೆಗಳ ಪ್ರಕಾರ ನಡೆಯುವ ಪಣ ತೊಡುವ ಮತ್ತು ಧರ್ಮದ ಸೇವೆಯನ್ನು ತನ್ನ
ದ ಉದ್ದೇಶವಾಗಿಸುವ ವರೆಗೆ ಈ ಸಂಘಟನೆಯಲ್ಲಿ ಸೇರಲು ಸಾಧ್ಯವಿಲ್ಲ.

2) ಈ ಸಂಘಟನೆಗೆ ಧರ್ಮದ ಸೇವೆ ಮತ್ತು ಧರ್ಮದ ಪ್ರಚಾರದ ಹೊರತು ಇನ್ನಾವ
ಶವೂ ಇರಕೂಡದು. ಮುಸ್ಲಿಮರ ಸಾಮುದಾಯಿಕ ಹಕ್ಕುಗಳು, ಯಾವುದೇ ಪ್ರತ್ಯೇಕ

ಭಾಷೆಯ ರಕ್ಷಣೆ, ವ್ಯಾಪಾರ ಮತ್ತು ಹುದ್ದೆಗಳಿಗಾಗಿ ಹೋರಾಟ ಮೊದಲಾದ ಕೆಲಸಗಳೊ ಅದಕ್ಕೆ ಯಾವ ಸಂಬಂಧವೂ ಇರಬಾರದು. ಈ ಕೆಲಸಗಳಲ್ಲಿ ಸಂಘಟನೆಯು ಸಮಯವನ್ನು ವ್ಯಯಿಸಬಾರದು.

3) ಈ ಸಂಘಟನೆಯು ಇಸ್ಲಾಮೇತರ ರಾಜಕೀಯದಲ್ಲಿ ಭಾಗವಹಿಸಬಾರದು ಜನರಿಗೆ ಪ್ರಚಲಿತ ರಾಜಕೀಯದ ಸರಿಯಾದ ಅರ್ಥವನ್ನು ತಿಳಿಸಬೇಕು. ಈ ರಾಜಕೀಯದೊ ಇಸ್ಲಾಮಿಗೆ ಯಾವ ಸಂಬಂಧವೂ ಇಲ್ಲ. ಮಾತ್ರವಲ್ಲ ಇಂದಿನ ಕೊಳಕು ರಾಜಕೀಯ ಭಾಗವಿಸುವುದು ಇಸ್ಲಾಮಿನೊಂದಿಗೆ ವೈರತ್ವ ತೋರುವುದಕ್ಕೆ ಸಮಾನವೆಂದು ಜ ತಿಳಿಸಬೇಕು.

4) ಈ ಸಂಘಟನೆಯು ಜೀವನದ ಎಲ್ಲಾ ರಂಗಗಳಲ್ಲಿಯೂ ಇಸ್ಲಾಮಿನ ಬೋಧನೆ ಜನರ ಮುಂದಿರಿಸಬೇಕು. ಪ್ರಾಯೋಗಿಕವಾಗಿ ಮಾಡಿ ತೋರಿಸಲು ಸಾಧ್ಯವಾದ ಕೆಲಸಗ ಮಾಡಿ ತೋರಿಸಬೇಕು ಮತ್ತು ಕಾರ್ಯತಃ ಮಾಡಿ ತೋರಿಸಲಾಗದ ಕೆಲಸಗಳ ಬಗ್ಗೆ ಕನಿಷ ಆ ಕುರಿತು ಇಸ್ಲಾಮಿನ ಬೋಧನೆಯೇನೆಂದು ಜನರಿಗೆ ತಿಳಿಯಪಡಿಸಬೇಕು. ಈ ಸಂಘಟ ಕನಿಷ್ಠ ಪಕ್ಷ ಇಸ್ಲಾಮಿನ ಸಂಪೂರ್ಣ ಅನುಸರಣೆಯನ್ನು ಮಾಡಲು ಅಡ್ಡಿಯಾ ಪರಿಸ್ಥಿತಿಯನ್ನು ಆದಷ್ಟು ಬೇಗ ಬದಲಾಯಿಸುವ ಆವೇಶವನ್ನು ಜನರ ಮನದಲ್ಲಿ ಮೂಡಿ ಪ್ರಯತ್ನಿಸಬೇಕು.

5) ಈ ಸಂಘಟನೆಗೆ ಸೇರುವವರು ಅಲ್ಲಾಹನ ನಿಯಮಗಳಿಗನುಸಾರವಾಗಿ ನಡೆಸ ಯಾವುದೇ ಸರಕಾರದಲ್ಲಿ ಯಾವ ರೀತಿಯಲ್ಲೂ ಭಾಗವಹಿಸಬಾರದು. ಈ ಸರಕಾರ ನಡೆಸುವವರು ಮುಸ್ಲಿಮರಾಗಿದ್ದರೂ ಸರಿಯೇ. ಅವರ ದೃಷ್ಟಿಯಲ್ಲಿ ಎಲ್ಲಾ ಇಸ್ಲಾವ ಸರಕಾರ ಮತ್ತು ದೇವೇತರ ಕಾನೂನು ಮಿಥ್ಯವಾಗಿರಬೇಕು ಮತ್ತು ಅವರು ಅ ಬೆಂಬಲಿಸುವವರಾಗಿರದೆ ವಿರೋಧಿಸುವವರಾಗಿರಬೇಕು.

6) ಈ ಸಂಘಟನೆಗೆ ಸೇರಿದವರು ಸಾಧ್ಯವಿದ್ದಷ್ಟು ಇಸ್ಲಾಮಿ ಬೋಧನೆಗಳಿಗನುಸಾ ಜೀವನ ಸಾಗಿಸಲು ಪ್ರಯತ್ನಿಸಬೇಕು. ಸಂಘಟನೆಯು ಅವರ ಕೆಲಸಗಳ ಮೇಲ್ವಿಚ ನಡೆಸಬೇಕು ಮತ್ತು ನಿರಂತರ ಅವರ ತರಬೇತಿ ಮಾಡುತ್ತಿರಬೇಕು.

ವ್ಯವಸ್ಥಿತವಾಗಿ ಧರ್ಮದ ಸೇವೆ ಮಾಡಬೇಕಾದರೆ ಪ್ರಥಮವಾಗಿ ಕಾರ್ಯಕರ್ತರೇ ಸೇರಿ ಸಂಘಟಿತವಾಗಿ ಕಾರ್ಯ ನಿರ್ವಹಿಸಬೇಕು. ಇಸ್ಲಾಮ್ ಸಂಘಟಿತ ಜೀವನಕ್ಕೆ ಹೆಚ್ಚು ಮಹತ್ವ ನೀಡುವ ಧರ್ಮವಾಗಿದೆ. ಧರ್ಮದ ಯಾವ ಕೆಲಸವೂ ಈ ಸಂಘ ಹೊರತಾಗಿಲ್ಲ. ನಮಾಝ್ ಮಾಡುವಾಗ ಸಂಘಟಿತವಾಗಿ ನಿರ್ವಹಿಸಲಾಗುತ್ತದೆ ಒಬ್ಬರು ಅದರ ನಾಯಕನಾಗಬೇಕಾಗುತ್ತದೆ. ಹಜ್ಜ್ ನಿರ್ವಹಿಸುವಾಗಲೂ ಎಲ್ಲರೂ ಸೇರಿ ಮಾಡಬೇಕು ಮತ್ತು ಒಬ್ಬನು ಅದರ ನಾಯಕನಾಗಿರಬೇಕು. ಎಲ್ಲಿಯವರೆಗೆ ಮೂವರು ಪ್ರಯಾಣ ಮಾಡುತ್ತಿದ್ದರೆ ಅವರಲ್ಲಿ ಒಬ್ಬರನ್ನು ನಾಯಕನಾಗಿ ಆಯ್ಕೆ ವ್ಯವಸ್ಥಿತವಾಗಿ ಪ್ರಯಾಣ ಮಾಡಬೇಕು. ಪ್ರವಾದಿವರ್ಯರು(ಸ) ಹೇಳಿರುತ್ತಾರೆ,

"ಒಂದು ಕಾಡಿನಲ್ಲಿ ಮೂವರಿದ್ದರೆ ತಮ್ಮ ಪೈಕಿ ಓರ್ವನನ್ನು ತಮ್ಮ ನಾಯ

ಡದಿರುವುದು ಅವರಿಗೆ ಧರ್ಮಸಮ್ಮತವಲ್ಲ."

ಇಸ್ಲಾಮ್ ಯಾವ ಸ್ಥಿತಿಯಲ್ಲೂ ಮುಸ್ಲಿಮರನ್ನು ಸಂಘಟನೆಯ ವಿನಾ ಬಯಸುವುದಿಲ್ಲವೆಂದು ಇದರಿಂದ ತಿಳಿದು ಬರುತ್ತದೆ. ಹ. ಉಮರ್‌ರವರು(ರ) ಿರುವರು,

"ಸಂಘಟನೆಯ ವಿನಾ ಇಸ್ಲಾಮ್ ಇಲ್ಲ, ನಾಯಕನಿಲ್ಲದೆ ಸಂಘಟನೆ ಇಲ್ಲ, ಸರಣೆಯಿಲ್ಲದೆ ನಾಯಕತ್ವವಿಲ್ಲ."

ಅರ್ಥಾತ್ ಇಸ್ಲಾಮಿನ ಪೂರ್ಣತೆಗಾಗಿ ಮುಸ್ಲಿಮರೆಲ್ಲರೂ ಒಂದು ಸಂಘಟನೆಯಾಗಿ ಕ ಮಾಡಬೇಕಾದುದು ಅತ್ಯವಶ್ಯಕವಾಗಿದೆ. ಅವರ ಪೈಕಿ ಓರ್ವನು ನಾಯಕನಾಗಿದ್ದು ರೂ ದೇವಾದೇಶಗಳಿಗೆ ಬದ್ಧವಾಗಿದ್ದುಕೊಂಡು ನಾಯಕನ ಸಂಪೂರ್ಣ ಅನುಸರಣೆಯನ್ನು ಡಬೇಕಾಗಿದೆ.

2. ಸಹನೆ ಮತ್ತು ದೃಢ ಚಿತ್ತತೆ

ಲೋಕದಲ್ಲಿ ಸಹನೆ ಮತ್ತು ತಾಳ್ಮೆ ಇಲ್ಲದ ಜನರು ಯಾವ ಶ್ರೇಷ್ಠ ಕೆಲಸವನ್ನೂ ಡಲು ಇದುವರೆಗೂ ಸಮರ್ಥರಾಗಿಲ್ಲ. ಧರ್ಮದ ಸೇವೆಗಾಗಿ ಬಹಳ ಹೆಚ್ಚು ಸಹನೆ ತ್ತು ಸ್ಥೈರ್ಯದ ಆವಶ್ಯಕತೆಯಿದೆ. ಒಬ್ಬ ವ್ಯಕ್ತಿಯಲ್ಲಿ ಸಹನಾಶಕ್ತಿ ಎಷ್ಟು ಹೆಚ್ಚಿರುತ್ತದೋ ್ಟೇ ಹೆಚ್ಚು ಧರ್ಮದ ಸೇವೆಯನ್ನು ಅವನು ಮಾಡಬಲ್ಲನು.

'ಸಹನೆ' ಎಂಬ ಪದವನ್ನು ಕೇಳಿದಾಗಲೆಲ್ಲ ಸಾಮಾನ್ಯವಾಗಿ ನಮ್ಮ ಮುಂದೆ ಬರುವ ಣವೇನೆಂದರೆ, ವ್ಯಕ್ತಿ ಕಷ್ಟಗಳು ಬಂದೊದಗಿದಾಗ ಗೋಳು ಹೊಯ್ದುಕೊಳ್ಳದೆ ಅದನ್ನು ್ಮೆಯೊಂದಿಗೆ ಸಹಿಸಿಕೊಳ್ಳಬೇಕು. ಆದರೆ ಧರ್ಮದ ಕುರಿತು ಆ ಪದವನ್ನು ಹೇಳುವಾಗ ರ ಅರ್ಥವು ಇದಕ್ಕಿಂತ ಭಿನ್ನವಾಗಿದೆ. ಪವಿತ್ರ ಕುರ್‌ಆನಿನಲ್ಲಿ ಈ ಪದವನ್ನು ಅನೇಕ ಗಳಲ್ಲಿ ಬಳಸಲಾಗಿದೆ. ಕುರ್‌ಆನನ್ನು ಸರಿಯಾಗಿ ಅಭ್ಯಸಿಸಿದರೆ ಒಬ್ಬ ಸತ್ಯ ವಿಶ್ವಾಸಿಯಾದ ನನು ಯಾವ ಅವಸ್ಥೆಯಲ್ಲಿದ್ದರೂ ಧರ್ಮದ ಬೇಡಿಕೆಗಳನ್ನು ಸರಿಯಾಗಿ ಪೂರ್ತೀಕರಿಸಬೇಕು ಬುದೇ ಸಹನೆಯ ಅರ್ಥವೆಂದು ತಿಳಿಯುತ್ತದೆ. ಆತನ ಮನಸ್ಸು ಏನನ್ನೇ ಬಯಸುತ್ತಿರಲಿ, ನ ಮನೆಯವರ ಇಚ್ಛೆ ಏನೇ ಆಗಿರಲಿ, ಆತನ ಪರಿವಾರ ಮತ್ತು ನಗರ ವಾಸಿಗಳ ಆಗ್ರಹ ೇ ಇರಲಿ, ಸಮಾಜದ ರೀತಿ- ರಿವಾಜು ಮತ್ತು ದೇಶದ, ಸರಕಾರದ ಒತ್ತಡ ಹೇಗೇ ಲಿ, ಆತನು ಎಲ್ಲವನ್ನೂ ಸಹಿಸಬೇಕು ಮತ್ತು ಯಾವ ಶಕ್ತಿಯೂ ಅವನನ್ನು ಧರ್ಮದ ರ್ಗದಿಂದ ದೂರ ಸರಿಸಬಾರದು.

ಧರ್ಮದ ಸೇವೆಗಾಗಿ ಈ ಗುಣವು ಎಷ್ಟು ಆವಶ್ಯಕವೆಂದರೆ ಎಲ್ಲಾ ಕಾಲಗಳಲ್ಲಿಯೂ ತನ್ನು ಹರಡುವವರಿಗೆ ಮತ್ತು ಸತ್ಯಪ್ರಚಾರಕರಿಗೆ ಈ ಗುಣದ ಬಗ್ಗೆ ಒತ್ತು ಕೊಟ್ಟು ೇತನ್ನು ಮಾಡಲಾಗಿತ್ತು. ಪವಿತ್ರ ಕುರ್‌ಆನಿನಲ್ಲಿರುವ ಪ್ರವಾದಿಗಳ ವೃತ್ತಾಂತಗಳಲ್ಲಿ ರಿಗೂ ಅವರ ಅನುಯಾಯಿಗಳಿಗೂ ಸಹನೆಯ ಉಪದೇಶವನ್ನು ಪದೇ ಪದೇ ಕಲಾಗಿದೆ. ಸ್ವತಃ ಪ್ರವಾದಿ ಮುಹಮ್ಮದ್‌ರಿಗೆ(ಸ) ಆರಂಭದಲ್ಲೇ ಸಹನೆಯ ಬೋಧನೆಯನ್ನು

ನೀಡಲಾಗಿತ್ತು. ಪ್ರವಾದಿತ್ವದ ಕೆಲವೇ ದಿನಗಳ ನಂತರ ಸೂರಃ ಮುದ್ದಸ್ಸಿರ್ ಅವತೀರ್ಣವಾ
ಅದರಲ್ಲಿ ಹೀಗೆ ಹೇಳಲಾಗಿದೆ,

"ಮತ್ತು ನಿಮ್ಮ ಪ್ರಭುವಿಗಾಗಿ ತಾಳ್ಮೆ ವಹಿಸಿರಿ." (ಸೂರಃ ಅಲ್ ಮುದ್ದಸ್ಸಿರ್ - 7)

بِّكَ فَاصْبِرْ

ತದನಂತರ ಸೂರಃ ಮುಝ್ಝಮ್ಮಿಲ್‌ನಲ್ಲಿ ಹೀಗೆ ಹೇಳಲಾಗಿದೆ,

"ಮತ್ತು ಜನರು ಆಡುತ್ತಿರುವ ಮಾತುಗಳ ಬಗ್ಗೆ ತಾಳ್ಮೆ ವಹಿಸಿರಿ ಮತ್ತು ಸಭ್ಯ ರೀತಿಯಲ್ಲಿ ಅವರಿಂದ ಬೇರ್ಪಡಿರಿ".

(ಸೂರಃ ಅಲ್ ಮುಝ್ಝಮ್ಮಿಲ್ -10)

هْبِرْ عَلَىٰ مَا
لُوْنَ وَاهْجُرْهُمْ
جْرًا جَمِيْلًا

ಕೆಲವರು ಪ್ರವಾದಿವರ್ಯರ(ಸ) ಅನುಯಾಯಿಗಳಾಗಿ ಮಾರ್ಪಟ್ಟು, ಸತ್ಯನಿಷೇ
ಅಕ್ರಮಗಳನ್ನು ತಾಳಿಕೊಳ್ಳಲು ಪ್ರವಾದಿಯವರೊಂದಿಗೆ(ಸ) ಮುಸ್ಲಿಮರ ಒಂದು ಸಣ್ಣ ಗು
ಸಿದ್ಧವಾದಾಗಲೂ ಕೂಡಾ ಆ ಬೆರಳೆಣಿಕೆಯಷ್ಟು ದೇವಭಕ್ತರನ್ನು ಸಂಪೂರ್ಣ ಅರಬ್ ದೇ
ಸತ್ಯನಿಷೇಧಿಗಳು ಮತ್ತು ಬಹುದೇವಾರಾಧಕರ ವಿರುದ್ಧ ಅಣಿಗೊಳಿಸಲು ನೀಡ
ಬೋಧನೆ- ಸಹನೆಯ ಬೋಧನೆಯಾಗಿತ್ತು. ಪವಿತ್ರ ಕುರ್‌ಆನ್ ಹೇಳುತ್ತದೆ,

"ಓ ಸತ್ಯ ವಿಶ್ವಾಸಿಗಳೇ, ಸಬ್ರ್ (ಸಹನೆ) ಮತ್ತು ನಮಾಝಿನಿಂದ ಸಹಾಯ ಪಡೆಯಿರಿ. ನಿಶ್ಚಯವಾಗಿಯೂ ಅಲ್ಲಾಹ್ ಸಹನಶೀಲರೊಂದಿಗಿದ್ದಾನೆ."

(ಸೂರಃ ಅಲ್‌ಬಕರ- 153)

اَيُّهَا الَّذِيْنَ اٰمَنُوا
سْتَعِيْنُوْا بِالصَّبْرِ
الصَّلٰوةِ ۚ اِنَّ اللّٰهَ
الصّٰبِرِيْنَ

ಇಂತಹ ಅನೇಕ ಉಪದೇಶಗಳು ಪವಿತ್ರ ಕುರ್‌ಆನಿನಲ್ಲಿದೆ. ಎಂತೆಂತಹ
ಪರಿಸ್ಥಿತಿಯಲ್ಲಿ ತಾಳ್ಮೆ ವಹಿಸುವ ಉಪದೇಶ ನೀಡಲಾಗಿದೆಯೆಂದರೆ, ಸತ್ಯ ವಿಶ್ವಾ
ಸಂಪೂರ್ಣ ಶಕ್ತಿ ಸಾಮರ್ಥ್ಯಗಳೇ ಈ ತಾಳ್ಮೆಯಲ್ಲಿ ಅಡಕವಾಗಿದೆ ಎಂದು ಇದರಿಂದ ತಿ
ಬರುತ್ತದೆ. "ಅಲ್ಲಾಹನು ತಾಳ್ಮೆ ವಹಿಸುವವರೊಂದಿಗಿದ್ದಾನೆ" ಎಂದು ಜಗದೊಡೆಯ
ಪರಿಪಾಲಕನೂ ಆದ ಅಲ್ಲಾಹನು ಆಶ್ವಾಸನೆ ನೀಡಿರುವಾಗ ಸತ್ಯವಿಶ್ವಾಸಿಯು ಸಕಲ ಶಕ್ತಿ
ವಿರುದ್ಧ ತನ್ನ ಸಹನಾ ಶಕ್ತಿಯನ್ನು ಉಪಯೋಗಿಸಬಾರದೇಕೆ? ವಿರೋಧಿಗಳ ಅಕ್ರಮ
ಸಹಿಸಬೇಕಾದಾಗ ಈ ಸಹನೆಯೇ ಸತ್ಯವಿಶ್ವಾಸಿಗಳಲ್ಲಿ ಧೈರ್ಯವನ್ನು ತುಂಬುತ್ತದೆ ವ
ಅಸತ್ಯದೆದುರು ಹೋರಾಡಬೇಕಾಗಿ ಬಂದಾಗಲೂ ಸತ್ಯವಿಶ್ವಾಸಿಯ ಪರಿಣಾಮಕಾರಿಯಾದ
ಸಹನೆಯೇ ಆಗಿದೆ. ಸಹನೆ ಇಹಲೋಕದಲ್ಲಿ ಧರ್ಮದ ಸೇವೆಯ ಮಾರ್ಗದಲ್ಲಿ ಪ್ರಯೋಜನ
ಮಾತ್ರವಲ್ಲ, ಪರಲೋಕಕ್ಕೂ ಇದುವೇ ಅತ್ಯುತ್ತಮ ಬುತ್ತಿಯಾಗಿದೆ. ಈ ಸಹನೆಯಿಂ

ೋಕದ ಸ್ಥಾನವನ್ನು ಅಳೆಯಲಾಗುವುದು. ಅಲ್ಲಾಹನು ಹೇಳುತ್ತಾನೆ,

إِنِّي جَزَيْتُهُمُ الْيَوْمَ بِمَا صَبَرُوا أَنَّهُمْ هُمُ الْفَائِزُونَ -

"ಇಂದು ನಾನು ಅವರ ಸಹನೆಗೆ ಕೊಟ್ಟ
ೇನೆಂದರೆ ಅವರೇ ಯಶಸ್ವಿಗಳಾಗಿದ್ದಾರೆ".
(ಸೂರಃ ಅಲ್ ಮೂಮಿನೂನ್ - 11)

ಸೂರಃ ಅರ್‍ರಅದ್‌ನಲ್ಲಿ ಒಂದೆಡೆ ಸಹನೆ ಕೈಗೊಳ್ಳುವವರಿಗಾಗಿ ಪರಲೋಕದಲ್ಲಿರುವ ಗ್ರಹಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಆ ವಿಷಯವನ್ನು ಮುಗಿಸುತ್ತಾ ಅವರೊಡನೆ ಹೇಳಲಾಗಿದೆ,

سَلَامٌ عَلَيْكُمْ بِمَا صَبَرْتُمْ فَنِعْمَ عُقْبَى الدَّارِ ه

"ನಿಮಗೆ ರಕ್ಷಣೆ ಇರಲಿ, ನೀವು
ಲೋಕದಲ್ಲಿ) ಸಹನೆಯಿಂದ ವರ್ತಿಸಿದ್ದುದರ
ಾಗಿ ಇಂದು ಇದಕ್ಕೆ ಅರ್ಹರಾಗಿರುತ್ತೀರಿ"
ು ಹೇಳುವರು. ಪರಲೋಕ ಗೃಹವು
ಷ್ಟು ಉತ್ತಮ". (ಸೂರಃ ಅರ್‍ರಅದ್ - 24)

ಹಾಗಿರುವಾಗ ಸಹನೆ ಎಷ್ಟೊಂದು ಹಿರಿಯ ಅನುಗ್ರಹವೆಂದು ಆಲೋಚಿಸಿ ನೋಡಿ. ವಹಿಸುವವರಿಗೆ ಸರ್ವಲೋಕಗಳ ಒಡೆಯನೇ ಸ್ವತಃ ಅಭಿನಂದನೆಗಳನ್ನು ಕಳುಹಿಸುತ್ತಿದ್ದಾನೆ ು ಪರಲೋಕದಲ್ಲಿ ಎಲ್ಲ ವಾಸಸ್ಥಳಗಳಿಗಿಂತ ಉತ್ತಮವಾದ ವಾಸಸ್ಥಳವನ್ನು ನೀಡುತ್ತಿದ್ದಾನೆ. ು ನಂತರ ಕೂಡಾ ಇನ್ನಾವುದಾದರೂ ಅಭಿಲಾಷೆ ಬಾಕಿ ಉಳಿಯುವುದೇ? ಈ ಾಮುನ್ ಅಲೈಕುಮ್'' (ನಿಮಗೆ ಅಭಿನಂದನೆಗಳಿವೆ) ಎಂಬುದರ ಸವಿಯನ್ನೊಮ್ಮೆ ನೋಡಿ. ಸಹನೆಗೆ ಪ್ರತಿಫಲವಾಗಿ ಸಿಗುವ ಈ ಫಲವು ಅದೆಷ್ಟು ರೋಚಕವಾಗಿದೆ. ರುವಾಗ ಸಹನೆಯ ಅರೋಚಕತೆಯ ಬಗ್ಗೆ ಮರುಗುವುದು ಸರಿಯಾದೀತೇ?

ಧರ್ಮದಲ್ಲಿ ಸಹನೆಗೆ ಅಪಾರವಾದ ಪ್ರಾಧಾನ್ಯವಿದೆ. ವಾಸ್ತವದಲ್ಲಿ ಸಹನೆ ಒಂದು ಲ್ಲಾಗಿದೆ. ಧರ್ಮವನ್ನು ಅದರ ಮೂಲಕವೇ ಒರೆಗೆ ಹಚ್ಚಿ ನೋಡಬಹುದಾಗಿದೆ. ಹನು ಸದಾ ತನ್ನ ಸತ್ಯವಿಶ್ವಾಸಿ ದಾಸರನ್ನು ಈ ಒರೆಗಲ್ಲಿನಿಂದಲೇ ಪರೀಕ್ಷಿಸಿದ್ದಾನೆ. ನೋಡುವುದಾದರೆ ಈ ಲೋಕದಲ್ಲಿ ಕಷ್ಟಗಳಿಲ್ಲದ ಯಾವ ಕೆಲಸವೂ ಇಲ್ಲ. ಆದರೆ ೆಡೆ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಾಗ ಇನ್ನೊಂದೆಡೆ ಅದಕ್ಕೆ ಧೈರ್ಯ ುವ ವಸ್ತು ಕೂಡಾ ಇರುತ್ತದೆ.

ಸಂಕಷ್ಟಗಳನ್ನು ಸಹಿಸಿದ ನಂತರ ಕೆಲವೊಮ್ಮೆ ಹಣ ದೊರಕುತ್ತದೆ, ಕೆಲವೊಮ್ಮೆ ಷ್ಠಿ ಸಿಗುತ್ತದೆ, ಮತ್ತೆ ಕೆಲವೊಮ್ಮೆ ಗೌರವ ಮತ್ತು ಅಧಿಕಾರ ದೊರಕುತ್ತದೆ. ಕೆಲವು ರ್ಗಳಿಂದ ಜನರು ಪ್ರಸನ್ನರಾಗುತ್ತಾರೆ, ಮತ್ತೆ ಕೆಲವು ಕಷ್ಟದ ಕಾರ್ಯದಿಂದಾಗಿ ರದ ಬಹುಮಾನ ಲಭಿಸುತ್ತದೆ. ಕೆಲವು ಕೆಲಸಗಳಿಂದ ನಮ್ಮ ಮನಸ್ಸು ಸಂತುಷ್ಟಗೊಳ್ಳುತ್ತದೆ,

ಇನ್ನು ಕೆಲವರಿಂದ ಸ್ನೇಹಿತರು ಸಂತುಷ್ಟರಾಗುತ್ತಾರೆ. ಆದರೆ ಧರ್ಮದ ಸೇವೆಯಿಂದ ಪೈಕಿ ಯಾವುದೂ ದೊರಕುವುದಿಲ್ಲ. ಧರ್ಮದ ಸೇವೆಯು ಕೇವಲ ಅಲ್ಲಾಹನ ಸಂತುಷ್ಟಿ ಮಾಡಲಾಗುತ್ತದೆ. ಈ ಕೆಲಸಗಳಲ್ಲಿ ಬೇರೆ ಉದ್ದೇಶವಿದ್ದರೆ ಆ ಕೆಲಸವೇ ನಿಷ್ಫಲವಾಗು: ಪ್ರವಾದಿ(ಸ) ಹೇಳಿರುವರು -

"ಎಲ್ಲಾ ಕೆಲಸಗಳು ಸಂಕಲ್ಪವನ್ನು ಹೊಂದಿಕೊಂಡಿವೆ. ಮಾನವ ಯಾವು ಕಲ್ಪಿಸುತ್ತಾನೋ ಅದೇ ಅವನಿಗೆ ದೊರೆಯುತ್ತದೆ. ಯಾರು ಅಲ್ಲಾಹ್ ಮತ್ತು ಪ್ರವಾದಿಗಾಗಿ ವಲಸೆ ಕೈಗೊಳ್ಳುತ್ತಾನೋ ಅದು ನಿಜಾರ್ಥದಲ್ಲಿ ಅಲ್ಲಾಹನ ವ ಪ್ರವಾದಿಗಾಗಿ ಮಾಡಲಾದ ವಲಸೆಯಾಗಿರುವುದು. ಯಾರು ಲೋಕದ ಯಾವುದಾ ಗಳಿಕೆಗಾಗಿ ಅಥವಾ ಯಾವುದೇ ಸ್ತ್ರೀಯೊಂದಿಗೆ ವಿವಾಹ ಮಾಡಲಿಕ್ಕಾಗಿ ವಲಸೆ ಕೈಗೊಳ್ಳುತ್ತಾ ಆ ವಲಸೆಯು ಪ್ರಸ್ತುತ ಉದ್ದೇಶಕ್ಕಾಗಿ ಕೈಗೊಳ್ಳಲಾದ ವಲಸೆಯೆಂದು ಪರಿಗಣಿಸಲ್ಪಡುವು

ಧರ್ಮದ ಸೇವೆಯ ಕೆಲಸ ಎಷ್ಟು ಕಷ್ಟಕರವಾದುದೆಂದು ಇದರಿಂದ ತಿಳಿಯಬಹು ಈ ಕೆಲಸಕ್ಕಾಗಿ ಎಲ್ಲಾ ಲಾಭಗಳನ್ನು ಬದಿಗಿರಿಸಿ ಸಂಕಲ್ಪವನ್ನು ಶುದ್ಧೀಕರಿಸುವುದು ಅಗತ್ಯ. ಶುದ್ಧ ಮನಸ್ಸಿನೊಂದಿಗೆ ಅಲ್ಲಾಹನ ಸಂಪ್ರೀತಿಯನ್ನು ಬಯಸಿ ಧರ್ಮದ ಕೆಲಸ ಮಾಡುವುದು ಮತ್ತು ಆ ಮಾರ್ಗದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸುವುದು ಸುಲಭವಲ್ಲ. ಈ ಮಾರ್ಗದಲ್ಲಿ ಸಮಸ್ಯೆಗಳು ಖಂಡಿತವಾಗಿಯೂ ಎದುರಾಗುತ್ತವೆ. ಸಮಸ್ಯೆಗಳು ಬಂದಾಗ ಸಹನೆ ಕೈಗೊಂಡು, ಸತ್ಯಮಾರ್ಗದಲ್ಲಿ ಸ್ಥಿರವಾಗಿ ನಿಲ್ಲುವುದ ಒಬ್ಬ ಸತ್ಯ ವಿಶ್ವಾಸಿಯ ಪರೀಕ್ಷೆ ಇದೆ. ಈ ಪರೀಕ್ಷೆಗಳೇ ಸತ್ಯವಿಶ್ವಾಸಿಯ ಸ್ಥಾನಗ ಉನ್ನತಗೊಳಿಸುತ್ತದೆ. ಈ ಪರೀಕ್ಷೆಗಳ ವಿನಾ ಸತ್ಯ ವಿಶ್ವಾಸದ ಬಗ್ಗೆ ವಾದಿಸುವುದು ವ ಸ್ವರ್ಗದ ಆಗ್ರಹಗಳೆಲ್ಲವೂ ನಿಷ್ಪ್ರಯೋಜಕವಾಗಿದೆ. ಅಲ್ಲಾಹನು ಹೇಳುತ್ತಾನೆ,

"ನೀವು ನಿರಾಯಾಸವಾಗಿ ಸ್ವರ್ಗವನ್ನು ಪ್ರವೇಶಿಸುವಿರೆಂದು ಭಾವಿಸಿರುವಿರಾ? ವಸ್ತುತಃ ನಿಮ್ಮಲ್ಲಿ ಯಾರೆಲ್ಲಾ ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವವರೂ ಅದಕ್ಕಾಗಿ ಸಹನೆ ಪಡುವವರೂ ಇದ್ದಾರೆಂದು ಅವನು ಇನ್ನೂ ಕಾಣಲೇ ಇಲ್ಲ."

(ಸೂರಃ ಆಲಿ ಇಮ್ರಾನ್ - 142)

حَسِبْتُمْ اَنْ تَدْخُلُوا
ةَ وَلَمَّا يَعْلَمِ اللّٰهُ
يْنَ جَاهَدُوْا مِنْكُمْ
لَمَ الصّٰبِرِيْنَ

ಸಹನೆಯು ಸ್ವರ್ಗದ ಕೀಲಿಕೈಯಾಗಿದೆ, ಅಲ್ಲಾಹನ ಸಂಪ್ರೀತಿ ಗಳಿಸುವ ಮಾರ್ಗವ ಮತ್ತು ಧರ್ಮದ ಸೇವೆ ಮಾಡುತ್ತಾ ಲೋಕದಲ್ಲಿ ಅಲ್ಲಾಹನ ವಚನವನ್ನು ಪ್ರಬಲಗೊಳಿ ಬೇಕಾದ ಅತ್ಯವಶ್ಯಕ ಅಸ್ತ್ರವಾಗಿದೆ. ಧರ್ಮದ ಸೇವೆಯ ಸಂದರ್ಭದಲ್ಲಿ ಒಬ್ಬ ವಿಶ್ವಾಸಿಯು ಅನೇಕ ಸಂದರ್ಭಗಳಲ್ಲಿ ತನ್ನ ಸಹನೆ ಮತ್ತು ಸ್ಥೈರ್ಯದ ಸಾಕ್ಷಿ ನೀಡಬೇಕಾಗು ಹೆಜ್ಜೆ ಹೆಜ್ಜೆಗೂ ಈ ಸಾಕ್ಷಿಯನ್ನು ನೀಡಬೇಕಾಗುತ್ತದೆಂದರೂ ತಪ್ಪಾಗಲಾರದು. ಜ

ಿ ಪರಿಹಾಸ್ಯ ಮಾಡುತ್ತಾರೆ, ಅವನ ವಿರುದ್ಧ ಅಲ್ಲ ಸಲ್ಲದ ಮಾತುಗಳನ್ನಾಡುತ್ತಾರೆ, ನ್ನು ಮೂದಲಿಸುತ್ತಾರೆ, ಪೀಡಿಸುತ್ತಾರೆ ಮತ್ತು ಎಲ್ಲಾ ತರಹದ ಆರ್ಥಿಕ ಮತ್ತು ದೈಹಿಕ ಗಳನ್ನು ಮಾಡಲು ಸಿದ್ಧರಾಗಿರುತ್ತಾರೆ. ಈ ಸಂದರ್ಭದಲ್ಲಿ ಸತ್ಯ ಪ್ರಚಾರಕನಿಗೆ ಅದೆಷ್ಟು ಿ ಮತ್ತು ಸ್ಥೈರ್ಯದ ಆವಶ್ಯಕತೆ ಇದೆ ಎಂಬುದನ್ನು ನಾವು ಅಂದಾಜಿಸಬಹುದಾಗಿದೆ. ಕಾಲಗಳಲ್ಲಿಯೂ ಸತ್ಯ ಪ್ರಚಾರಕರು ಇಂತಹ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ್ದರು ಅವರು ಸಹನೆಯ ಶಕ್ತಿಯಿಂದ ಅದನ್ನು ಎದುರಿಸಿದ್ದರು.

ಇಂದು ನಮ್ಮ ಮುಂದಿರುವ ಪರಿಸ್ಥಿತಿ ಭಿನ್ನವಾಗಿದೆ. ಹಲವಾರು ಜನರು ಧರ್ಮದ ತ್ತುತ್ತಾರೆ ಮತ್ತು ತಮಗೆ ಸಾಧ್ಯವಿದ್ದಷ್ಟು ಇತರರನ್ನು ಧರ್ಮದೆಡೆಗೆ ಆಹ್ವಾನಿಸುತ್ತಾರೆ. ಿ ಅವರಿಗೆ ಯಾವ ಕಷ್ಟವೂ ಎದುರಾಗುವುದಿಲ್ಲ ಮತ್ತು ಅವರು ಯಾವ ಸಮಸ್ಯೆಯಲ್ಲೂ ಕುವುದಿಲ್ಲ. ಬದಲಾಗಿ ಹಲವಾರು ಜನರು ತಮ್ಮ ಈ ಧಾರ್ಮಿಕ ಕೆಲಸದಿಂದಾಗಿ ಒಳ್ಳೆಯ ಮಾನಗಳನ್ನು ಗಳಿಸುತ್ತಾರೆ ಮತ್ತು ಜನರು ಅವರನ್ನು ಗೌರವಿಸಿ ಅವರ ಸೇವೆಯನ್ನು ಕುತ್ತಾರೆ. ಈ ರೀತಿಯಲ್ಲಿ ಸಮಸ್ಯೆಗಳಿಗೆ ಬದಲಾಗಿ ಅವರಿಗೆ ಐಶಾರಾಮ ದೊರಕುತ್ತದೆ ಕಷ್ಟಗಳಿಗೆ ಬದಲಾಗಿ ಅವರಿಗೆ ಬೆಂಬಲಿಗರ ಹಾಗೂ ಹಿಂಬಾಲಕರ ಉತ್ತಮ ಸೇವೆ ಕುತ್ತದೆ. ಈ ಪರಿಸ್ಥಿತಿಗಳನ್ನು ಕಂಡರೆ ಧರ್ಮದ ಕೆಲಸಗಳಲ್ಲಿ ಸಹನೆ ಮತ್ತು ಪರೀಕ್ಷೆಯ ಪವೇಕೆ ಎಂದು ವ್ಯಕ್ತಿಯು ಆಲೋಚಿಸಬಹುದು.

ವಾಸ್ತವದಲ್ಲಿ ಬಹಳ ಕಾಲದಿಂದ ಜನರ ಮನಸ್ಸಿನಲ್ಲಿ ಧರ್ಮದ ತಾತ್ಪರ್ಯವೇ ಾಗಿ ಬಿಟ್ಟಿದೆ. ಜೀವನದ ಒಂದು ಚಿಕ್ಕ ಭಾಗ ಮಾತ್ರ ಧರ್ಮದೊಂದಿಗೆ ಸಂಬಂಧ ದಿದೆ ಎಂದು ಭಾವಿಸಲಾಗುತ್ತದೆ ಮತ್ತು ಒಂದು ದೊಡ್ಡ ಭಾಗದಿಂದ ಧರ್ಮವನ್ನು ಗಿಡಲಾಗಿದೆ. ಉದಾಹರಣೆಗೆ ಧರ್ಮವು ಏಕದೇವಾರಾಧನೆಯ ಬುನಾದಿಯ ಮೇಲೆ ದೆ.

ಏಕದೇವಾರಾಧನೆಯ ಅರ್ಥವು ಒಬ್ಬ ವ್ಯಕ್ತಿಯು ಕೇವಲ ಅಲ್ಲಾಹನನ್ನು ತನ್ನ ನ್ಯನೆಂದು ನಂಬಿ ಅವನಿಗೆ ಮಾತ್ರ ಸಾಷ್ಟಾಂಗವೆರಗುವುದು ಎಂದಾದರೆ ಅದು ಾಧ್ಯವಾದ ಕೆಲಸವಲ್ಲ. ಆದರೆ ಏಕದೇವಾರಾಧನೆಯ ಸಂಪೂರ್ಣವಾದ ಅರ್ಥವನ್ನು ಸಿ ವ್ಯಕ್ತಿಯನ್ನು ಪರಿಪೂರ್ಣ ಏಕದೇವತ್ವದೆಡೆಗೆ ಆಹ್ವಾನಿಸಿದರೆ, ಅದು ಅನೇಕ ಕೆಗಳನ್ನು ಮುಂದಿರಿಸುತ್ತದೆ-

- ಅವನು ಅಲ್ಲಾಹನ ಹೊರತು ಇನ್ಯಾರಿಂದಲೂ ಸಹಾಯ ಯಾಚಿಸಬಾರದು.
- ಅಲ್ಲಾಹನ ಹೊರತು ಇನ್ಯಾರನ್ನೂ ಭಯಪಡಬಾರದು.
- ಅಲ್ಲಾಹನ ಹೊರತು ಇತರರ ಸಂಪ್ರೀತಿ ಮತ್ತು ಸಂತುಷ್ಟಿಯನ್ನು ಗಮನಿಸಬಾರದು.
- ಅಲ್ಲಾಹನ ಹೊರತು ಇತರರನ್ನು ಆಜ್ಞಾಧಿಕಾರಿಯಾಗಿ ನಂಬಬಾರದು.
- ಅಲ್ಲಾಹ ಹೊರತು ಇತರರ ಆದೇಶವನ್ನು ಪಾಲಿಸಬಾರದು.
- ಅಲ್ಲಾಹನ ಹೊರತು ಇತರರ ನಿಯಮಗಳನ್ನು ಧರ್ಮಸಮ್ಮತವೆಂದು

ಒಪ್ಪಿಕೊಳ್ಳಬಾರದು ಮತ್ತು ತನ್ನ ಸಂಪೂರ್ಣ ಜೀವನದಲ್ಲಿ ಇದೇ ಏಕದೇವಾರಾ
ಸಂಪೂರ್ಣ ಬದ್ಧರಾಗಿರಬೇಕು.

ಇದು ಜನರ ಪಾಲಿಗೆ ಸುಲಭ ಸಾಧ್ಯವಲ್ಲ. ಇದು ಕೇವಲ ಏಕದೇವಾರಾ
ಸಂಬಂಧಿಸಿದ ವಿಷಯ. ಇದೇ ರೀತಿ ಪರಲೋಕದ ಮೇಲೆ ವಿಶ್ವಾಸವಿರಿಸುವುದರ ಬೇಡಿಕೆಗ
ಸಂದೇಶವಾಹಕರನ್ನು ಪ್ರವಾದಿಯೆಂದು ಒಪ್ಪಿಕೊಂಡ ಮೇಲೆ ಯಾವ ಕೆಲಸ ಮಾಡಬ
ಮತ್ತು ಯಾವ ಕೆಲಸ ಮಾಡಬಾರದು? ಧರ್ಮವನ್ನು ತನ್ನ ಸಂಪೂರ್ಣ ಜೀವನ
ಅಳವಡಿಸಿದ ನಂತರ ಯಾವ ಮಾರ್ಗದಲ್ಲಿ ನಡೆಯಬೇಕು ಮತ್ತು ಯಾವುದನ್ನು ತೊರೆಯ
ಒಟ್ಟಿನಲ್ಲಿ ಧರ್ಮವು ತನ್ನ ಪರಿಪೂರ್ಣ ಸ್ವರೂಪದಲ್ಲಿ ಮುಂದೆ ಬಂದಾಗ ಅನುಕೂಲತೆ
ಸಂಕಷ್ಟಗಳಾಗಿ ಮಾರ್ಪಡುತ್ತವೆ. ಬೆಂಬಲಿಗರು ಮತ್ತು ಹಿಂಬಾಲಕರು ಚದುರ ತೊಡಗು
ತಮ್ಮ ಇಷ್ಟಾನಿಷ್ಟಗಳನ್ನು ತೊರೆದು ಅಲ್ಲಾಹನು ಮತ್ತು ಆತನ ಸಂದೇಶವಾ
ಇಚ್ಛೆಯನ್ನು ಸ್ವೀಕರಿಸಿ ಅಲ್ಲಾಹ್ ಮತ್ತು ಪ್ರವಾದಿಗೆ ಇಷ್ಟವಾಗದುದನ್ನು ತೊರೆದು ಬ
ಸಾಮರ್ಥ್ಯವುಳ್ಳವರ ಹೊರತು ಇತರರು ಈ ಕೆಲಸದಲ್ಲಿ ಸಹಕರಿಸಲಾರರು. ಯಾರ ಹಿತಾ
ಧಕ್ಕೆ ತಟ್ಟುತ್ತದೋ ಅವರು ವಿರೋಧಿಗಳು ಮತ್ತು ಶತ್ರುಗಳಾಗಿ ಮಾರ್ಪಡುತ್ತಾರೆ.
ಹೆಜ್ಜೆಗೂ ಪರೀಕ್ಷೆ ಮತ್ತು ಸವಾಲುಗಳು ಎದುರಾಗುತ್ತವೆ. ಇದರಿಂದ ಧರ್ಮದ ಹೆಸ
ಮಾತ್ರಕ್ಕೆ ಸಹನೆಯ ಅಗತ್ಯ ಬೀಳುವುದಾದರೂ ಏಕೆ ಎಂದು ತಿಳಿಯುತ್ತದೆ.

ಇದನ್ನು ಸಾಮಾನ್ಯ ಉದಾಹರಣೆಯೊಂದರಿಂದ ತಿಳಿಯಬಹುದು. ಇ
ಪರಿಸ್ಥಿತಿಯಲ್ಲಿ ಒಬ್ಬನು ಪೇಟೆಯಲ್ಲಿ ಒಂದು ಅಂಗಡಿಯನ್ನು ತೆರೆಯುತ್ತಾನೆ. ಆ ವ್ಯಕ್ತಿ
ತನ್ನ ಸಂಪೂರ್ಣ ಜೀವನದಲ್ಲಿ ಅಲ್ಲಾಹನ ಧರ್ಮವನ್ನು ಅಳವಡಿಸುತ್ತೇನೆಂದು ಮತ್ತು
ಮಾತು, ಕರ್ಮಗಳು ಮತ್ತು ಜೀವನದ ಮಾದರಿಯಿಂದ ಅಲ್ಲಾಹನ ಧ
ಸಾಕ್ಷಿಯಾಗುತ್ತೇನೆಂದು ತೀರ್ಮಾನಿಸಿದ್ದರೆ, ಅವನಿಗೆ ಎಂತಹ ಸವಾಲುಗಳು ಎದರಾಗುತ್ತ
ಸ್ವಲ್ಪ ಅಂದಾಜಿಸಿ ನೋಡಿ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಲ್ಲಿ
ಹೇಳಬಾರದು, ವಂಚಿಸಬಾರದು, ವ್ಯವಹಾರಗಳಲ್ಲಿ ನ್ಯಾಯವನ್ನೇ ಮಾಡಬೇಕು,
ಹಕ್ಕನ್ನು ಕಬಳಿಸಬಾರದು, ಲಂಚ ಕೊಡಬಾರದು, ಬಡ್ಡಿಯ ಹತ್ತಿರ ಹೋಗಕೂಡದು,
ಏರಿಸಲಿಕ್ಕಾಗಿ ಸಾಮಾನುಗಳನ್ನು ಅಡಗಿಸಬಾರದು ಇತ್ಯಾದಿ ಹಲವಾರು ಬೋಧನೆ
ಆದರೆ ಮಾರುಕಟ್ಟೆ ಏನು ಹೇಳುತ್ತದೆ. ಅದರ ಪ್ರಕಾರ ಸುಳ್ಳು ಮತ್ತು ಮೋಸವಿಲ್ಲದೆ ವಾ
ನಡೆಯಲಾರದು, ನೀವು ವಂಚಿಸದಿದ್ದರೆ ನಿಮ್ಮನ್ನು ಇತರರು ವಂಚಿಸಿದ ನಷ್ಟ
ತುಂಬುವುದಾದರೂ ಹೇಗೆ? ಲಂಚ ನೀಡದೆ ಯಾವ ಕೆಲಸವೂ ನಡೆಯುವುದಿಲ್ಲ.
ಲೆಕ್ಕಪತ್ರಗಳನ್ನು ತಯಾರಿಸದಿದ್ದರೆ ಲಾಭವೆಲ್ಲವೂ ವ್ಯಾಪಾರ ತೆರಿಗೆ ಮತ್ತು ಆದಾಯ ತೆ
ವಶವಾಗುತ್ತದೆ. ತೂಕದಲ್ಲಿ ಕಡಿತ ಮಾಡದಿದ್ದರೆ ಪೇಟೆಯಲ್ಲಿ ಉಳಿಯುವುದಾದರೂ
ಬಡ್ಡಿಯಿಂದ ದೂರವಿದ್ದರೆ ವ್ಯಾಪಾರವೇ ನಿಂತು ಹೋಗುತ್ತದೆ.

ಈಗ ನಮ್ಮ ಮುಂದೆ ಕೇವಲ ಎರಡೇ ಮಾರ್ಗಗಳಿವೆ. ಒಂದು- ಕನಿಷ್ಠಪಕ್ಷ ವಾ

ನಾಟುಗಳಲ್ಲಿ ಧರ್ಮವನ್ನು ತೊರೆದು ನಿಸ್ಸಹಾಯಕತೆಯಲ್ಲಿ ಎಲ್ಲವೂ ಸರಿ ಎಂದು ತನ್ನ ಸ್ಸನ್ನು ಸಮಾಧಾನಪಡಿಸುವುದು. ಈ ಸ್ಥಿತಿಯಲ್ಲಿ ಧರ್ಮದ ಮಾರ್ಗದಲ್ಲಿ ನಡೆಯಲು ್ತ ಧರ್ಮದ ಸೇವೆ ಮಾಡಲು ಯಾವ ಸಹನೆಯ ಅಗತ್ಯವೂ ಇಲ್ಲವೆಂದು ಸ್ಪಷ್ಟವಾಗಿ ಯುತ್ತದೆ. ದೃಢಚಿತ್ತತೆಯ ಅವಶ್ಯಕತೆಯಿರುವ ಮಾರ್ಗವನ್ನೇ ನಾವು ತೊರೆದಿದ್ದೇವೆ. ಸ್ಟಗಳಿಂದಾವೃತವಾದ ಮಾರ್ಗದಲ್ಲಿ ನಡೆಯದಿದ್ದ ಮೇಲೆ ಬಟ್ಟೆ ಹರಿದು ಹೋಗುವ ಂವೇನು?

ಎರಡನೆಯ ಮಾರ್ಗವೇನೆಂದರೆ ಯಾವ ಸ್ಥಿತಿಯಲ್ಲೂ ನಮ್ಮ ಆದರ್ಶಗಳನ್ನು ದಿರುವುದು. ದೊಡ್ಡ ವ್ಯಾಪಾರವನ್ನು ತೊರೆದು ಸಣ್ಣ ವ್ಯಾಪಾರವನ್ನು ಸ್ವೀಕರಿಸಿದರೂ ಅಲ್ಲಾಹನ ಆಜ್ಞೋಲ್ಲಂಘನೆಯನ್ನು ಮಾತ್ರ ಸಮ್ಮತಿಸದಿರುವುದು. ಕಷ್ಟಕಾರ್ಪಣ್ಯಗಳನ್ನು ಸಿ, ಕಠಿಣ ಶ್ರಮಗೈದು, ಸಹನೆ ಮತ್ತು ಸ್ಥೈರ್ಯದಿಂದ ಕಾರ್ಯವೆಸಗಿ ಅಲ್ಲಾಹನ ಪ್ರೀತಿಗಾಗಿ ಧರ್ಮದಲ್ಲಿ ದೃಢವಾಗಿ ನಿಲ್ಲುವುದು.

ಇದು ಕೇವಲ ಒಂದು ಸಾಮಾನ್ಯ ಉದಾಹರಣೆಯಾಗಿದೆ. ಅನ್ಯಥಾ ಜೀವನದಲ್ಲಿ ಹೆಜ್ಜೆ ಗೂ ಇಂತಹ ಅನೇಕ ಉದಾಹರಣೆಗಳಿವೆ. ಇಸ್ಲಾಮಿನಲ್ಲಿ ಧರ್ಮ ಮತ್ತು ರಾಜಕೀಯವು ವಾದ ವಿಷಯಗಳಲ್ಲ ಎಂಬುದನ್ನು ನಾವು ಈ ಹಿಂದೆ ಓದಿದ್ದೇವೆ. ನಮಾಝ್ ಮತ್ತು ವಾಸ ವ್ರತವು ಧರ್ಮದ ಭಾಗವಾಗಿರುವಂತೆಯೇ ರಾಜಕೀಯ ಕೂಡಾ ಧರ್ಮದ ಒಂದು ವೇ ಆಗಿದೆ. ನಾವು ನಮಾಝ್ ಮತ್ತು ಉಪವಾಸ ವ್ರತವನ್ನು ಸರಿಯಾಗಿ ನೆರವೇರಿಸಿದರೆ ರರಿಗೆ ಯಾವ ನಷ್ಟವೂ ಆಗಲಾರದು. ನಾವು ದಿನ ರಾತ್ರಿ ನಮಾಝ್ ನಿರ್ವಹಿಸಿ, ಸದಾ ವಾಸ ವ್ರತವನ್ನಾಚರಿಸುತ್ತಲೇ ಇರಬಹುದು. ಆದರೆ ಮಸೀದಿಯ ಹೊರಗೆ ಕೂಡಾ ಲ್ಲಾಹನ ನಿಯಮಗಳನ್ನು ತನ್ನ ಜೀವನದ ನಿಯಮಗಳನ್ನಾಗಿ ಸ್ವೀಕರಿಸಿ ಸಮಸ್ಯೆಗಳು ಂರಾಗುತ್ತದೋ ಇಲ್ಲವೋ ಎಂದು ನೋಡಬೇಕಾಗಿದೆ. ಆಗ ನಮಗೆ ಧರ್ಮಕ್ಕಾಗಿ ಸಹನೆ ತ್ತು ಸ್ಥೈರ್ಯದ ಅವಶ್ಯಕತೆ ಎಷ್ಟಿದೆ ಎಂದು ಮನವರಿಕೆಯಾಗುತ್ತದೆ. ಅಂಧಕಾರ ತುಂಬಿದ ್ರಯಲ್ಲಿ ಹೊರಗೆ ಪ್ರಯಾಣ ಮಾಡುವವನಿಗೆ ಮಾತ್ರ ಬೆಳಕಿನ ಬೆಲೆ ತಿಳಿಯುತ್ತದೆ. ಚ್ಚಿದ ಕೋಣೆಯೊಳಗೆ ಕುಳಿತವನಿಗೆ, ರಾತ್ರಿಯ ಯಾತ್ರಿಕನಿಗೆ ಲಾಟೀನು ಎಷ್ಟು ಪ್ರಿಯಕರ ತ್ತು ಅಗತ್ಯವಾದ ವಸ್ತು ಎಂದು ತಿಳಿಯುವುದಾದರೂ ಹೇಗೆ?

ಇಂದು ಲೋಕದಲ್ಲಿ ಸತ್ಯ ನಿಷೇಧ, ಬಹುದೇವಾರಾಧನೆ ಮತ್ತು ಅಲ್ಲಾಹನ ಜ್ಞೋಲ್ಲಂಘನೆಯ ಸುಂಟರಗಾಳಿಯೂ ಬೀಸುತ್ತಿದೆ. ಎಲ್ಲೆಡೆಯಲ್ಲೂ ಪಥಭ್ರಷ್ಟತೆಯ ಧಕಾರವು ಹರಡಿದೆ. ಈ ಸ್ಥಿತಿಯಲ್ಲಿ ಅಲ್ಲಾಹನ ಧರ್ಮದಲ್ಲಿ ನಡೆಯ ಬಯಸುವವರಿಗೆ ಜ್ಜೆ ಹೆಜ್ಜೆಗೂ ಅಲ್ಲಾಹನ ಮಾರ್ಗದರ್ಶನದ ಬೆಳಕಿನ ಅಗತ್ಯವಿರುತ್ತದೆ. ಆದರೆ ಕಾಲು ರಿದು ಕುಳಿತವರಿಗೆ ಮತ್ತು ಲೋಕವನ್ನು ಅದರಷ್ಟಕ್ಕೆ ಬಿಟ್ಟು ಒಂದು ಮೂಲೆಯನ್ನು ಗಿಸುವುದನ್ನೇ ಒಳಿತೆಂದು ಭಾವಿಸಿದವನಿಗೆ ಧರ್ಮದ ಮಾರ್ಗದಲ್ಲಿ ಸಹನೆ ಮತ್ತು ರ್ಯದ ಬೆಲೆಯೇನೆಂದು ಹೇಗೆ ತಾನೆ ತಿಳಿದೀತು?

3. ಅಲ್ಲಾಹನ ಸ್ಮರಣೆ

ಮಾನವನು ಅಲ್ಲಾಹನನ್ನು ಮರೆಯುತ್ತಾನೆ. ತನ್ನ ನೈಜ ನೆಲೆಯನ್ನು ಮರೆಯುತ ಅಲ್ಲಾಹನೊಂದಿಗಿರುವ ತನ್ನ ಸಂಬಂಧವನ್ನು ಮರೆಯುತ್ತಾನೆ. ಒಟ್ಟಿನಲ್ಲಿ ಮರೆಗು ಮಾನವನ ಎಲ್ಲಕ್ಕಿಂತ ಮಿಗಿಲಾದ ರೋಗವಾಗಿದ್ದು ಇದರ ಸುಧಾರಣೆಗಾಗಿ ಅಲ್ಲಾ ಸ್ಮರಣೆಯು ಅತ್ಯಗತ್ಯವಾಗಿದೆ. ದಾಸನು ತನ್ನ ಒಡೆಯನನ್ನು ಮರೆಯದಿದ್ದರೆ, ತನ್ನ ನೆಲೆಯೇನೆಂದು ಅವನಿಗೆ ನೆನಪಿದ್ದರೆ ಮತ್ತು ಒಳಿತು ಮತ್ತು ಕೆಡುಕಿನ ಫಲಿತಾಂಶವು ಮುಂದಿದ್ದರೆ ಅವನೆಂದೂ ತಪ್ಪು ಮಾರ್ಗದಲ್ಲಿ ನಡೆಯಲಾರನು. ಆದುದರಿಂದಲೇ ಇಸ್ಲಾ ಅಲ್ಲಾಹನ ಸ್ಮರಣೆಗೆ ಬಹಳ ಮಹತ್ವ ಕಲ್ಪಿಸುತ್ತದೆ. ವಾಸ್ತವದಲ್ಲಿ ಅಲ್ಲಾಹನ ಸ್ಮರಣ ಧರ್ಮದ ಸ್ಫೂರ್ತಿಯಾಗಿದೆ. ಈ ಸ್ಮರಣೆಯಿಂದಲೇ ಮಾನವನಿಗೆ ಅಲ್ಲಾಹನ ಮಾರ್ಗ ಎದುರಾಗುವ ಸಂಕಷ್ಟಗಳನ್ನು ಸಹಿಸುವ ಧೈರ್ಯ ಲಭಿಸುತ್ತದೆ. ಈ ಸ್ಮರಣೆಯಿ ಮಾನವನು ಅತಿ ಕಠಿಣವಾದ ವಿಪತ್ತುಗಳನ್ನು ಸಂತೋಷದಿಂದ ಎದುರಿಸುತ್ತಾನೆ ಮತ್ತು ಸ್ಮರಣೆಯು ಐಶಾರಾಮದ ಕಾಲದಲ್ಲಿಯೂ ದೇವನೊಂದಿಗಿನ ಮಾನವನ ಸಂಬಂಧ ಕಾದಿರಿಸುತ್ತದೆ.

ಅಲ್ಲಾಹನ ಸ್ಮರಣೆಯಿಲ್ಲದೆ ಧರ್ಮದಲ್ಲಿ ಸ್ಥಿರವಾಗಿ ನಿಲ್ಲುವುದು ಮತ್ತು ಧರ್ಮ ಸೇವೆ ಮಾಡುವುದು ಸುಲಭ ಸಾಧ್ಯವಲ್ಲ. ಧರ್ಮದ ಸೇವೆಗಾಗಿ ಅಗತ್ಯವಿರುವ ಸಹನೆ ಸ್ಥೈರ್ಯವು ಅಲ್ಲಾಹನ ಸ್ಮರಣೆಯಿಂದಲೇ ಲಭಿಸುತ್ತದೆ. ಅಲ್ಲಾಹನ ಬಗ್ಗೆ ಅಶ್ರದ್ಧನಾದ ಈ ಮಾರ್ಗದಲ್ಲಿ ಎಂದೂ ಸ್ಥಿರವಾಗಿ ನಿಲ್ಲಲಾರನು. ಧರ್ಮಕ್ಕಾಗಿ ಸಹನೆ ಕೈಗೊಳ್ಳು ಮತ್ತು ಆ ಮಾರ್ಗದಲ್ಲಿ ದೃಢವಾಗಿ ನಿಲ್ಲುವುದು ಇಂತಹ ವ್ಯಕ್ತಿಗೆ ಸಾಧ್ಯವಿಲ್ಲ.

ಆದುದರಿಂದಲೇ ಧರ್ಮದ ಸೇವೆಗಾಗಿ ಅತ್ಯಂತ ಹೆಚ್ಚು ಮಹತ್ವ ನೀಡಬೇಕಾ ಅಲ್ಲಾಹನ ಸ್ಮರಣೆಗಾಗಿದೆ. ಧರ್ಮದ ಕಟ್ಟಡವು ಅಲ್ಲಾಹನ ಸ್ಮರಣೆಯ ಆಧಾರದಲ್ಲಿ ನಿಂ ಅಲ್ಲಾಹನ ಸ್ಮರಣೆಯಿಂದ ಮುಕ್ತವಾಗಿ ಧರ್ಮದ ಯಾವುದೇ ಕೆಲಸವನ್ನು ಮಾ ಸಾಧ್ಯವಿಲ್ಲ. ಅಲ್ಲಾಹನ ಸ್ಮರಣೆಯಿಂದ ಮುಕ್ತವಾದ ಕೆಲಸವು ಎಷ್ಟು ಮನೋಹರ ಕಂಡರೂ ಅದು ಧರ್ಮದ ಕೆಲಸವಾಗಲಾರದು.

ಅಲ್ಲಾಹನ ಸ್ಮರಣೆಯ ಅತ್ಯುನ್ನತ ರೂಪವು ನಮಾಝ್ ಆಗಿದೆ. ವಾಸ್ತವ ನಮಾಝ್ ಅಲ್ಲಾಹನ ಸ್ಮರಣೆಯ ಜೀವಾಳವಾಗಿದೆ. ಅಲ್ಲಾಹನ ಸ್ಮರಣೆಗೆ ನಮಾಝಿ ಉತ್ತಮವಾದ ರೂಪ ಇನ್ನಾವುದೂ ಇಲ್ಲ. ಒಬ್ಬನ ನಮಾಝ್ ಎಷ್ಟು ಉತ್ತಮವಾಗಿರುವ ಅಷ್ಟೇ ಅವನಲ್ಲಿ ಅಲ್ಲಾಹನ ಸ್ಮರಣೆಯಿರುವುದು. ಅಲ್ಲಾಹನ ಸಾನಿಧ್ಯಕ್ಕಾಗಿ ನಮಾಝಿ ಉತ್ತಮವಾದ ಸ್ಮರಣೆ ಇನ್ನೊಂದಿಲ್ಲ. ಆದುದರಿಂದಲೇ ನಮಾಝನ್ನು ಸತ್ಯ ವಿಶ್ವಾ 'ಮಿಅ್‌ರಾಜ್' (ಅತ್ಯುನ್ನತ ಸ್ಥಾನ) ಎನ್ನಲಾಗಿದೆ. ಅಲ್ಲಾಹನ ಸ್ಮರಣೆಯು ಮನಸ್ಸಿ ಸರಿಯಾಗಿ ನೆಲೆಸಬೇಕಾದರೆ ನಮಾಝನ್ನು ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸಬೇಕಾಗಿದೆ. ವಿಷಯಗಳನ್ನು 'ನಮಾಝ್' ಎಂಬ ಅಧ್ಯಾಯದಲ್ಲಿ ವಿವರವಾಗಿ ತಿಳಿಸಲಾಗಿದೆ.

ಅಲ್ಲಾಹನ ಸ್ಮರಣೆಯ ಎರಡನೇ ಸ್ವರೂಪವು ಪವಿತ್ರ ಕುರ್‌ಆನಿನ ಪಾರಾಯಣವಾಗಿದೆ. ಕುರ್‌ಆನ್ ಅಲ್ಲಾಹನ ಗ್ರಂಥವಾಗಿದೆ. ಅದು ಆತನ ಆದೇಶಗಳು ಮತ್ತು ಂನೆಗಳ ಸಂಕಲನವಾಗಿದೆ. ಪವಿತ್ರ ಕುರ್‌ಆನಿನ ಪಾರಾಯಣ ಮಾಡುತ್ತಿರುವಾಗ ನಾವು ್ತರುವ ಸಾಲುಗಳೆಲ್ಲವೂ ಸರ್ವಲೋಕಗಳ ಒಡೆಯನ ಆಜ್ಞೆಯಾಗಿದೆ ಎಂಬ ವಿಚಾರವು ್ನಲ್ಲಿ ಮೂಡಿದಷ್ಟು ಹೆಚ್ಚು ಸತ್ಯವಿಶ್ವಾಸದ ಬೆಳಕು ಮನಸ್ಸನ್ನು ಆವರಿಸುತ್ತದೆ. ಪವಿತ್ರ ಆನಿನ ಪಾರಾಯಣದಿಂದ ಸಂಪೂರ್ಣ ಪ್ರಯೋಜನ ಸಿಗಬೇಕಾದರೆ ಅದನ್ನು ಅರ್ಥವರಿತು ೇಕಾದುದು ಅತ್ಯಾವಶ್ಯಕವಾಗಿದೆ. ಒಬ್ಬ ವ್ಯಕ್ತಿಯು ಕುರ್‌ಆನನ್ನು ಎಷ್ಟು ಅರ್ಥವರಿತು ತ್ತಾನೋ ಅಷ್ಟೇ ಹೆಚ್ಚು ಅವನಲ್ಲಿ ಅಲ್ಲಾಹನೊಂದಿಗೆ ಸಂಬಂಧದ ಸ್ವರೂಪ ಹುತ್ತದೆ.* ಯಾರಿಗಾದರೂ ಹೆಚ್ಚು ತಿಳಿಯುವ ಸಾಮರ್ಥ್ಯವಿಲ್ಲದಿದ್ದರೆ ಅವನು ಪಕ್ಷ ಕುರ್‌ಆನಿನ ಅನುವಾದ ಗ್ರಂಥಗಳಿಂದ ಸ್ವಲ್ಪಾಂಶವನ್ನಾದರೂ ಅರ್ಥವರಿತು ೇಕಾಗಿದೆ. ಪವಿತ್ರ ಕುರ್‌ಆನ್ ಓದುವಾಗ ಹೆಚ್ಚು ಓದದೆ ಅದರ ಸಣ್ಣಭಾಗವನ್ನು ಾದದ ಸಹಾಯದಿಂದ ಅರ್ಥವರಿತು ಓದುವ ಪ್ರಯತ್ನ ಮಾಡಿದರೂ ಅದರಿಂದ ಬಹಳ ೋಜನ ಸಿಗುತ್ತದೆ. ಜನರಿಗೆ ಉಪದೇಶ ಮತ್ತು ಬೋಧನೆಗಳುಳ್ಳ ಕುರ್‌ಆನಿನ ಗಳನ್ನು ತಿಳಿಯುವುದು ಹೆಚ್ಚು ಕಷ್ಟಕರವಲ್ಲ.

ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನ ಸ್ಮರಣೆಯನ್ನು ನವೀಕರಿಸುವ ಮತ್ತು ಮನಸ್ಸಿನಿಂದ ನ್ಥೆಯ ಪರದೆಯನ್ನು ಸರಿಸುವಂತಹ ಮಾತುಗಳನ್ನು ಸಮಾನ್ಯವಾಗಿ ಸುಲಭವಾದ ಯಲ್ಲಿ, ಬಹಳ ಸರಳವಾದ ರೀತಿಯಲ್ಲಿ ಆಗಾಗ ವಿವರಿಸಲಾಗಿದೆ. ಸಾಧಾರಣವಾದ ಯನ್ನು ಗಳಿಸಿದ ವ್ಯಕ್ತಿಯೂ ಇದರಿಂದ ಪ್ರಯೋಜನ ಪಡೆಯದೆ ಇರಲಾರನು. ಸೂರಃ ಕಮರ್‌ನಲ್ಲಿ ಅಲ್ಲಾಹನು ಪದೇ ಪದೇ ಹೀಗೆ ಹೇಳುತ್ತಾನೆ-

"ನಾವು ಈ ಕುರ್‌ಆನನ್ನು ಉಪದೇಶ ಸುಲಭ ಸಾಧನವಾಗಿ ಮಾಡಿರುವೆವು. ದೇಶ ಪಡೆಯುವವರು ಯಾರಾದರೂ ್ದರೆಯೇ?"

وَلَقَدْ يَسَّرْنَا الْقُرْآنَ
لِلذِّكْرِ فَهَلْ مِن مُّدَّكِرٍ

ಪವಿತ್ರ ಕುರ್‌ಆನಿಗೆ ಸಂಬಂಧಿಸಿದಂತೆ ಅದನ್ನು ಅರ್ಥವರಿಯದೆ ಓದುವುದು ಪೂರ್ಣವಾಗಿ ನಿಷ್ಪ್ರಯೋಜಕವೆಂಬ ಮಾತು ತಪ್ಪಾದಂತೆಯೇ, ಅದನ್ನು ಜನರು ತಿಳಿಯುವ ್ತ ಅದರ ಅರ್ಥವನ್ನು ಗ್ರಹಿಸುವ ಪ್ರಯತ್ನವನ್ನೇ ಮಾಡದಿರುವುದು ಮತ್ತು ಸಾಮರ್ಥ್ಯವಿದ್ದರೂ ನ್ನು ಹಾಗೆ ಓದಿದರೆ ಸಾಕೆಂದು ತಿಳಿಯುವುದು ಕೂಡಾ ತಪ್ಪು. ಪವಿತ್ರ ಕುರ್‌ಆನನ್ನು

---

* ಆದರೆ ಈ ಸ್ವರೂಪವನ್ನು ಗ್ರಹಿಸಿದರೆ ಸಾಲದು. ಸತ್ಯನಿಷೇಧಿಗಳಾದ ಬಹಳಷ್ಟು ವಿದ್ವಾಂಸರು ಆನ್ ವಾಕ್ಯಗಳನ್ನು ಚೆನ್ನಾಗಿ ಗ್ರಹಿಸುತ್ತಾರೆ. ಆದರೆ ಅವರು ಕುರ್‌ಆನ್‌ನಿಂದ ಪ್ರಯೋಜನ ಯುವ ರೀತಿಯಲ್ಲಿ ಪಡೆಯುವುದಿಲ್ಲ. ಅದಕ್ಕೆ ಅದನ್ನು ಗ್ರಹಿಸಬೇಕಾದುದು ಅಗತ್ಯವಾದಂತೆ ಅದನ್ನು ವಾಗ ಅದು ನಮ್ಮ ಏಕೈಕ ಒಡೆಯನಾದ ಅಲ್ಲಾಹನ ವಾಣಿಯೆಂಬ ದೃಢನಂಬಿಕೆಯೊಂದಿಗೆ ವುದೂ ಅಗತ್ಯ.

ಅರ್ಥವರಿತು ಓದಿದರೆ ಮಾತ್ರ ಅದು ಸನ್ಮಾರ್ಗವನ್ನು ಗಳಿಸುವ ಮತ್ತು ಸತ್ಯವಿಶ
ಬೆಳಕನ್ನು ವೃದ್ಧಿಸುವ ಹೇತುವಾಗುತ್ತದೆ.

ತನಗೆ ಸಾಧ್ಯವಾದಷ್ಟು ಕುರ್‌ಆನಿನ ಅರ್ಥವರಿಯುವ ಪ್ರಯತ್ನವನ್ನು ಮಾಡದೆ ಅದನ್ನು ಅರ್ಥವರಿಯದೆ ಓದಿದರೆ ಸಾಕು ಎಂದು ತಿಳಿಯುವುದು ಬಹಳ ದೊಡ್ಡ ನಷ್ಟವ ಅಲ್ಲಾಹ ಆದೇಶಗಳು ಮನುಷ್ಯರು ಅದನ್ನು ಅರಿತು ಅದರಿಂದ ಪ್ರಯೋಜನ ಪಡೆಯಲಿಕ್ಕಾ ಇದೆ. ಆದುದರಿಂದಲೇ ಪವಿತ್ರ ಕುರ್‌ಆನಿನಲ್ಲಿ ಸತ್ಯ ವಿಶ್ವಾಸಿಗಳ ಲಕ್ಷಣಗಳನ್ನು ತಿಳಿಸ ಅವರು ಅಲ್ಲಾಹನ ಗ್ರಂಥವನ್ನು ಹೆಚ್ಚು ಓದುವವರಾಗಿದ್ದಾರೆ ಎಂದು ಹೇಳಲಾಗಿ

ಪ್ರವಾದಿವರ್ಯರು(ಸ) ತಮ್ಮ ವಚನಗಳಲ್ಲಿಯೂ ಕುರ್‌ಆನ್ ಪರಾಯಣದ ಕ ಬಹಳ ಹೆಚ್ಚು ತಾಕೀತು ಮಾಡಿದ್ದಾರೆ ಮತ್ತು ಅದಕ್ಕೆ ದೊಡ್ಡ ಪುಣ್ಯವಿದೆಯೆಂದು ಹೇಳಿ ನಮಾಝ್‌ನ ನಂತರ ಕುರ್‌ಆನ್ ಪಾರಾಯಣವನ್ನು ಅತ್ಯಂತ ಶ್ರೇಷ್ಠವಾದ ಆರಾಧನೆಯೆ ಹೇಳಲಾಗಿದೆ. ಅನೇಕ ವಿದ್ವಾಂಸರು ಪವಿತ್ರ ಕುರ್‌ಆನಿನ ಅತ್ಯುತ್ತಮವಾದ ಅನು ಗ್ರಂಥಗಳನ್ನು ಬರೆದಿದ್ದಾರೆ. ಇದರಿಂದಾಗಿ ಅರಬಿ ಭಾಷೆ ತಿಳಿಯದವರಿಗೂ ಈ ಸಂಪತ್ತಿ ಪ್ರಯೋಜನ ಪಡೆಯುವುದು ಸುಲಭವಾಗಿ ಬಿಟ್ಟಿದೆ. ಈ ಅನುಗ್ರಹದ ಮೌಲ್ಯವರಿತು ಕುರ್‌ಆನನ್ನು ಅರ್ಥೈಸಿ ಓದಬೇಕು. ಅಲ್ಲಾಹನೊಂದಿಗೆ ಸಂಬಂಧವನ್ನು ದೃಢಪಡಿಸಲು ಆತನ ಸ್ಮರಣೆಯನ್ನು ಮನಸ್ಸಿನಲ್ಲಿ ಸದಾ ಹಸಿರಾಗಿರಿಸಲು ಪವಿತ್ರ ಕುರ್‌ಆನಿನ ಪಾರಾ ಅತ್ಯಗತ್ಯವಾಗಿದೆ. ನಮಾಝಿನ ನಂತರ ಅಲ್ಲಾಹನ ಸ್ಮರಣೆಯ ಅತ್ಯುತ್ತಮ ಸ್ವರೂಪವು ಆಗಿದೆ.

ಕುರ್‌ಆನಿನಿಂದ ಸಂಪೂರ್ಣ ಪ್ರಯೋಜನ ಸಿಗಬೇಕಾದರೆ ಕೆಲವು ವಿಷಯ ಅನಿವಾರ್ಯವಾಗುತ್ತವೆ-

1.ಪವಿತ್ರ ಕುರ್‌ಆನನ್ನು ಸಂಪೂರ್ಣ ಗೌರವ ಮತ್ತು ಮರ್ಯಾದೆಯೊಂದಿಗೆ, ಸರ್ವಲೋಕಗಳ ಆಜ್ಞಾಧಿಕಾರಿಯ ಗ್ರಂಥವಾಗಿದ್ದು ಆತನು ತನ್ನ ಕೃಪೆಯಿಂದ ನ ಮಾರ್ಗದರ್ಶನಕ್ಕಾಗಿ ಇದನ್ನು ಕಳುಹಿಸಿರುವನು ಎಂಬುದನ್ನು ಮನವರಿಕೆ ಮಾಡಿಕೊ ಪಾರಾಯಣ ಮಾಡಬೇಕಾಗಿದೆ.

2. ಏಕಾಗ್ರತೆ ಮತ್ತು ಪೂರ್ಣ ಶ್ರದ್ಧೆಯೊಂದಿಗೆ ಸಾವಧಾನದಿಂದ ಅದನ್ನು ಅರಿ ಸಕಲ ಪ್ರಯತ್ನವನ್ನು ಮಾಡಬೇಕು.

3. ಪವಿತ್ರ ಕುರ್‌ಆನ್ ಯಾವ ಕೆಲಸಗಳ ಆದೇಶ ನೀಡಿದೆಯೋ ಅವುಗಳ ಆತ್ಮಾವಲೋಕನ ಮಾಡಬೇಕು ಮತ್ತು ಅವುಗಳನ್ನು ಕೃತಿಗಿಳಿಸುವ ದೃಢ ನಿರ್ಧಾ ಮಾಡಬೇಕು. ಯಾವ ಕಾರ್ಯಗಳಿಂದ ತಮ್ಮನ್ನು ತಡೆಯಲಾಗಿದೆಯೋ ಅವುಗಳ ಆತ್ಮಾವಲೋಕನ ಮಾಡಿ ಅವುಗಳಿಂದ ದೂರವಿರುವ ದೃಢ ಸಂಕಲ್ಪ ಮಾಡಬೇಕು. ಪ ಕುರ್‌ಆನ್ ಇದಕ್ಕಾಗಿಯೇ ಅವತೀರ್ಣಗೊಂಡಿದೆ. ಅದನ್ನು ಓದುತ್ತಿರುವವರು ಮಾತುಗಳೆಲ್ಲವನ್ನೂ ತನ್ನೊಂದಿಗೇ ಹೇಳಲಾಗುತ್ತದೆ ಎಂದು ತಿಳಿದುಕೊಳ್ಳಬೇಕು.

4. ಪವಿತ್ರ ಕುರ್‌ಆನಿನಲ್ಲಿ ಪರಲೋಕದ ಪ್ರಸ್ತಾಪವು ಅನೇಕ ಬಾರಿ ಬಂದಿದೆ. ಅದ

ಯಾಗಿ ಗಮನಿಸಿ, ಸಂಪೂರ್ಣ ವಿಶ್ವಾಸದೊಂದಿಗೆ ಮನಮಸ್ತಿಷ್ಕಗಳಲ್ಲಿ ಅದನ್ನು ಕ್ಕೊತ್ತಿಕೊಂಡು ಪಾರಾಯಣ ಮಾಡಬೇಕು. ಶಿಕ್ಷೆಯ ಪ್ರಸ್ತಾಪ ಬಂದಾಗಲೆಲ್ಲ ಅದರ ಗ್ಗೆ ಭಯಪಟ್ಟು ಅಲ್ಲಾಹನಿಂದ ಅದರ ಬಗ್ಗೆ ಅಭಯ ಯಾಚಿಸಬೇಕಾಗಿದೆ. ಸ್ವರ್ಗದ ಸ್ತಾಪ ಬಂದಾಗಲೆಲ್ಲ ಅದನ್ನು ಆಸಕ್ತಿಯೊಂದಿಗೆ ಓದಿ ಅದಕ್ಕಾಗಿ ಅಲ್ಲಾಹನಲ್ಲಿ ರ್ಥಿಸಬೇಕಾಗಿದೆ. ನಮ್ಮನ್ನು ಸ್ವರ್ಗಕ್ಕೆ ಮತ್ತು ನರಕಕ್ಕೆ ಅರ್ಹರನ್ನಾಗಿ ಮಾಡುವ ರ್ಯಗಳು ಯಾವುವು ಎಂದು ತಿಳಿದು ನಾವೆಂತಹ ಕೆಲಸಗಳನ್ನು ಮಾಡುತ್ತಿದ್ದೇವೆಂದು ಮನಿಸಬೇಕು.

5. ಹಿಂದೆ ವಿನಾಶಕ್ಕೊಳಗಾದಂತಹ ಜನಾಂಗಗಳ ಪ್ರಸ್ತಾಪವು ಪವಿತ್ರ ಕುರ್‌ಆನಿನಲ್ಲಿ ನೇಕ ಬಾರಿ ಬಂದಿದೆ. ಆ ಸಂಭವಗಳಿಂದ ಪಾಠ ಪಡೆದು ಆ ಜನಾಂಗಗಳನ್ನು ನಾಶದೆಡೆಗೆ ಕೊಂಡೊಯ್ದ ಕೆಲಸಗಳಿಂದ ದೂರವಿರುವ ಪಣತೊಡಬೇಕು.

6. ಪ್ರವಾದಿಗಳು, ಅವರ ಅನುಯಾಯಿಗಳು ಮತ್ತು ಸತ್ಯವಿಶ್ವಾಸಿಗಳ ಸಾಧನೆಗಳು, ತ್ತವರ ಗುಣವಿಶೇಷತೆಗಳ ಬಗ್ಗೆ ಪವಿತ್ರ ಕುರ್‌ಆನಿನಲ್ಲಿ ಅನೇಕ ಬಾರಿ ಪ್ರಸ್ತಾಪವಿದೆ. ನನ್ನು ಸದಾ ತಮ್ಮ ಮುಂದಿರಿಸಿ ಅದನ್ನು ಅನುಸರಿಸುವ ಪಣತೊಡಬೇಕು.

7. ಪರಲೋಕಕ್ಕೆ ಇಹಲೋಕದ ಲಾಭಗಳಿಂದ ಹೆಚ್ಚು ಪ್ರಾಶಸ್ತ್ಯವನ್ನು ನೀಡಬೇಕೆಂದು ವಿತ್ರ ಕುರ್‌ಆನ್ ಒತ್ತುಕೊಟ್ಟು ಉಪದೇಶ ನೀಡುತ್ತದೆ. ಅದನ್ನು ಸರಿಯಾಗಿ ನೆನಪಿನಲ್ಲಿರಿಸಿ ನರ ಬೆಳಕಿನಲ್ಲಿ ಆತ್ಮಾವಲೋಕನ ನಡೆಸಬೇಕು.

ನಮಾಝ್ ಮತ್ತು ಕುರ್‌ಆನ್ ಪಾರಾಯಣವು ಅಲ್ಲಾಹನ ಸ್ಮರಣೆಯ ಅತ್ಯಂತ ತ್ತಮ ಸ್ವರೂಪವಾಗಿದೆಯಾದರೂ ಯಾವುದೇ ವ್ಯಕ್ತಿಗೆ ಸದಾ ನಮಾಝ್ ಮತ್ತು ಕುರ್‌ಆನ್ ರಾಯಣದಲ್ಲಿ ನಿರತನಾಗಿರಲು ಸಾಧ್ಯವಿಲ್ಲ. ನಾಮಾಝ್‌ನಿಂದ ವಿರಮಿಸಿದ ನಂತರವೂ ತ್ಯವಿಶ್ವಾಸಿಯು ಸದಾ ಅಲ್ಲಾಹನನ್ನು ಸ್ಮರಿಸುತ್ತಿರಬೇಕೆಂದು ಅಲ್ಲಾಹನು ಹೇಳುತ್ತಾನೆ-

فَإِذَا قَضَيْتُمُ الصَّلٰوةَ فَاذْكُرُوا اللّٰهَ قِيَامًا وَّقُعُوْدًا وَّعَلٰى جُنُوْبِكُمْ

"ನಮಾಝ್ ಮುಗಿಸಿಕೊಂಡ ಬಳಿಕ ತೂ ಕುಳಿತೂ ಮಲಗಿಯೂ ಎಲ್ಲ ವಸ್ಥೆಗಳಲ್ಲೂ ಅಲ್ಲಾಹನನ್ನು ಸ್ಮರಿಸುತ್ತಲೇ ." (ಸೂರಃ ಅನ್ನಿಸಾ- 103)

ಸತ್ಯವಿಶ್ವಾಸಿಯ ಮನಸ್ಸಿನಲ್ಲಿ ಸದಾ ಅಲ್ಲಾಹನ ನೆನಪು ಹಸಿರಾಗಿದ್ದರೆ ಮಾತ್ರ ಲ್ಲಾಹನ ಸ್ಮರಣೆಯು ಪೂರ್ತಿಯಾಗುತ್ತದೆ.

ಈ ಉದ್ದೇಶಕ್ಕಾಗಿ ನಾಲಗೆಯಿಂದ ಅಲ್ಲಾಹನ ಸ್ಮರಣೆಯನ್ನು ಮಾಡಬೇಕು.

ಆದುದರಿಂದಲೇ ಪ್ರವಾದಿ(ಸ) ಅನೇಕ ಪ್ರಾರ್ಥನೆಗಳನ್ನು ಕಲಿಸಿರುವರು ಮತ್ತು ವಿಭಿನ್ನ ದರ್ಭಗಳಲ್ಲಿ ಬೇರೆ ಬೇರೆ ವಚನಗಳನ್ನು ಪಠಿಸುವ ಉಪದೇಶ ನೀಡಿರುವರು. ಪ್ರವಾದಿ ಚನಗಳಲ್ಲಿ ಬಂದಿರುವಂತಹ ಪ್ರಾರ್ಥನೆಗಳು ಬಹಳ ವ್ಯಾಪಕ ಮತ್ತು ಸಮಗ್ರವಾಗಿವೆ. ರಾದರೂ ಅದನ್ನು ನಿರಂತರವಾಗಿ ಪಠಿಸುತ್ತಿದ್ದರೆ ಅದರ ನಂತರ ಅತನಿಗೆ ಪ್ರಾರ್ಥನೆಯಲ್ಲಿ

ತನ್ನಿಂದ ಅಥವಾ ಇತರರಿಂದ ಯಾವುದಾದರೂ ವಚನಗಳನ್ನು ಸೇರಿಸುವ ಅಗತ್ಯ ಬರಲಾರದ

ಅಲ್ಲಾಹನ ಸ್ಮರಣೆಗಾಗಿ ಇರುವ ಕೆಲವು ವಚನಗಳನ್ನು ಇಲ್ಲಿ ಕೊಡಲಾಗಿದೆ. ಅವು ಹೊರತಾಗಿಯೂ ಪ್ರವಾದಿಯವರಿಂದ(ಸ) ಇನ್ನೂ ಅನೇಕ ಪ್ರಾರ್ಥನೆಗಳು ವರದಿಯಾಗಿ ಮನಸ್ಸನ್ನು ಸದಾ ಅಲ್ಲಾಹನ ಸ್ಮರಣೆಯಿಂದ ಹಸಿರಾಗಿಡಲು ಈ ವಚನಗಳನ್ನು ನಿರಂತರವಾ ಪಠಿಸುವುದು ಬಹಳ ಉಪಯುಕ್ತ. ಅದರಿಂದ ನೈಜ ಪ್ರಯೋಜನ ಸಿಗಬೇಕಾದರೆ ಅದ ಅರ್ಥವರಿತು ಓದಬೇಕಾದುದು ಮತ್ತು ಅರ್ಥವನ್ನು ಮನೋಗತಗೊಳಿಸಬೇಕಾದು ಅತ್ಯಗತ್ಯವಾಗಿದೆ. ಅರ್ಥವನ್ನು ತಿಳಿಯದೆ ಓದಿದರೆ ಮನಸ್ಸು ಸದಾ ಅಲ್ಲಾಹನ ಸಂಪ್ರೀ ಮತ್ತು ಸಂಸ್ಮರಣೆಯಿಂದ ತುಂಬಿರಲಾರದು-

1. ಪ್ರವಾದಿವರ್ಯರು(ಸ) ಹೇಳಿರುವರು, 'ಲಾ ಇಲಾಹ ಇಲ್ಲಲ್ಲಾಹ್' ಎಂ ವಚನವು ಬಹಳ ಶ್ರೇಷ್ಠವಾದುದಾಗಿದೆ. 'ಲಾ ಇಲಾಹ ಇಲ್ಲಲ್ಲಾಹ್'ಎಂಬ ವಚನ ಅರ್ಥವನ್ನು ನಾವು ಈ ಹಿಂದೆ ಓದಿದ್ದೇವೆ. ಈ ವಚನವನ್ನು ನಿರಂತರ ಪಠಿಸುವ ವ್ಯಕ್ತಿಯ ತನ್ನ ಪ್ರಭು, ಒಡೆಯ, ಆರಾಧ್ಯ ಮತ್ತು ಆಜ್ಞಾಧಿಕಾರಿಯು ಕೇವಲ ಅಲ್ಲಾಹನಾಗಿದ್ದಾ ಎಂಬುದನ್ನು ಸ್ಮರಿಸುತ್ತಲಿರುವನು. ಆಗ ಅವನ ಮನಸ್ಸಿನಲ್ಲಿ ಅಲ್ಲಾಹನೊಂದಿಗಿನ ಸಂಪ್ರೀ ಎಷ್ಟು ವೃದ್ಧಿಸುವುದೆಂದರೆ ಅವನು ಅಲ್ಲಾಹನ ಹೊರತು ಇತರೆಲ್ಲರಿಂದಲೂ ವಿಮುಖನಾಗುತ್ತಾ ಅವನು ಅಲ್ಲಾಹನ ವಿನಾ ಯಾರನ್ನೂ ಭಯಪಡಲಾರನು ಮತ್ತು ಯಾರ ಮುಂದೆಯ ಕೈಯೊಡ್ಡಲಾರನು. ಅವನ ದೃಷ್ಟಿಯಲ್ಲಿ ಕೇವಲ ಅಲ್ಲಾಹನು ಮಾತ್ರವೇ ಆವರಿಸಿಕೊಂಡಿರುವ ಪ್ರವಾದಿ ವಚನಗಳಲ್ಲಿ ಈ ವಚನಗಳನ್ನು ಪಠಿಸುವುದಕ್ಕಿರುವ ಅನೇಕ ಪುಣ್ಯಫಲಗಳ ವಿವರಿಸಲಾಗಿದೆ-

ಪ್ರವಾದಿವರ್ಯರು(ಸ) ಹೇಳಿರುವರು, 'ಲಾ ಇಲಾಹ ಇಲ್ಲಲ್ಲಾಹ್' ಎಂಬ ವಚನದಿಂ ನಿಮ್ಮ ವಿಶ್ವಾಸವನ್ನು ನವೀಕರಿಸುತ್ತಲಿರಿ."

2. ಈ ಕೆಳಗಿನ ವಚನಗಳು ಅಲ್ಲಾಹ್ ಮತ್ತು ಆತನ ಸಂದೇಶವಾಹಕರಿಗೆ ಬಹ ಪ್ರಿಯಕರವಾದ ವಚನಗಳಾಗಿವೆ-

"ಸುಬ್ಹಾನಲ್ಲಾಹಿ ವಲ್‌ಹಮ್ದುಲಿಲ್ಲಾಹಿ ವಲಾ ಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್."

بْحَانَ اللهِ وَالْحَمْدُ
لِلّٰهِ وَلَا إِلٰهَ إِلَّا اللهُ
اللهُ أَكْبَرُ-

"ಅಲ್ಲಾಹನು ಅತ್ಯಂತ ಪಾವನನು, ಸರ್ವಸ್ತುತಿ ಸ್ತೋತ್ರಗಳು ಆತನಿಗೇ ಮೀಸಲ ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಅಲ್ಲಾಹನು ಅತ್ಯಂತ ಮಹಾನನು." (ಮುಸ್ಲಿಮ

3. ಈ ಎರಡು ವಚನಗಳು ಬಹಳ ಪುಣ್ಯದಾಯಕವಾಗಿವೆ ಮತ್ತು ದಯಾಮಯನಾ ಅಲ್ಲಾಹನಿಗೆ ಅತ್ಯಂತ ಪ್ರಿಯವಾದುದಾಗಿದೆ-

"ಸುಬ್ಹಾನಲ್ಲಾಹಿ ವಬಿಹಮ್ದಿಹಿ, ಸುಬ್ಹಾನಲ್ಲಾಹಿಲ್ ಅಝೀಮ್"

سُبْحَانَ اللهِ وَبِحَمْدِهِ سُبْحَانَ اللهِ الْعَظِيْمِ

"ಅಲ್ಲಾಹನು ಪರಮ ಪಾವನನು ಮತ್ತು ಸ್ತುತಿ ಸ್ತೋತ್ರಗಳು ಅವನಿಗೆ ಮೀಸಲು ಮಹಾನನಾದ ಅಲ್ಲಾಹನು ಅತ್ಯಂತ ಪಾವನನು." (ಬುಖಾರಿ, ಮುಸ್ಲಿಮ್)

4. ಈ ಕೆಳಗಿನ ಪ್ರಾರ್ಥನೆಯನ್ನು ದಿನದಲ್ಲಿ ನೂರು ಸಲ ಪಠಿಸಿದರೆ ಹತ್ತು ಕೈದಿಗಳನ್ನು ಮೋಚಿಸಿದ ಪ್ರತಿಫಲ ಲಭಿಸುತ್ತದೆ. ಅದಕ್ಕೆ ಪ್ರತಿಯಾಗಿ ಒಳಿತು ದಾಖಲಿಸಲ್ಪಡುವುದು, ಕೆಡುಕುಗಳನ್ನು ಅಳಿಸಲಾಗುವುದು ಮತ್ತು ಆ ದಿನದ ಮಟ್ಟಿಗೆ ಶೈತಾನನಿಂದ ರಕ್ಷಣೆ ದೊರಕುವುದು.

"ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕಲಹೂ ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್."

لَا إِلٰهَ إِلَّا اللهُ وَحْدَهُ لَا شَرِيْكَ لَهُ لَهُ الْمُلْكُ وَلَهُ الْحَمْدُ وَهُوَ عَلٰى كُلِّ شَيْءٍ قَدِيْرٌ

"ಅಲ್ಲಾಹನಲ್ಲದೆ ಅನ್ಯ ಆರಾಧ್ಯನಿಲ್ಲ, ಅವನು ಏಕೈಕನು, ಅವನಿಗಾರೂ ಸಹಭಾಗಿಗಳಿಲ್ಲ, ಸಕಲ ಅಧಿಕಾರಗಳು ಅವನಿಗೇ ಮೀಸಲು, ಅವನೇ ಸ್ತುತಿಸ್ತೋತ್ರಗಳಿಗೆ ಅರ್ಹನು. ಅವನು ಸರ್ವಶಕ್ತನು". (ಬುಖಾರಿ, ಮುಸ್ಲಿಮ್)

5) ಈ ಪ್ರಾರ್ಥನೆಯು ಸ್ವರ್ಗದ ನಿಧಿಗಳ ಪೈಕಿ ಒಂದು ನಿಧಿಯಾಗಿದೆ-

"ಲಾ ಹೌಲವಲಾ ಕುವ್ವತ ಇಲ್ಲಾ ಬಿಲ್ಲಾಹ್." (ಬುಖಾರಿ, ಮುಸ್ಲಿಮ್)

لَا حَوْلَ وَلَا قُوَّةَ إِلَّا بِاللهِ

"ಅಲ್ಲಾಹನ ಹೊರತು ಇನ್ನಾರಲ್ಲೂ ಶಕ್ತಿ ಸಾಮರ್ಥ್ಯಗಳಿಲ್ಲ."

ಕೆಲವು ವಿಶೇಷ ಸಂದರ್ಭಗಳ ಪ್ರಾರ್ಥನೆಗಳು

1. ಮಲಗುವ ಸಮಯದಲ್ಲಿ ಪ್ರವಾದಿವರ್ಯರು(ಸ) ಅನೇಕ ಪ್ರಾರ್ಥನೆಗಳನ್ನು ಪಠಿಸುತ್ತಿದ್ದರು. ಅವುಗಳಲ್ಲಿ ಮೂರನ್ನು ಇಲ್ಲಿ ಕೊಡಲಾಗಿದೆ-

I) "ಬಿಸ್ಮಿಕ ರಬ್ಬೀ ವದಅತು ಜಂಬೀ ಬಿಕರ್ಫಉಹೂ ಇನ್ ಅಮ್‌ಸಕ್ತ ನಫ್ಸೀ

بِاسْمِكَ رَبِّي وَضَعْتُ جَنْبِي وَبِكَ أَرْفَعُهُ

ಫರ್‌ಹಮ್‌ಹಾ ವಇನ್ ಅರ್‌ಸಲ್‌ತಹಾ ಫಹ್‌ಫಝ್‌ಹಾ ಬಿಮಾ ತಹ್‌ಫಝು ಬಿಹಿ ಇಬಾದಿಕಸ್ಸಾಲಿಹೀನ್".

أمْسَكْتَ نَفْسِي
رْحَمْهَا وَإِنْ أَرْسَلْتَهَا
فَظْهَا بِمَا تَحْفَظُ بِهِ
ادِكَ الصَّالِحِينَ

"ಓ ನನ್ನ ಪ್ರಭೂ! ನಿನ್ನ ನಾಮದೊಂದಿಗೆ ನಾನು ನನ್ನ ಪಾರ್ಶ್ವವನ್ನು ಹಾಸಿ ಮೇಲಿಡುತ್ತೇನೆ. ನಿನ್ನ ಸಹಾಯದಿಂದಲೇ ಅದನ್ನು ಹಾಸಿಗೆಯಿಂದ ಎತ್ತುವೆನು. ನಿ ರಾತ್ರಿಯೇ ನನ್ನ ಪ್ರಾಣ ತೆಗೆದರೆ ಅದರ ಮೇಲೆ ಕರುಣೆ ತೋರು. ಆದರೆ ನೀನು ಅ ಮತ್ತಷ್ಟು ಅವಧಿ ಕೊಟ್ಟು ಬಿಟ್ಟರೆ ಅದನ್ನು ನಿನ್ನ ಸಜ್ಜನ ದಾಸರನ್ನು ರಕ್ಷಿಸುವಂತೆ ರಕ್ಷಿ

(ಬುಖಾರಿ, ಮುಸ್ಲಿ

2) "ಬಿಸ್‌ಮಿಕ ಅಲ್ಲಾಹುಮ್ಮ ಅಮೂತು ವ ಅಹ್ಯಾ."

مِكَ اللَّهُمَّ أَمُوتُ وَأَحْيَى

"ನಿನ್ನ ನಾಮದೊಂದಿಗೆ ಓ ಅಲ್ಲಾಹ್! ನಾನು ಸಾಯುವೆನು ಮತ್ತು ನಾಮದೊಂದಿಗೇ ಜೀವಂತ ಎದ್ದೇಳುವೆನು." (ಬುಖಾರಿ, ಮುಸ್ಲಿ

3) "ಅಲ್ಲಾಹುಮ್ಮ ಅಸ್‌ಲಮ್ತು ನಫ್‌ಸೀ ಇಲೈಕ ವವಜ್ಜಹ್‌ತು ವಜ್‌ಹಿಯ ಇಲೈಕ, ವಫವ್ವದ್‌ತ್ತು ಅಮ್ರೀ ಇಲೈಕ, ವಅಲ್‌ಜಅತು ಝಹ್ರೀ ಇಲೈಕ, ರಗ್‌ಬತನ್ ವರಹ್‌ಬತನ್ ಇಲೈಕ, ಲಾ ಮಲ್‌ಜಅ ವಲಾ ಮನ್‌ಜಅ ಮಿನ್‌ಕ ಇಲ್ಲಾ ಇಲೈಕ, ಆಮನ್ತು ಬಿಕಿತಾಬಿಕಲ್ಲದೀ ಅನ್‌ಝಲ್ತ ವನಬಿಯ್ಯಿಕಲ್ಲದೀ ಅರ್‌ಸಲ್‌ತ".

مَّ أَسْلَمْتُ نَفْسِي
كَ وَوَجَّهْتُ وَجْهِي إِلَيْكَ
وَّضْتُ أَمْرِي إِلَيْكَ
لْجَأْتُ ظَهْرِي إِلَيْكَ
بَةً وَرَهْبَةً إِلَيْكَ لَا
جَأَ وَلَا مَنْجَا مِنْكَ إِلَّا
كَ آمَنْتُ بِكِتَابِكَ
ذِي أَنْزَلْتَ وَنَبِيِّكَ
ذِي أَرْسَلْتَ

"ಓ ಅಲ್ಲಾಹ್, ನಾನು ನನ್ನನ್ನು ನಿನಗೆ ಸಮರ್ಪಿಸಿದ್ದೇನೆ. ನನ್ನ ಮುಖವನ್ನು ನಿನ್ನೆಡೆಗೆ ಂಗಿಸಿದ್ದೇನೆ. ನನ್ನ ವ್ಯವಹಾರಗಳನ್ನು ನಿನ್ನ ವಶಕ್ಕೊಪ್ಪಿಸಿದ್ದೇನೆ. ನನ್ನ ಬೆನ್ನನ್ನು ನಿನ್ನ ರೆಯಲ್ಲಿರಿಸಿದ್ದೇನೆ. ಇದೆಲ್ಲವೂ ನಿನ್ನ ಪ್ರತಿಫಲದ ಅಪೇಕ್ಷೆ ಮತ್ತು ನಿನ್ನ ಶಿಕ್ಷೆಯ ುದಿಂದಾಗಿದೆ. ನೀನಲ್ಲದೆ ಇನ್ನಾರೂ ಅಭಯ ನೀಡುವವರಿಲ್ಲ ಮತ್ತು ನಿನ್ನ ಶಿಕ್ಷೆಯಿಂದ ್ಷಿಸಿಕೊಳ್ಳಲು ನಿನ್ನೆಡೆಗೆ ಮರಳುವುದಲ್ಲದೆ ಬೇರೆ ಮಾರ್ಗವಿಲ್ಲ. ನೀನು ಅವತೀರ್ಣಗೊಳಿಸಿದ ಂಥದ ಮೇಲೆ ನಾನು ವಿಶ್ವಾಸವಿರಿಸಿದ್ದೇನೆ ಮತ್ತು ನೀನು ಕಳುಹಿಸಿದ ಪ್ರವಾದಿಯ ಮೇಲೆ ನು ವಿಶ್ವಾಸವಿರಿಸಿದ್ದೇನೆ." (ಬುಖಾರಿ, ಮುಸ್ಲಿಮ್)

ಇವುಗಳ ಹೊರತು ಪ್ರವಾದಿವರ್ಯರು(ಸ) ಮಲಗುವಾಗ ಕುರ್‌ಆನ್‌ನ ಅನೇಕ ಸೂರಃ ನ್ನು ಪಠಿಸುತ್ತಿದ್ದರು. ಕುರ್‌ಆನ್‌ನ ಯಾವುದಾದರೂ ಸೂರಃವನ್ನು ಪಠಿಸುವುದು ಉತ್ತಮ ಗಿದೆ. ವಿಶೇಷವಾಗಿ ಆಯತುಲ್ ಕುರ್ಸಿ ಅಥವಾ ಸೂರಃ ಅಲ್ ಬಕರಃದ 'ಆಮನರ್ರಸೂಲು'ನಿಂದ ರಂಭವಾಗುವ ಅಂತಿಮ ಸೂಕ್ತಗಳು ಅಥವಾ ಸೂರಃ ಇಖ್‌ಲಾಸ್, ಸೂರಃ ಫಲಕ್ ಮತ್ತು ೂರಃ ಅನ್ನಾಸ್. (ಬುಖಾರಿ, ಮುಸ್ಲಿಮ್)

2. ನಿದ್ರೆಯಿಂದ ಎಚ್ಚೆತ್ತಾಗ ಪ್ರವಾದಿಯವರು(ಸ) ಹೀಗೆ ಪಠಿಸುತ್ತಿದ್ದರು-

"ಅಲ್‌ಹಮ್ದು ಲಿಲ್ಲಾಹಿಲ್ಲದೀ ಹ್‌ಯಾನಾ ಬಅ್‌ದಮಾ ಅಮಾತನಾ ಇಲೈಹಿನ್ನುಶೂರ್."

اَلْحَمْدُ لِلّٰهِ الَّذِيْ اَحْيَانَا بَعْدَ مَا اَمَاتَنَا وَاِلَيْهِ النُّشُوْرُ

"ನಮ್ಮನ್ನು ಮರಣದ ಬಳಿಕ ಜೀವಂತ ಎದ್ದೇಳಿಸಿದ ಅಲ್ಲಾಹನಿಗೆ ಸರ್ವ ಸ್ತುತಿ, ್ತೋತ್ರಗಳು. ಅವನೆಡೆಗೇ ನಾವು ಸಾಗಬೇಕಾಗಿದೆ." (ಬುಖಾರಿ, ಮುಸ್ಲಿಮ್)

3. ಸಂಜೆ ಮುಂಜಾನೆಗಳಲ್ಲಿ ಪ್ರವಾದಿಯವರು(ಸ) ಅನೇಕ ಪ್ರಾರ್ಥನೆಗಳನ್ನು ಠಿಸುತ್ತಿದ್ದರು. ಅವುಗಳಲ್ಲಿ ಮೂರನ್ನು ಇಲ್ಲಿ ಕೊಡಲಾಗಿದೆ-

ಅ) "ಅಲ್ಲಾಹುಮ್ಮ ಆಲಿಮುಲ್ ಗೈಬಿ ಶ್ಶಹಾದತಿ, ಫಾತಿರಿಸ್ಸಮಾವಾತಿ ವಲ್ ರ್‌ದ್. ರಬ್ಬಿಕುಲ್ಲಿ ಶಯ್ಯಿನ್ ವ ಮಲೀಕಹು. ಶ್ಹದು ಅಲ್ಲಾಹಿಲಾಹ ಇಲ್ಲಾ ಅನ್‌ತ ಊದುಬಿಕ ಮಿನ್ ಶರ್‍ರಿನಫ್‌ಸೀ ವಮಿನ್ ್ರಿಶೈತಾನೀ ವಶಿರ್‌ಕಿಹೀ."

اَللّٰهُمَّ عَالِمَ الْغَيْبِ وَالشَّهَادَةِ فَاطِرَ السَّمٰوٰتِ وَالْاَرْضِ رَبَّ كُلِّ شَيْءٍ وَمَلِيْكَهٗ اَشْهَدُ اَنْ لَّا اِلٰهَ اِلَّا اَنْتَ اَعُوْذُ بِكَ مِنْ شَرِّ نَفْسِيْ وَمِنْ شَرِّ الشَّيْطَانِ وَشِرْكِهٖ

"ಓ ಅಲ್ಲಾಹ್ ಪ್ರತ್ಯಕ್ಷ ಪರೋಕ್ಷದ ಜ್ಞಾನಿಯೇ, ಭೂಮಿ-ಆಕಾಶಗಳ ಕರ್ತೃ, ಸ ವಸ್ತುಗಳ ಪ್ರಭು ಮತ್ತು ಒಡೆಯನೇ, ನೀನಲ್ಲದೆ ಅನ್ಯ ಆರಾಧ್ಯರಿಲ್ಲ ಎಂದು ನಾ ಸಾಕ್ಷ್ಯವಹಿಸುತ್ತೇನೆ. ನಾನು ನನ್ನ ದೇಹೇಚ್ಛೆಯ ಉಪಟಳದಿಂದ, ಶೈತಾನನ ಕಿರುಕುಳದಿ ಮತ್ತು ಬಹುದೇವಾರಾಧನೆಯಿಂದ ನಿನ್ನ ಅಭಯವನ್ನು ಯಾಚಿಸುತ್ತೇನೆ."

(ತಿರ್ಮಿದಿ, ಅಬೂ ದಾವೂದ್, ದಾರಿ

ಆ) "ರದೀತು ಬಿಲ್ಲಾಹಿ ರಬ್ಬನ್ ವಬಿಲ್ ಇಸ್ಲಾಮಿ ದೀನನ್ ವಬಿ ಮುಹಮ್ಮದಿನ್ ನಬೀಯನ್."

ضِيتُ بِاللهِ رَبًّا وَبِالْإِ
لَامِ دِينًا وَبِمُحَمَّدٍ نَبِيًّا

"ನಾನು ಅಲ್ಲಾಹನನ್ನು ನನ್ನ ಪ್ರಭುವಾಗಿ, ಇಸ್ಲಾಮನ್ನು ನನ್ನ ಧರ್ಮವಾಗಿ ಸ್ವೀಕ ಮತ್ತು ಪ್ರವಾದಿ ಮುಹಮ್ಮದ್‌ರನ್ನು(ಸ) ನನ್ನ ಪ್ರವಾದಿಯೆಂದು ಒಪ್ಪಿಕೊಂ ಸಂತೃಪ್ತನಾಗಿದ್ದೇನೆ."

(ಅಹ್ಮದ್, ತಿರ್ಮಿ

ಇ) "ಅಲ್ಲಾಹುಮ್ಮ ಮಾ ಅಸ್‌ಬಹಬೀ (ಸಂಜೆ 'ಮಾ ಅಸ್‌ಬಹ'ದ ಬದಲಿಗೆ 'ಮಾ ಅವ್‌ಸಾ') ಮಿನ್ ನಿಅ್‌ಮತಿನ್ ಔ ಬಿಅಹದಿಮ್ಮಿನ್ ಖಲ್‌ಖಿಕ ಫಮಿನ್‌ಕ ವಹ್‌ದುಕ ಲಾ ಶರೀಕ ಲಕ ಫಲಕಲ್ ಹಮ್ದು ವಲಕಶ್ಶುಕ್ರ್."

اللّٰهُمَّ مَا أَصْبَحَ بِي
مَا أَمْسَى) مِنْ نِعْمَةٍ أَوْ بِأَحَدٍ
ِنْ خَلْقِكَ فَمِنْكَ وَحْدَكَ
شَرِيكَ لَكَ فَلَكَ الْحَمْدُ
لَكَ الشُّكْرُ

"ಓ ಅಲ್ಲಾಹ್! ನನ್ನ ಮೇಲೆ ಅಥವಾ ನಿನ್ನ ಯಾವುದೇ ಸೃಷ್ಟಿಯ ಮೇಲೆ ಬಂ ಅನುಗ್ರಹಗಳೆಲ್ಲವೂ ಕೇವಲ ನಿನ್ನ ಕಡೆಯಿಂದ ಬಂದಿರುತ್ತದೆ. ನಿನಗೆ ಯಾರೂ ಭಾಗೀದಾರರೀ ಸ್ತುತಿ ಸ್ತೋತ್ರಗಳು ಮತ್ತು ಕೃತಜ್ಞತೆಗಳೆಲ್ಲವೂ ನಿನಗೇ ಮೀಸಲು. (ಅಬೂ ದಾವೂದ

4. ಪ್ರಯಾಣಕ್ಕೆ ಹೊರಡುವಾಗ ಮತ್ತು ವಾಹನದಲ್ಲಿ ಕುಳಿತುಕೊಳ್ಳುವಾಗ ಈ ರೀ ಪ್ರಾರ್ಥಿಸುತ್ತಿದ್ದರು-

"ಸುಬ್ಹಾನಲ್ಲದೀ ಸಖ್ಖರಲನಾ ಹಾದಾ ವಮಾ ಕುನ್ನಾ ಲಹೂ ಮುಕ್‌ರಿನೀನ್. ಅಲ್ಲಾಹುಮ್ಮ ಇನ್ನಾ ನಸ್‌ಅಲುಕ ಫೀ ಸಫರಿನಾ ಹಾದಲ್ ಬಿರ್‍ರ ವತ್ತಕ್‌ವಾ ವಮಿನಲ್ ಅಮಲಿ ಮಾತರ್‌ದಾ ಅಲ್ಲಾಹುಮ್ಮ ಹವ್ವಿನ್ ಅಲೈನಾ ಸಫರನಾ ಹಾದಾ ವತ್‌ವಿ ಅನ್ನಾ ಬುಅ್‌ದಹೂ ಅಲ್ಲಾಹುಮ್ಮ ಅಂತಸ್ಸಾಹಿಬು ಫಿಸ್ಸಫರಿ ವಲ್

ُبْحَانَ الَّذِي سَخَّرَ لَنَا
ذَا وَمَا كُنَّا لَهُ مُقْرِنِينَ،
للّٰهُمَّ إِنَّا نَسْأَلُكَ فِي سَفَرِنَا
ذَا الْبِرَّ وَالتَّقْوَى وَمِنَ الْعَمَلِ

مَا تَرْضَى اللَّهُمَّ هَوِّنْ عَلَيْنَا
سَفَرَنَا هَذَا وَاطْوِ لَنَا بُعْدَهُ
اللَّهُمَّ أَنْتَ الصَّاحِبُ فِي
السَّفَرِ وَالْخَلِيفَةُ فِي الْأَهْلِ
اللَّهُمَّ إِنِّي أَعُوذُ بِكَ مِنْ
وَعْثَاءِ السَّفَرِ وَكَآبَةِ الْمَنْظَرِ
وَسُوءِ الْمُنْقَلَبِ فِي الْمَالِ
وَالْأَهْلِ ط

ಫತು ಫಿಲ್ ಅಹ್ಲಿ ಅಲ್ಲಾಹುಮ್ಮ ಇನ್ನೀ ದುಬಿಕ ಮಿನ್ ವಅ್‌ಸಾಇಸ್ಸಫರಿ ಬತಿಲ್ ಮನ್‌ರ್ಘರಿ ವಸೂಇಲ್ ಕಲಬಿ ಫಿಲ್ ಮಾಲಿ ವಲ್ ಅಹ್ಲಿ."

"ನಮಗೆ ಈ ವಾಹನವನ್ನು ಅಧೀನಗೊಳಿಸಿದ ಅಲ್ಲಾಹನೇ ಪರಮ ಪಾವನನು. ಥಾ ನಾವಿದನ್ನು ಅಧೀನಗೊಳಿಸಲು ಶಕ್ತರಾಗಿರಲಿಲ್ಲ. ಖಂಡಿತ ನಾವು ನಮ್ಮ ುವಿನೆಡೆಗೆ ಮರಳುವವರಿದ್ದೇವೆ. ಓ ಅಲ್ಲಾಹ್, ನಾವು ಈ ಯಾತ್ರೆಯಲ್ಲಿ ನಿನ್ನಿಂದ ್ಯ ಮತ್ತು ದೇವನಿಷ್ಠೆಯನ್ನು ಯಾಚಿಸುತ್ತೇವೆ. ನಿನ್ನ ಸಂಪ್ರೀತಿಯ ಕಾರ್ಯಗಳ ಾಗ್ಯವನ್ನು ಯಾಚಿಸುತ್ತೇವೆ. ಓ ಅಲ್ಲಾಹ್! ಈ ಪ್ರಯಾಣವನ್ನು ನಮಗೆ ಸುಲಭಗೊಳಿಸು. ರ ದೂರವನ್ನು ನಮಗೆ ಸಂಕ್ಷಿಪ್ತಗೊಳಿಸು. ಓ ಅಲ್ಲಾಹ್! ನೀನೇ ನಮ್ಮ ಯಾತ್ರೆಯ ಗಾತಿ. ನಮ್ಮ ಮನೆಯವರಲ್ಲಿ ನಮ್ಮ ಪ್ರತಿನಿಧಿ ಮತ್ತು ಸಂರಕ್ಷಕನಾಗಿರುತ್ತೀ. ಓ ್ಲಾಹ್! ಪ್ರಯಾಣದ ಸಂಕಷ್ಟಗಳಿಂದ ಮತ್ತು ಅಪ್ರಿಯ ದೃಶ್ಯಗಳಿಂದ ನಾನು ನಿನ್ನ ಯ ಯಾಚಿಸುತ್ತೇನೆ. ನನ್ನ ಸೊತ್ತಿನೆಡೆಗೆ, ನನ್ನವರ ಬಳಿಗೆ ಮತ್ತು ಕೆಟ್ಟ ಮರಳುವಿಕೆಯಿಂದ ಅಭಯ ಯಾಚಿಸುತ್ತೇನೆ." (ಮುಸ್ಲಿಮ್)

ಪ್ರಯಾಣದಿಂದ ಹಿಂತಿರುಗುವಾಗ ಇದೇ ಪ್ರಾರ್ಥನೆಯನ್ನು ಪಠಿಸುತ್ತಿದ್ದರು ಮತ್ತು ರಕ್ಕೆ ಈ ಕೆಳಗೆ ಕೊಟ್ಟಿರುವುದನ್ನು ಸೇರಿಸುತ್ತಿದ್ದರು.

آيِبُونَ تَائِبُونَ عَابِدُونَ
لِرَبِّنَا حَامِدُونَ ط

"ಆಇಬೂನ ತಾಇಬೂನ ಆಬಿದೂನ ಬ್ಬಿನಾ ಹಾಮಿದೂನ್."

"ನಾವು ಮರಳುವವರಾಗಿದ್ದೇವೆ, ನಾವು ಪಶ್ಚಾತ್ತಾಪ ಪಡುವವರಾಗಿದ್ದೇವೆ. ನಾವು ಸ್ಯ-ಆರಾಧನೆ ಮಾಡುವವರಾಗಿದ್ದೇವೆ. ನಾವು ನಮ್ಮ ಪ್ರಭುವನ್ನು ಸ್ತುತಿಸುವವರಾಗಿದ್ದೇವೆ" (ಮುಸ್ಲಿಮ್)

ಯಾರನ್ನಾದರೂ ಪ್ರಯಾಣಕ್ಕೆ ಬೀಳ್ಕೊಡುವಾಗ ಪ್ರವಾದಿಯವರು(ಸ) ಈ ರೀತಿ

ಪ್ರಾರ್ಥಿಸುತ್ತಿದ್ದರು:

"ಅಸ್ತೌದಿ ಉಲ್ಲಾಹ ದೀನಕ ವಅಮಾನತಕ ವ ಆಖಿರ ಅಮಲಿಕ."

ستودِعُ اللهَ دِيْنَكَ
انَتَكَ وَآخِرَ عَمَلِكَ -

"ನಾನು ನಿಮ್ಮ ಧರ್ಮ, ನಿಮ್ಮ ನಿಷ್ಠೆ ಮತ್ತು ನಿಮ್ಮ ಕರ್ಮವನ್ನು ಅಲ್ಲಾ ವಶ ಒಪ್ಪಿಸುತ್ತೇನೆ." (ತಿರ್ಮಿದಿ, ಅಬೂ ದಾವೂದ್, ಇಬ್ನುಮಾ

5. ಮನೆಯಿಂದ ಹೊರಡುವಾಗ ಪ್ರವಾದಿಯವರು(ಸ) ಹೀಗೆ ಪ್ರಾರ್ಥಿಸುತ್ತಿದ್ದ

"ಅಲ್ಲಾಹುಮ್ಮ ಇನ್ನೀ ಅಊದುಬಿಕ ಅನ್ ಅದಿಲ್ಲ ಔ ಉದಲ್ಲ ಔ ಅಝ್‌ಲಿಮ ಔ ಉಝ್‌ಲಮ ಔ ಅಜ್‌ಹಲ ಔ ಯುಜ್‌ಹಲ ಅಲಯ್ಯ."

هُمَّ إِنِّي أَعُوذُبِكَ أَنْ
ِلَّ أَوْ أُضَلَّ أَوْ أَظْلِمَ
أُظْلَمَ أَوْ أَجْهَلَ أَوْ
ُجْهَلَ عَلَيَّ -

"ಓ ಅಲ್ಲಾಹ್! ನಾನು ಪಥಭ್ರಷ್ಟನಾಗುವುದರಿಂದ ಮತ್ತು ಇತರರು ನನ ಪಥಭ್ರಷ್ಟಗೊಳಿಸುವುದರಿಂದ, ನಾನು ಅನ್ಯಾಯವೆಸಗುವುದರಿಂದ ಮತ್ತು ಇತರರ ಅನ್ಯಾಯ ಒಳಗಾಗುವುದರಿಂದ, ನಾನು ತಿಳಿಗೇಡಿಯಾಗುವುದರಿಂದ ಮತ್ತು ಇತರರ ತಿಳಿಗೇಡಿತನ ವರ್ತನೆಗೆ ಒಳಗಾಗುವುದರಿಂದ ನಿನ್ನ ಅಭಯ ಯಾಚಿಸುತ್ತೇನೆ."

(ಅಬೂ ದಾವೂದ್, ಇಬ್ನು ಮಾ

6. ಮನೆಗೆ ಪ್ರವೇಶಿಸುವಾಗ ಹೀಗೆ ಪ್ರಾರ್ಥಿಸಿ ಮನೆಯವರಿಗೆ ಸಲಾಮ್ ಹೇಳಬೇಕೆಂ ಪ್ರವಾದಿವರ್ಯರು(ಸ) ಹೇಳಿದ್ದಾರೆ.

"ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರಲ್ ಮೌಲಜಿ ವ ಖೈರಲ್ ಮುಖ್‌ರಜಿ, ಬಿಸ್ಮಿಲ್ಲಾಹಿ ವಲಜ್‌ನಾ ವಅಲಲ್ಲಾಹಿ ರಬ್ಬನಾ ತವಕ್ಕಲ್‌ನಾ."

لَّهُمَّ إِنِّي أَسْئَلُكَ خَيْرَ
لْمَوْلِجِ وَخَيْرَ الْمَخْرَجِ،
سْمِ اللهِ وَلَجْنَا وَعَلَى اللهِ
َبِّنَا تَوَكَّلْنَا

"ಓ ಅಲ್ಲಾಹ್, ನಾನು ನಿನ್ನಿಂದ ಅತ್ಯುತ್ತಮವಾದ ಪ್ರವೇಶ ಮತ್ತು ಅತ್ಯುತ್ತಮವಾ ನಿರ್ಗಮನವನ್ನು ಬಯಸುತ್ತೇನೆ. ಅಲ್ಲಾಹನ ನಾಮದೊಂದಿಗೆ ನಾವು ಪ್ರವೇಶಿಸಿದೆವು ಮ ನಮ್ಮ ಪ್ರಭುವಾದ ಅಲ್ಲಾಹನ ಮೇಲೆ ನಾವು ಭರವಸೆ ಇರಿಸಿದೆವು." (ಅಬೂ ದಾವೂದ

7. ಸಂಕಷ್ಟಗಳು ಬಂದಾಗ ಪ್ರವಾದಿವರ್ಯರು(ಸ) ಹೀಗೆ ಪ್ರಾರ್ಥಿಸುತ್ತಿದ್ದರು-

"ಲಾ ಇಲಾಹ ಇಲ್ಲಲ್ಲಾಹುಲ್ ಝೀಮುಲ್ ಹಲೀಮ್, ಲಾ ಇಲಾಹ ಲ್ಲಾಹು ರಬ್ಬುಲ್ ಅರ್ಷಿಲ್ ಝೀಮ್ ಲಾ ಇಲಾಹ ಇಲ್ಲಲ್ಲಾಹು ಸ್ಸಮಾವಾತಿ ವರಬ್ಬುಲ್ ಅರ್ದಿ ಬ್ಬುಲ್ ಅರ್ಷಿಲ್ ಕರೀಮ್"

لَا إِلَٰهَ إِلَّا اللَّهُ الْعَظِيمُ
الْحَلِيمُ لَا إِلَٰهَ إِلَّا اللَّهُ
رَبُّ الْعَرْشِ الْعَظِيمِ،
لَا إِلَٰهَ إِلَّا اللَّهُ رَبُّ السَّمَاوَاتِ
وَرَبُّ الْأَرْضِ وَرَبُّ
الْعَرْشِ الْكَرِيمِ -

"ಮಹಾನನೂ ಅತ್ಯಂತ ಸಹನಶೀಲನೂ ಆದ ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ. ಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ, ಅವನು ಮಹೋನ್ನತ ವಿಶ್ವ ಸಿಂಹಾಸನದ ಒಡೆಯನು. ಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ, ಅವನು ಆಕಾಶ- ಭೂಮಿಗಳ ಒಡೆಯನು, ಸನ್ಮಾನ್ಯ ಸಿಂಹಾಸನದ ಒಡೆಯನು." (ಬುಖಾರಿ, ಮುಸ್ಲಿಮ್)

ಪ್ರವಾದಿಯವರು(ಸ) ಸಂಕಷ್ಟ ಬಂದಾಗ ಹೀಗೆಯೂ ಪ್ರಾರ್ಥಿಸಲು ಉಪದೇಶ ಿದ್ದರು,

"ಅಲ್ಲಾಹುಮ್ಮ ರಹ್ಮತಕ ಅರ್ಜೂ, ಫಲಾ ್ನೀ ಇಲಾ ನಫ್ಸೀ ತರ್ಫತ ಐನಿನ್ ಸ್ಲಿಹ್ಲೀ ಶಅನೀ ಕುಲ್ಲಹೂ ಲಾ ಾಹ ಇಲ್ಲಾ ಅನ್ತ."

اللَّهُمَّ رَحْمَتَكَ أَرْجُو فَلَا
تَكِلْنِي إِلَى نَفْسِي طَرْفَةَ عَيْنٍ
وَأَصْلِحْ لِي شَأْنِي كُلَّهُ لَا إِلَٰهَ إِلَّا أَنْتَ

"ಓ ಅಲ್ಲಾಹ್ ನಾನು ನಿನ್ನ ಕರುಣೆಯ ಬಗ್ಗೆಯೇ ಭರವಸೆ ಇಡುತ್ತೇನೆ. ರೆಪ್ಪೆ ಯುವಷ್ಟು ಸಮಯವೂ ನೀನು ನನ್ನನ್ನು ನನ್ನ ಚಿತ್ತದ ವಶಕ್ಕೆ ಬಿಡಬೇಡ. ಮತ್ತು ಲ್ಲಾ ವ್ಯವಹಾರಗಳನ್ನು ಸರಿಪಡಿಸು. ನೀನಲ್ಲದೆ ಅನ್ಯ ಆರಾಧ್ಯನಿಲ್ಲ." (ಅಬೂ ದಾವೂದ್)

8. ಚಂದ್ರನನ್ನು ಕಂಡಾಗ ಪ್ರವಾದಿಯವರು(ಸ) ಹೀಗೆ ಪ್ರಾರ್ಥಿಸುತ್ತಿದ್ದರು-

"ಅಲ್ಲಾಹುಮ್ಮ ಅಹ್ಲಿಲ್ಹು ೈನಾ ಬಿಲ್ ಅಮ್ನಿ ವಲ್ ಈಮಾನಿ ಲಾಮತಿ ವಲ್ ಇಸ್ಲಾಮಿ ರಬ್ಬೀ ಬ್ಬುಕಲ್ಲಾಹು."

اللَّهُمَّ أَهِلَّهُ عَلَيْنَا بِالْأَمْنِ
وَالْإِيمَانِ وَالسَّلَامَةِ وَالْإِسْلَامِ
رَبِّي وَرَبُّكَ اللَّهُ

"ಓ ಅಲ್ಲಾಹ್! ಈ ಚಂದ್ರನನ್ನು ನಮ್ಮ ಪಾಲಿಗೆ ಶಾಂತಿ, ವಿಶ್ವಾಸ, ಸಂ
ಮತ್ತು ಇಸ್ಲಾಮಿನ ಚಂದ್ರನನ್ನಾಗಿ ಉದಯಿಸು. ಓ ಚಂದ್ರಾ! ನನ್ನ ಮತ್ತು ನಿನ್ನ
ಅಲ್ಲಾಹನೇ ಆಗಿರುವನು." (ತಿ

9. ಪ್ರವಾದಿವರ್ಯರು(ಸ) ಊಟ ಮಾಡಲು ಪ್ರಾರಂಭಿಸುವ
'ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್' ಎಂದು ಹೇಳುತ್ತಿದ್ದರು ಮತ್ತು ಊಟವಾದ ನ
ಹೀಗೆ ಪ್ರಾರ್ಥಿಸುತ್ತಿದ್ದರು-

"ಅಲ್‌ಹಮ್ದುಲಿಲ್ಲಾಹಿಲ್ಲದೀ ಅತ್‌ಅಮನಾ ವಸಕಾನಾ ವಜಅಲ್‌ನಾ ಮಿನಲ್ ಮುಸ್ಲಿಮೀನ್."

مْدُ لِلّٰهِ الَّذِیْ اَطْعَمَنَا
قَانَا وَجَعَلَنَا مِنَ الْمُسْلِمِیْنَ

"ನಮಗೆ ತಿನ್ನಿಸಿದ, ಕುಡಿಸಿದ ಹಾಗೂ ನಮ್ಮನ್ನು ಮುಸ್ಲಿಮರಲ್ಲಿ ಸೇರಿಸಿದ ಅಲ್ಲಾ
ಸರ್ವ ಸ್ತುತಿ ಸ್ತೋತ್ರಗಳು."

10. ಪ್ರವಾದಿಯವರಿಂದ(ಸ) ನಮಾಝಿನ ನಂತರ ಪಠಿಸುವ ಅನೇಕ ಪ್ರಾರ್ಥನ
ವರದಿಯಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ-

ಅ) ನಮಾಝ್ ಆದ ತಕ್ಷಣ ಒಂದು ಸಲ **'ಅಲ್ಲಾಹು ಅಕ್ಬರ್'** ಎಂದು ಉ
ಆ ಬಳಿಕ ಮೂರು ಸಲ **'ಅಸ್ತಗ್‌ಫಿರುಲ್ಲಾಹ್'** (ನಾನು ಅಲ್ಲಾಹನಲ್ಲಿ ಕ್ಷಮೆ
ಯಾಚಿಸುತ್ತೇನೆ) ಎಂದು ಹೇಳಬೇಕು. ಆ ಬಳಿಕ,

"ಅಲ್ಲಾಹುಮ್ಮ ಅನ್ತಸ್ಸಲಾಮ್ ವಮಿನ್ಕಸ್ಸಲಾಮ್ ತಬಾರಕ್ತ ಯಾದಲ್ ಜಲಾಲಿ ವಲ್ ಇಕ್ರಾಮ್" ಎಂದು ಹೇಳಬೇಕು.

مَّ اَنْتَ السَّلَامُ وَمِنْكَ
لَامُ تَبَارَكْتَ يَاذَا الْجَلَالِ
كْرَامِ

"ಓ ಅಲ್ಲಾಹ್! ನೀನು ಶಾಂತ ಸ್ವರೂಪಿ, ಶಾಂತಿಯು ನಿನ್ನಿಂದಲೇ ಇದೆ.
ಸಮೃದ್ಧಿದಾತ ನಾಗಿರುವಿ. ಓ ಪ್ರತಾಪಶಾಲಿ ಮತ್ತು ಮಹಾದಾನಿ!" (ಬುಖಾರಿ, ಮುಸ್ಲಿ

ಆ) ಹ. ಫಾತಿಮರಿಗೆ(ರ) ಪ್ರವಾದಿಯವರು(ಸ) ಮಲಗುವಾಗ ಮತ್ತು ಪ್ರತಿ ನಮಾ
ನಂತರ **'ಸುಬ್‌ಹಾನಲ್ಲಾಹ್'** 33 ಸಲ, **'ಅಲ್‌ಹಮ್ದುಲಿಲ್ಲಾಹ್'** 33ಸಲ ಮತ್ತು **'ಅಲ್ಲಾ
ಅಕ್ಬರ್'** 34 ಸಲ ಓದಲು ಹೇಳಿದ್ದರು". (ಬುಖಾರಿ, ಮುಸ್ಲಿ

ಮುಹಾಜಿರ್‌ಗಳಿಗೂ ಪ್ರವಾದಿಯವರು(ಸ) ಈ ವಿಷಯದ ಬಗ್ಗೆ ಬಹಳ ಉಪದೇಶಿಸಿ
ಮತ್ತು ಹಲವಾರು ಸಂದರ್ಭಗಳಲ್ಲಿ ಈ ಬಗ್ಗೆ ತಾಕೀತನ್ನು ಮಾಡಿ, ಇದರ ಪ್ರತಿಫಲ
ತಿಳಿಸಿದ್ದರು.

ಇ) لَا اِلٰهَ اِلَّا اللّٰهُ وَحْدَهُ لَا شَرِيْكَ لَهُ لَهُ الْمُلْكُ وَلَهُ الْحَمْدُ وَهُوَ عَلٰى كُلِّ شَيْءٍ قَدِيْرٌ

"ಲಾ ಇಲಾಹ ಇಲ್ಲಲ್ಲಾಹು ವಹ್‌ದಹು ಲಾ ಶರೀಕ ಲಹು ಲಹುಲ್ ಮುಲ್ಕು ೨ಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್."

"ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ, ಅವನು ಏಕೈಕನು ಅವನಿಗಾರೂ ಸಹಭಾಗಿಗಳಿಲ್ಲ. ರ್ವಾಧಿಕಾರ ಅವನಿಗೇ ಮೀಸಲು. ಅವನೇ ಸ್ತುತಿ ಸ್ತೋತ್ರಗಳಿಗರ್ಹನು. ಅವನು ರ್ವಶಕ್ತನಾಗಿರುತ್ತಾನೆ." (ಮುಸ್ಲಿಮ್)

ಈ) ಸೂರಃ ಅಲ್ ಫಲಕ್ ಮತ್ತು ಸೂರಃ ಅನ್ನಾಸ್ ಪಠಿಸುತ್ತಿದ್ದರು.

ಉ) ಅನೇಕ ವಿಷಯಗಳ ಬಗ್ಗೆ ಪ್ರವಾದಿಯವರು(ಸ) ಅಲ್ಲಾಹನ ಅಭಯ ಾಚಿಸುತ್ತಿದ್ದರು. ಉದಾಹರಣೆಗೆ ಹೀಗೆನ್ನುತ್ತಿದ್ದರು-

اَللّٰهُمَّ اِنِّيْ اَعُوْذُ بِكَ مِنَ الْجُبْنِ وَاَعُوْذُ بِكَ مِنَ الْبُخْلِ وَاَعُوْذُ بِكَ مِنْ اَرْذَلِ الْعُمُرِ وَاَعُوْذُ بِكَ مِنْ فِتْنَةِ الدُّنْيَا وَعَذَابِ الْقَبْرِ

"ಅಲ್ಲಾಹುಮ್ಮ ಇನ್ನೀ ಅಊದುಬಿಕ ನಲ್ ಜುಬ್‌ನಿ ವಅಊದುಬಿಕ ಮಿನಲ್ ಖ್‌ಲಿ ವಅಊದುಬಿಕ ಮಿನ್ ಅರ್‌ದಲಿಲ್ ಮಿ್ರ ವಅಊದುಬಿಕ ಮಿನ್ ತ್‌ನತಿದ್ದುನಿಯಾ ವಅದಾಬಿಲ್ ಕಬ್‌ರಿ."

"ಓ ಅಲ್ಲಾಹ್! ನಾನು ಹೇಡಿತನದಿಂದ ನಿನ್ನ ಅಭಯ ಯಾಚಿಸುತ್ತೇನೆ ಮತ್ತು ೋಭದಿಂದ ನಿನ್ನ ಅಭಯ ಯಾಚಿಸುತ್ತೇನೆ. ಹೆಚ್ಚು ವೃದ್ಧಾಪ್ಯಕ್ಕೆ ತಲಪುವುದರಿಂದ ನಿನ್ನ ಭಯ ಯಾಚಿಸುತ್ತೇನೆ. ಲೋಕದ ಕ್ಷೋಭೆ ಮತ್ತು ಗೋರಿಯ ಶಿಕ್ಷೆಯಿಂದ ನಾನು ನಿನ್ನ ಭಯ ಯಾಚಿಸುತ್ತೇನೆ." (ಬುಖಾರಿ)

11. ಪ್ರವಾದಿ(ಸ) ಕ್ಷಮಾಯಾಚನೆ ಮತ್ತು ಪಶ್ಚಾತ್ತಾಪವನ್ನು ಹೇರಳವಾಗಿ ಮತ್ತು ರಂತರ ಮಾಡುತ್ತಿದ್ದರು. ದಿನದಲ್ಲಿ ಎಪ್ಪತ್ತರಿಂದ ನೂರು ಬಾರಿ ಪಶ್ಚಾತ್ತಾಪವನ್ನು ಾಡುತ್ತಿದ್ದರು. ಯಾವುದೇ ಸಭೆಯಲ್ಲಿದ್ದಾಗ ಅನೇಕ ಬಾರಿ ಹೀಗೆ ಪಠಿಸುತ್ತಿದ್ದರು-

رَبِّ اغْفِرْ لِيْ وَتُبْ عَلَيَّ اِنَّكَ اَنْتَ التَّوَّابُ الْغَفُوْرُ

"ರಬ್ಬಿಗ್ ಫಿರ್‌ಲೀ, ವತುಬ್ ಅಲಯ್ಯ, ನ್ನಕ ಅಂತ ತ್ತವ್ವಾಬುಲ್ ಗಫೂರ್."

"ಓ ನನ್ನ ಪ್ರಭೂ! ನನ್ನನ್ನು ಕ್ಷಮಿಸು ಮತ್ತು ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು.

ನಿಶ್ಚಯವಾಗಿಯೂ ನೀನು ಪಶ್ಚಾತ್ತಾಪವನ್ನು ಸ್ವೀಕರಿಸುವವನೂ ಕ್ಷಮೆ ನೀಡುವವ
ಆಗಿರುವಿ." (ಅಹ್ಮದ್, ತಿರ್ಮಿದಿ, ಅಬೂ ದಾವೂದ್, ಇಬ್ನುಮಾ

ಮಲಗುವಾಗ ಈ ವಚನಗಳಿಂದ ಕ್ಷಮೆ ಯಾಚಿಸುತ್ತಿದ್ದರು,

ستغفر الله الذي
إله إلا هو الحي القيوم
توب إليه

"ಅಸ್ತಗ್‌ಫಿರುಲ್ಲಾಹಲ್ಲದೀ ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಕಯ್ಯೂಮು ವಅತೂಬು ಇಲೈಹಿ."

"ನಾನು ಅಲ್ಲಾಹನಲ್ಲಿ ನನ್ನ ಪಾಪಗಳಿಗಾಗಿ ಕ್ಷಮೆ ಯಾಚಿಸುತ್ತೇನೆ, ಅವನ ಹೊ
ಅನ್ಯ ಆರಾಧ್ಯರಿಲ್ಲ, ಅವನು ಚಿರಂತನನು, ವಿಶ್ವ ವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವವ
ಮತ್ತು ನಾನು ಅವನೆಡೆಗೇ ಪಶ್ಚಾತ್ತಾಪ ಪಟ್ಟು ಮರಳುತ್ತೇನೆ." (ತಿರ್ಮಿದಿ, ಅಬೂ ದಾವೂ

ಪ್ರವಾದಿವರ್ಯರು(ಸ) ತಿಳಿಸಿರುವ 'ಸೈಯ್ಯಿದುಲ್ ಇಸ್ತಿಗ್‌ಫಾರ್' ಅರ್ಥಾತ್ ಅತ್ಯುತ್ತ
ಕ್ಷಮೆಯಾಚನೆ ಮತ್ತು ಪಶ್ಚಾತ್ತಾಪವು ಈ ರೀತಿ ಇದೆ,

هم أنت ربي لا إله إلا
ت خلقتني وأنا عبدك
أنا على عهدك ووعدك
استطعت أعوذ بك
ن شر ما صنعت أبوء لك
نعمتك علي وأبوء بذنبي
غفر لي فإنه لا يغفر الذنوب إلا أنت۔

"ಅಲ್ಲಾಹುಮ್ಮ ಅಂತ ರಬ್ಬೀ ಲಾ ಇಲಾಹ ಇಲ್ಲಾ ಅಂತ ಖಲಕ್ತನೀ ವಅನ ಅಬ್ದುಕ ವಅನ ಅಲಾ ಅಹ್ದಿಕ ವವಅ್‌ದಿಕ ಮಸ್ತತಅ್‌ತು ಅವೂದುಬಿಕ ಮಿನ್ ಶರ್‍ರಿಮಾ ಸನಅತು ಅಬೂಉಲಕ ಬಿನಿಅ್‌ಮತಿಕ ಅಲಯ್ಯ ವಅಬೂಉ ಬಿದಂಬೀ ಫಗ್‌ಫಿರ್‌ಲೀ ಫಇನ್ನಹೂ ಲಾ ಯಗ್‌ಫಿರುದ್ದುನೂಬ ಇಲ್ಲಾ ಅಂತ."

"ಓ ಅಲ್ಲಾಹ್! ನೀನೇ ನನ್ನ ಪಾಲಕ ಪ್ರಭು. ನಿನ್ನ ಹೊರತು ಅನ್ಯ ಆರಾಧ್ಯರಿ
ನೀನೇ ನನ್ನನ್ನು ಸೃಷ್ಟಿಸಿದೆ. ನಾನು ನಿನ್ನ ದಾಸ. ನಾನು ನಿನ್ನಲ್ಲಿ ಮಾಡಿರುವ ದಾಸ
ಆರಾಧನೆಯ ಮತ್ತು ಅನುಸರಣೆಯ ಕರಾರನ್ನು ನನಗೆ ಸಾಧ್ಯವಿದ್ದಷ್ಟು ಪಾಲಿಸುವೆನು. ನನ್ನಿಂ
ಆಗಿ ಹೋದ ತಪ್ಪುಗಳ ದುಷ್ಪರಿಣಾಮಗಳಿಂದ ನಿನ್ನ ಅಭಯ ಕೋರುತ್ತೇನೆ. ನೀನು ನನ
ಕೊಡ ಮಾಡಿದ ಅನುಗ್ರಹಗಳನ್ನು ನಾನು ಅಂಗೀಕರಿಸುತ್ತೇನೆ. ನಾನು ಪಾಪಿ ಎಂಬುದ
ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ನನ್ನ ಪಾಪಗಳನ್ನು ಮನ್ನಿಸು. ನಿನ್ನ ಹೊರತು ನ

ಗಳನ್ನು ಮನ್ನಿಸುವವರು ಯಾರೂ ಇಲ್ಲ." (ಬುಖಾರಿ)

ಈ ಎಲ್ಲಾ ಪ್ರಾರ್ಥನೆಗಳನ್ನು ವಿವೇಚನೆ, ಅರಿವು ಮತ್ತು ವಿಧೇಯತೆಯೊಂದಿಗೆ ಕಲಾದರೆ ಮಾನವರನ್ನು ಸುಧಾರಿಸಲು, ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು, ಮನಸ್ಸದಲ್ಲಿ ಅಲ್ಲಾಹನ ಗುಣ ವಿಶೇಷತೆಗಳನ್ನು ಅಚ್ಚೊತ್ತಲು ಮತ್ತು ಅಲ್ಲಾಹನ ಸಂಪ್ರೀತಿ ತ್ತು ಭಯಭಕ್ತಿಯ ಭಾವನೆ ಬೆಳೆಸಲು ಅವು ಅತ್ಯುಪಯುಕ್ತವಾಗಿವೆ. ಪರಲೋಕದ ಸ್ಸನ್ನು ಗಳಿಸಲಿಕ್ಕೂ ಇವು ಅತ್ಯುತ್ತಮ ಉಪಾಧಿಗಳಾಗಿವೆ.

4. ಪ್ರಾರ್ಥನೆ

ಲೋಕದಲ್ಲಿ ನಡೆಯುವುದೆಲ್ಲವೂ ಅಲ್ಲಾಹನ ಆದೇಶ ಮತ್ತು ಸೂಚನೆಯಿಂದ ಯುತ್ತದೆ ಹಾಗೂ ಸತ್ಯವಿಶ್ವಾಸಿಯ ನೈಜ ಸಹಾಯಕನು ಅಲ್ಲಾಹನಾಗಿದ್ದಾನೆಂದು ಕೊಂಡ ಮೇಲೆ ಒಬ್ಬ ಸತ್ಯವಿಶ್ವಾಸಿಗೆ ತನ್ನ ಹಿರಿಯ- ಕಿರಿಯ ಎಲ್ಲಾ ಕೆಲಸಗಳಿಗಾಗಿ ಹನ ಸಹಾಯವನ್ನು ಯಾಚಿಸದೆ, ತನ್ನ ಆವಶ್ಯಕತೆಗಳಿಗಾಗಿ ಆತನನ್ನು ಕೂಗಿ ಕರೆಯದೆ, ಎಲ್ಲಾ ಬೇಡಿಕೆಗಳನ್ನು ಆತನ ಮುಂದಿಡದೆ ಇರುವುದು ಖಂಡಿತವಾಗಿಯೂ ಸಾಧ್ಯವಿಲ್ಲ. ಯಾಚನೆಯನ್ನೇ ದುಆ ಅಥವಾ ಪ್ರಾರ್ಥನೆ ಎಂದು ಕರೆಯಲಾಗುತ್ತದೆ.

ಇಸ್ಲಾಮಿನಲ್ಲಿ ಪ್ರಾರ್ಥನೆಗೆ ಬಹಳ ಪ್ರಾಧಾನ್ಯವಿದೆ. ತನ್ನ ದಾಸರು ತಮ್ಮ ಶ್ಯಕತೆಗಳನ್ನೆಲ್ಲಾ ನನ್ನೊಂದಿಗೆ ಯಾಚಿಸಬೇಕೆಂದು ಅಲ್ಲಾಹನು ಪದೇ ಪದೇ ಹೇಳಿದ್ದಾನೆ. ಾದರೂ ಅಲ್ಲಾಹನ ಹೊರತು ಅನ್ಯರೊಂದಿಗೆ ಸಹಾಯ ಯಾಚಿಸಿದರೆ ತನ್ನ ಶ್ಯಕತೆಗಳನ್ನು ಪೂರ್ತೀಕರಿಸುವವರು ಅಲ್ಲಾಹನ ಹೊರತು ಇತರರು ಇದ್ದಾರೆಂದು ಅವನು ಂದಂತಾಗುತ್ತದೆ. ಆದರೆ ಇಸ್ಲಾಮಿನ ಬೋಧನೆಗಳ ಪ್ರಕಾರ ಆವಶ್ಯಕತೆಗಳನ್ನು ರ್ತೀಕರಿಸುವವನು ಅಲ್ಲಾಹನಲ್ಲದೆ ಇನ್ನಾರೂ ಇಲ್ಲ. ಅಲ್ಲದೆ ವ್ಯಕ್ತಿಯು ಪ್ರಾರ್ಥಿಸುವಾಗ ರೊಂದಿಗೆ ಪ್ರಾರ್ಥಿಸುತ್ತಾನೋ ಅವನ ಬಗ್ಗೆ ಮನಸ್ಸಿನಲ್ಲಿ ಖಂಡಿತವಾಗಿಯೂ ಪ್ರೀತಿ ತ್ತು ಗೌರವವು ಮೂಡುತ್ತದೆ. ದಾಸನ ಮನಸ್ಸಿನಿಂದ ಅಲ್ಲಾಹನ ಹೊರತು ಇತರೆಲ್ಲರ ನ ಪ್ರೀತಿ ಮತ್ತು ಗೌರವವನ್ನು ಕಿತ್ತೊಗೆಯಬೇಕೆಂದು ಇಸ್ಲಾಮ್ ಬಯಸುತ್ತದೆ. ದರಿಂದಲೇ ಅಲ್ಲಾಹನಲ್ಲದೆ ಅನ್ಯರೊಂದಿಗೆ ಪ್ರಾರ್ಥಿಸುವುದು ಸರ್ವಥಾ ಸರಿಯಲ್ಲ. ಮಿನ ಪ್ರಕಾರ ಇದು ಬಹುದೇವಾರಾಧನೆಯಾಗಿದೆ. ತಮ್ಮ ಆವಶ್ಯಕತೆಗಳ ಬಗ್ಗೆ ಹನೊಂದಿಗೆ ಯಾಚಿಸಿರಿ ಎಂದು ಪ್ರವಾದಿಯವರು(ಸ) ಹೇಳಿರುವರು. ವಾಸ್ತವದಲ್ಲಿ ರ್ಥನೆ ಕೂಡ ಆರಾಧನೆಯಾಗಿದೆ. ಪ್ರವಾದಿ ವಚನಗಳಲ್ಲಿ ಪ್ರಾರ್ಥನೆಯನ್ನು ಆರಾಧನೆಯ ಸು ಎಂದು ಬಣ್ಣಿಸಲಾಗಿದೆ. ಒಮ್ಮೆ ಪ್ರವಾದಿವರ್ಯರು(ಸ) ಹೇಳಿರುವರು, "ಯಾವ ನು ಅಲ್ಲಾಹನಲ್ಲಿ ಪ್ರಾರ್ಥಿಸುವುದಿಲ್ಲವೋ ಅವನ ಬಗ್ಗೆ ಅಲ್ಲಾಹನು ಕೋಪಗೊಳ್ಳುತ್ತಾನೆ."

ಧರ್ಮದ ಸೇವೆ ಮಾಡಲು ಪ್ರಾರ್ಥನೆಯೂ ಒಂದು ಶಕ್ತಿಯಾಗಿದೆ. ಸರಿಯಾಗಿ ೀಚಿಸಿ ನೋಡಿದರೆ ಅದು ಪರಮ ಶಕ್ತಿಯಾಗಿದೆ ಎಂದು ತಿಳಿದುಬರುತ್ತದೆ. ವ್ಯಕ್ತಿಯು ಹನ ಮಾರ್ಗದಲ್ಲಿ ನಡೆಯುತ್ತಾ, ಆತನ ಸಂಪ್ರೀತಿಗಾಗಿ, ಆತನ ಧರ್ಮ ಮತ್ತು ಆತನ

ವಚನವನ್ನು ಪ್ರಬಲಗೊಳಿಸಲು ಕಠಿಣವಾದ ಹೋರಾಟದಲ್ಲಿ ತೊಡಗಿರುತ್ತಾನೆ ಮ ಕೈಗಳನ್ನೆತ್ತಿ ಆತನಲ್ಲಿ ಸಹಾಯವನ್ನೂ ಯಾಚಿಸುತ್ತಿದ್ದಾನೆ. ಇಂತಹ ಪ್ರಾರ್ಥನೆಯೇ ದಾಸ ಅಲ್ಲಾಹನ ಸಾಮಿಪ್ಯ ದೊರಕಿಸಿಕೊಡುತ್ತದೆ. ಈ ಪ್ರಾರ್ಥನೆಯಿಂದ ಸತ್ಯ ವಿಶ್ವಾಸಿಗೆ ಗೌ ಮತ್ತು ಯಶಸ್ಸು ದೊರಕುವುದಲ್ಲದೆ ಪರಲೋಕದಲ್ಲಿಯೂ ಇದರಿಂದಲೇ ಅವನಿ ಸ್ವರ್ಗದ ದ್ವಾರಗಳು ತೆರೆಯಲ್ಪಡುತ್ತವೆ ಮತ್ತು ಅವನಿಗೆ ಅಲ್ಲಾಹನ ಬಳಿ ಅತ್ಯುನ್ನತ ಸ ಪ್ರಾಪ್ತವಾಗುತ್ತದೆ.

ದಾಸನು ತನ್ನ ಸಣ್ಣ ಪುಟ್ಟ ಅಗತ್ಯಗಳಿಗಾಗಿಯೂ ಅಲ್ಲಾಹನಲ್ಲಿ ಮೊರೆಯಿಡಬಹು ಮಾತ್ರವಲ್ಲ ಮೊರೆಯಿಡಲೇಬೇಕು. ಇಂತಹ ಪ್ರಾರ್ಥನೆಗಳು ಕೂಡ ಅಲ್ಲಾಹನಿಗೆ ಬ ಪ್ರಿಯಕರವಾಗಿವೆ. ಪ್ರಾರ್ಥನೆಯಿಂದ ವಿಶ್ವಾಸವು ವೃದ್ಧಿಸುತ್ತದೆ ಮತ್ತು ಎಲ್ಲಾ ಸ್ಥಿತಿಯ ಮನಸ್ಸಿಗೆ ಶಾಂತಿ ಮತ್ತು ಸಮಾಧಾನ ಪ್ರಾಪ್ತವಾಗುತ್ತದೆ. ಪ್ರಾರ್ಥನೆಯು ಸತ್ಯವಿಶ್ವಾಸಿ ಅತ್ಯಂತ ಹಿರಿಯ ಆಸರೆಯಾಗಿದೆ.

ಯಾವ ವೇಳೆಯಲ್ಲಾದರೂ ಪ್ರಾರ್ಥನೆಯು ಸ್ವೀಕೃತವಾಗದಿದ್ದಲ್ಲಿ, ಅಲ್ಲಾಹನ ದೃಷ್ಟಿಯ ಅದರ ಸ್ವೀಕಾರವು ಉಚಿತವಲ್ಲದಿರಬಹುದು ಎಂದೇ ಸತ್ಯವಿಶ್ವಾಸಿ ಭಾವಿಸಬೇಕು. ಅಲ್ಲಾಹ ನಮ್ಮ ಅಭಿಲಾಷೆಗಳಿಗೆ ಬದ್ಧನಲ್ಲ. ಆತನ ಯುಕ್ತಿ ಶಾಮಿಲಾಗಿದ್ದಾಗ ಮಾತ್ರವೇ ಪ್ರಾರ್ಥ ಸ್ವೀಕರಿಸಲ್ಪಡುತ್ತದೆ. ಆದರೆ ಪ್ರಾರ್ಥನೆ ಸ್ವೀಕೃತವಾದರೂ ಇಲ್ಲದಿದ್ದರೂ ಪ್ರಾರ್ಥ ಪ್ರತಿಫಲವು ದಾಸನಿಗೆ ಲಭಿಸುತ್ತದೆ. ಏಕೆಂದರೆ ಪ್ರಾರ್ಥನೆಯೂ ಸ್ವತಃ ಆರಾಧನೆಯೇ ಆಗಿ

ಪ್ರವಾದಿವರ್ಯರು(ಸ) ಹೇಳಿದ್ದಾರೆ,

"ಯಾವುದೇ ಪ್ರಾರ್ಥನೆ ನಿರರ್ಥಕವಾಗುವುದಿಲ್ಲ. ಆದರೆ ಸ್ವೀಕರಿಸಲ್ಪಡುವ ರ ವಿಭಿನ್ನವಾಗಿರುತ್ತದೆ. ಕೆಲವೊಮ್ಮೆ ದಾಸನು ಯಾವುದಕ್ಕಾಗಿ ಪ್ರಾರ್ಥಿಸುತ್ತಾನೋ ಅದ ಅವನಿಗೆ ದಯಪಾಲಿಸಲಾಗುತ್ತದೆ. ಕೆಲವೊಮ್ಮೆ ದಾಸನು ಬಯಸಿದ್ದನ್ನು ದಯಪಾಲಿಸುವು ಅಲ್ಲಾಹನ ದೃಷ್ಟಿಯಲ್ಲಿ ಉಚಿತವಾಗಿರುವುದಿಲ್ಲ. ಆದ್ದರಿಂದ ಅದಕ್ಕೆ ಬದಲಾಗಿ ಬೇರಾವುದಾದ ಅನುಗ್ರಹವನ್ನು ದಯಪಾಲಿಸಲಾಗುತ್ತದೆ ಅಥವಾ ಯಾವುದಾದರೂ ವಿಪತ್ತು ಇಲ್ಲ ಸಂಕಷ್ಟವನ್ನು ಅವನಿಂದ ನೀಗಿಸಲಾಗುತ್ತದೆ. ಕೆಲವೊಮ್ಮೆ ಪ್ರಾರ್ಥನೆ ಅವನ ಪಾಪ ಪ್ರಾಯಶ್ಚಿತ್ತವಾಗುತ್ತದೆ. ಕೆಲವೊಮ್ಮೆ ಅಲ್ಲಾಹನು ಆ ಪ್ರಾರ್ಥನೆಯನ್ನು ಅವನ ಪಾ ಪರಲೋಕದ ಬುತ್ತಿಯನ್ನಾಗಿ ಮಾಡುತ್ತಾನೆ."

ಪ್ರಾರ್ಥಿಸುವಾಗ ಅತ್ಯಂತ ಹೆಚ್ಚು ಮರ್ಯಾದೆ ಮತ್ತು ವಿನಯವ ಪ್ರಕಟಿಸಬೇಕೆಂಬುದನ್ನು ಸದಾ ಗಮನದಲ್ಲಿರಿಸಬೇಕು. ಹಾಗೆಯೇ ಶರೀಅತ್‌ನ ಪ್ರಕ ಸರಿಯಲ್ಲದ ವಸ್ತುವಿಗಾಗಿ ಎಂದೂ ಪ್ರಾರ್ಥಿಸಬಾರದು.

رَبَّنَا تَقَبَّلْ مِنَّا إِنَّكَ أَنْتَ السَّمِيعُ الْعَلِيمُ

"ರಬ್ಬನಾ ತಕಬ್ಬಲ್ ಮಿನ್ನಾ ಇನ್ನಕ ಅಂತಸ್ಸಮೀಉಲ್ ಅಲೀಂ."

❋ ❋ ❋